ದೇಸಿ ಕೃಷಿ ಜ್ಞಾನ

ಸಂಪುಟ 5

# ಕೃಷಿ ಆಚರಣೆ

ಮಲ್ಲಿಕಾರ್ಜುನ ಹೊಸಪಾಳ್ಯ




ಕರ್ನಾಟಕ ಸರ್ಕಾರ
**ಕನ್ನಡ ಪುಸ್ತಕ ಪ್ರಾಧಿಕಾರ**
ಬೆಂಗಳೂರು

ದೇಸೀ ಕೃಷಿ ಜ್ಞಾನ ಸಂಪುಟ - 4

# ಈ ನೆಲದ ಬದುಕು

## ಕನ್ನಡ ನಾಡಿನ ಕೃಷಿ ಆಚರಣೆಗಳು

ಮಲ್ಲಿಕಾರ್ಜುನ ಹೊಸಪಾಳ್ಯ



ಕರ್ನಾಟಕ ಸರ್ಕಾರ

**ಕನ್ನಡ ಪುಸ್ತಕ ಪ್ರಾಧಿಕಾರ**

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು - ೫೬೦ ೦೦೨

ದೂರವಾಣಿ : ೨೨೪೮ ೪೫೭೬

**Ee Nelada Baduku** (Kannada Nadina Krushi Acharanegalu) by **Mallikarjuna Hosapalya**, Published by **Ashok N. Chalawadi**, Administrative Officer, Kannada Pustaka Pradhikara, Kannada Bhavana, J.C. Road, Bangalooru-560 002.

© ಈ ಆವೃತ್ತಿಯ ಗ್ರಂಥಸ್ವಾಮ್ಯ - ಕನ್ನಡ ಪುಸ್ತಕ ಪ್ರಾಧಿಕಾರ

ಮೊದಲ ಮುದ್ರಣ: ೨೦೦೮
ಪುಟಗಳು : xviii + ೧೨೬
ಬೆಲೆ : ರೂ. ೫೦/-
ಪ್ರತಿಗಳು : ೧೦೦೦

© Author :
Print : 2008
Page : xviii + 126
Price : **Rs. 50/-**
Copies : 1000
ISBN : 81-7713-240-7

ಪ್ರಕಾಶಕರು
**ಅಶೋಕ ಎನ್. ಚಲವಾದಿ**
ಆಡಳಿತಾಧಿಕಾರಿಗಳು
ಕನ್ನಡ ಪುಸ್ತಕ ಪ್ರಾಧಿಕಾರ
ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು-೫೬೦ ೦೦೨

ಮುಖಪುಟ ವಿನ್ಯಾಸ : ಎಂ.ಎಸ್. ಮೂರ್ತಿ
ಕರಡು ತಿದ್ದಿದವರು : ಮಲ್ಲಿಕಾರ್ಜುನ ಹೊಸಪಾಳ್ಯ
ಚಿತ್ರಗಳು : ಲೇಖಕರು

ಮುದ್ರಕರು :
**ರಾಜಾ ಪ್ರಿಂಟರ್ಸ್**
ನಂ. ೫೯, ೪ನೇ ಕ್ರಾಸ್, ಲಾಲ್‌ಬಾಗ್ ರಸ್ತೆ
ಬೆಂಗಳೂರು-೫೬೦ ೦೨೭, ದೂ: ೨೨೨೩೪೦೬೬

ಪ್ರಧಾನ ಸಂಪಾದಕರು

ಪ್ರೊ. ಎಸ್.ಜಿ. ಸಿದ್ಧರಾಮಯ್ಯ

ಸಂಪಾದಕ ಸಲಹಾ ಮಂಡಳಿ

ಶ್ರೀ ಪಂಡಿತಾರಾಧ್ಯ ಶಿವಚಾರ್ಯ ಸ್ವಾಮಿಗಳು
ನಾಗೇಶ್ ಹೆಗಡೆ
ಡಾ. ಕೆ. ಪುಟ್ಟಸ್ವಾಮಿ
ಡಾ. ಕೆ.ವೈ. ನಾರಾಯಣಸ್ವಾಮಿ
ಭೆರಮಗೌಡ
ಜಿ. ನಾರಾಯಣರೆಡ್ಡಿ

ಶ್ರೀ ಹೊರೆಯಾಲ ದೊರೆಸ್ವಾಮಿ
ಡಾ. ಕಾಶಿನಾಥ ಅಂಬಲಗಿ
ಡಾ. ಶರಣಮ್ಮ ಗೊರೆಬಾಳ
ಶ್ರೀಮತಿ ಶೀಲಾ ತಿವಾರಿ

ಪ್ರಕಾಶಕರು

ಶ್ರೀ ಅಶೋಕ ಎನ್. ಚಲವಾದಿ
ಆಡಳಿತಾಧಿಕಾರಿಗಳು

ಲೇಖಕರು

| | | |
|---|---|---|
| ೧. | ಮಣ್ಣು ಮತ್ತು ನೀರು | ಶ್ರೀಪಡ್ರೆ |
| ೨. | ಅರಣ್ಯ | ಶಿವಾನಂದ ಕಳವೆ |
| ೩. | ಬೀಜ | ಕೃಷ್ಣಪ್ರಸಾದ್ |
| ೪. | ಆಹಾರ / ಆರೋಗ್ಯ | ಬಿ.ಎಸ್. ಸೋಮಶೇಖರ್ |
| ೫. | ಕೃಷಿ ಆಚರಣೆ | ಮಲ್ಲಿಕಾರ್ಜುನ ಹೊಸಪಾಳ್ಯ |
| ೬. | ಕೃಷಿ ಉಪಕರಣಗಳು | ಗಾಣದಾಳು ಶ್ರೀಕಂಠ |
| ೭. | ನಿರ್ಮಾಣ ಕಲೆ | ಆನಂದತೀರ್ಥ ಪ್ಯಾಟಿ, ನರೇಂದ್ರ ರೈ ದೇರ್ಲ |
| ೮. | ಕೀಟ / ರೋಗ | ವಿಜಯ ಅಂಗಡಿ |
| ೯. | ಜಾನುವಾರು | ಡಾ. ಎಂ. ನಾರಾಯಣಸ್ವಾಮಿ |
| ೧೦. | ಕುರಿಸಾಕಣೆ | ಡಾ. ಸಿ.ಎಸ್. ರಘುಪತಿ |
| ೧೧. | ತೋಟಗಾರಿಕೆ | ಪೂರ್ಣಪ್ರಜ್ಞ ಬೇಳೂರು |

# ಅಧ್ಯಕ್ಷರ ಮಾತು

ಭಾರತ ಕೃಷಿ ಪ್ರಧಾನವಾದ ದೇಶವೆಂಬುದು ಹಿಂದೆ ಇದ್ದ ಖ್ಯಾತಿ. ಈಗ ಈ ಖ್ಯಾತಿ ಬಹುತೇಕ ಕಳೆದುಹೋಗಿದೆ. ಅದರಲ್ಲೂ ಜಾಗತೀಕರಣದ ಮಾಯಾಜಾಲಕ್ಕೆ ಒಳಗಾಗುತ್ತಿರುವ ಇಂದಿನ ಜೀವನ ಗತಿಯಲ್ಲಿ ಕೃಷಿಯೆಂಬುದು ಕೈಸುಟ್ಟುಕೊಳ್ಳುವ ಕರ್ಮಕಾಂಡವಾಗಿದೆ. ಕೃಷಿ ಕಾಯಕವನ್ನು ಬಿಡಲೂ ಆಗದ, ಕಟ್ಟಿಕೊಳ್ಳಲೂ ಆಗದ ಸಂದಿಗ್ಧದಲ್ಲಿ ರೈತನ ಬದುಕು ಡೋಲಾಯಮಾನವಾಗಿದೆ. ಇದಕ್ಕೆ ಕೇವಲ ಜಾಗತೀಕರಣದ ವಿದ್ಯಮಾನಗಳು ಮಾತ್ರ ಕಾರಣವಲ್ಲ ; ಇದಕ್ಕೂ ಮುನ್ನ ಹಸಿರು ಕ್ರಾಂತಿಯ ಯೋಜನೆ ಕೃಷಿ ನೆಲವನ್ನು ಬಂಜೆಯಾಗಿಸುವಲ್ಲಿ ಸಾಕಷ್ಟು ಪಾತ್ರ ವಹಿಸಿದೆ. ಅಧಿಕ ಇಳುವರಿಯ ಮೋಹಕ್ಕೆ ಬಿದ್ದು ಕೃಷಿಯನ್ನು ಕೈಗಾರಿಕೋದ್ಯಮಿಗಳ ಕೈಗೊಂಬೆಯಾಗಿಸುವಲ್ಲಿ ನಮ್ಮ ಆಧುನಿಕ ಕೃಷಿಪಂಡಿತರು ತುಂಬಾ ಯಶಸ್ವಿಯಾಗಿದ್ದಾರೆ. ಆಧುನಿಕ ಕೃಷಿಯ ಪರಿಣಾಮವಾಗಿ ಪಶುಪಾಲನೆ ನಾಶವಾಯಿತು. ಕೃಷಿಗೆ ಅಂಟಿಕೊಂಡಂತೆ ಗ್ರಾಮ ಸಂಸ್ಕೃತಿಯನ್ನು ಸಮೃದ್ಧಗೊಳಿಸುತ್ತಿದ್ದ ಗುಡಿಕೈಗಾರಿಕೆಗಳು ನಾಶವಾದವು. ನೆಲದ ಜೀವಸತ್ವ ಹಾಳಾಯಿತು, ನಿಸರ್ಗದ ಜೀವಸರಪಳಿ ಸಾಕಷ್ಟು ಹಾನಿಗೀಡಾಯಿತು. ಗುಂಡು ತೋಪುಗಳು ಇಲ್ಲವಾದವು. ಕೆರೆ ಕಟ್ಟೆ ಕುಂಟೆ ಬೆಂಚೆ ಪೆಂಚೆ ತಲಪರಿಗೆಗಳು ಕಣ್ಮರೆಯಾದವು. ಇವುಗಳು ಕೇವಲ ನೀರು ಸಂಗ್ರಹ ತಾಣಗಳಾಗಿ ಇರಲಿಲ್ಲ. ಜೀವ ಸಂಕುಲಗಳ ಬದುಕಿನ ಜೀವನಾಡಿಗಳಾಗಿದ್ದವು. ಇದೆಲ್ಲವನ್ನೂ ಪ್ರಗತಿಯೆನ್ನುವುದಾದರೆ ಇಂಥ ಪ್ರಗತಿಯನ್ನು ನಿಸರ್ಗ ವಿರೋಧಿಯೆನ್ನದೆ ವಿಧಿಯಿಲ್ಲ. ನಮ್ಮ ಜನಪದರಿಗೆ ಕೃಷಿ ಎಂಬುದು ಕೇವಲ ಹೊಟ್ಟೆಪಾಡಿನ ದಂಧೆಯಾಗಿರಲಿಲ್ಲ. ಅದೊಂದು ಸಂಸ್ಕೃತಿಯಾಗಿತ್ತು. ಅದು ಮನುಷ್ಯನ ಬದುಕಿಗೆ ಮಾತ್ರ ಸೀಮಿತವಾಗಿದ್ದ ಕಸುಬಾಗಿರಲಿಲ್ಲ. ನಿಸರ್ಗ ಧರ್ಮವನ್ನು ಗೌರವಿಸಿದಂತೆ ಕಟ್ಟಿಕೊಂಡ ಕಾಯಕವಾಗಿತ್ತು. ಆದ್ದರಿಂದಲೇ ಸಾವಿರಾರು ವರ್ಷಗಳಿಂದ ಕೃಷಿಯನ್ನು ಜೀವನ ಧರ್ಮವಾಗಿಸಿಕೊಂಡು ಬಂದಿದ್ದ ನಮ್ಮ ಜನಪದಕ್ಕೆ

ಕೃಷಿ ಒಂದು ನೆಲಮೂಲ ವಿಜ್ಞಾನವಾಗಿತ್ತು; ಭೂಮಿ ಬಿಸಿಲು ಮಳೆ ಹಾಗೂ ಋತುಗತಿಗಳಿಗೆ ಹೊಂದಿಕೊಂಡಂತೆ ಅರಳಿ ರೂಪುಗೊಂಡ ಅನುಭವದ ಅರಿವಾಗಿತ್ತು. ಇಂಥ ಅರಿವು ಅರ್ಥಾತ್ ನೆಲಮೂಲ ವಿಜ್ಞಾನ ಇಂದು ಕಳೆದುಹೋಗುತ್ತಿದೆ. ಆಧುನಿಕ ಕೃಷಿ ಪಂಡಿತರ ಹಾಗೂ ಕೃಷಿಯಾಧಾರಿತ ಕೈಗಾರಿಕೋದ್ಯಮಿಗಳ ಹುನ್ನಾರದಲ್ಲಿ ಅದು ಕಡೆಗಣನೆಗೆ ಒಳಗಾಯಿತು. ಬೃಹತ್ತಿನ ಭ್ರಮೆಯಲ್ಲಿ ಕನಸಿದ ನಮ್ಮ ರಾಜಕೀಯ ಆರ್ಥಿಕ ನೀತಿ ಈ ನೆಲಮೂಲ ಜ್ಞಾನವನ್ನು ಸಂಪೂರ್ಣವಾಗಿ ಉಪೇಕ್ಷಿಸಿತು. ಅಧಿಕ ಇಳುವರಿಗೆ ಮೋಹಿತನಾದ ರೈತ ಕೈಗಾರಿಕೋದ್ಯಮಿಗಳ ತಾಳಕ್ಕೆ ಹೆಜ್ಜೆ ಹಾಕಿದ. ಭೂ ಅಭಿವೃದ್ಧಿಯ ಹೆಸರಿನ ಬ್ಯಾಂಕುಗಳ ರೈತನ ಭೂಮಿಕಾಣಿಯನ್ನು ಅಡವಿಟ್ಟುಕೊಂಡು ಸಾಲಕೊಟ್ಟವು. ಸಾಲ ಪಡೆದ ರೈತ ಬೋರು ಕೊರೆಸಿದ, ತಂತಿಬೇಲಿ ಹಾಕಿದ. ಸಿಕ್ಕ ನೀರಿಗೆ ಸಂಭ್ರಮಿಸಿದ. ಒಂದು ಬೋರು ಹೋಗಿ ನೂರಾರು, ಸಾವಿರಾರು ಆಗಿ ಅಂತರ್ಜಲ ಮಟ್ಟ ಪಾತಾಳಕ್ಕಿಳಿಯಿತು. ಕುಡಿಯುವ ನೀರಿಗೆ ತತ್ವಾರವಾದ ದುಸ್ಥಿತಿಯನ್ನು ರೈತ ತನ್ನ ಮನೆ ಬಾಗಿಲಿಗೆ ಆಹ್ವಾನಿಸಿದ. ಸಾಲ ಕೊಟ್ಟ ಬ್ಯಾಂಕುಗಳು ಬಡ್ಡಿಗೆ ಬಡ್ಡಿ ಸೇರಿಸಿ ಅದನ್ನು ಅಸಲಾಗಿ ಪರಿವರ್ತಿಸಿ ಸುಸ್ತಿಯ ಸುಳಿಗೆ ಸಿಕ್ಕಿಸಿ ರೈತನನ್ನು ಆತ್ಮಹತ್ಯೆಗೆ ಶರಣಾಗುವಂತೆ ಮಾಡಿದುವು. ಹಿಂದೆ ಎಂಥ ಬರದಲ್ಲೂ ರೈತ ತನ್ನ ಆತ್ಮವಿಶ್ವಾಸ ಕಳೆದುಕೊಂಡಿರಲಿಲ್ಲ. ಸಾಲ ತೀರಿಸಲಾರದ್ದಕ್ಕೆ ಸಾವಿಗೆ ಶರಣಾಗುವ ದುರ್ಬಲ ಮನಸ್ಥಿತಿಗೆ ಎಂದೂ ಈ ಪ್ರಮಾಣದಲ್ಲಿ ಇಳಿದಿರಲಿಲ್ಲ. ಇಂದು ಹಳ್ಳಿಗಳಲ್ಲಿ ದುಡಿಯುವ ಯುವಕರ ಪಡೆ ಉಳಿದಿಲ್ಲ. ನಗರದ ಗಾರ್ಮೆಂಟ್ಸ್‌ಗಳಲ್ಲಿ ಸಿಕ್ಕುವ ಮಾಸಿಕ ಎರಡು ಮೂರು ಸಾವಿರ ರೂಪಾಯಿಗಳ ಜೀತಕ್ಕೆ ಸೇರಿದ್ದಾರೆ. ಗುಟ್ಕಾ ಸಾರಾಯಿಗಳ ದುಶ್ಚಟಗಳಿಗೆ ಬಲಿಯಾಗಿದ್ದಾರೆ. ಕಾರಣ ಬಿಡುವಿಲ್ಲದ ದುಡಿತದ ನಡುವೆ ಅವರಿಗೆ ಬಿಡುಗಡೆ ಕೊಡುವ ಚಟಗಳು ಇವಾಗಿವೆ. ಇವುಗಳ ಜೊತೆಗೆ ಮಚ್ಚು ಲಾಂಗುಗಳ ಉಪ್ಪಿ ಶಿವು ನಾರಾಯಣರು ಅವರನ್ನು ಸಿನಿಮಾ ಎಂಬ ಭ್ರಾಮಕ ಲೋಕದಲ್ಲಿ ಉದ್ರೇಕಿಸುತ್ತಿದ್ದಾರೆ. ಇಂದು ನಮ್ಮ ಹಳ್ಳಿಗಳಲ್ಲಿ ಉಳಿದಿರುವವರು ಮುದುಕರು ಕೈಲಾಗದವರು ಹಾಗೂ ಮಕ್ಕಳು. ಇವರ ಜೊತೆಗೆ ಕಳ್ಳುಬಳ್ಳಿಯ ಮೋಹಕ್ಕೆ ಬಿಡಲಾರದ ಬಂಧದಲ್ಲಿ ಅಲ್ಲಿಯೇ ಉಳಿದಿರುವವರು. ಹಬ್ಬ ಹರಿದಿನಗಳ ಸಂಭ್ರಮದಲ್ಲಿ ಪಾಲ್ಗೊಳ್ಳಲು

ಮಾತ್ರ ನಗರಕ್ಕೆ ಹೋದ ಹುಡುಗರು ಹಳ್ಳಿಗಳಿಗೆ ಬರುತ್ತಿದ್ದಾರೆ. ಮಿಕ್ಕಂತೆ ಹಳ್ಳಿಗಳ ಬೀದಿಗಳು ಬಿಕೋ ಎನ್ನುತ್ತಿದೆ. ಕೃಷಿಕಾಯಕದಿಂದ ದೂರವಾಗುತ್ತಿರುವ ಹಳ್ಳಿಗಳ ಭೂಮಿಯನ್ನು ನಗರದ ಭೂ ಮಾಫಿಯಾ ಜಗತ್ತು ಕಬಳಿಸುತ್ತಿದೆ. ಇಂಥ ದಾರುಣತೆಯ ನಡುವೆ ಅಲ್ಲೊಬ್ಬ ಇಲ್ಲೊಬ್ಬ ಹಠಮುನಿಯಂತೆ ನೆಲಮೂಲ ಜ್ಞಾನಕ್ಕೆ ನಿಷ್ಠನಾಗಿ ಕೃಷಿಕಾಯಕದಲ್ಲಿ ತತ್ಪರನಾಗಿದ್ದಾನೆ. ಆಧುನಿಕ ಕೃಷಿಗೆ ಹಂಬಲಿಸಿದರೂ ಹಾಸಿಗೆ ಇದ್ದಷ್ಟು ಕಾಲು ಚಾಚಬೇಕಾದ ಅನಿವಾರ್ಯತೆಯಲ್ಲಿ ಹಲವರು ಸಾಂಪ್ರದಾಯಿಕ ಕೃಷಿಗೆ ಜೋತುಬಿದ್ದಿದ್ದಾರೆ. ಇವರ ನಡುವೆ ಆಧುನಿಕ ಪ್ರಯೋಗದ ಪ್ರಾತ್ಯಕ್ಷತೆಗೆ ಒಡ್ಡಿಕೊಂಡವರೂ ಸಾಗಿದ್ದಾರೆ. ಹೀಗಾಗಿ ಇಂದು ಕೃಷಿ ಬದುಕು ದಿಕ್ಕು ತಪ್ಪಿದೆ. ಇಂಥ ವಾತಾವರಣದಲ್ಲಿ ದೇಸಿ ಕೃಷಿ ಜ್ಞಾನದ ಹೆಸರು ಹೇಳುತ್ತಾ ಹಲವು ಜೈವಿಕ ಪದ್ಧತಿಯ ಹೊಸ ಪ್ರಯೋಗಗಳನ್ನು ನಡೆಸುವ ಅದನ್ನು ಎಲ್ಲ ಕಡೆಗೂ ಏಕ ಮಾದರಿಯಂತೆ ಪ್ರಚುರಪಡಿಸುವ ಜ್ಞಾನಿಗಳು ಹುಟ್ಟಿಕೊಂಡಿದ್ದಾರೆ. ಅದನ್ನು ಅಲ್ಲಗಳೆಯುತ್ತಾ ಮತ್ತೊಂದು ರೀತಿಯಲ್ಲಿ ಪ್ರಯೋಗಶೀಲರಾಗಿ ಇದೇ ನಿಜವಾದ ದೇಸಿ ಪದ್ಧತಿ ಎಂದು ತಮ್ಮದೇ ಆದ ಮಾದರಿಯೊಂದನ್ನು ಹೇಳುತ್ತಾ ಪ್ರಾತ್ಯಕ್ಷತೆಗಳನ್ನು ತೋರುತ್ತಿರುವ ನೆಲನಿಷ್ಠೆಯಲ್ಲಿ ಮಾತನಾಡುವವರೂ ಇದ್ದಾರೆ. ಈ ಎಲ್ಲ ಪ್ರಯೋಗಗಳೂ ವಸ್ತುಸ್ಥಿತಿಗಿಂತ ಹೆಚ್ಚಾಗಿ ಉತ್ಪ್ರೇಕ್ಷಿತ ಮಾತುಗಳ ಸೂತಕದಲ್ಲಿ ರೈತರನ್ನು ದಿಕ್ಕು ತಪ್ಪಿಸುತ್ತಿವೆ ಎಂಬ ಅನುಮಾನ ದಟ್ಟವಾಗುತ್ತಿದೆ. ಏಕೆಂದರೆ ನೆಲಮೂಲ ವಿಜ್ಞಾನವೆಂಬುದು ಎಂದೂ ಏಕಮಾದರಿಯದಲ್ಲ. ಅದರ ಗುಣವೇ ಬಹುತ್ವ ಮೂಲದ್ದು, ಹಾಗೂ ಪ್ರದೇಶನಿಷ್ಠೆಯಲ್ಲಿ ಅನುಭವ ಜನ್ಯವಾದದ್ದು. ಈ ಹಿನ್ನೆಲೆಯಲ್ಲಿಯೇ ದೇಸಿ ಜ್ಞಾನ ಎನ್ನುವಾಗ 'ದೇಸಿ' ಪದವನ್ನು ವಿಶೇಷವಾಗಿ ಅರ್ಥೈಸಿ ಕೊಳ್ಳಬೇಕಾಗಿದೆ. ದೇಸಿ ಎಂಬುದು ಜನಪದಕ್ಕೆ ಸಮಾನಾರ್ಥಕ ವಾಗಿಯಾಗಲೀ ಪೂರಕವಾಗಿಯಾಗಲೀ ಪರ್ಯಾಯವಾಗಿಯಾಗಲೀ ಬಳಸುವ ಪದವಲ್ಲ. ಅದು ಮಾರ್ಗಕ್ಕೆ ವಿರುದ್ಧವಾಗಿ ಸಾಮಾನ್ಯೀಕರಿಸಿ ಪ್ರಯೋಗಿಸುವ ಪದವಾದರೂ ಅದು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗುತ್ತಲೇ ಏಕ ಎಂಬುದನ್ನು ನಿರಾಕರಿಸುತ್ತ ಅನೇಕ ಎಂಬುದನ್ನು ತುಂಬಿಕೊಳ್ಳುತ್ತ ತನ್ನ ಅರ್ಥವ್ಯಾಪ್ತಿಯನ್ನು ಪ್ರತೀತಗೊಳಿಸುತ್ತದೆ. ಕೃಷಿಗೆ ಸಂಬಂಧಿಸಿದಂತೆ ಈ ಪದವನ್ನು ಪ್ರಯೋಗಿಸುವಾಗಲಂತೂ ಅದರ ಬಹುತ್ವದ ಶ್ರೀಮಂತಿಕೆ ಸಮೃದ್ಧವಾಗಿ ಕಾಣುವಂಥಾದ್ದು. ಉದಾಹರಣೆಗೆ

ಕರ್ನಾಟಕವನ್ನು ಕೃಷಿಗೆ ಸಂಬಂಧಿಸಿ ನಾಲ್ಕು ನೆಲೆಗಳಲ್ಲಿ ವಿಂಗಡಿಸ ಬಹುದು. ಮಲೆನಾಡು, ಅರೆಮಲೆನಾಡು, ಬಯಲುಸೀಮೆ, ಬೆಂಗಾಡು ಸೀಮೆ. ಈ ನಾಲ್ಕು ಪ್ರದೇಶಗಳ ಭೂವೈಲಕ್ಷಣ್ಯ ಮಳೆ ಬಿಸಿಲಿನ ಹವಾಮಾನ ಪರಿಸ್ಥಿತಿ ತೀರ ವಿಭಿನ್ನವೂ ವಿಶಿಷ್ಟವೂ ಆದದ್ದು. ಆದರೆ ಮಲೆನಾಡು ಎಂದ ತಕ್ಷಣ ಅದನ್ನು ಏಕಮಾದರಿಯಲ್ಲಿ ಗ್ರಹಿಸುವುದು ತಪ್ಪು. ಕೊಡಗು, ಶಿವಮೊಗ್ಗ, ಚಿಕ್ಕಮಗಳೂರು, ಧಾರವಾಡ ಈ ಪ್ರದೇಶಗಳು ಮಲೆನಾಡು ಪ್ರದೇಶಗಳಾದರೂ ಅವುಗಳ ವಿಭಿನ್ನತೆಗಳು ಆಯಾ ನೆಲದ ಗುಣವಿಶೇಷತೆಯ ಅಸ್ಮಿತೆಗಳು. ಹಾಗೆಯೇ ಬಯಲುಸೀಮೆಯೆಲ್ಲಾ ಒಂದೇ ಅಲ್ಲ. ಹೀಗಾಗಿ ದೇಸಿ ಎಂಬುದು ಐದು ಮೈಲಿಯ ಅಂತರದಲ್ಲಿ ತನ್ನ ವ್ಯತ್ಯಾಸವನ್ನು ಢಾಳಾಗಿ ಕಾಣಿಸುವ ಅನನ್ಯತೆಯಿಂದ ಕೂಡಿರುತ್ತದೆ. ಈ ಅನನ್ಯತೆಯ ಅರಿವೆಂಬುದು ಆಯಾ ನೆಲಮೂಲದ ಅನುಭವ ಮೂಸೆಯಲ್ಲಿ ಪರಿಪಾಕಗೊಂಡು ಮೂಡಿರುತ್ತದೆ. ಬಯಲುಸೀಮೆಯಲ್ಲಿ ಒಂದೇ ಪ್ರದೇಶದ ಕೆರೆ ಬಯಲಿಗೂ ಅಲ್ಲಿಂದ ಐದು ಮೈಲಿ ಆಚೆಗಿರುವ ಕುಂಟೆ, ಬೆಂಚೆ, ಕಟ್ಟೆಗಳನ್ನು ಮಾತ್ರ ಒಳಗೊಂಡ ಬಯಲಿಗೂ ವ್ಯತ್ಯಾಸವಿರುತ್ತದೆ. ಬಿತ್ತುವ ಬೀಜ, ಬಳಸುವ ಗೋಡುಗೊಬ್ಬರ ಉಪಕರಣ ಕೃಷಿ ಮಾಡುವ ವಿಧಾನ, ಕಾಲಮಾನ ಎಲ್ಲವೂ ಸಾವಿರಾರು ವರ್ಷಗಳ ಅನುಭವದ ಮೂಸೆಯಲ್ಲಿ ಅರಳಿದ ಅರಿವಿನ ಪಕ್ವಫಲಗಳಾಗಿರುತ್ತವೆ. ಇದು ನೆಲಮೂಲ ಜ್ಞಾನ. ಇದು ದೇಸಿವಿಜ್ಞಾನ. ಇಂಥ ಅರಿವನ್ನು ಗಂಭೀರವಾಗಿ ಸ್ವೀಕರಿಸಿ ಇದನ್ನು ಮೂಲ ಬೇರಾಗಿಸಿಕೊಂಡು ನಮ್ಮ ಹೊಸ ಸಂಶೋಧನೆಗಳು ಬೆಳೆಯಬೇಕಾಗಿದೆ. ಒಗ್ಗದ ನೆಲಕ್ಕೆ ವೆನಿಲಾ ಹಾಕುವುದು ಮಿಡಿ ಸೌತೆ, ಬೀಟಿ ಹತ್ತಿಯ ಭ್ರಮೆಗೆ ಸಿಲುಕಿ ಹೊಂದಿಕೊಳ್ಳದ ಬೀಜ ಬಿತ್ತುವುದು ಆಗಬಾರದು. ನಿರ್ಬೀಜ ತಳಿಗಳನ್ನು ಮಾರುತ್ತಿರುವ ಬೀಜ ಗೊಬ್ಬರ ಔಷಧಿ ಕಂಪನಿಗಳ ಭ್ರಮಾತ್ಮಕ ಜಾಹೀರಾತಿನ ಮೋಸ ಜಾಲದಲ್ಲಿ ನಮ್ಮ ಬಡರೈತರು ಹಾಳಾಗಿರುವುದು ಹೀಗೆ. ನಮ್ಮ ಅಕ್ಷರ ಬುದ್ಧಿಯ ಕೃಷಿ ಪಂಡಿತರು ಇಂಥ ಹುನ್ನಾರಗಳಿಗೆ ಮುಖವಾಣಿಗಳಾಗಿ ಕೆಲಸ ಮಾಡುತ್ತಿರುವುದು ವಿಷಾದನೀಯ. ಇದು ತಪ್ಪಬೇಕು. ಜೊತೆಗೆ ಇವರ ದಂಧಾದುಂಧಿಯ ಆಕ್ರಮಣದಲ್ಲಿ ಹಾಳಾಗುತ್ತಿರುವ ಭೂಮಿ ಹಾಗೂ ಜೀವಜಗತ್ತು ರಕ್ಷಿತವಾಗಬೇಕು. ಭೂಮಿಯ ಧರ್ಮಕ್ಕೆ ಅಂದರೆ ಪಂಚಭೂತಗಳಿಗೆ ಎಂದೂ

ವಂಚನೆಯೆಸಗದಂತೆ ರೂಪುಗೊಂಡ ದೇಸಿಜ್ಞಾನ ಪದ್ಧತಿ ಅಳಿದು ಹೋಗಬಾರದು. ಅದನ್ನು ಪುನರುಜ್ಜೀವಿಸುತ್ತ ಆ ಪರಂಪರೆಯ ಮುಂದುವರಿಕೆಯಾಗಿ ಹೊಸ ಹೊಸ ಸಾಧ್ಯತೆಗಳನ್ನು ಕಂಡುಕೊಳ್ಳುವ ದಿಕ್ಕಿನಲ್ಲಿ ನಮ್ಮ ಕೃಷಿ ಸಂಶೋಧನೆಗಳು ನಡೆಯಬೇಕು. ಆಧುನಿಕ ಕೃಷಿಪಂಡಿತರು ಕೈಗಾರಿಕಾ ಉತ್ಪನ್ನಮುಖಿಗಳಾಗದೆ ಮಾನವ ಸಂಪನ್ಮೂಲ ಬಳಕೆಯ ಶ್ರಮ ಸಲಕರಣೆಗಳ ಸಾಧ್ಯತೆಗಳತ್ತ ಗಮನಹರಿಸಬೇಕು. ನೆಲಮೂಲ ತಳಿಗಳ ನಿರಾಕರಣೆಯನ್ನು ಬಿಟ್ಟು ಅವುಗಳ ಬಲವರ್ಧನೆಯ ಕಡೆಗೆ ಆಸಕ್ತಿ ವಹಿಸಬೇಕು. ಹಾಗೆಯೇ ದೇಸಿಯ ಬಹುತ್ವವನ್ನು ಮನಗಂಡು ನೆಲನಿಷ್ಠೆಯ ಜ್ಞಾನವನ್ನು ಗೌರವಿಸುವ ವಿಸ್ತರಿಸುವ ತಿಳುವಳಿಕೆ ನೀಡುವ ಕಡೆ ತೊಡಗಿಸಿ ಕೊಳ್ಳಬೇಕು, ಇದು ತುರ್ತಾಗಿ ಆಗಬೇಕಾದ ಕೆಲಸ.

ಇಂದು ದೇಸಿ ಜ್ಞಾನಕ್ಕೆ ಪೂರಕವಾಗುವ ಮೂರು ಬಗೆಯ ಕೃಷಿ ಪದ್ಧತಿಗಳು ನಮ್ಮ ನಡುವೆ ಬಳಕೆಯಲ್ಲಿವೆ. ಸಾಂಪ್ರದಾಯಿಕ ಕೃಷಿ ಪದ್ಧತಿ; ಸಾವಯವ ಕೃಷಿಪದ್ಧತಿ; ಸಹಜ ಕೃಷಿಪದ್ಧತಿ. ಮೇಲುನೋಟಕ್ಕೆ ಈ ಮೂರೂ ಮಾದರಿಗಳು ಭಿನ್ನ ಎಂಬಂತೆ ಕಂಡುಬಂದರೂ ಅವುಗಳ ಮೂಲ ಆಶಯ ಒಂದೇ; ಭೂಮಿಯ ಜೈವಿಕ ಸತ್ವವನ್ನು ನಾಶಮಾಡದೆ ಉತ್ತು ಬಿತ್ತಿ ಬೆಳೆ ತೆಗೆಯುವುದು ಮತ್ತು ಅಧಿಕ ಹಣದ ಖರ್ಚಿಲ್ಲದೆ ಹವಾಮಾನಕ್ಕೆ ಹೊಂದಿಕೊಂಡ ಸರಳ ಜ್ಞಾನ ಪ್ರಯೋಗದಲ್ಲಿ ವ್ಯವಸಾಯ ಮಾಡುವುದು. ದುರಾಸೆಗೆ ಬಲಿಯಾಗದೇ ನಿರಾಶೆಯ ಕೂಪಕ್ಕೂ ಬೀಳದೇ ಸಮಸ್ಥಿತಿಯ ಕೃಷಿ ಬದುಕನ್ನು ಕಟ್ಟಿಕೊಳ್ಳುವುದು. ಈ ಮೂರೂ ಕೃಷಿ ಪದ್ಧತಿಗಳು ನೆಲಕ್ಕೆ ವಿಷಉಣ್ಣಿಸುವ ದ್ರೋಹ ಚಿಂತನೆಗೆ ಎಂದೂ ತೊಡಗಿದವುಗಳಲ್ಲ. ನೆಲ, ಜಲ, ಹವಾಮಾನಗಳ ಲಭ್ಯತೆಯನ್ನು ಅರಿತು ಕೃಷಿಜ್ಞಾನವನ್ನು ಬಳಸಿಕೊಂಡವು. ಹಾಗೂ ಬೆಳೆಸಿಕೊಂಡವು. ಇದರ ಜೊತೆಗೆ ಸ್ಥಳೀಯ ಪ್ರಾಕೃತಿಕ ಲಭ್ಯತೆಯನ್ನು ನಾಶವಾಗದ ಪರಿಯಲ್ಲಿ ಕೃಷಿಗೆ ಪೂರಕವಾಗಿ ದುಡಿಸಿಕೊಂಡವು. ಈ ಎಲ್ಲ ಸಮಾನಾಂಶಗಳನ್ನು ಗಮನಿಸಿದರೆ ಇವುಗಳನ್ನು ಸರಳವಾಗಿ ಜೈವಿಕ ಕೃಷಿಪದ್ಧತಿಗಳೆಂದು ಕರೆಯಬಹುದು. ಈ ಮೂರೂ ಪದ್ಧತಿಗಳಲ್ಲಿ ಸ್ಥಳೀಯ ಜ್ಞಾನ ಪ್ರಧಾನವಾಗಿ ಬಿಂಬಿತವಾಗುವುದರಿಂದ ದೇಸಿ ಜೈವಿಕ ಕೃಷಿ ಪದ್ಧತಿಗಳೆಂದು ಸಾಮಾನ್ಯೀಕರಿಸಬಹುದು. ಅಲ್ಲದೆ ಈ ಮೂರು ವಿಧಾನಗಳನ್ನು ಪ್ರತ್ಯೇಕ

ಜ್ಞಾನ ಮಾರ್ಗಗಳಾಗಿ ಕಾಣದೆ ಪರಸ್ಪರ ಬಳಕೆಯ ಪೂರಕ ಮಾದರಿಗಳಾಗಿ ಸ್ವೀಕರಿಸುವ ಅಗತ್ಯವೂ ಇದೆ. ಹಾಗಾದಾಗ ಮಾತ್ರ ನೆಲಮೂಲ ಜ್ಞಾನದ ಬಳಕೆಯ ಹೊಸತನಕ್ಕೆ ಅವಕಾಶಗಳನ್ನು ಕಲ್ಪಿಸುವುದು, ಹೊಸ ಹೊಸ ಆವಿಷ್ಕಾರಗಳು ಈ ಜೈವಿಕ ಕೃಷಿ ಪದ್ಧತಿಯನ್ನು ವಿಸ್ತರಿಸುವುದು ಸಾಧ್ಯವಾಗುತ್ತದೆ. ದಿಕ್ಕು ತಪ್ಪಿರುವ ಕೃಷಿ ಬದುಕಿಗೆ ಒಂದು ನಿರ್ದಿಷ್ಟವೂ ಅತಿರೇಕಗಳ ಅವಾಂತರವೂ ಇಲ್ಲದ ತಿಳುವಳಿಕೆಯನ್ನು ನೀಡುವುದು ಇದರಿಂದ ಸಾಧ್ಯವಾಗುತ್ತದೆ. ಇಲ್ಲಿ ದುರಾಸೆಯಿಂದ ಭ್ರಮೆಗಳ ಬೆನ್ನುಹತ್ತುವ ಪ್ರಮೇಯವಿಲ್ಲ. ವಸ್ತುಸ್ಥಿತಿ ಅರಿವಿನಲ್ಲಿ ಅಗತ್ಯಗಳನ್ನು ಪೂರೈಸಿಕೊಳ್ಳುವ ಮಧ್ಯಮ ಮಾರ್ಗದ ಜೀವನ ವಿಧಾನ ಇದಾಗಿದೆ. ಮಧ್ಯಮ ಮಾರ್ಗವೆಂಬುದು ಮಧ್ಯಮ ವರ್ಗದ ಜೀವನ ಮಾರ್ಗವಲ್ಲ. ನಿಸರ್ಗ ಧರ್ಮಕ್ಕೆ ಎರವಾಗದಂತೆ ಬದುಕನ್ನು ಅರಿಯುವ ಬದುಕನ್ನು ಬಾಳುವ ಜೀವನ ಮಾರ್ಗ. ತಾನೂ ಬದುಕಿ ಜೀವಜಗತ್ತನ್ನೂ ಬದುಕಿಸುವಂತೆ ತನ್ನ ನಡೆಯನ್ನು ನಿಯಂತ್ರಿಸಿಕೊಳ್ಳುವ ಜೀವನಮಾರ್ಗ. ಇಂಥ ಒಂದು ಜೀವನ ಮಾರ್ಗಕ್ಕೆ ಸದಾ ಹಂಬಲಿಸುವ ಜನಪದ ಇಂದಿಗೂ ನಮ್ಮ ನಡುವೆ ಇದೆ. ಅವರ ಎದೆಯಾಳದಲ್ಲಿ ಈ ಮೂರೂ ಕೃಷಿ ಪದ್ಧತಿಗಳ ಪಾರಂಪರಿಕ ಅನುಭವ ಜ್ಞಾನ ನೆನಪಾಗಿ ನೆಲದ ಕರ್ಮರೂಪಿ ಪ್ರಾತ್ಯಕ್ಷಿತೆಯಾಗಿ ಮರುಭೂಮಿಯಲ್ಲಿನ ಓಯಸಿಸ್‌ಗಳಂತೆ ಇನ್ನೂ ಜೀವಂತವಿವೆ. ಅವುಗಳನ್ನು ಸಂಗ್ರಹಿಸಿ ಉಳಿಸುವ ಹಾಗೂ ಆಸಕ್ತ ರೈತ ಪ್ರಜ್ಞೆಗಳಿಗೆ ಒದಗಿಸುವ ಉದ್ದೇಶದಿಂದ ಈ ದೇಸಿಕೃಷಿ ಜ್ಞಾನ ಮಾಲಿಕೆಯನ್ನು ಪ್ರಾರಂಭಿಸಲಾಗಿದೆ.

ಈ ಮಾಲಿಕೆಯನ್ನು ಪುಸ್ತಕ ಪ್ರಾಧಿಕಾರ ಕೈಗೆತ್ತಿಕೊಂಡಾಗ ಹಲವು ರೀತಿಯ ಅಪಸ್ವರಗಳು ಕೇಳಿಬಂದವು. ಕೃಷಿಗೂ ಪುಸ್ತಕ ಪ್ರಾಧಿಕಾರಕ್ಕೂ ಎಲ್ಲಿಂದೆಲ್ಲಿಗೆ ಸಂಬಂಧ? ಎಂದು ಪ್ರಶ್ನಿಸಿದವರೂ ಇದ್ದಾರೆ. ಪುಸ್ತಕ ಹಾಗೂ ಪುಸ್ತಕ ಸಂಸ್ಕೃತಿ ಎಂದರೆ ಕೇವಲ ಸಾಹಿತ್ಯ, ಸಂಶೋಧನೆ ವಿಜ್ಞಾನ, ವಿಚಾರ, ಇತ್ಯಾದಿ ಅಕ್ಷರ ಜಗತ್ತಿನ ವ್ಯವಹಾರಕ್ಕೆ ಮಾತ್ರ ಸಂಬಂಧಿಸಿದ್ದು ಎಂದು ನಂಬಿದವರಿಗೆ ಹಾಗನ್ನಿಸುವುದು ಸಹಜ. ನಮ್ಮ ಸಮಾಜದಲ್ಲಿ ಶ್ರಮಿಕ ಮೂಲಕ ಕಾಯಕ ಜೀವಿಗಳನ್ನು ಪುಸ್ತಕ ಸಂಸ್ಕೃತಿಯಿಂದ ದೂರವಿಟ್ಟು ಮಾತನಾಡುವ ಇಂಥ ಜಾಡ್ಯ ಇನ್ನೂ ಮುಂದುವರೆದಿದೆ. ಪುಸ್ತಕ ಚಿಂತನೆ ಇವರಿಗೆ ತಿಳಿಯಲಾರದ್ದು ಎನ್ನುವ

ಮೇಲರಿಮೆಯ ಭಾವ ಅಕ್ಷರ ಜಗತ್ತಿನ ಜನರದ್ದಾದರೆ ಅದು ಸಮಾಜದ ಸ್ವಾಸ್ಥ್ಯ ಕೆಟ್ಟಿದ್ದರ ಸೂಚನೆ. ಸಂಸ್ಕೃತಿಯನ್ನು ವಿಸ್ತರಿಸುವ ಹೊಣೆಗಾರಿಕೆಯನ್ನು ಹೊತ್ತ ಅಕಾಡೆಮಿಗಳು, ಪ್ರಾಧಿಕಾರಗಳು, ಪ್ರಸಾರಾಂಗಗಳು ನಿರ್ದಿಷ್ಟ ವರ್ಗಗಳಿಗೆ ಸೀಮಿತಗೊಳಿಸಿಕೊಂಡ ಕಾರ್ಯಕ್ರಮಗಳಲ್ಲಿ ಪರ್ಯವಸಾನವಾಗುವ ಪರಿಪಾಠ ತಪ್ಪಬೇಕು. ಇವುಗಳು ನಮಗೆ ಏನು ಕೊಟ್ಟಿವೆ ಎಂದು ಪ್ರಶ್ನಿಸುವ ಶ್ರಮಿಕ ಸಮುದಾಯಗಳಿಗೆ ಉತ್ತರಿಸುವ ನೈತಿಕ ಹೊಣೆಗೆ ಇವುಗಳ ಭಾಜನವಾಗಬೇಕು. ಶ್ರಮಿಕ ಬಹುಸಮುದಾಯಗಳು ಈ ಎಲ್ಲ ಸಂಸ್ಥೆಗಳ ನೇರ ಫಲಾನುಭವಿಗಳಾಗಬೇಕು. ಜನರ ಬೆವರಿನ ಸಂಪತ್ತು ಸಾಮಾಜಿಕ ನ್ಯಾಯದ ನೈತಿಕ ಎಚ್ಚರದಲ್ಲಿ ವಿನಿಯೋಗವಾಗಬೇಕು. ಪುಸ್ತಕ ಪ್ರಾಧಿಕಾರ ಇದನ್ನು ಕರ್ತವ್ಯವೆಂಬ ಭಾವದಲ್ಲಿ ಸ್ವೀಕರಿಸಿ ಕಾರ್ಯಮುಖಿಯಾಗಿದೆ. ಈ ಕಾರ್ಯಯೋಜನೆಗೆ ಕೈಜೋಡಿಸಿದ ಮನಸ್ಸುಗಳು ನೂರಾರು. ಅವುಗಳನ್ನು ಇಲ್ಲಿ ನೆನೆಯುವುದು ಕರ್ತವ್ಯದ ಒಂದು ಭಾಗವೆಂದು ಭಾವಿಸಿದ್ದೇನೆ.

ದೇಸಿ ಕೃಷಿ ಜ್ಞಾನವನ್ನು ದಾಖಲಿಸುವ ಆಶಯಕ್ಕೆ ಪ್ರಾಧಿಕಾರದ ಎಲ್ಲ ಸದಸ್ಯ ಬಂಧುಗಳು ಒಕ್ಕೊರಲಿನ ಸಹಮತ ನೀಡಿದ್ದು ಈ ಯೋಜನೆ ಕಾರ್ಯರೂಪಕ್ಕಿಳಿಯಲು ಕಾರಣವಾದ ಮೊದಲ ಹಂತ. ಅದಾದ ಮೇಲೆ ತೇಜಸ್ವಿಯವರು ನೀಡಿದ ಮಾರ್ಗದರ್ಶನ ಮರೆಯಲಾರದ್ದು. ಅವರನ್ನು ಈ ಕಾರ್ಯದಲ್ಲಿ ನೇರವಾಗಿ ಭಾಗವಹಿಸಲು ಮನವಿಮಾಡಿಕೊಂಡಾಗ ತಮ್ಮ ಸಹಜ ಒರಟು ಭಾಷೆಯಲ್ಲಿ ಬೈದು ನಿರಾಕರಿಸಿದ ಅವರ ಪ್ರೀತಿ ಅದು ತೋರಿದ ದಾರಿ ಶ್ರೀಪಡ್ರೆ, ಭರಮಗೌಡ, ಶ್ರೀರಾಮರೆಡ್ಡಿ ಮೊದಲಾದ ಸಾಧಕರ ಪರಿಚಯ ಮಾಡಿಸಿತು. ಎಲ್ಲಕ್ಕಿಂತ ಮಿಗಿಲಾಗಿ ಜಿ. ಕೃಷ್ಣಪ್ರಸಾದರ ಆಸ್ಥೆ, ನೇತೃತ್ವ ಈ ಯೋಜನೆಯ ಸ್ವರೂಪಕ್ಕೆ ಚಾಲನೆ ನೀಡಿತು. ಗಾಣಧಾಳು, ಪ್ಯಾಟಿ, ಗೆಳೆಯರು ಈ ಸ್ವರೂಪವನ್ನು ಮನಸ್ಸಿಗೆ ತಂದುಕೊಂಡು ಶಿಬಿರಗಳ ಹೊಣೆಹೊತ್ತು ಸಂಪರ್ಕ ಸೇತುಗಳಾಗಿ ಎಲ್ಲರನ್ನೂ ಕೂಡಿಸುವಲ್ಲಿ ನೆರವಾದರು. ಮೊದಲ ಶಿಬಿರವನ್ನು ಹಮ್ಮಿಕೊಳ್ಳಲು ಆಶ್ರಯ ಹಾಗೂ ನೈತಿಕ ಬೆಂಬಲವನ್ನು ನೀಡಿದವರು ಆತ್ಮೀಯ ಗುರುಗಳಾದ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು. ಶಿಬಿರದಲ್ಲಿ ಚರ್ಚೆಯನ್ನು ಮಾಹಿತಿ ವಿಧಾನವನ್ನು ರೂಪುರೇಷೆ

ಮಾಡಿದವರು ಶ್ರೀ ನಾಗೇಶ ಹೆಗಡೆ ಅವರು. ಇವರೆಲ್ಲರ ಜೊತೆಗೆ ಅನುಭವದ ಜ್ಞಾನ ಸಮೃದ್ಧಿಯನ್ನು ಧಾರೆ ಎರೆದು ಬೆಳೆಸಿದವರು ಶ್ರೀಪಡ್ರೆ, ಭರಮಗೌಡ, ಶ್ರೀರಾಮರೆಡ್ಡಿ, ಕಳವೆ ಹಾಗೂ ನಾಡಿನ ರೈತಬಂಧುಗಳು. ಎರಡನೆಯ ಶಿಬಿರವನ್ನು ಹಮ್ಮಿಕೊಳ್ಳಲು ಸ್ಥಳ ನೀಡಿದವರು ಸೂರಶೆಟ್ಟಿಕೊಪ್ಪದ ಬೈಫ್ ಬಳಗ. ಆ ಶಿಬಿರದಲ್ಲಿ ಭಾಗವಹಿಸಿದ ಆ ಸುತ್ತಲಿನ ರೈತಬಂಧುಗಳು ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಭಾಗದ ರೈತಬಂಧುಗಳು, ನೀಡಿದ ಮಾಹಿತಿಯನ್ನು ದಾಖಲಿಸುವಲ್ಲಿ ಶ್ರಮಿಸಿದವರು ಶ್ರೀಮತಿ ರೇಖಾ. ತಮ್ಮ ಜಾನಪದೀಯ ಅಧ್ಯಯನ ದೃಷ್ಟಿ ಸೂಕ್ಷ್ಮತೆಗಳಿಂದ ಚರ್ಚೆಗೆ ಹೊಸ ಆಯಾಮ ನೀಡುತ್ತಿದ್ದ ಗೆಳೆಯರು ಕೆ.ವೈ.ನಾರಾಯಣಸ್ವಾಮಿ, ಕೆ. ಪುಟ್ಟಸ್ವಾಮಿ, ಎಂ.ಎಸ್.ಮೂರ್ತಿ, ಬಿ.ಎಸ್. ಸೋಮಶೇಖರ್, ಡಾ. ರಘುಪತಿ, ಡಾ. ನಾರಾಯಣಸ್ವಾಮಿ, ಡಾ. ಮುರಳಿ, ಪೂರ್ಣಪ್ರಜ್ಞ, ದೇರ್ಲ, ಜಿ.ಎನ್. ಮೋಹನ್, ಬಸವರಾಜ ಸಂತೇಶಿವರ, ಶಿವನಹಳ್ಳಿ ರಮೇಶ್, ಪ್ರೊ. ಶಿವರಾಮಯ್ಯ, ಡಾ. ರಾಮಕೃಷ್ಣಯ್ಯ ಮೊದಲಾದ ಗೆಳೆಯರು. ಶಿಬಿರಗಳ ಮಾಹಿತಿಯನ್ನು, ಸಭೆಗಳ ನಡಾವಳಿಯನ್ನು ದಾಖಲಿಸಿ ಡಿ.ಟಿ.ಪಿ. ಮಾಡಿ ಒದಗಿಸುತ್ತಿದ್ದವರು ಶ್ರೀವಾಣಿ, ವಿಜಯ, ಮಂಜು, ಶಂಕರ, ರಾಮಯ್ಯ ಮೊದಲಾದವರು. ಶಿಬಿರದ ಆಯೋಜನೆಯಿಂದ ಹಿಡಿದು ಸಂಪೂರ್ಣ ನಿರ್ವಹಣೆಯವರೆಗೆ ಬದ್ಧತೆಯಿಂದ ದುಡಿದವರು ಆಡಳಿತಾಧಿಕಾರಿಗಳಾದ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಅಶೋಕ ಎನ್. ಚಲವಾದಿ ಅವರು. ಇದೆಲ್ಲದರ ಜೊತೆಗೆ ಈ ಯೋಜನೆ ಕಾರ್ಯಗತವಾಗಲು ಅವಕಾಶ ಕಲ್ಪಿಸಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀ ಐ.ಎಂ. ವಿಠ್ಠಲಮೂರ್ತಿ ಅವರು, ಮನು ಬಳಿಗಾರ್, ಕಾ.ತ. ಚಿಕ್ಕಣ್ಣ, ಜೆ.ಎನ್. ಶಾಮರಾವ್, ಎಸ್.ಐ. ಭಾವಿಕಟ್ಟಿ, ಮುಂತಾದವರು. ಹೀಗೆ ಈ ಕೃತಿಗಳ ರೂಪಣದ ಹಿಂದೆ ನೂರಾರು ಮನಸ್ಸುಗಳ ಸಂಕಲ್ಪ ಶಕ್ತಿ ಕೆಲಸ ಮಾಡಿದೆ. ಇವರೆಲ್ಲರಿಗೆ ಆತ್ಮೀಯ ಕೃತಜ್ಞತೆಗಳು.

ಫೆಬ್ರವರಿ ೨೦೦೮ —ಪ್ರೊ. ಎಸ್.ಜಿ. ಸಿದ್ಧರಾಮಯ್ಯ

# ನನ್ನ ಮಾತು

ನಿಮ್ಮ ಕೈಲಿರುವ ಈ ಕೃತಿ ಕನ್ನಡ ಪುಸ್ತಕ ಪ್ರಾಧಿಕಾರಕ್ಕಾಗಿ ಬರೆದದ್ದು. ಪ್ರಾಧಿಕಾರದ ಮಹತ್ವಾಕಾಂಕ್ಷೆಯ ಯೋಜನೆಯಾದ ದೇಸೀ ಕೃಷಿ ಜ್ಞಾನ ಸಂಪುಟಕ್ಕಾಗಿ ಇದನ್ನು ಸಿದ್ಧಪಡಿಸಲಾಗಿದೆ. ನನ್ನ ಮೇಲೆ ವಿಶ್ವಾಸವಿಟ್ಟು ಈ ಜವಾಬ್ದಾರಿಯನ್ನು ನನಗೆ ನೀಡಿದ್ದಕಾಗಿ ಪ್ರಾಧಿಕಾರದ ಅಧ್ಯಕ್ಷರಾದ ಪ್ರೊ. ಎಸ್.ಜಿ. ಸಿದ್ಧರಾಮಯ್ಯನವರಿಗೆ ಅಭಾರಿಯಾಗಿದ್ದೇನೆ.

ಈ ಪುಸ್ತಕವನ್ನು ಬರೆಯುವ ಮೂಲಕ ಕೃಷಿ ಆಚರಣೆಗಳ ಬಗೆಗಿನ ನನ್ನ ತಿಳುವಳಿಕೆ ಅಪಾರವಾಗಿ ಹೆಚ್ಚಿದೆ ಎಂಬುದರಲ್ಲಿ ಎರಡು ಮಾತಿಲ್ಲ.

ಪ್ರೊ. ಸಿದ್ಧರಾಮಯ್ಯನವರು ಈ ಸಂಪುಟಗಳ ಬಗ್ಗೆ ಚರ್ಚಿಸುವಾಗಲೆಲ್ಲಾ ಬಹಳ ಪ್ರೀತಿಯಿಂದ ಇದನ್ನು ನೆಲಮೂಲ ಜ್ಞಾನದ ದಾಖಲಾತಿ ಎಂದು ಕರೆಯುತ್ತಿದ್ದರು. ಬಹಳ ಆಪ್ತವಾದ ಮತ್ತು ಅರ್ಥಪೂರ್ಣವಾದ ಪದ. ಪ್ರಸ್ತುತ ಸಂದರ್ಭದಲ್ಲಿ ಅಗತ್ಯವಾಗಿ ಆಗಬೇಕಾದ ಈ ದಾಖಲಾತಿ ಪ್ರಕ್ರಿಯೆಯ ಭಾಗವಾಗಿರುವುದು ನನಗೆ ಅತ್ಯಂತ ಸಂತೋಷದ ಸಂಗತಿ.

ಕೃಷಿ ಕುಟುಂಬದ ನಾನು ಮನೆಯಲ್ಲಿ ಹಲವಾರು ಆಚರಣೆಗಳನ್ನು ಕಂಡಿದ್ದೆನಾದರೂ ಇವುಗಳ ವಿವಿಧ ಸ್ವರೂಪ, ವ್ಯಾಪ್ತಿ, ವೈವಿಧ್ಯತೆಗಳ ಅರಿವಾಗಿದ್ದು ಥಳಿ ಎಂಬ ಊರಿನಲ್ಲಿ. ಕನಕಪುರದ ಹತ್ತಿರದ ತಮಿಳುನಾಡಿನ ಭಾಗವಾದ ಥಳಿ ಮತ್ತು ಅದರ ಸುತ್ತ–ಮುತ್ತಲ ಗ್ರಾಮಗಳಾದ ಬೇಲಾಳಂ, ಆಚುಬಾಳಂ, ಹೊಸದೊಡ್ಡಿ, ದಿನ್ನೂರು ಕೊಳಗೊಂಡನಹಳ್ಳಿ, ಬಿಳಿದಾಳೆ, ತಗ್ಗಟ್ಟಿ, ಉರಿಗಂ, ಅತ್ತಿನತ್ತ, ಸಿದ್ದಪ್ಪನದೊಡ್ಡಿ, ತೇರುಬೀದಿ, ಕೋಟೆಯೂರು, ಜೀನ್‌ಮಲ್ಲತ್ತ, ಮುತ್ತುಗದಮರದ ದೊಡ್ಡಿ, ಮಾರುಪಲ್ಲಿ, ಹೇರಿಂದ್ಯಾಪನಹಳ್ಳಿ ಮುಂತಾದವು ಕೃಷಿ ಆಚರಣೆಗಳ ಹೊಸ ಲೋಕವನ್ನೇ ತೆರೆದಿಟ್ಟವು.

ಅವುಗಳಿಂದ ಪ್ರೇರಣೆಗೊಂಡು ರಾಜ್ಯದ ಬೇರೆ-ಬೇರೆ ಭಾಗಗಳಲ್ಲಿ ನಡೆಯುವ ವೈವಿಧ್ಯಮಯ ಆಚರಣೆಗಳನ್ನು ದಾಖಲಿಸಲಾಯಿತು. ಆ ಸಮಯದಲ್ಲಿ ನನ್ನ ಹಿರಿಯ ಸಹೋದ್ಯೋಗಿಗಳಾಗಿದ್ದ ಜಿ. ಕೃಷ್ಣಪ್ರಸಾದ್ ಈ ಪ್ರಯತ್ನಗಳಿಗೆ ನೀಡಿದ ಅಪಾರ ಪ್ರೋತ್ಸಾಹವನ್ನು ಮರೆಯುವಂತಿಲ್ಲ.

ಥಳಿಯಲ್ಲಿ ನನ್ನ ಜೊತೆ ಕೆಲಸ ಮಾಡುತ್ತಿದ್ದ ಸ್ಥಳೀಯರಾದ ಲಿಂಗಪ್ಪ, ಪ್ರಸನ್ನಯ್ಯ, ಗೌರಾಚಾರ್, ಮಲ್ಲಣ್ಣ-ರಾಮಕ್ಕ ದಂಪತಿಗಳು, ಕೆ.ಎಂ. ನಾಗರಾಜು, ಶಂಕರ, ಅಶೋಕ್ .. ಇನ್ನೂ ಅನೇಕರನ್ನು ನೆನೆಸಲೇಬೇಕು.

ಭೂಮಿ ಹುಣ್ಣಿಮೆಗೆ ಆಹ್ವಾನಿಸಿ ಮಾಹಿತಿ ಸಂಗ್ರಹಣೆಗೆ ನೆರವಾದ ಶಿವಮೊಗ್ಗ ಜಿಲ್ಲೆ ಅರಸಾಳಿನ ಸುರೇಶ್, ಹಾವೇರಿ ಜಿಲ್ಲೆ ಹಳೇ ನಿಡನೇಗಲಿನ ಶಿವಯೋಗಿ ಮಕರಿಯವರಿಗೆ ಕೃತಜ್ಞತೆಗಳು.

ವಿವಿಧ ಪತ್ರಿಕೆಗಳಲ್ಲಿ ಪ್ರಕಟಗೊಂಡ ಲೇಖನಗಳನ್ನು ಮಾಹಿತಿ ಸಂಗ್ರಹಣೆಯ ಮೂಲವಾಗಿ ಬಳಸಿಕೊಂಡಿದ್ದೇನೆ, ಆ ಎಲ್ಲ ಬರಹಗಾರರಿಗೆ ಅನಂತ ಧನ್ಯವಾದಗಳು.

ಇಲ್ಲಿನ ಹಲವಾರು ಲೇಖನಗಳನ್ನು ಪ್ರಕಟಿಸಿದ ಪ್ರಜಾವಾಣಿ, ವಿಜಯಕರ್ನಾಟಕ, ಉದಯವಾಣಿ, ಕನ್ನಡಪ್ರಭ, ಸಿರಿ ಸಮೃದ್ಧಿ ಪತ್ರಿಕೆಗಳ ಸಂಪಾದಕರಿಗೆ ವಂದನೆಗಳು.

ಕರಡು ಪ್ರತಿಯನ್ನು ಮೊದಲಿಗೆ ಓದಿ ಅಭಿಪ್ರಾಯ ತಿಳಿಸಿದ ಹಿರಿಯರಾದ ನಾಗೇಶ್ ಹೆಗಡೆಯವರಿಗೆ ಕೃತಜ್ಞತೆಗಳು.

ಇದು ನಾಡಿನ ಸಮಗ್ರ ಆಚರಣೆಗಳ ದಾಖಲೆಯಲ್ಲ. ಕಾಲಮಿತಿಯಲ್ಲಿ ದಕ್ಕಿದ ಬೊಗಸೆಯಷ್ಟು ಮಾತ್ರ ಇಲ್ಲಿವೆ.

**ಮಲ್ಲಿಕಾರ್ಜುನ ಹೊಸಪಾಳ್ಯ**

ತೆನೆ, ಮೊದಲನೆ ಮಹಡಿ
ಮೂರನೇ ಮುಖ್ಯ ರಸ್ತೆ
ಸದಾಶಿವನಗರ
ತುಮಕೂರು-೫೭೨ ೧೦೧

# ಪರಿವಿಡಿ


ಪುಟ ಸಂಖ್ಯೆ

- ಅಧ್ಯಕ್ಷರ ಮಾತು v
- ನನ್ನ ಮಾತು xiii
- ಅಧ್ಯಾಯ ಒಂದು – ಹುಯ್ಯೋ ಹುಯ್ಯೋ ಮಳೆರಾಯ
  ಮಳೆ ಕುರಿತ ಆಚರಣೆಗಳು
  ೧. ಮಳೆ ನಂಬಿಕೆಗಳು ೧
  ೨. ಮಳೆ ನಕ್ಷತ್ರಗಳು ೫
  ೩. ಮಳೆ ಶಾಸ್ತ್ರಗಳು ೧೦
  ೪. ಜೋಕುಮಾರನ ಹಬ್ಬ ೧೫
- ಅಧ್ಯಾಯ ಎರಡು – ಭೂಮ್ತಾಯಿಗೆ ಶರಣು
  ಭೂಮಿ ಕುರಿತಾದ ಆಚರಣೆಗಳು
  ೧. ಹೊನ್ನಾರು ೧೭
  ೨. ಭೂಮಿ ಹುಣ್ಣಿಮೆ ೨೦
  ೩. ಗುಡ್ಡೆ ಹುಣ್ಣಿಮೆ ೨೫
  ೪. ಖೆಡ್ವಾಸ ೨೬
- ಅಧ್ಯಾಯ ಮೂರು – ಬೆಳೆಯ ಸಿರಿ
  ಬೆಳೆ ಸಂಬಂಧಿ ಆಚರಣೆಗಳು
  ೧. ಕಾರಬ್ಬ ೨೭
  ೨. ಕೂರಿಗೆ ಪೂಜೆ ೨೯
  ೩. ಹುತ್ತರಿ ೩೦
  ೪. ಬೆಳೆ ರಕ್ಷಣೆಗೆ ಕಾಸರಕನ ಕೊಂಬೆ ೩೪
  ೫. ಹಾಲೆ ಮರದ ಹಾಲು ಕುಡಿಯುವುದು ೩೫
  ೬. ಬಲಿಪಾಡ್ಯಮಿಯ ವಿವಿಧ ಆಚರಣೆಗಳು ೩೬
  ೭. ಬೂರಿಹಬ್ಬ ೩೮
  ೮. ಚರಗ ಚೆಲ್ಲುವುದು ೩೯
  ೯. ಎಳ್ಳಮವಾಸ್ಯೆ ೪೦
  ೧೦. ಮಗೆ ಮುಂಡುಗ ಹಾಕುವುದು ೪೨
  ೧೧. ಕರಿಕೊಳ್ಳಿ ಹಾಕುವುದು ೪೩
  ೧೨. ಗೌರಿ ಪೂಜೆ ೪೫
  ೧೩. ನೇಗಿಲು ಪೂಜೆ ೪೭

೧೪. ಬೆಳೆ ಹರಕೆಗಳು ೪೯
೧೫. ಗೌರಿಹಬ್ಬ ೫೧
೧೬. ಕರಿಭಂಟನ ಪೂಜೆ ೫೩
೧೭. ಭತ್ತದ ಗದ್ದೆಗೆ ಗೊಡ್ಡೀಚಲು ಇಡುವುದು ೬೦
೧೮. ಕರಡಿ ಭೂತಪ್ಪ ೬೧

- ಅಧ್ಯಾಯ ನಾಲ್ಕು – ಓಲಿಗ ಸ್ವಾಮಿ ಓಲಿಗ
ಸುಗ್ಗಿ ಆಚರಣೆಗಳು
೧. ಸಂಕ್ರಾಂತಿ ೬೪
೨. ರಾಶಿ ಪೂಜೆ ೭೩
೩. ಗೂಡು ಪೂಜೆ ೮೦
೪. ಕೃಷಿಕರ ಯುಗಾದಿ ೮೧
೫. ಸೋಲಿಗರ ರೊಟ್ಟಿ ಹಬ್ಬ ೮೫
೬. ಬೆಳದಿಂಗಳಪ್ಪನ ಪೂಜೆ ೮೬

- ಅಧ್ಯಾಯ ಐದು – ಕಾಲ್ನಡೆಗಳ ಕಥೆ
ಜಾನುವಾರುಗಳ ಕುರಿತ ಆಚರಣೆಗಳು
೧. ದೇಸೀ ದೀಪಾವಳಿ ೮೯
೨. ಕಂಬಳ ೯೨
೩. ಆಣಿ–ಪೀಣಿ ೯೯
೪. ಮಣ್ಣೆತ್ತಿನ ಅಮಾವಾಸ್ಯೆ ೧೦೦
೫. ಹಾಲೋಕುಳಿ ೧೦೨

- ಅಧ್ಯಾಯ ಆರು – ತಿಪ್ಪಮ್ಮ ದೇವರು
ತಿಪ್ಪೆಗಳ ಕುರಿತ ಆಚರಣೆಗಳು
೧. ತಿಪ್ಪೆ ಪೂಜೆ ೧೦೪
೨. ಸಗಣಿಯೊಂದಿಗೆ ಗುದ್ದಾಟ ೧೦೮

- ಅಧ್ಯಾಯ ಏಳು – ಕೃಷಿಕರ ಕೆಲವು ವಿಶೇಷ ಹಬ್ಬಗಳು
೧. ಅಷ್ಟಮಿ ೧೧೧
೨. ಆಟಿಕಳೆಂಜ ೧೧೪
೩. ನವಣೆ ಉಳಿಸುವ ಕೆರಳಮ್ಮ ೧೧೬

- ಬದಲಾದ ಬದುಕು– ಮರೆಯಾದ ಸಂಭ್ರಮ ೧೧೯
- ಆಕರ ಮತ್ತು ಕೃತಜ್ಞತೆಗಳು ೧೨೨

## ಅಧ್ಯಾಯ ಒಂದು

# ಹುಯ್ಯೋ ಹುಯ್ಯೋ ಮಳೆರಾಯ

## ಮಳೆ ಕುರಿತ ಆಚರಣೆಗಳು

*ಮಳೆ ನಮ್ಮ ಬೇಸಾಯದ ಹತ್ತಿರದ ನೆಂಟ. ಯಾವ ಕಾಲದಲ್ಲಿ ಯಾವ ಮಳೆ ಬೀಳುತ್ತದೆ, ಯಾವ ಮಳೆ ಬಂದಾಗ ಯಾವ ಕೃಷಿ ಚಟುವಟಿಕೆ ಆರಂಭಿಸಬೇಕು, ಯಾವ ಬೀಜ ಬಿತ್ತಬೇಕು ಎಂಬ ಲೆಕ್ಕಾಚಾರದಲ್ಲಿ ರೈತ ಸಮುದಾಯ ತಪ್ಪುವುದಿಲ್ಲ. ಹಳ್ಳಿಗರ ಪಾಲಿಗೆ ಮಳೆ ಕೇವಲ ನೀರಲ್ಲ. ಬದುಕಿನ ಜೀವ ಧಾರೆ. ಪ್ರಕೃತಿಯ ಒಡಲಿನ ವಿದ್ಯಮಾನಗಳನ್ನು ಎಚ್ಚರಿಕೆಯಿಂದ ಗಮನಿಸಿ, ಮಳೆಯ ಸಂಭವನೀಯತೆಯನ್ನು ನಿರ್ಧರಿಸುವ ಕೃಷಿಕರ ಬದುಕಿನ ಶೈಲಿ ಅನನ್ಯ.*

### ೧. ಮಳೆ ನಂಬಿಕೆಗಳು

ಕಾಲಕ್ಕೆ ಸರಿಯಾಗಿ ಮಳೆ ಬಾರದಿದ್ದಾಗ ರೈತ ಬಲು ಕಂಗಾಲು. ಆದರೆ ಅಂತಹ ಸಂದರ್ಭದಲ್ಲಿ ಆತ ಕೇವಲ ಮುಗಿಲು ನೋಡುತ್ತಾ ಕೂರುವುದಿಲ್ಲ. ತನ್ನ ಸುತ್ತ-ಮುತ್ತಲ ಪಶು-ಪಕ್ಷಿ, ಪ್ರಾಣಿಗಳನ್ನು ಗಮನಿಸತೊಡಗುತ್ತಾನೆ. ಇಡೀ ದಿನ ಹೊಲಗದ್ದೆಗಳಲ್ಲಿ ಸುತ್ತಾಡಿ ಗಿಡ-ಮರ, ಪ್ರಾಣಿ ಪಕ್ಷಿ ಮತ್ತು ಕೀಟಗಳ ನಡವಳಿಕೆಗಳನ್ನು ಅಭ್ಯಸಿಸಿ, ಆ ಅನುಭವದ ಆಧಾರದ ಮೇಲೆ ಮಳೆಯ ಆಗು-ಹೋಗುಗಳನ್ನು ನಿರ್ಧರಿಸುತ್ತಾನೆ. ಏಕೆಂದರೆ ನೆಲದ ಜೊತೆ ಅವಿನಾಭಾವ ಸಂಬಂಧ ಹೊಂದಿದ ಕ್ರಿಮಿ ಕೀಟಗಳಿಗೆ ಮಳೆ ಬರುವ ಹಾದಿಯ ಖಚಿತತೆ ತಿಳಿದಿರುತ್ತದೆ. ಪಕ್ಷಿಗಳ ವರ್ತನೆ, ಇರುವೆಗಳ ತರಾತುರಿ, ಜಾನುವಾರುಗಳ ದಿನಚರಿಗಳು ಒಂದು ನಿರ್ದಿಷ್ಟ ರೀತಿಯಲ್ಲಿ ಬದಲಾಗುವುದಕ್ಕೂ ಮಳೆ ಬರುವುದಕ್ಕೂ ಅಂತರ್ ಸಂಬಂಧವಿದೆ. ಈ ಅಂತರ್ ಸಂಬಂಧದ ವರ್ತಮಾನವನ್ನು ನಮ್ಮ ರೈತ ವರ್ಗ ಶತ-ಶತಮಾನಗಳಿಂದ ಗಮನಿಸಿ ಅನುಭವಿಸಿದೆ. ಆ ಅನುಭವದ ನೆಲೆಯಲ್ಲಿ ಈ ಮಳೆ ನಂಬಿಕೆಗಳು ರೂಢಿಗೆ ಬಂದಿವೆ, ಚಾಲ್ತಿಯಲ್ಲಿವೆ.

ಮನುಷ್ಯರಿಗಿಂತ ಪ್ರಾಣಿಗಳು ಹೆಚ್ಚು ಸೂಕ್ಷ್ಮ ಮತ್ತು ಸಂವೇದನೆಯುಳ್ಳವಾಗಿರುತ್ತವೆ. ಹಾಗಾಗಿ ಅವು ಪ್ರಕೃತಿ ಮತ್ತು ವಾತಾವರಣದಲ್ಲಾಗುವ ಬದಲಾವಣೆಯನ್ನು ಬಹು ಬೇಗ ಗುರುತಿಸುತ್ತವೆ ಮತ್ತು ಅದನ್ನು ತಮ್ಮ ಹಾವಭಾವಗಳಿಂದ ವ್ಯಕ್ತಪಡಿಸುತ್ತವೆ. ಈ ವರ್ತನೆಗಳನ್ನು ಅನುಭವದಿಂದ ಬಲ್ಲ ರೈತ ಸಮುದಾಯ ಅವುಗಳನ್ನಾಧರಿಸಿ ಮಳೆ-ಬೆಳೆಯ ಮುನ್ಸೂಚನೆಯನ್ನು ವಿಶ್ಲೇಷಿಸುತ್ತಾರೆ.

ಅಧುನಿಕ ವಿಜ್ಞಾನದ ಅಳತೆಗೋಲಿಗೆ ಸಿಕ್ಕದ, ತಲೆ-ತಲೆಮಾರುಗಳ ಮೂಲಕ ಹಾದು ಬಂದ ಹಳ್ಳಿಗರ ಮಳೆನಂಬಿಕೆಗಳು ಹೀಗಿವೆ.


- ಹುಲ್ಲಿನ ಮೇಲೆ ಎಂಜಲು ಉಗಿದಂತೆ ಕಾಣುವ ನುರುಗು ಹುಳು ಹುಲ್ಲಿನಲ್ಲಿ ಜಾಸ್ತಿ ಇದ್ದರೆ ಮಳೆ ಬರುವುದು ವಿಳಂಬವಾಗುತ್ತದೆ, ಅದೇ ಹುಳು ರಾಗಿ ಹೊಲದಲ್ಲಿ ಹೆಚ್ಚಾಗಿದ್ದರೆ ಒಂದು ವಾರದೊಳಗೆ ಮಳೆ ಗ್ಯಾರಂಟಿ.
- ಉಗನೀ ಬಳ್ಳಿ ತುಂಡಾಗದೆ ಚೆನ್ನಾಗಿ ಹಂಬು ಬೆಳೆದ ವರ್ಷ ಒಳ್ಳೆ ಮಳೆಯನ್ನು ನಿರೀಕ್ಷಿಸಬಹುದು.
- ಮಳೆ ಇಲ್ಲದ ದಿನ ಬೆಟ್ಟಗಳಲ್ಲಿ ಮಂಜು ಅಥವಾ ಕಾವಳ ಹಿಡಿದರೆ ವಾರದೊಳಗೆ ಮಳೆ ಬರುತ್ತದೆ. ಜಡಿಮಳೆ ಇದ್ದು ಬೆಟ್ಟಗಳಲ್ಲಿ ಮಂಜು ಹಿಡಿದರೆ (ಮುಸುಕಿದರೆ) ಬರುತ್ತಿದ್ದ ಮಳೆ ಬಿಡುತ್ತದೆ ಇಲ್ಲವೇ ಜಾಸ್ತಿಯಾಗುತ್ತದೆ.
- ಕೊಡತಿ ಹುಳು (ಡ್ರಾಗನ್ ಫ್ಲೈ) ಗುಂಪಾಗಿ ನೆಲ ಕಚ್ಚಿದರೆ ಅಥವಾ ನೆಲ ಮೂಸುತ್ತಿದ್ದರೆ ಅಥವಾ ಉತ್ತರದಿಂದ ದಕ್ಷಿಣಕ್ಕೆ ಹಿಂಡುಗಟ್ಟಲೆ ಹಾರಿ ಹೋದರೆ ೩ ದಿನದೊಳಗೆ ಮಳೆ ಬರುತ್ತದೆ.
- ಹುಣಸೇ ಮರ ಜಬರದಸ್ತಾಗಿ ಹೂ ಬಿಟ್ಟ ವರ್ಷ ಮಳೆಯ ಪ್ರಮಾಣ ಕೂಡ ಅಧಿಕ.
- ನಂದಿ ಮೂಲೆ ಅಥವಾ ದೇವ ಮೂಲೆಯಲ್ಲಿ ಮಿಂಚು ಹುಟ್ಟಿದರೆ ತಪ್ಪದೆ ಮಳೆ ಬರುತ್ತದಂತೆ, ನಿಖರವಾದ ಮಳೆ ನಂಬಿಕೆಯಿದು ಮತ್ತು ವ್ಯಾಪಕವಾಗಿ ನಾಡಿನ ಹಲವಾರು ಪ್ರದೇಶಗಳಲ್ಲಿ ಇದು ಬಳಕೆಯಲ್ಲಿರುವುದು ವಿಶೇಷ.
- ತೆಳುವಾಗಿ ಹರಿಯುತಿರುವ ಹಳ್ಳದ ನೀರು ಇದಕ್ಕಿದ್ದಂತೆ ಭೂಮಿಯೊಳಗೆ ಇಂಗಿ ಹೋದರೆ ಮಳೆ ಬರುತ್ತದೆ ಎಂದು ನಂಬಲಾಗುತ್ತದೆ.

- ಕಪ್ಪು ಇರುವೆಗಳು ತಮ್ಮ ಗೂಡಿನಿಂದ ಮೊಟ್ಟೆಗಳು ಮತ್ತು ಆಹಾರವನ್ನು ಬೇರೆಡೆಗೆ ಸಾಗಿಸುತ್ತಿದ್ದರೆ ೩ ದಿನದೊಳಗೆ ನಿಶ್ಚಿತವಾಗಿ ಮಳೆ ಬರುತ್ತದೆ. ಇರುವೆಗಳು ತಮ್ಮ ಸ್ಥಳ ಬದಲಾಯಿಸುವಿಕೆಯು ಮಳೆ ಬರುವ ಸೂಚನೆ.
- ಕೆಂಬೂತ (ಸಂಬಾರ್ ಕಾಗೆ) ಹಾಗೂ ಕೋಗಿಲೆಗಳು ಕೂಗುತ್ತಿದ್ದರೆ ಶೀಘ್ರದಲ್ಲಿ ಮಳೆ ಯೋಗ ಇದೆಯೆಂದು ಅರ್ಥ.
- ಸೂರ್ಯ ಹುಟ್ಟುವ ಸ್ವಲ್ಪ ಹೊತ್ತಿನ ಮೊದಲು ಪೂರ್ವದಿಂದ ಪಶ್ಚಿಮಕ್ಕೆ ಬಿಳಿ ಮೋಡ ಕಾಲುವೆ ರೀತಿ ಗೋಚರಿಸಿದರೆ ಅಂದು ಮಳೆ ಬರುತ್ತದೆ.
- ಮನೆಯ ಕೋಳಿಯು ರೆಕ್ಕೆ ಹರಡಿ ಬಿಸಿಲು ಕಾಯಿಸುತ್ತಿದ್ದರೆ ಮಳೆಯ ಮುನ್ಸೂಚನೆ. ಅಲ್ಲದೆ ಮಧ್ಯಾಹ್ನದ ಹೊತ್ತಲ್ಲಿ ಹುಂಜ ಕೂಗಿದರೆ ಹಾಗೂ ಕೋಳಿಗಳು ಕಚ್ಚಾಡಿದರೆ ಅಂದು ಮಳೆ ಬರುತ್ತದೆ.
- ಒಣ ಭೂಮಿಯ ಕಲ್ಲಿನ ಕೆಳಗೆ ಕಪ್ಪೆ ಒಂದೇ ಸಮ ವಟಗುಟ್ಟುತ್ತಿದ್ದರೆ ಮಳೆ ಬರುವ ಸಂಭವ ಹೆಚ್ಚು.
- ಸೂರ್ಯನ ಸುತ್ತ ವೃತ್ತಾಕಾರದ ಉಂಗುರಗಳು ಮೂಡುತ್ತವೆ. ಇವು ಸೂರ್ಯನಿಗೆ ಹತ್ತಿರದಲ್ಲಿದ್ದರೆ ಬೇಗ ಮಳೆ ಬರುತ್ತದೆ, ಉಂಗುರ ದೂರದಲ್ಲಿದ್ದರೆ ತಡವಾಗಿ ಮಳೆ ಬರುತ್ತದೆ. ಇದನ್ನು ಕೆಲವೆಡೆ ಸೂರ್ಯನಿಗೆ ಗುಡಿ ಕಟ್ಟುವುದು ಎನ್ನುತ್ತಾರೆ. ಚಂದ್ರನಿಗೆ ಈ ರೀತಿ ಉಂಗುರ ಅಥವಾ ಗುಡಿ ಮೂಡಿದಾಗಲೂ ಇದೇ ರೀತಿಯ ನಂಬಿಕೆಗಳಿವೆ.
- ಕಾಡು–ಮೇಡುಗಳಲ್ಲಿ ಶತಾವರಿ ಬಳ್ಳಿ (ಅಜ್ಜಿತಲೆ ಗಿಡ) ಚೆನ್ನಾಗಿ ಹರಿದ ವರ್ಷ ಮಳೆ–ಬೆಳೆ ಉತ್ತಮವಾಗುತ್ತದೆ.
- ನವಿಲು ಹಾಗೂ ಕಾಡುಕೋಳಿಗಳು ಕೂಗಿಕೊಂಡರೆ ೩ ದಿನದೊಳಗೆ ಮಳೆ ಬರುತ್ತದೆ.
- ಕಡ್ಡಿ ಜೇನಿನ ತುಪ್ಪ ಗಟ್ಟಿಯಾದರೆ ಮಳೆ ವಿಳಂಬವಾಗುತ್ತದೆ. ಅದೇ ಜೇನು ತುಪ್ಪ ತೆಳುವಾಗಿದ್ದರೆ ಮಳೆ ಬರುವ ಸಂಭವ ಜಾಸ್ತಿ.
- ಗೊಟ್ಟಿಮರ ಕಾಯಿ ಜಾಸ್ತಿ ಬಿಟ್ಟ ವರ್ಷ ಬರಗಾಲ ಬರುತ್ತದೆ.
- ಅಗ್ನಿ ಮೂಲೆಯಲ್ಲಿ ಮಿಂಚಿದರೆ ಆ ದಿನ ಮಳೆ ಬರುವುದಿಲ್ಲ.
- ನಿಶ್ಚಿತ ಪ್ರಮಾಣದ ಹಾಲು ಕರೆಯುತ್ತಿರುವ ಹಸು–ಎಮ್ಮೆಗಳು ಇದ್ದಕ್ಕಿದ್ದಂತೆ ಕಡಿಮೆ ಹಾಲು ಕರೆದರೆ ಮುಂದಿನ ಎರಡು ದಿನಗಳಲ್ಲಿ ಮಳೆ ಬರುತ್ತದೆ.

- ದನ–ಕರುಗಳು ಒಂದು ನಿರ್ದಿಷ್ಟ ದಿಕ್ಕಿಗೆ ತಲೆ ಎತ್ತಿ ನಿಂತುಕೊಂಡು, ಬಾಯಿಯನ್ನು ಸ್ವಲ್ಪ ತೆರೆದು ಮೂಗಿನ ಹೊರಳೆ ಅಗಲಿಸಿ ಗಾಳಿಯನ್ನು ಜೋರಾಗಿ ಎಳೆದುಕೊಳ್ಳುತ್ತಿದ್ದರೆ ಮಳೆಯಾಗುತ್ತದೆ.

- ರಣಹದ್ದುಗಳು, ಕಾಗೆಗಳು ಮುಗಿಲಲ್ಲಿ ತುಂಬಾ ಹೊತ್ತು ಹಾರಾಡುತ್ತಿದ್ದರೆ, ಹದ್ದುಗಳು ರೆಕ್ಕೆ ಬಡಿಯದೆ ಮುಗಿಲಲ್ಲಿ ತುಂಬಾ ಹೊತ್ತು ತೇಲಾಡುತ್ತಿದ್ದರೆ ಮಳೆ ಬರುವ ಸೂಚನೆ.

- ಮುತ್ತುಗದ ಮರ (Flame of the forest) ಜಗತ್ತಿನಲ್ಲಿರುವ ಮರ–ಮುಟ್ಟುಗಳಲ್ಲಿ ಅತ್ಯಂತ ಹಿರಿಯದು ಎನ್ನುವ ನಂಬಿಕೆ ನಮ್ಮ ರೈತರಲ್ಲಿದೆ. ಅದಕ್ಕೆ ಅವರು ನೀಡುವ ಕಾರಣ ಅದರ ಹೆಸರೇ ಮುದುಕದ ಮರ ಎಂಬುದು. ಈ ಮರ



ಹೂಬಿಟ್ಟ ಮುತ್ತುಗ

ಚೆನ್ನಾಗಿ ಹೂ ಕಾಯ್ದು ಕಾಯಿ ಜೋತಿಡಿದರೆ ಆ ವರ್ಷ ಹಿಂಗಾರು ಮತ್ತು ಮುಂಗಾರು ಎರಡೂ ಸಹ ಸಮೃದ್ಧವಾಗಿರುತ್ತದೆ. ಅದರಲ್ಲಿಯೂ ಕಾಯಿಯಲ್ಲಿರುವ ರುಪಾಯಗಲದ ಬೀಜ ಕಾಯಿಯ ತೊಟ್ಟಿನ ಭಾಗದಲ್ಲಿದ್ದರೆ ಹಿಂಗಾರು ಉತ್ತಮ, ತುದಿಯ ಭಾಗದಲ್ಲಿದ್ದರೆ ಮುಂಗಾರು ಉತ್ತಮ ಮತ್ತು ಸರಿಯಾಗಿ ಕಾಯಿಯ ಮಧ್ಯ ಭಾಗದಲ್ಲಿದ್ದರೆ ಹಿಂಗಾರು–ಮುಂಗಾರು ಎರಡೂ ಉತ್ತಮ ಎಂಬುದು ರೈತರ ನಂಬಿಕೆ. ಫೆಬ್ರವರಿ–ಮಾರ್ಚ್ ತಿಂಗಳಲ್ಲಿ ಅಂದರೆ ಇನ್ನೇನು ಮುಂಗಾರು ಆರಂಭವಾಗುತ್ತದೆನ್ನುವಾಗ ಕೆಂಪು ವರ್ಣದ ಹೂ ಬಿಡುವ ಮುತ್ತುಗ ರೈತರಿಗೆ ಆ ವರ್ಷದ ಏರು–ಪೇರುಗಳನ್ನು ತಿಳಿಸುವ ಭವಿಷ್ಯಕಾರ.

ಹೀಗೆ ಹತ್ತು–ಹಲವು ನಂಬಿಕೆ, ವಾಡಿಕೆಗಳನ್ನು ನಮ್ಮ ರೈತಾಪಿಗಳ ನಿತ್ಯದ ಬದುಕಿನಲ್ಲಿ ಕಾಣಬಹುದು.

## ೨. ಮಳೆ ನಕ್ಷತ್ರಗಳು

ಒಟ್ಟು ೨೭ ಮಳೆ ನಕ್ಷತ್ರಗಳು ಚಾಲ್ತಿಯಲ್ಲಿವೆ. ಇವುಗಳಲ್ಲಿ ೧೨ ಮಳೆಗಳು ಮಾತ್ರ ಮಳೆ ತರುತ್ತವೆ, ಎಲ್ಲ ಪ್ರದೇಶಗಳ ಕೃಷಿ ಚಟುವಟಿಕೆಗಳು ಈ ಅವಧಿಯಲ್ಲಿಯೇ ನಡೆಯುತ್ತವೆ. ಈ ಮಳೆಗಳ ಅವಧಿ ಸಾಮಾನ್ಯವಾಗಿ ೧೫ ದಿವಸಗಳಾಗಿರುತ್ತದೆ. ಉಳಿದ ಮಳೆ ಅವಧಿಯಲ್ಲಿ ಅಲ್ಪ–ಸ್ವಲ್ಪ ಮಳೆ ಬಂದರೂ ಸಹ ಅದು ನಿಶ್ಚಿತವಲ್ಲ. ಹಾಗಾಗಿ ಮಳೆ ತರುವ ೧೨ ಮಳೆಗಳನ್ನು ಕಾಲ ಮೇಘಗಳೆಂತಲೂ, ಉಳಿದವುಗಳನ್ನು ಅಕಾಲ ಮೇಘಗಳೆಂತಲೂ ಕರೆಯುತ್ತಾರೆ. ಮಕ್ಕಳಿಗೆ ಬಾಲ್ಯದಲ್ಲಿಯೇ ಮಳೆಗಳ ಹೆಸರುಗಳನ್ನು ಕಲಿಸುವುದನ್ನು ಹಿಂದೆ ಮಾಡುತ್ತಿದ್ದರು, ಆದರೆ ಈಗ ಆ ಸಂಪ್ರದಾಯ ಮರೆಯಾಗಿದ್ದು ಮಕ್ಕಳಿಗಿರಲಿ ಯುವ ಜನಾಂಗಕ್ಕೇ ಅದರ ಅರಿವಿಲ್ಲದಂತಾಗಿದೆ.

ನಮ್ಮ ಮಳೆಗಳ ಹೆಸರು ಮತ್ತು ಅವುಗಳ ಕಾಲವನ್ನು ಇಲ್ಲಿ ನೀಡಲಾಗಿದೆ.

| ಕ್ರಮ ಸಂಖ್ಯೆ | ಮಳೆ ಹೆಸರು | ಅವಧಿ |
|---|---|---|
| ೧ | ಉತ್ತರಾಷಾಢ | ಜನವರಿ ೧೧ ರಿಂದ ೨೩ |
| ೨ | ಶ್ರಾವಣ | ಜನವರಿ ೨೪ ರಿಂದ ಫೆಬ್ರವರಿ ೫ |
| ೩ | ಧನಿಷ್ಠ | ಫೆಬ್ರವರಿ ೬ ರಿಂದ ಫೆಬ್ರವರಿ ೧೮ |
| ೪ | ಶತಭಿಷ | ಫೆಬ್ರವರಿ ೧೯ ರಿಂದ ಮಾರ್ಚ್ ೩ |
| ೫ | ಪೂರ್ವಾಭಾದ್ರ | ಮಾರ್ಚ್ ೪ ರಿಂದ ಮಾರ್ಚ್ ೧೬ |
| ೬ | ಉತ್ತರಾಭಾದ್ರ | ಮಾರ್ಚ್ ೧೭ ರಿಂದ ಮಾರ್ಚ್ ೨೯ |
| ೭ | ರೇವತಿ | ಮಾರ್ಚ್ ೩೦ ರಿಂದ ಏಪ್ರಿಲ್ ೧೨ |

| | | |
|---|---|---|
| ೮ | ಅಶ್ವಿನಿ | ಏಪ್ರಿಲ್ ೧೩ ರಿಂದ ಏಪ್ರಿಲ್ ೨೬ |
| ೯ | ಭರಣಿ | ಏಪ್ರಿಲ್ ೨೭ ರಿಂದ ಮೇ ೧೦ |
| ೧೦ | ಕೃತ್ತಿಕಾ | ಮೇ ೧೧ ರಿಂದ ಮೇ ೨೩ |
| ೧೧ | ರೋಹಿಣಿ | ಮೇ ೨೪ ರಿಂದ ಜೂನ್ ೬ |
| ೧೨ | ಮೃಗಶಿರ | ಜೂನ್ ೭ ರಿಂದ ಜೂನ್ ೨೦ |
| ೧೩ | ಆರಿದ್ರಾ | ಜೂನ್ ೨೧ ರಿಂದ ಜುಲೈ ೪ |
| ೧೪ | ಪುನರ್ವಸು | ಜುಲೈ ೫ ರಿಂದ ಜುಲೈ ೧೯ |
| ೧೫ | ಪುಷ್ಯ | ಜುಲೈ ೨೦ ರಿಂದ ಆಗಷ್ಟ್ ೨ |
| ೧೬ | ಆಶ್ಲೇಷ | ಆಗಷ್ಟ್ ೩ ರಿಂದ ಆಗಷ್ಟ್ ೧೬ |
| ೧೭ | ಮಗೆ | ಆಗಷ್ಟ್ ೧೭ ರಿಂದ ಆಗಷ್ಟ್ ೨೯ |
| ೧೮ | ಹುಬ್ಬೆ | ಆಗಷ್ಟ್ ೩೦ ರಿಂದ ಸೆಪ್ಟೆಂಬರ್ ೧೨ |
| ೧೯ | ಉತ್ತರೆ | ಸೆಪ್ಟೆಂಬರ್ ೧೩ ರಿಂದ ಸೆಪ್ಟೆಂಬರ್ ೨೬ |
| ೨೦ | ಹಸ್ತ | ಸೆಪ್ಟೆಂಬರ್ ೨೭ ರಿಂದ ಅಕ್ಟೋಬರ್ ೯ |
| ೨೧ | ಚಿತ್ತೆ | ಅಕ್ಟೋಬರ್ ೧೦ ರಿಂದ ಅಕ್ಟೋಬರ್ ೨೪ |
| ೨೨ | ಸ್ವಾತಿ | ಅಕ್ಟೋಬರ್ ೨೫ ರಿಂದ ನವಂಬರ್ ೬ |
| ೨೩ | ವಿಶಾಖ | ನವಂಬರ್ ೭ ರಿಂದ ನವಂಬರ್ ೧೮ |
| ೨೪ | ಅನುರಾಧ | ನವಂಬರ್ ೧೯ ರಿಂದ ಡಿಸೆಂಬರ್ ೧ |
| ೨೫ | ಜೇಷ್ಠ | ಡಿಸೆಂಬರ್ ೨ ರಿಂದ ಡಿಸೆಂಬರ್ ೧೪ |
| ೨೬ | ಮೂಲಾ | ಡಿಸೆಂಬರ್ ೧೫ ರಿಂದ ಡಿಸೆಂಬರ್ ೨೭ |
| ೨೭ | ಪೂರ್ವಾಷಾಢ | ಡಿಸೆಂಬರ್ ೨೮ ರಿಂದ ಜನವರಿ ೧೦ |

ಈ ಮಳೆಗಳಲ್ಲಿ ಒಂದೊಂದಕ್ಕೂ ರೈತರು ತಮ್ಮದೇ ಆದ ವ್ಯಾಖ್ಯಾನ ನೀಡುತ್ತಾರೆ. ಕೆಲವು ಮಳೆ ಬಂದರೆ ಒಳ್ಳೆಯದು ಮತ್ತೆ ಕೆಲವು ಕೇಡು ಎಂಬ ನಂಬಿಕೆಯೂ ಇದೆ. ವಿಶಾಖ ಮಳೆ ಬಂದರೆ ಬೆಳೆಗಳ ಕೀಟ-ರೋಗಾದಿಗಳು ನಾಶವಾಗುತ್ತವೆಂದು ಹೇಳಲಾಗುತ್ತದೆ. ಅನುರಾಧ ಮಳೆ ಬಂದರೆ ಒಳ್ಳೆಯದಲ್ಲ, ಅದು ಕಟಾವಿಗೆ ಸಿದ್ಧವಾದ ಮತ್ತು ಕಟಾವಾದ ಬೆಳೆಗೆ ಮಾರಕ ಎಂಬುದಾಗಿ ರೈತರ ಅನಿಸಿಕೆ. ಅದಕ್ಕಾಗಿಯೇ ಅನೊರಾಗಿ ಬಂದು ಮನೆ ರಾಗಿ ಹೊತ್ಕೊಂಡೋಯ್ತು ಎಂಬ ಗಾದೆ ಮಾತು ಹುಟ್ಟಿಕೊಂಡಿದೆ. ಹಾಗೆಯೇ ಮೂಲಾ ಮಳೆ ಬಂದರೆ ಕೇಡು ಎಂದೂ ಹೇಳಲಾಗುತ್ತದೆ.

ಮಳೆಗಳ ಹುಟ್ಟು ಇತ್ಯಾದಿಗಳ ಕುರಿತು ಕತೆ, ಕಥನ, ಸುಧೀರ್ಘ ಹಾಡುಗಳನ್ನು ಕಟ್ಟಲಾಗಿದೆ. ಗಾದೆಗಳು, ನುಡಿಕಟ್ಟುಗಳು, ಒಡಪುಗಳು ಹುಟ್ಟಿಕೊಂಡಿವೆ. ಕೆಲವು ಮಳೆಗೆ ಅದರದೇ ಆದ ವಿಶಿಷ್ಟ ಆಚರಣೆಗಳೂ ಇವೆ. ಕೆಲವನ್ನು ನೋಡುವುದಾದರೆ;

ಕೃತ್ತಿಕಾ: ಎಳ್ಳು ಬಿತ್ತಲು ಈ ಮಳೆ ಒಳ್ಳೆಯ ಕಾಲ. ಕೃತ್ತಿಕೇಲಿ ಬಿತ್ತಿದ್ರೆ ಕೋರಿದಷ್ಟು ಎಳ್ಳು ಎಂದು ಗಾದೆಯೇ ಇದೆ. ರೈತರ ಆಡುಮಾತಿನಲ್ಲಿ ಕುರ್ತಿಕೆ ಎಂದು ಕರೆಯಲ್ಪಡುತ್ತದೆ. ಹೊಲಕ್ಕೆ ಗೊಬ್ಬರ ಸಾಗಿಸುವ, ಉಳುಮೆ ಮಾಡುವ ಚಟುವಟಿಕೆಗಳು ಚಾಲ್ತಿಯಲ್ಲಿರುತ್ತವೆ.

ಪುನರ್ವಸು: ಕ್ಯಾಲೆಂಡರು, ಪಂಚಾಂಗಗಳಲ್ಲಷ್ಟೇ ಪುನರ್ವಸು ಎಂದು ಕರೆಸಿಕೊಳ್ಳುವ ಈ ಮಳೆಗೆ ಹಳ್ಳಿಗರಲ್ಲಿ ವ್ಯಾಪಕವಾಗಿ ಬಳಕೆಯಲ್ಲಿರುವ ಹೆಸರು ದೊಡ್ಡಸ್ಲೆ, ದೊಡ್ಡ ಬಸವ, ದೊಡುಸ್ಲು ಇತ್ಯಾದಿ.

ಇದು ಬಿತ್ತನೆ ಮಳೆ. ದಕ್ಷಿಣ ಕರ್ನಾಟಕದ ಬಹು ಭಾಗದಲ್ಲಿ ಬೀಜ ಬಿತ್ತನೆಗೆ ಈ ಮಳೆ ಶ್ರೇಷ್ಠವೆಂದು ಪರಿಗಣಿಸಲಾಗಿದೆ.

ಪುಬ್ಬೆ ಅಥವಾ ಉಬ್ಬೆ: ಗೌರಿ ಹಬ್ಬಕ್ಕೂ ಮಗೆ-ಉಬ್ಬೆ ಮಳೆಗಳಿಗೂ ಹತ್ತಿರದ ನಂಟು. ತವರು ಮನೆಗೆ ಅರ್ಥಾತ್ ಭೂಮಿಗೆ ಬರುವ ಗೌರಮ್ಮ ಮಗೆ ಹೊತ್ತುಕೊಂಡು ಹುಬ್ಬೆ ತುಳುಕೊಂಡು ಬರುತ್ತಾಳೆ ಎಂದು ರೈತಾಪಿ ಹೆಣ್ಣುಮಕ್ಕಳು ಹೇಳುತ್ತಾರೆ. ಗೌರಿಹಬ್ಬದ ಸಂದರ್ಭದಲ್ಲಿ ಒಂದೆರಡು ಹನಿಯಾದರೂ ಮಳೆ ಬೀಳಬೇಕು, ಇದು ಗೌರಮ್ಮ ತವರಿನಿಂದ ಹೋಗುವಾಗ ಕಣ್ಣೀರಿಡುವುದರ ಸಂಕೇತ. ಮಳೆ ಬರದಿದ್ದರೆ ಗೌರಮ್ಮ ತವರಿನ ಮೇಲೆ ಸಿಟ್ಟು ಮಾಡಿಕೊಂಡು ಹೋಗುತ್ತಿದ್ದಾಳೆ ಎಂದು ನಂಬಿಕೆ ಇದೆ.



ಮಳೆಯಲ್ಲಿ ಮಲೆನಾಡ ಕೃಷಿಕ

**ಮಗೆ ಅಥವಾ ಮಖಾ:** ಮಗೆ ಮಳೆಯ ಸಂದರ್ಭದಲ್ಲಿ ಮಲೆನಾಡಿನಾದ್ಯಂತ ಒಂದು ವಿಶಿಷ್ಟ ಆಚರಣೆಯಿದೆ. ಅದೇ ಮಗೆ ಮುಂಡುಗನನ್ನು ಹಾಗುವುದು. ಮಗೆ ಮಳೆ ಬರುವ ಹೊತ್ತಿಗೆ ಭತ್ತ ನೆಟ್ಟಿ ಹಾಕಿ ೨೦-೨೫ ದಿನ ಕಳೆದಿರುತ್ತದೆ. ಬೆಳವಣಿಗೆ ಹಂತದಲ್ಲಿರುವ ಭತ್ತದ ಸಾಕುಗಳಿಗೆ ಮುಂಡುಗನ ಗಿಡದ ಕೊಂಬೆಗಳನ್ನು ನೆಡುತ್ತಾರೆ. ಮುಂಡುಗ ಎಂಬುದು ನೀರಿನ ಒರತೆ ಇರುವ ಕಡೆ, ಹಳ್ಳದ ದಂಡೆಗಳಲ್ಲಿ ಬೆಳೆಯುವ ಪೊದೆಯಂತಹ ಗಿಡ. ಮಗೆ ಮಳೆ ಹುಟ್ಟುವ ಹಿಂದಿನ ದಿನ ಕೆಲವರು ಇದನ್ನು ಆಚರಿಸಿದರೆ ಬಹಳಷ್ಟು ಜನ ಮಳೆ ಅವಧಿಯ ಯಾವುದಾದರೊಂದು ದಿನ ನೆಡುತ್ತಾರೆ. ಬೆಳಗಿನ ಜಾವ ಸೂರ್ಯ ಹುಟ್ಟುವ ಮುಂಚೆ ನೆಟ್ಟು ಬರುವುದು ವಾಡಿಕೆ. ಬರಿ ಮೈಯಲ್ಲಿ ಹೋಗಿ ನೆಟ್ಟು ಬರಬೇಕೆಂತಲೂ ಹಿರಿಯರು ಹೇಳುತ್ತಾರೆ. ಹೀಗೆ ಮಾಡುವುದರಿಂದ ಮುಂಡುಗ ಹಾಕುವವನ ಆಯಸ್ಸು ಹೆಚ್ಚಾಗುತ್ತದಂತೆ. ಖಂಡುಗಕ್ಕೆ (ಭತ್ತದ ಗದ್ದೆಯ ನಿರ್ದಿಷ್ಟ ಪ್ರದೇಶ) ಒಂದು ಮುಂಡುಗ ಹಾಕಿದರೆ ಶ್ರೇಯಸ್ಸು ಎಂಬ ರೂಢಿ ಮಾತು ಮಲೆನಾಡಿನಾದ್ಯಂತ ರೂಢಿಯಲ್ಲಿದೆ.

**ಉತ್ತರೆ:** ಇದು ಒಕ್ಕಲಿಗನಿಗೆ ಭಾಷೆ ಕೊಟ್ಟ ಮಳೆ. ಇದು ಬರದಿದ್ದರೆ ಮಕ್ಕಳು ಹೆತ್ತ ತಾಯಿಗೆ ಹಿಟ್ಟಿಕ್ಕುವುದಿಲ್ಲ (ಅನ್ನ ಹಾಕುವುದಿಲ್ಲ) ಹಾಗಾಗಿ ಉತ್ತರೆ ಮಳೆ ಬಂದೇ ಬರುತ್ತದೆ ಎಂಬ ನಂಬಿಕೆ ರೈತರಲ್ಲಿದೆ. ಅತ್ಯಂತ ನಂಬಿಕಸ್ತ ಮಳೆ. ಬಿಸಿಲಿನ ಝಳ ಜಾಸ್ತಿ. ಹಾಗೆಯೇ ಮಳೆಯ ಆರ್ಭಟವೂ ಹೆಚ್ಚು. ಈ ಮಳೆಯ ಬಗೆಗೆ ಪ್ರಚಲಿತವಿರುವ ಕಥೆ ಕುತೂಹಲಕರ.

ಉತ್ತರಾದೇವಿ ಎಂಬ ಹೆಣ್ಣು ಮಗಳಿಗೆ ಆಕೆಯ ಅತ್ತೆ ವಿಪರೀತ ಕಾಟ ಕೊಡುತ್ತಿರುತ್ತಾಳೆ. ಆಕೆ ಕುಂತರೂ ತಪ್ಪು, ನಿಂತರೂ ತಪ್ಪು. ಆಕೆಯ ಗಂಡ ಮುತ್ತಿನ ವ್ಯಾಪಾರಿ. ಸದಾ ವ್ಯಾಪಾರದ ಓಡಾಟದಲ್ಲಿ ನಿರತ. ಹಾಗಾಗಿ ಹೆಂಡತಿಯ ಕಡೆ ಗಮನಹರಿಸಲು ಪುರುಸೊತ್ತಿಲ್ಲ. ಒಂದು ದಿನ ಅತ್ತೆಯು ಸೊಸೆಗೆ ಮೊಂಡು ಮಚ್ಚು, (ಹರಿತವಿಲ್ಲದ ಮಚ್ಚು) ಗಂಟ್ಲು ಹಗ್ಗ ಕೊಟ್ಟು ಕಾಡಿಗೆ ಸೌದೆ ತರಲು ಕಳಿಸುತ್ತಾಳೆ. ಮನೆಗೆ ಬಂದ ಮಗನಿಗೆ ಸೊಸೆಯ ಕುರಿತು ಚಾಡಿ ಹೇಳುತ್ತಾಳೆ. ತಾಯಿಯ ಚಾಡಿ ಮಾತಿನಿಂದ ಸಿಟ್ಟಾದ ಗಂಡ ಕಾಡಿಗೆ ಹೋಗಿ ಇನ್ನೇನು ಹೆಂಡತಿಗೆ ಹೊಡೆಯ ಬೇಕೆನ್ನುವಷ್ಟರಲ್ಲಿ ಆತನೇ ಜೀವ ಕಳೆದುಕೊಳ್ಳುತ್ತಾನೆ. ಇದನ್ನು ಕಂಡು ದಿಗ್ಭ್ರಮೆಗೊಂಡ ಉತ್ತರಾದೇವಿ ಗಂಡನ ಶವವನ್ನು ಇಟ್ಟುಕೊಂಡು ಶೋಕಿಸುವಾಗ ಶಿವ ಪಾರ್ವತಿಯರು ಬಂದು ಜೀವಗಾಳಿಯನ್ನು ನೀಡಿ ಆತನನ್ನು ಬದುಕಿಸುತ್ತಾರೆ. ಉತ್ತರೆಯು ತನ್ನ ಕಷ್ಟವನ್ನೆಲ್ಲಾ ಶಿವ-ಪಾರ್ವತಿಯರಿಗೆ ಹೇಳಿದಾಗ ಅವರು ಅತ್ತೆಯ ಕಾಟದಿಂದ ರೋಸಿಹೋದ ನೀನು ಮಳೆಯಾಗಿ ರೂಪತಾಳು ಎನ್ನುತ್ತಾರೆ. ಉತ್ತರಾದೇವಿ ಉತ್ತರೆ ಮಳೆಯಾಗುತ್ತಾಳೆ.

ವಿಷಯ ತಿಳಿದ ಅತ್ತೆ ಸುಮ್ಮನಾಗುವುದಿಲ್ಲ. ಆಕೆಯೂ ಇನ್ನೊಂದು ಮಳೆಯಾಗಿ ರೂಪತಾಳಿ ಅತ್ತೆಯ ಬೆನ್ನು ಹತ್ತುತ್ತಾಳೆ. ಅದೇ ಹಸ್ತ ಅಥವಾ ಅತ್ತೆ ಮಳೆ. ಉತ್ತರೆ ಮಳೆ ನಂತರವೇ ಅತ್ತೆ ಮಳೆ ಬರುತ್ತದೆ. ಈ ಉತ್ತರಾದೇವಿ ಕಥೆ ಹಳ್ಳಿಗಳಲ್ಲಿ ಬಲು ಜನಪ್ರಿಯ. ಇದನ್ನು ವಿವರಿಸುವ ಸುಧೀರ್ಘ ಕಥನ ಕಾವ್ಯಗಳೇ ಇವೆ. ರಾಗಿ ಬೀಸುವಾಗ, ಕಳೆ ತೆಗೆಯುವಾಗ ಗುಂಪಿನಲ್ಲಿ ಇದನ್ನು ಹಳ್ಳಿಹೆಣ್ಣುಮಕ್ಕಳು ಹಾಡುತ್ತಾರೆ. ದಕ್ಷಿಣ ಕರ್ನಾಟಕದ ಅತಿ ಮುಖ್ಯ ಜಾನಪದ ವ್ಯಕ್ತಿಯಾದ ಕರಿಭಂಟನೇ ಉತ್ತರಾದೇವಿಯ ಗಂಡ ಎನ್ನುವ ಮತ್ತೊಂದು ಕಥೆಯೂ ಇದೆ.

**ಹಸ್ತ ಅಥವಾ ಅತ್ತೆ:** ದಕ್ಷಿಣ ಕರ್ನಾಟಕದಲ್ಲಿ ಅತ್ತೆ ಮಳೆ ವಂಗಲು ಎಂಬ ಆಚರಣೆ ಈ ಮಳೆಯಲ್ಲಿ ನಡೆಯುತ್ತದೆ. ಹೊಲದ ಬಯಲಲ್ಲೇ ನಡೆಯುವ ಕ್ರಿಯೆ ಇದು. ಬೆಳೆದು ನಿಂತ ಬೆಳೆಗಳಿಗೆ ದೃಷ್ಟಿಯಾಗದಿರಲಿ, ಕಣ್ಣೆಸರಾಗದಿರಲಿ ಎಂಬ ಕಾರಣದಿಂದ ಈ ಆಚರಣೆ. ಕೆಲವರು ಈ ಸಂದರ್ಭದಲ್ಲಿ ಬಲಿ ಕೊಡುತ್ತಾರೆ, ಕೆಲವರು ಕೆಂಪನ್ನ, ತಂಗಳು ಅಡಿಗೆಯನ್ನು ಹೊಲಗಳಿಗೆ ಎರಚುತ್ತಾರೆ.

**ಆದ್ರಿ ಮಳೆ ಹಬ್ಬ:** ಜೂನ್ ತಿಂಗಳಿನಲ್ಲಿ ಬರುವ ಆದ್ರಿ ಬಿರುಸಿನ ಮಳೆ. ಅದರಲ್ಲೂ ಮಲೆನಾಡಿನಲ್ಲಿ ಇದರ ಆರ್ಭಟ ವಿಪರೀತ. ನೆಲ–ಮುಗಿಲು ಒಂದಾಗುವಂತೆ ಸುರಿಯುವ ಈ ಮಳೆಯಲ್ಲಿ ಮಲೆನಾಡಿಗರು ವಿಶಿಷ್ಟ ಹಬ್ಬ ಆಚರಿಸುತ್ತಾರೆ. ದಂಡಾಡಿ ಬಂದವರಿಗೊಂದು ಎಡೆ ಇಡುವ ಈ ಹಬ್ಬದಲ್ಲಿ ಹಲಸಿನ ಹಣ್ಣು ಮತ್ತು ಕೋಳಿಸಾರು ವಿಶೇಷ ಭಕ್ಷ್ಯಗಳು. ಹೆಚ್ಚಾಗಿ ದೀವರ ಜನಾಂಗದವರು ಇದನ್ನು ಆಚರಿಸುತ್ತಾರೆ. ಇದು ಅವರಿಗೆ ಸಂಭ್ರಮದ ಆಚರಣೆ. ನೆಂಟರಿಷ್ಟರು, ಆಪ್ತರು, ಮದುವೆಯಾಗಿ ಹೋಗಿರುವ ಹೆಣ್ಣುಮಕ್ಕಳು ಹಬ್ಬಕ್ಕೆ ಬರುವುದರಿಂದ ಎಲ್ಲರ ಸಂಭ್ರಮ ದುಪ್ಪಟ್ಟಾಗುತ್ತದೆ. ಇದೊಂದು ಸಾಮೂಹಿಕ ಹಾಗೂ ಕೌಟುಂಬಿಕ ಆಚರಣೆ. ಈ ಹಬ್ಬ ಮಾಡುವ ಹೊತ್ತಿಗೆ ಹೊಲದಲ್ಲಿ ಬಿತ್ತನೆಯಾದ ಬೀಜ ಮೊಳಕೆಯೊಡೆದು ಸಸಿಯಾಗಿರುತ್ತದೆ.

ಹಬ್ಬದ ದಿನ ಊರ ಗಂಡುಮಕ್ಕಳು ಸುರಿವ ಮಳೆ, ರಭಸ ಗಾಳಿಯನ್ನೂ ಲೆಕ್ಕಿಸದೆ ಮುಖಕ್ಕೆ ಗ್ರಾಮದೇವತೆಯ ಹಾಗೂ ದೀವರ ದೈವವಾದ ಕುಮಾರರಾಮನ ಮುಖವಾಡ ಧರಿಸಿ ಬೀದಿ–ಬೀದಿಯಲ್ಲಿ ಮೆರವಣಿಗೆ ಹೊರಡುತ್ತಾರೆ. ತಂತಮ್ಮ ಮನೆ ಮುಂದೆ ಮೆರವಣಿಗೆ ಬಂದಾಗ ಹೆಣ್ಣುಮಕ್ಕಳು ಆರತಿ ಬೆಳಗುತ್ತಾರೆ. ಮೆರವಣಿಗೆಯ ಜೊತೆಯಲ್ಲೆ ನಡೆಯುವ ಯುವಕರ ಡೊಳ್ಳು ಕುಣಿತ ಮತ್ತೊಂದು ಪ್ರಮುಖ ಆಕರ್ಷಣೆ ಮತ್ತು ರೋಮಾಂಚನ ಹುಟ್ಟಿಸುವ ದೃಶ್ಯ. ಗುಡುಗಿನ ಸದ್ದನ್ನೂ ಮರೆಮಾಚುವ ಡೊಳ್ಳಿನ ಮೊರೆತ, ಕುಣಿತಗಾರರ ಲಯಬದ್ಧ ಹೆಜ್ಜೆ, ಮುಗಿಲು ಮುಟ್ಟುವ ಕೇಕೆಯನ್ನು

ನೋಡುವುದು ಒಂದು ಅಪೂರ್ವ ಅನುಭವ. ಕಾಲಡಿ ಹರಿಯುವ ಕೆನ್ನೀರು ಮುಗಿಲಿಂದ ಬೀಳುವ ಮಳೆ ಹನಿಗಳು ಹಬ್ಬಕ್ಕೆ ಮತ್ತಷ್ಟು ಮೆರುಗು ನೀಡುತ್ತವೆ. ಸುರಿವ ಮಳೆಯಲ್ಲಿ ಹಬ್ಬ ಮಾಡುವ ಕಲ್ಪನೆಯೇ ವಿಶಿಷ್ಟ.

ಮೆರವಣಿಗೆ ಮುಗಿದು ಪೂಜೆ ಮಾಡಿ ಭಕ್ತರು ತಮ್ಮ ಹರಕೆ ಪೂರೈಸುತ್ತಾರೆ. ಗ್ರಾಮದ ಒಳಿತನ್ನು ಕೋರಿ ಕುರಿ–ಕೋಳಿ ಬಲಿ ನೀಡಲಾಗುತ್ತದೆ. ಅದೇ ದಿನ ಸಂಜೆ ನಡೆಯುವ ಮತ್ತೊಂದು ವಿಶೇಷ ಕ್ರಿಯೆ ಕೊಂಡ ಹಾಯುವುದು. ಈ ಕ್ರಿಯೆಗೆ ಬಿಂಗಿ ಎನ್ನುತ್ತಾರೆ. ನಿಗಿ–ನಿಗಿ ಹೊಳೆಯುವ ಕೆಂಡದ ರಾಶಿಯ ಮೇಲೆ ಭಕ್ತಾದಿಗಳು, ಡೊಳ್ಳು ಕುಣಿತಗಾರರು ಶ್ರದ್ಧೆಯಿಂದ ನಡೆಯುತ್ತಾರೆ. ಮಲೆನಾಡಿನ ಶ್ರೀಮಂತ ಜನಪದ ಪರಂಪರೆಯ ಪ್ರತೀಕ ಈ ಆದ್ರಿ ಮಳೆ ಹಬ್ಬ.

ಹಿಂದೆ ಈ ಹಬ್ಬ ಕುಮಾರರಾಮನ ವಿಜಯದ ಸಂಕೇತವಾಗಿ ಆಚರಣೆಗೆ ಬಂದಿದೆ ಎಂಬ ಐತಿಹ್ಯವಿದ್ದರೂ ಸಹ ಕ್ರಮೇಣ ತನ್ನ ಸ್ವರೂಪ ಬದಲಿಸಿಕೊಂಡು ಈಗ ಗ್ರಾಮದ ಹಬ್ಬವಾಗಿ ಮಾರ್ಪಟ್ಟಿದೆ. ೧೩ ನೇ ಶತಮಾನದಲ್ಲಿ ಬಳ್ಳಾರಿಯ ಕಂಪ್ಲಿಯನ್ನು ಬೇಡರ ಅರಸ ಕುಮಾರರಾಮ ಆಳುತಿದ್ದ. ಮೊಘಲ್ ದೊರೆಗಳ ಜೊತೆ ನಡೆದ ಕದನದಲ್ಲಿ ವೀರಾವೇಶದಿಂದ ಹೋರಾಡಿ ಮಡಿಯುತ್ತಾನೆ. ಮಲೆನಾಡಿನ ಹಳೆಪೈಕದವರು ಆತನ ಸೈನ್ಯದಲ್ಲಿರುತ್ತಾರೆ, ಅವರು ಕುಮಾರರಾಮನ ಮುಖವಾಡ ಮಾಡಿ ಪೂಜಿಸುವ ಕ್ರಿಯೆ ಶುರುಮಾಡುತ್ತಾರೆ. ಆದ್ರಿ ಮಳೆಯ ಸಂದರ್ಭದಲ್ಲಿ ಆಚರಿಸುವ ಈ ಹಬ್ಬದಲ್ಲಿ ಯುದ್ಧಕ್ಕೆ ಹೋಗುವ, ಬೆಂಕಿಗೆ ಹಾರುವ ಸಾಂಕೇತಿಕ ಆಚರಣೆಗಳನ್ನು ನಡೆಸುತ್ತಾರೆ.

ಶಿವಮೊಗ್ಗ ಜಿಲ್ಲೆ ಸಾಗರ–ಸೊರಬ ತಾಲೂಕುಗಳಲ್ಲಿ ಈ ಹಬ್ಬದ ಖದರು ಜೋರು.

ಈ ರೀತಿ ಪ್ರತಿಯೊಂದು ಮಳೆಯ ಬಗೆಗೂ ಅದರದೇ ಆದ ನಂಬಿಕೆಗಳಿದ್ದು, ಕೆಲವು ಮಳೆಗಳ ಬಗ್ಗೆ ಸಾಮೂಹಿಕವಾದ ಮತ್ತು ವೈಯಕ್ತಿಕ ನೆಲೆಯ ಆಚರಣೆಗಳನ್ನು ಕಾಣಬಹುದು.

## ೩. ಮಳೆ ಶಾಸ್ತ್ರಗಳು

ಉಳುಮೆ, ಬಿತ್ತನೆ, ನಾಟಿ, ಅಂತರ ಬೇಸಾಯ ಮುಂತಾದ ಪ್ರಮುಖ ಕೃಷಿ ಕೆಲಸಗಳು ಆಗಬೇಕಾದ ಸಮಯದಲ್ಲಿ ಹದವಾಗಿ ಮಳೆಯಾಗದಿದ್ದರೆ ರೈತರ ಪಾಡು ಹೇಳ ತೀರದು. ಸಕಾಲಕ್ಕೆ ಬೀಜ ಭೂಮಿಗೆ ಬೀಳದಿದ್ದರೆ ಮುಂದಿನ ದಿನಗಳಲ್ಲಿ ತಾವು

ಮತ್ತು ತಮ್ಮನ್ನು ಆಶ್ರಯಿಸಿದ ಜೀವಾದಿಗಳ ಸ್ಥಿತಿಯನ್ನು ನೆನೆದೇ ಆತನಿಗೆ ದಿಗಿಲಾಗುತ್ತದೆ. ಮಳೆ ಬಾರದಿದ್ದುದಕ್ಕೆ ಕಾರಣವೇನಿರಬಹುದು ಎಂಬ ಜಿಜ್ಞಾಸೆ ಕಾಡತೊಡಗುತ್ತದೆ. ದೇವರು ಕೋಪಗೊಂಡಿರಬಹುದು ಅಥವಾ ತಮ್ಮಿಂದ ಯಾವುದೋ ಅಚಾತುರ್ಯ ವಾಗಿರಬಹುದು ಎಂದು ಚಿಂತಿಸುವ ಅವರು ಅವುಗಳ ಪರಿಹಾರಕ್ಕೆ ನಾನಾ ವಿಧವಾದ ಆಚರಣೆಗಳ ಮೊರೆ ಹೋಗುತ್ತಾರೆ. ಶಾಸ್ತ್ರ ಕೇಳುವುದು, ಪೂರ ಮಾಡುವುದು, ಭಜನೆ ಮಾಡುವುದು, ಕಥೆ ಓದಿಸುವುದು ಮುಂತಾದ ಅನೇಕ ವಿಧಿ–ವಿಧಾನಗಳಿಗೆ ಜೀವ ಬರುತ್ತದೆ. ಈ ಆಚರಣೆಗಳನ್ನು ಎಲ್ಲ ಪ್ರದೇಶಗಳಲ್ಲಿಯೂ ಕಾಣಬಹುದು. ಕೆಲವುಗಳ ಆಚರಣಾ ವಿಧಾನ ಬೇರೆ–ಬೇರೆಯಾಗಿದ್ದರೂ ಸಹ ಉದ್ದೇಶ ಮಾತ್ರ ಒಂದೇ ಆಗಿರುತ್ತದೆ.

ವೈವಿಧ್ಯಮಯ ಮಳೆ ಶಾಸ್ತ್ರಗಳ ವಿವರ ಇಲ್ಲಿದೆ.

**ಮಳೆಗಾಗಿ ಭಿಕ್ಷೆ:** ಉತ್ತರ ಕರ್ನಾಟಕದಲ್ಲಿ ನಡೆಯುವ ವಿಶೇಷ ಆಚರಣೆ. ಮಳೆ ಬಾರದಿದ್ದಾಗ ಓಣಿ–ಓಣಿ ತಿರುಗಿ ಜೋಳಿಗಿ ಹಾಕಿಕೊಂಡು ಭಿಕ್ಷೆ ಬೇಡುವ ಆಚರಣೆ ವಿಶೇಷವಾಗಿದೆ. ಭಿಕ್ಷೆ ಬೇಡಿದರೆ ಮಳೆ ಬರುತ್ತದೆ ಎಂಬ ಧೃಢ ನಂಬಿಕೆ ಈ ಆಚರಣೆಗೆ ಮೂಲ ಕಾರಣ. ಮುಖ್ಯವಾಗಿ ಊರಿನ ಯುವಕರು ಇದರಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ. ಎಂಟಾನೆಂಟು ದಿವಸ ಮಳೆ ಬಾರದಿದ್ದಾಗ ಯುವಕರು ಒಂದೆಡೆ ಸೇರಿ ಒಬ್ಬನಿಗೆ ಸೀರೆ ಉಡಿಸಿ ಕುಪ್ಪಸ ತೊಡಿಸಿ, ಬಳೆ ಹಾಕಿ ಕುಂಕುಮ ಇಟ್ಟು ಹೆಣ್ಣಿನ ರೂಪ ಧರಿಸುತ್ತಾರೆ. ಆತ ಒಂದು ಕೈಯಲ್ಲಿ ಕೋಲು, ಮತ್ತೊಂದು ಕೈಯಲ್ಲಿ ನೀರು ತುಂಬಿದ ಗಡಿಗೆ ಹಿಡಿದು ಕಂಕುಳಲ್ಲಿ ಮಗುವೊಂದನ್ನು ಎತ್ತಿಕೊಂಡು ಭಿಕ್ಷೆ ಬೇಡುವ ಹೆಂಗಸಿನಂತೆ ಬೀದಿಗೆ ಹೊರಡುತ್ತಾನೆ. ಆತನ ಹಿಂದೆ ಉಳಿದವರೆಲ್ಲಾ ಹೊರಡುತ್ತಾರೆ. ಮನೆ–ಮನೆಯ ಮುಂದೆ ನಿಂತು ದೊಡ್ಡ ಗಂಟಲಿನಲ್ಲಿ,

ಯವ್ವ ನೀಡವ್ವ, ಯಕ್ಕ ನೀಡವ್ವ,
ಮಕ್ಕಳು ಮರಿ ಹಸಗೊಂಡಾವೆ,
ಮೂರು ದಿನದಿಂದ ಅನ್ನ ನೀರು ಕಂಡಿಲ್ಲ,
ಯವ್ವ ನೀಡವ್ವ, ಯಕ್ಕ ನೀಡವ್ವ
ನಿಮ್ಮ ಮನಿ ತಣ್ಣಗಿರತೈತಿ,
ನಿಮ್ಮ ಮಕ್ಕಳು ಮರಿಗೆ ಪುಣ್ಯ ಬರತೈತಿ

ಎಂದು ಹಾಡುತ್ತಾರೆ.

ಹೀಗೆ ಮನೆ ಭೇಟಿ ಮಾಡುವಾಗ ಒಂದು ಕುತೂಹಲಕಾರಿ ಅಂಶವಿದೆ. ಪ್ರತಿಯೊಂದು ಮಳೆಯೂ ಒಂದೊಂದು ಜನಾಂಗದ ಮನೆಯಲ್ಲಿ ವಾಸವಾಗಿರುತ್ತದೆ ಎಂಬ ನಂಬಿಕೆ; ಉದಾಹರಣೆಗೆ ಅಶ್ವಿನಿಯು ಹೂಗಾರರ ಮನೆ, ಕೃತ್ತಿಕೆಯು ತಳವಾರರ

ಮನೆ, ಭರಣಿಯು ಅಗಸರ ಮನೆ, ರೋಹಿಣಿಯು ಬಣಜಿಗರ ಮನೆ, ಮೃಗಶಿರವು ಕ್ಷಾಮಟರ (ವೈಶ್ಯ) ಮನೆಯಲ್ಲಿ ವಾಸವಾಗಿರುತ್ತದಂತೆ. ಉತ್ತರ ಕರ್ನಾಟಕದಲ್ಲಿ ಅತ್ಯಂತ ನಂಬಿಕಸ್ತ ಮಳೆಯಾದ ಮೃಗಶಿರವು ಕ್ಷಾಮಟರ ಮನೆಯಲ್ಲಿ ಇದ್ದರೆ ಅದು ಅಲ್ಲಿಂದ ಹೊರಬರುವುದು ಅಸಾಧ್ಯದ ಮಾತು, ಹೇಗಾದರೂ ಮಾಡಿ ಅದನ್ನು ಅಲ್ಲಿಂದ



ಮಳೆರಾಯನ ಮುಖವಾಡ

ಹೊರ ತರಬೇಕೆಂದು ಪಣತೊಟ್ಟು ಯುವಕರ ಗುಂಪು ಅವರ ಮನೆ ಮುಂದೆ ಹೋಗಿ ಮತ್ತದೇ ಹಾಡನ್ನು ಪುನರಾವರ್ತಿಸುತ್ತಾರೆ.

ಯವ್ವ ಸಣ್ಣ ಮಗು ಹಸಗೊಂಡೈತಿ
ನೀರು, ನೀರು ಅಂತ ಅಳತೈತಿ
ತುತ್ತು ಅನ್ನ, ಹನಿ ನೀರು ಹಾಕವ್ವ

ಎಂದು ಹೇಳಿದಾಗ ಆ ಮನೆಯವರು ಬೈಯುತ್ತಾ ಇವರಿಗೆ ಭಿಕ್ಷೆ ಹಾಕಲು ಹೊರಗೆ ಬಂದು ಮತ್ತೆ ಒಳ ಹೋಗುವಾಗ ನೀರು ತುಂಬಿದ ಗಡಿಗೆಯನ್ನು ದೊಪ್ಪನೆ ಎತ್ತಿ ಹಾಕಿ ಓಡಿ ಹೋಗುತ್ತಾರೆ.

**ಗುರ್ಜಿ:** ಇದೇ ಭಾಗದಲ್ಲಿರುವ ಮತ್ತೊಂದು ಮಳೆ ಆಚರಣೆ. ಇಲ್ಲೂ ಸಹ ಭಿಕ್ಷೆ ಬೇಡುವ ಕ್ರಿಯೆ ಇದೆ. ತಲೆಯ ಮೇಲೆ ಕಪ್ಪೆಯನ್ನು ಹೊತ್ತು ನೀರು ಸುರಿದುಕೊಳ್ಳುತ್ತಾ ಬೀದಿ-ಬೀದಿ ತಿರುಗಿ ಭಿಕ್ಷೆ ಬೇಡುತ್ತಾ ಮಳೆ ಕರೆಯುತ್ತಾರೆ. ಒಬ್ಬ ಯುವಕನ ತಲೆಯ ಮೇಲೆ ರೊಟ್ಟಿ ಹಾಕುವ ಹೆಂಚು(ಕಾವಲಿ) ಇಟ್ಟು, ಆ ಹೆಂಚಿನ ಮೇಲೆ ಸಗಣಿಯ ಉಂಡೆಯನ್ನಿಟ್ಟು ಅದರೊಳಗೆ ಒಂದು ಕಪ್ಪೆ ಇಡುತ್ತಾರೆ. ಇದೇ ಗುರ್ಜಿ. ಈ ಗುರ್ಜಿಯನ್ನೊತ್ತ ಯುವಕನನ್ನು ಮುಂದೆ ಬಿಟ್ಟು ಯುವಕರ ಗುಂಪು ತಾಟು, ಜೋಳಿಗೆ ಇತ್ಯಾದಿಗಳನ್ನಿಡಿದು ಆತನನ್ನು ಹಿಂಬಾಲಿಸುತ್ತಾರೆ. ಮೆರವಣಿಗೆ ಊರವರ ಮನೆಯ ಮುಂದೆ ನಿಂತಾಗ

ಗುರ್ಜಿ, ಗುರ್ಜಿ ಎಲ್ಲಾಡಿ ಬಂದೆ
ಹಳ್ಳ-ಕೊಳ್ಳ ತಿರುಗ್ಯಾಡಿ ಬಂದೆ
ಹದ್ನಾರ ಎಮ್ಮಿ ಕಾಯಾಲಾರೆ
ಬಿಸಿ-ಬಿಸಿ ಸಗಣಿ ತುಳಿಯಾಲಾರೆ
ಬಣ್ಣ ಕೊಡ್ತಿನಿ ಬಾರೆಲೆ ಮಳೆಯೇ
ಸುಣ್ಣ ಕೊಡ್ತಿನಿ ಸುರಿಯಲೆ ಮಳೆಯೇ

ಹೀಗೆ ಸಾಗುವ ಹಾಡನ್ನೇಳುತ್ತಾ ಎಲ್ಲಾ ಮನೆಗಳನ್ನು ದಾಟಿ ಗರಗರನೆ ತಿರುಗುತ್ತಾ ಎಲ್ಲರಿಂದ ನೀರು ಹಾಕಿಸಿಕೊಂಡು, ಮನೆಯವರಿಂದ ಜೋಳ ಇತ್ಯಾದಿ ಹಾಕಿಸಿಕೊಂಡು ಮುಂದೆ ಸಾಗುತ್ತಾರೆ. ಈ ಕ್ರಿಯೆ ಸತತ ಐದು ದಿನ ಕಾಲ ನಡೆಯುತ್ತದೆ.

ಐದನೇ ದಿನ ಮನೆ-ಮನೆಯಿಂದ ಸಂಗ್ರಹಿಸಿದ ಕಾಳಿನಿಂದ ಅಡುಗೆ ಮಾಡಿ ಎಲ್ಲರಿಗೂ ಊಟ ಹಾಕುತ್ತಾರೆ.

**ಎತ್ತಿನ ಶಾಸ್ತ್ರ:** ಬೆಂಗಳೂರು ಗ್ರಾಮಾಂತರ, ಕನಕಪುರ ಮತ್ತು ಅದರ ಗಡಿಯಲ್ಲಿರುವ ತಮಿಳುಗನ್ನಡ ಹಳ್ಳಿಗಳಲ್ಲಿ ಪ್ರಚಲಿತವಿರುವ ಆಚರಣೆ. ತುಂಬಾ ದಿನ ಮಳೆ ಬಾರದಿದ್ದರೆ ಗ್ರಾಮಸ್ಥರು ಒಂದೆಡೆ ಸೇರಿ ಎತ್ತಿನ ಶಾಸ್ತ್ರ ಮಾಡುವ ತೀರ್ಮಾನ ತೆಗೆದುಕೊಳ್ಳುತ್ತಾರೆ. ಒಂದು ಎತ್ತನ್ನು ಪೂಜಿಸಿ ಅದನ್ನು ಸ್ವಲ್ಪ ದೂರ ನಡೆದಾಡಿಸುತ್ತಾರೆ. ಆ ಎತ್ತು ಹಾಗೆ ನಡೆಯುವಾಗ ಬೇಗ ಗಂಜಲ ಹುಯ್ದರೆ ಬೇಗ ಮಳೆ ಬರುತ್ತದೆ ಎಂತಲೂ, (ಹತ್ತಿರದ ಮಳೆ) ಅದಕ್ಕೆ ಬದಲಾಗಿ ತುಂಬಾ ಹೊತ್ತಿನ ನಂತರ ಗಂಜಲ ಹುಯ್ದರೆ ತಡವಾಗಿ ಮಳೆ ಬರುತ್ತದೆ (ದೂರದ ಮಳೆ) ಎಂತಲೂ ತೀರ್ಮಾನಕ್ಕೆ ಬರುತ್ತಾರೆ.

**ಮಳೆಯಪ್ಪ:** ಇದೂ ಸಹ ಎತ್ತಿನ ಶಾಸ್ತ್ರ ಪ್ರಚಲಿತವಿರುವ ಭಾಗದಲ್ಲೇ ರೂಢಿಯಲ್ಲಿರುವ ಕ್ರಿಯೆ. ಎಕ್ಕದ ಎಲೆಯೊಂದನ್ನು ತಂದು ಅದನ್ನು ನೀರು ತುಂಬಿದ ಚಂಬಿಗೆಯಲ್ಲಿ ಹಾಕಿ, ಒಂದು ಮಗುವನ್ನು ಅದರ ಮೇಲೆ ಕೂರಿಸಿ ಯಾವಾಗ ಮಳೆ ಬರುತ್ತದೆಂದು ಅಪ್ಪಣೆ ಕೇಳುತ್ತಾರೆ.

**ಮಳೆ ದೇವರನ್ನು ಮಾಡುವುದು:** ವಿಶೇಷವಾಗಿ ದಕ್ಷಿಣ ಕರ್ನಾಟಕದಲ್ಲಿ ಮಳೆ ದೇವರನ್ನು ಮಾಡುವುದು ರೂಢಿಯಲ್ಲಿದೆ. ಇದನ್ನು ಪೊರ ಮಾಡುವುದು ಎಂದೂ ಸಹ ಕರೆಯುತ್ತಾರೆ. ಜೇಡಿ ಮಣ್ಣಿನಲ್ಲಿ ಮಳೆ ದೇವರ ಮೂರ್ತಿಯೊಂದನ್ನು ಮಾಡಿ ಗ್ರಾಮಸ್ಥರು ಬೀದಿ-ಬೀದಿಗಳಲ್ಲಿ ಮೆರವಣಿಗೆ ಮಾಡುತ್ತಾರೆ. ಈ ಸಂದರ್ಭದಲ್ಲಿ ಎಲ್ಲರೂ ಒಟ್ಟಿಗೆ ಲಯಬದ್ಧವಾಗಿ ಹೇಳುವ ಅಥವಾ ಮಳೆಯನ್ನು ಕರೆಯುವ ಪದಗಳು ಆಕರ್ಷಕ ಮತ್ತು ಅರ್ಥಪೂರ್ಣ.

ಹುಯ್ಯೊ ಹುಯ್ಯೊ ಮಳೆರಾಯ ಹುವ್ವಿನ ತೋಟಕೆ ನೀರಿಲ್ಲ
ಬಾರೊ ಬಾರೊ ಮಳೆರಾಯ ಬಾಳೆ ತೋಟಕೆ ನೀರಿಲ್ಲ
ಕುಟ್ಟೋ ಕುಟ್ಟೊ ಮಳೆರಾಯ ಕಟ್ಟೆ-ಕೆರೆಯಲ್ಲಿ ನೀರಿಲ್ಲ
ಬಾರಪ್ಪೊ ಮಳೆರಾಯ ನೀನ್ ಬಂದರೆ ಬರವಿಲ್ಲ

ಎಂದು ಹಾಡುತ್ತಾ ಮನೆ-ಮನೆ ಸುತ್ತಿ ಬತ್ತೇವು (ಅಕ್ಕಿ, ಅಸೀಟು, ಬೇಳೆ, ಬೆಲ್ಲ ಇತ್ಯಾದಿ) ಸಂಗ್ರಹಿಸಿ ಕೊನೆಯ ದಿನ ಊರ ದೇವಸ್ಥಾನದ ಹತ್ತಿರ ಅಥವಾ ಊರ ಹೊರಗೆ ಅಡುಗೆ ಮಾಡಿ ಬಂದವರಿಗೆ ಅನ್ನ ಹಾಕುತ್ತಾರೆ.

**ಮಾರಮ್ಮನ ಗಡಿ ದಾಟಿಸುವಿಕೆ:** ಸಕಾಲದಲ್ಲಿ ಮಳೆ ಬಾರದಿದ್ದಾಗ ತುಮಕೂರು, ಚಿತ್ರದುರ್ಗ ಸೀಮೆಗಳಲ್ಲಿ ಪ್ರಚಲಿತವಿರುವ ಕುತೂಹಲಕರ ಆಚರಣೆ. ಈ ಭಾಗದಲ್ಲಿ ಗಡಿ ಮಾರಮ್ಮ ಎಂಬ ಹೆಸರಿನ ಬೊಂಬೆಯೊಂದನ್ನು ತಯಾರಿಸಿ ಊರವರೆಲ್ಲಾ ಸೇರಿ ಅದಕ್ಕೆ ಪೂಜೆ ಮಾಡಿ ತಮ್ಮ ಗ್ರಾಮದ ಗಡಿಯವರೆಗೂ ಕೊಂಡೊಯ್ದು ಗಡಿಯನ್ನು ದಾಟಿಸಿ ಪಕ್ಕದ ಗ್ರಾಮದ ಗಡಿಯೊಳಕ್ಕೆ ಇಟ್ಟು ಬರುತ್ತಾರೆ. ಹೀಗೆ ಮಾಡುವುದರಿಂದ ತಮ್ಮೂರಿಗೆ ಮಳೆ ಬರುತ್ತದೆ ಎಂಬ ಬಲವಾದ ನಂಬಿಕೆ ಇದೆ. ಈ ಸಂದರ್ಭದಲ್ಲಿ ಕೇವಲ ಬೊಂಬೆಯಷ್ಟೇ ಅಲ್ಲದೆ ಚಿಕ್ಕ ಗಾಡಿಯೊಂದರಲ್ಲಿ ಬಳಸಿ ಹಳೆಯದಾದ ವಸ್ತುಗಳಾದ ಹಾಗೂ ಅನಿಷ್ಟದ ವಸ್ತುಗಳೆಂದು ಪರಿಗಣಿಸುವ ಹಳೆಯ ಮೊರ, ಮೊಂಡು ಪೊರಕೆ, ಹಳೆಯ ಬುಟ್ಟಿ ಇತ್ಯಾದಿಗಳನ್ನು ಆ ಬೊಂಬೆಯ ಜೊತೆ ಇಟ್ಟುಕೊಂಡು ಮೆರವಣಿಗೆ ಮಾಡಿ-ಅದೂ ರಾತ್ರಿ ಹೊತ್ತು ಮೆರವಣಿಗೆ ಮಾಡಿ ಊರ ಗಡಿ ದಾಟಿಸುತ್ತಾರೆ.

ಸುತ್ತ-ಮುತ್ತಲ ಹಳ್ಳಿಗಳಲ್ಲಿ ಮಳೆ ಹುಯ್ದು ತಮ್ಮ ಗ್ರಾಮಕ್ಕೆ ಮಾತ್ರ ಮಳೆ ಬಾರದಿದ್ದಾಗ ನಮ್ಮೂರಿಗೆ ಕೇಡಾಗಿದೆ ಎಂದು ಭಾವಿಸಿ ಈ ಆಚರಣೆಯನ್ನು ಮಾಡುವುದು ವಾಡಿಕೆ.

ಮಳೆ ಬಾರದಿದ್ದಾಗ ಇಂತಹ ಹಲವಾರು ವೈವಿಧ್ಯಮಯ ಆಚರಣೆಗಳನ್ನು ನಾಡಿನ ಎಲ್ಲ ಭಾಗಗಳ ಗ್ರಾಮೀಣ ಪ್ರದೇಶಗಳಲ್ಲಿ ಕಾಣಬಹುದು, ಕೆಲವೆಡೆ ಮಳೆ

ಹೆಚ್ಚಾದಾಗ ಅದರ ರಭಸ ಕಡಿಮೆಯಾಗಲಿ, ಮಳೆ ಸಂಪೂರ್ಣ ನಿಲ್ಲಲಿ ಎಂಬ ಉದ್ದೇಶದಿಂದ  ಕೆಲವು ಆಚರಣೆಗಳನ್ನು ಮಡುತ್ತಾರೆ. ಹೋಗು ಎಂಬರ್ಥ ಬರುವಂತೆ ಬಾಯಲ್ಲಿ ವಿಚಿತ್ರ ಸದ್ದು ಹೊರಡಿಸುತ್ತಾ ಒಲೆಯ ಕೆಂಡವನ್ನು ಮನೆ ಮುಂದೆ ನಿಂತು ಮೇಲಕ್ಕೆ ಎಸೆಯುತ್ತಾರೆ.

## ೪. ಜೋಕುಮಾರನ ಹಬ್ಬ

ಭಾದ್ರಪದ ಶುದ್ಧ ಅಷ್ಟಮಿಯ ದಿನ ಜೋಕುಮಾರನು ಬಂದು ಒಕ್ಕಲು ಮಕ್ಕಳಿಗೆ ಉತ್ತರಿ ಮಳೆ ತರುವನೆಂಬ ನಂಬುಗೆಯಿದೆ. ಆತ ಚತುರ್ದಶಿಯ ದಿನ ತಾನು ಬಂದ ಕಾರ್ಯ ಮುಗಿಸಿ ಹೊರಡುವ ಮುನ್ನ ಮನೆ–ಮನೆಗೆ ಭೇಟಿ ನೀಡಿ ಜೋಳದ ನುಚ್ಚು ಕೊಟ್ಟು ಹೋಗುತ್ತಾನೆ, ಅದನ್ನು ಹೊಲದಲ್ಲಿ ಬಿತ್ತಿದರೆ ಜೋಳದ ಫಸಲು ಹುಲುಸಾಗುತ್ತದೆಯಂತೆ. ಈ ಸಂದರ್ಭದಲ್ಲಿ ಬೆಸ್ತ ಹೆಣ್ಣು ಮಕ್ಕಳು ಬುಟ್ಟಿಯಲ್ಲಿ ಬೇವಿನ ಸೊಪ್ಪಿನ ಸಂಗಡ ಮಣ್ಣಿನ ಮೂರ್ತಿಯೊಂದನ್ನು ಇಟ್ಟುಕೊಂಡು ಮನೆ–ಮನೆಗಳಿಗೆ ತಿರುಗಿ ಪದ ಹೇಳುತ್ತಾರೆ. ಜೋಕುಮಾರ ಕುದುರೆ ಏರಿ ಸಂಚರಿಸುತ್ತಾ ಭೂಮಿಗೆ ಮಳೆ ಬರಿಸುತ್ತಾನೆ, ಕೆರೆ–ಕಟ್ಟೆಗಳಿಗೆ ಜೀವ ತುಂಬುತ್ತಾನೆ ಎಂಬುದು ಅವರ ಪದಗಳ ಸಾರಾಂಶ.

ಈ ಹೆಣ್ಣು ಮಕ್ಕಳು ಬುಟ್ಟಿಯಲ್ಲಿ ಹೊತ್ತು ತರುವ ಮೂರ್ತಿ ಅಗಲವಾದ ಮುಖವನ್ನು ಹೊಂದಿದ್ದು ದೊಡ್ಡ ಕಣ್ಣುಗಳಿರುತ್ತವೆ, ಬಾಯಿ ಅಗಲವಾಗಿದ್ದು ತಲೆಗೆ ಕಿರೀಟವಿರುತ್ತದೆ. ಹಣೆಗೆ ಕುಂಕುಮವಿದ್ದು ಹುರಿಮೀಸೆ ನೋಡಲು ಅಕರ್ಷಕ.

ಜೋಕುಮಾರ ಪೌರಾಣಿಕ ವ್ಯಕ್ತಿ, ಅವನ ಹುಟ್ಟು–ಸಾವಿನ ಕುರಿತಾದ ಐತಿಹ್ಯ ಕುತೂಹಲಕಾರಿಯಾದದ್ದು. ಬೆಸ್ತ ಹೆಣ್ಣು ಮಕ್ಕಳ ಪದಗಳಲ್ಲಿ ಜೋಕುಮಾರನ ಜೀವನದ ಸಂಗತಿಗಳೂ ಸಹ  ಪ್ರಸ್ತಾಪವಾಗುತ್ತವೆ. ಸಂಕ್ಷಿಪ್ತವಾಗಿ ಹೇಳುವುದಾದರೆ;

ಜೋಕ ಮತ್ತು ಎಳೆಗೌರಿ ದಂಪತಿಗಳಿಗೆ ಬಹು ಕಾಲ ಮಕ್ಕಳಾಗದ ಕಾರಣ ಅವರು ಶಿವನನ್ನು ಪ್ರಾರ್ಥಿಸುತ್ತಾರೆ. ಆಗ ಶಿವನು ಒಬ್ಬ ಮಗನನ್ನು ಅನುಗ್ರಹಿಸುತ್ತಾನೆ. ಆದರೆ ಆ ಮಗುವಿಗೆ ಏಳೇ ದಿವಸಗಳ ಆಯಸ್ಸು ಇರುತ್ತದೆ. ಅದರೆ ಅವನದು ಶೀಘ್ರ ಬೆಳವಣಿಗೆ. ಹೀಗಿರಬೇಕಾದರೆ ಒಮ್ಮೆ ಮಳೆ ಹೋಗಿ ಇಟ್ಟ ಬೆಳೆಗಳೆಲ್ಲಾ ಒಣಗಲು ಪ್ರಾರಂಭಿಸುತ್ತವೆ. ಜನರ ಸಂಕಟ ಮುಗಿಲು ಮುಟ್ಟುತ್ತದೆ. ಆಗ ಜೋಕುಮಾರ ತನ್ನ ಕುದುರೆಯನ್ನೇರಿ ಹೊರಟು ಹೊಲಗದ್ದೆಗಳಲ್ಲಿ ಸಂಚರಿಸತೊಡಗುತ್ತಾನೆ. ಅವನು ತನ್ನ ಮೇಲು ಹೊದಿಕೆಯನ್ನು ಒಮ್ಮೆ ಜೋರಾಗಿ ಬೀಸಿದಾಗ ಅದರ ಸೆಳಕಿಗೆ ಚದುರಿದ ಮೋಡಗಳು  ಮಳೆ ಸುರಿಸುತ್ತವೆ. ಯತೇಚ್ಛವಾಗಿ ಬಿದ್ದ ಮಳೆಯಿಂದಾಗಿ ಬೆಳೆಗಳು ಸಮೃದ್ಧವಾಗಿ ಬೆಳೆಯುತ್ತವೆ. ಬತ್ತಿ–ಬರಿದಾದ ಕೆರೆಗಳು ತುಂಬಿ ಹರಿಯುತ್ತವೆ.

ಇದರಿಂದ ಸಂತಸಗೊಂಡು ಜೋಕುಮಾರನು ಹಾಗೇ ಹೊಲಗದ್ದೆಗಳಲ್ಲಿ ಅಡ್ಡಾಡುತ್ತಿದ್ದಾಗ ಲಾವಣ್ಯವತಿಯಾದ ಒಬ್ಬ ಯುವತಿಯನ್ನು ನೋಡುತ್ತಾನೆ. ಆಕೆ ಅಗಸರ ಯುವತಿ. ಅವಳನ್ನು ಇಷ್ಟಪಟ್ಟ ಜೋಕುಮಾರನನ್ನು ಸಹಿಸದ ಆ ಯುವತಿಯ ತಂದೆಯು ಜೋಕುಮಾರನ ತಲೆಯನ್ನು ಕತ್ತರಿಸಿ ನದಿಗೆ ಎಸೆದುಬಿಡುತ್ತಾನೆ. ಆ ತಲೆಯು ಒಬ್ಬ ಬೆಸ್ತರವನಿಗೆ ದೊರಕುತ್ತದೆ. ಆತನು ಜೋಕುಮಾರನನ್ನು ಗುರುತಿಸಿ, ತಮ್ಮ ಬೆಳೆಗಳನ್ನು ರಕ್ಷಿಸಿ ತಮ್ಮ ಬದುಕಿಗೆ ಆಧಾರವಾದ ಜೋಕುಮಾರನ ತಲೆಯನ್ನು ಊರಿಗೆ ತರುತ್ತಾನೆ. ಊರವರೆಲ್ಲಾ ಸೇರಿ ಜೋಕುಮಾರನಿಗೆ ಪೂಜೆ ಸಲ್ಲಿಸುತ್ತಾರೆ. ಅಂದಿನಿಂದ ಈ ಜೋಕುಮಾರನ ಪೂಜೆ ಆಚರಣೆಗೆ ಬಂತೆಂದು ಪ್ರತೀತಿ ಇದೆ. ಆಚರಣೆಯ ಸಂದರ್ಭದಲ್ಲಿ ಬೆಸ್ತ ಹೆಣ್ಣು ಮಕ್ಕಳು ಹೇಳುವ ಪದಗಳು ಬಹು ಅರ್ಥಗರ್ಭಿತವಾಗಿರುತ್ತವೆ. ಕೆಲವು ಸಾಲುಗಳನ್ನು ನೋಡುವುದಾದರೆ.

ಅಡ್ಡಡ್ಡ ಮಳೆ ಬಂದು ದೊಡ್ಡದೊಡ್ಡ ಕೆರೆ ತುಂಬಿ
ಗೊಡ್ಡುಗಳೆಲ್ಲಾ ಹೈನಾಗಿ ನಿನ್ನ ಕುಮಾರ್ನ ಗಡ್ಡಕ್ಕೆ ಬೆಣ್ಣೆಲ್ಲೊ ಜವಕುಮಾರ
ಮಡಿವಾಳರ ಕೇರಿ ಹೊಕ್ಕಾನೆ ಜೋಕುಮಾರ
ಮುಡಿ ತುಂಬಾ ಹೂ ಮುಡಿದಂತ ಚಲುವಿ ತನ್ನ
ಮಡದಿಯಾಗಬೇಕಂದ ಸುಕುಮಾರ.

ಹಳ್ಳಿಗರ ಪ್ರಕಾರ ಮಳೆ ಬರಿಸುವವನು ದೇವೇಂದ್ರ ರಾಯ. ಅವನು ರಥದಲ್ಲಿ ಕುಳಿತು ಆಕಾಶ ಮಾರ್ಗದಲ್ಲಿ ಹೋಗುವಾಗ ಹೊಮ್ಮುವ ಶಬ್ದವೇ ಗುಡುಗು-ಸಿಡಿಲುಗಳು, ಅವನು ತನ್ನ ಕುದುರೆಗಳಿಗೆ ಹುರಿದುಂಬಿಸಲು ಬೀಸುವ ಛಾಟಿಯೇಟಿನ ಛಳಕೇ ಮಿಂಚು. ಮಳೆಯ ಬಗ್ಗೆ ಅವರು ಕಟ್ಟಿರುವ ಪುರಾಣ, ಹೇಳುವ ಕಥೆಗಳು, ಹಾಡುವ ಪದಗಳು, ಮಾಡುವ ಪೂಜೆಗಳು ಅಸಂಖ್ಯ. ಪ್ರತಿಯೊಂದು ಮಳೆಯ ಬಗ್ಗೆ, ಮಳೆಯ ಬರುವಿಕೆ-ಹೋಗುವಿಕೆಯ ಬಗ್ಗೆ ಅವರ ವಿಶ್ಲೇಷಣೆ ನೂರಾರು ವರ್ಷಗಳ ಅನುಭವದ ಸಾರ.

❑

**ಮಳೆ ಗಾದೆಗಳು**

- ಉಡಿಯ ಕಾಳಿಗಿಂತ ಹಿಡಿಯ ಕಾಳು ಉತ್ತಮ
- ನಾಟಿ ಹಾಕಿದ ನೆಲ ಚೆಂದ ಮೇಟಿ ನೆಟ್ಟ ಕಣ ಚೆಂದ
- ಹದ ನೋಡಿ ಹರಗು, ಬೆದೆ ನೋಡಿ ಬಿತ್ತು
- ರೋಹಿಣಿ ಮಳೆಯಾದರೆ ಓಣಿಯೆಲ್ಲಾ ಜೋಳ
- ಅರಿದ್ರ ಅದಾಂಗ ಹಿರಿ ಸೊಸಿ ಬಾಳವಿ ಮಾಡಿದಾಂಗ
- ಮಗಿ ಮಳೆ ಬಂದರೆ ರೈತನಿಗೆ ಉಡಿದಾರ ಕಟ್ಟಿದಾಂಗ
- ಉತ್ತರೆ ಮಳೆ ಉಟ್ಟಿದ್ದೆಲ್ಲ ಒದಿ
- ಮುಂಗಾರು ಮಳೆಗೆ ಸಿಗಬೇಡ ಮರೆತು ಮಾತಿಗೆ ಸಿಗಬೇಡ.

## ಅಧ್ಯಾಯ ಎರಡು

# ಭೂಮ್ತಾಯಿಗೆ ಶರಣು

### ಭೂಮಿ ಕುರಿತಾದ ಆಚರಣೆಗಳು

*ನಮ್ಮ ಜನಪದರಿಗೆ ಭೂಮಿ ಕೇವಲ ಮಣ್ಣಲ್ಲ. ಕೋಟ್ಯಂತರ ಜೀವಿಗಳಿಗೆ ಆಹಾರ, ರಕ್ಷಣೆ ನೀಡಿ ಸಲಹುವ ಮಹಾಮಾತೆ. ಹಾಗಾಗಿ ಭೂಮಿ ತಾಯಿಯ ಆರಾಧನೆಗೆ ವಿವಿಧ ರೀತಿಯ ಕ್ರಿಯೆಗಳು ಆಚರಣೆಗಳು, ಮಾರ್ಗಗಳು ಭಾರತದ ಎಲ್ಲಾ ಕಡೆ ಪ್ರಚಲಿತದಲ್ಲಿವೆ. ಉತ್ತರ ಕರ್ನಾಟಕದ ಸೀಗಿ ಹುಣ್ಣಿಮೆ, ಮಲೆನಾಡಿನ ಭೂಮಿ ಹುಣ್ಣಿಮೆ, ಬಯಲು ಸೀಮೆಯ ಹೊನ್ನಾರು, ಕೊಂತಿಹಬ್ಬ, ತುಳುನಾಡಿನವರ ಖೆಡ್ಡಾಸ, ಸೋಲಿಗ ಆದಿವಾಸಿಗಳ ಭೂಮ್ತಾಯಿ ಪೂಜೆ, ಅಲ್ಲದೆ ದೇಶದ ಇತರ ರಾಜ್ಯಗಳಾದ ರಾಜಸ್ಥಾನದ ಹಿರ್ಸೋತಿ, ಪಶ್ಚಿಮ ಬಂಗಾಳದ ಹಲ್ ಚಲ್ ಇವೆಲ್ಲಾ ಭೂಮಿಗೆ ಧನ್ಯವಾದ ಸಲಿಸುವ ಆಚರಣೆಗಳೇ.*


*ಪಂಚಭೂತಗಳಾದಿಯಾಗಿ ಪ್ರಕೃತಿಯ ಎಲ್ಲಾ ಘಟಕಗಳಲ್ಲೂ ನಮ್ಮ ರೈತ ಮಕ್ಕಳು ದೈವತ್ವವನ್ನು ಕಂಡು ಗೌರವಿಸುತ್ತಾರೆ. ಅದರಲ್ಲಿಯೂ ಅವರಿಗೆ ನೆಲೆ, ಅನ್ನ, ಆಶ್ರಯ ನೀಡುವ ಭೂಮಿಯ ಮೇಲೆ ಅಪಾರ ಗೌರವ, ಭಕ್ತಿ, ಶ್ರದ್ಧೆಗಳನ್ನಿಟ್ಟುಕೊಂಡಿರುತ್ತಾರೆ. ಎಷ್ಟರ ಮಟ್ಟಿಗೆ ಎಂದರೆ ಯಾರಿಗಾದರೂ ಏನನನ್ನಾದರೂ ಧೃಢೀಕರಿಸಬೇಕಾದರೆ ಭೂಮ್ತಾಯಿ ಮೇಲೆ ಆಣೆ ಹಾಕುವುದು ಹಳ್ಳಿಗರಲ್ಲಿ ಸರ್ವೇ ಸಾಮಾನ್ಯ. ಹಾಗಾಗಿ ಭೂಮಿ ಕುರಿತಾದ ಅವರ ಆಚರಣೆಗಳೂ ಸಹ ನಾಡಿನಾದ್ಯಂತ ಸಮೃದ್ಧವಾಗಿವೆ.*

## ೧. ಹೊನ್ನಾರು

ಹೊನ್ನಾರು ಅಥವಾ ಹೊನ್ನೇರು ಎಂದು ಕರೆಯುವ ಇದು ಕೃಷಿ ವರ್ಷದ ಮೊದಲ ಆಚರಣೆ ಎನ್ನಬಹುದು. ದಕ್ಷಿಣ ಕರ್ನಾಟಕದಲ್ಲಿ ವಿಶೇಷವಾಗಿ ಕಂಡುಬರುತ್ತದೆ.

ಹೊನ್ನೇರು ಎಂದರೆ ಹೊನ್ನಿನ ಏರು, ಅರ್ಥಾತ್ ಬಂಗಾರದ ನೇಗಿಲು. ಮೊದಲ ಮಳೆ ಬಿದ್ದ ಹೊತ್ತಲ್ಲಿ ರೈತರಿಗೆ ನೆಲ ಉಳುವ ಸಂಭ್ರಮ. ನೆಲ ಉಳುವ ಮುನ್ನ ಭೂಮ್ತಾಯಿಯನ್ನು ಪ್ರಾರ್ಥಿಸಿ, ನೇಗಿಲು, ಮೇಣಿ, ನೊಗ ಹಾಗೂ ಜೋಡೆತ್ತುಗಳಿಗೆ ಅರಿಶಿಣ-ಕುಂಕುಮದ ಬೊಟ್ಟಿಟ್ಟು, ಅರಿಶಿನ ಲೇಪಿಸಿದ ಅಂಗುನೂಲು

ಕಟ್ಟಿ, ಅಕ್ಷತೆ ಇಟ್ಟು ಹೂವಿನ ಎಳೆಯನ್ನು ಸುತ್ತಿ ಪೂಜೆ ಸಲ್ಲಿಸುವ ಆಚರಣೆ ಎಲ್ಲೆಡೆ ಕಾಣಬಹುದು. ರಾತ್ರಿ ನೆನೆಸಿಟ್ಟ ಅಕ್ಕಿ ಮತ್ತು ಎಳ್ಳಿಗೆ ಕಾಯಿ ಬೆಲ್ಲ ಹಾಕಿ ಕಲಸಿದ ಎಡೆಯನ್ನು ಮೊದಲು ದನಗಳಿಗೆ ತಿನ್ನಿಸುತ್ತಾರೆ, ಉಳಿದಿದ್ದನ್ನು ಬಂದವರಿಗೆ ಹಂಚಲಾಗುತ್ತದೆ. ಇಷ್ಟೆಲ್ಲಾ ಮಾಡುವುದು ಮನೆಯ ಹೆಣ್ಣುಮಕ್ಕಳು. ಪೂಜಾ ವಿಧಾನಗಳು ಮುಗಿದ ನಂತರ ಹೊಲವನ್ನು ಸಾಂಕೇತಿಕವಾಗಿ ಮೂರು ಸುತ್ತು ಉಳುಮೆ ಮಾಡಲಾಗುತ್ತದೆ. ಕೆಲವರು ಹೊಲದಲ್ಲಿ ತೇವವಿದ್ದರೆ ಸ್ವಲ್ಪ ಹೆಚ್ಚೇ ಉಳುಮೆ ಮಾಡುತ್ತಾರೆ.



ಹೆಣ್ಣುಮಗಳಿಂದ ಹೊನ್ನೇರು ಪೂಜೆ (ಚಿತ್ರ : ಜಿ. ಕೃಷ್ಣಪ್ರಸಾದ್)

ಜೇನ್ ಮಲ್ಲತ್ತದ ವಿಶೇಷ ಹೊನ್ನೇರು: ಜೇನ್ ಮಲ್ಲತ್ತ ಒಂದು ಚಿಕ್ಕ ಗ್ರಾಮ. ಕನಕಪುರದ ಹತ್ತಿರ ಕರ್ನಾಟಕ–ತಮಿಳು ನಾಡು ಗಡಿಯಲ್ಲಿ ಕಾಡಿನ ಒಳಗಿರುವ ಇದು ಭೌಗೋಳಿಕವಾಗಿ ತಮಿಳು ನಾಡಿಗೆ ಸೇರಿದ್ದರೂ ಸಹ ಜನರು ಕನ್ನಡಿಗರೇ. ಭಾಷೆ, ವೇಷ, ಊಟ, ಉಪಚಾರ ಎಲ್ಲವೂ ಕನ್ನಡಮಯ. ನೆಂಟಸ್ತಿಕೆಯೂ ಸಹ ಕನ್ನಡನಾಡಿನ ಜೊತೆಗೇ. ಇಲ್ಲಿ ನಡೆಯುವ ಹೊನ್ನೇರು ಪೂಜೆ ಬೇರೆ ಪ್ರದೇಶಗಳಿಗಿಂತ ಭಿನ್ನ. ಬೇರೆ ಪ್ರದೇಶಗಳಲ್ಲಿ ಈ ಪೂಜೆಯು ವೈಯಕ್ತಿಕ ನೆಲೆಯಲ್ಲಿ ಆಚರಿಸಲ್ಪಟ್ಟರೆ ಜೇನ್ ಮಲ್ಲತ್ತ ಗ್ರಾಮದಲ್ಲಿ ಸಾಮೂಹಿಕ ಕ್ರಿಯೆಯಾಗಿ ಆಚರಿಸಲ್ಪಡುತ್ತದೆ.

ಇಲ್ಲಿರುವ ಮಾರಮ್ಮ ಸುತ್ತ ಹನ್ನೆರಡು ಹಳ್ಳಿಗಳಿಗೂ ಗ್ರಾಮದೇವತೆ. ಯುಗಾದಿ ಕಳೆದ ಹದಿನೈದು ದಿನಗಳಿಗೆ ಗ್ರಾಮದ ಎಲ್ಲರೂ ಸೇರಿ ಮಾರಮ್ಮನ ಹಬ್ಬವನ್ನು ಒಂದು ವಾರ ಕಾಲ ನಡೆಸುತ್ತಾರೆ. ಪ್ರತಿ ದಿನ ಒಂದೊಂದು ವಿಧಿ-ವಿಧಾನಗಳ ಆಚರಣೆಯಿರುತ್ತದೆ. ಅದರಲ್ಲಿ ಮೊದಲ ದಿನ ರಾತ್ರಿ ಹೊನ್ನಾರು ಅಥವಾ ಹೊನ್ನೇರು ಪೂಜೆಯನ್ನು ಅತ್ಯಂತ ವಿಶಿಷ್ಟವಾಗಿ ಮಾಡಲಾಗುತ್ತದೆ. ಸುತ್ತ-ಮುತ್ತಲ ಹದಿನಾರು ಹಳ್ಳಿಗಳಿಗೂ ಈ ಜಾತ್ರೆಯಲ್ಲಿ ನಡೆಯುವುದೇ ಅಧಿಕೃತ ಹೊನ್ನೇರು. ಇಲ್ಲಿ ಹೊನ್ನೇರು ಪೂಜೆ ಮುಗಿಯುವವರೆಗೆ ಎಂತಹ ಹದ ಮಳೆಯಾಗಿದ್ದರೂ ಸಹ ಹೊಲಕ್ಕೆ ಏರು ಕಟ್ಟುವಂತಿಲ್ಲ.

ಹೊನ್ನೇರು ಪೂಜೆ ನಡೆಯುವುದು ಸರಿರಾತ್ರಿ ಎರಡು ಗಂಟೆ ಸಮಯಕ್ಕೆ.

ಇತರೆಡೆಗಳಲ್ಲಿ ನಿಜವಾದ ನೇಗಿಲು, ಜೋಡೆತ್ತುಗಳನ್ನು ಹೂಡಿ ಪೂಜೆ ಮಾಡಿದರೆ ಇಲ್ಲಿ ಮನುಷ್ಯರನ್ನೇ ಎತ್ತುಗಳನ್ನಾಗಿಸಲಾಗುತ್ತದೆ. ತಲೆಗೆ ಪೇಟ ಕಟ್ಟಿ, ಕೊಂಬುಗಳನ್ನು ಹೋಲುವಂತೆ ಎರಡು ಕಡ್ಡಿಗಳನ್ನು ಸಿಗಿಸಿಕೊಂಡ ಇಬ್ಬರ ಮೇಲೆ ನೇಗಿಲು-ನೊಗ ಹೂಡಿ ಒಬ್ಬ ಗಡ್ಡಧಾರಿ ವ್ಯಕ್ತಿ ಉಳುವವನಂತೆ ನಟಿಸುತ್ತಾನೆ. ನೇಗಿಲ ಮುಂದೆ ಕಂಕುಳಲ್ಲಿ ಹುಲ್ಲಿನ ಕಂತೆ ಇಟ್ಟುಕೊಂಡ ಮತ್ತೊಬ್ಬ ವ್ಯಕ್ತಿ ಸ್ವಲ್ಪ-ಸ್ವಲ್ಪ ಹುಲ್ಲನ್ನು ಎಸೆಯುತ್ತಾ ನಡೆಯುತ್ತಾನೆ. ದೇವಾಲಯದ ಮುಂದೆ ವೃತ್ತಾಕಾರದಲ್ಲಿ ಸುತ್ತುವ ಇವರನ್ನು ನೋಡಲು ಜನ ಸುತ್ತಲೂ ನೆರೆಯುತ್ತಾರೆ. ಇವರು ಸುತ್ತುತ್ತಾ ಇರಬೇಕಾದರೆ ಊರ ತೋಟಿ ಮತ್ತು ಇವರ ನಡುವೆ ನಡೆಯುವ ಹಾಸ್ಯ ಲೇಪಿತ ಸಂಭಾಷಣೆ ಹೀಗಿರುತ್ತದೆ.

ತೋಟಿ- ಯಾವೂರು?

ವೇಷಧಾರಿಗಳು- ನಮ್ದು ಉತ್ತರ ದೇಶ.

ತೋಟಿ- ಅಲ್ಲಿಂದ ಬಂದು ಇಲ್ಲ್ಯಾಕೆ ಏರು ಕಟ್ಟಿದ್ದೀರಿ?

ವೇಷಧಾರಿಗಳು- ಮಳೆ ಬಂದ್ಬುಟ್ತಲ್ಲ ಅದಕ್ಕೆ.

ತೋಟಿ- ನಮ್ ಹೊಲದಲ್ಯಾಕೆ ಬಂದಿದ್ದೀರಿ?

ವೇಷಧಾರಿಗಳು- ಹೊಟ್ಟೇ ತುಂಬಿಸ್ ಬೇಕಲ್ಲ ಅದಿಕ್ಕೆ ... .. ... ಈ ರೀತಿ ಅದೂ-ಇದೂ ಮಾತನಾಡುತ್ತಾ, ನಗಸಾರ ಮಾಡುತ್ತಾ ಬೆಳಗಿನ ಜಾವದವರೆಗೂ ನಡೆಯುತ್ತದೆ. ನಂತರ ಮೆರವಣಿಗೆ ಮಾಡಿ ಮದುವೆ ಮಾಡುವ ಸಾಂಕೇತಿಕ ವಿಧಿಯೊಂದಿಗೆ ಹೊನ್ನೇರು ಪೂಜೆ ಮುಗಿಯುತ್ತದೆ.

## ೨. ಮಣ್ಣಿನ ಋಣ ತೀರಿಸುವ ಭೂಮಿ ಹುಣ್ಣಿಮೆ

ಭತ್ತದ ಕದಿರು ಹೊರಬರುವ ಸಂದರ್ಭದಲ್ಲಿ ಭೂಮಾತೆ ಗರ್ಭಿಣಿ ಆದಳೆಂದು ಭಾವಿಸಿ, ಅವಳಿಗೆ ಸೀಮಂತ ಮಾಡಿ ಆಕೆಯ ಸುಪ್ತ ಬಯಕೆಗಳನ್ನು ತೀರಿಸುವ ಅರ್ಥಪೂರ್ಣ ಆಚರಣೆಯೇ ಈ ವಿಶಿಷ್ಟ 'ಭೂಮಿ ಹುಣ್ಣಿಮೆ'. ಇದು ರೈತ ಬಂಧುಗಳು ಭೂಮಿಗೆ ಋಣ ತೀರಿಸುವ ಅನನ್ಯ ವಿಧಾನ. ಭೂಮಿಯನ್ನು ಸ್ತ್ರೀಗೆ ಹೋಲಿಸುವುದು ಜಗತ್ತಿನ ಎಲ್ಲ ಸಂಸ್ಕೃತಿಗಳಲ್ಲಿ ಕಂಡುಬರುತ್ತದೆ. ಭೂಮಿ ಹುಣ್ಣಿಮೆ ಅದರ ಒಂದು ರೂಪ. ಸಾಮಾನ್ಯವಾಗಿ ಮಲೆನಾಡಿಗರು ಬತ್ತದ ಗದ್ದೆಯ ತಾಕಿನಲ್ಲಿ ಇದನ್ನು ಆಚರಿಸಿದರೆ ಉತ್ತರಕರ್ನಾಟಕದಲ್ಲಿ ಹೊಲಗಳಲ್ಲಿ ಆಚರಿಸುತ್ತಾರೆ. ಉತ್ತರ ಕರ್ನಾಟಕದಲ್ಲಿ 'ಶೀಗೆ ಹುಣ್ಣಿಮೆ' ಎಂದೂ ಮಲೆನಾಡು ಪ್ರದೇಶದಲ್ಲಿ 'ಭುಮ್ಮಣಿ ಹಬ್ಬ' ಎಂದೂ ಇದನ್ನು ಕರೆಯುತ್ತಾರೆ.




ಭೂಮಿ ಹುಣ್ಣಿಮೆಗೆ ಹೊರಟ ಕುಟುಂಬ

ಹಚ್ಚೆಮ್ಲಿ ಹಾಲಮ್ಲಿ
ಹಿತ್ಲಾಗಿನ ಹೀರೆಕಾಯಿ ಹಾಹೂಹು...
ಮುಂದಿನ ಸಾಲಾಗೆ
ಮತ್ತಷ್ಟು ಬೆಳೆ ಬಲ್ಲಿ ಹಾಹೂಹು...

ಎಂಬುದು ಈ ಆಚರಣೆಯ ಸಂದರ್ಭದಲ್ಲಿ ಹೇಳುವ ವಾಡಿಕೆ ಪದ.

**ಭುಮ್ಮಣಿ ಬುಟ್ಟಿಯ ಚಿತ್ತಾರ:** ಮಲೆನಾಡಿನಾದ್ಯಂತ ಮತ್ತು ಅರೆಮಲೆನಾಡಿನ ಭಾಗಗಳಲ್ಲಿ ಈ ಹಬ್ಬ ನಡೆಯುವುದು ಸೀಗೆ (ಶೀಗೆ) ಹುಣ್ಣಿಮೆಯ ದಿವಸ. ಆ ಹುಣ್ಣಿಮೆಗಿಂತ ಒಂದು ವಾರ ಮೊದಲೇ ಬರುವ ವಿಜಯ ದಶಮಿಯಂದೇ ಹಬ್ಬಕ್ಕೆ ಚಾಲನೆ. ಭೂಮಿ ಹುಣ್ಣಿಮೆ ಹತ್ತಿರ ಬರುತ್ತಿದ್ದಂತೆ ಮನೆಯ ಗಂಡಸರು ಒಂದೆರಡು ಬಿದಿರನ್ನು ಕಡಿದು, ನೀಟಾಗಿ ಸಿಗಿದು ಬುಟ್ಟಿ ಹೆಣೆಯುತ್ತಾರೆ, ನಂತರ ಆ ಬುಟ್ಟಿಗಳು ಸೀದಾ ಮನೆಯ ಹೆಂಗಸರ ಕೈಗೆ ಹೋಗುತ್ತವೆ. ಅವುಗಳನ್ನು ಪೂಜಿಸಿದ ನಂತರ ಸಾರಿಸಿ, ಚೆನ್ನಾಗಿ ಒಣಗಿಸಿ ಎತ್ತಿಡುತ್ತಾರೆ. ಇವು ಹಬ್ಬದ ಮುಖ್ಯ ಪರಿಕರಗಳು. ಬುಮ್ಮಣ್ಣಿ ಬುಟ್ಟಿ ಮತ್ತು ಹಚ್ಚಂಬ್ಲಿ ಬುಟ್ಟಿಗಳೆಂದು ಕರೆಯುವ ಇವುಗಳನ್ನು ಒಂದು ವಾರ ಮುಂಚೆಯೇ ನೆನೆ ಹಾಕುತ್ತಾರೆ. ಮಾರನೇ ದಿನ ಬುಟ್ಟಿಗಳಿಗೆ ಮಣ್ಣು ಕಟ್ಟಿ



ಬುಮ್ಮಣ್ಣಿ ಬುಟ್ಟಿ

ಸಗಣಿಯಿಂದ ಸಾರಿಸುತ್ತಾರೆ. ಮರುದಿನ ಜೇಡಿ ಮಣ್ಣು ಕಟ್ಟಿ ಚೆನ್ನಾಗಿ ಒಣಗಿದ ಮೇಲೆ ಚಿತ್ತಾರ ಬಿಡಿಸುವ ಕೆಲಸ.

ಈ ಚಿತ್ತಾರ ಬಿಡಿಸುವ ಕೆಲಸ ಬಹು ಆಕರ್ಷಣೀಯ ಮತ್ತು ಬಹು ಸೂಕ್ಷ್ಮ ಕೌಶಲ್ಯವೂ ಹೌದು. ಹಾಗಾಗಿ ಭೂಮಿ ಹುಣ್ಣಿಮೆಯು ಕೇವಲ ಹಬ್ಬ ಮಾತ್ರವಲ್ಲದೆ ಗ್ರಾಮೀಣ ಕಲೆಯೊಂದರ ಹೆಜ್ಜೆ ಗುರುತೂ ಹೌದು. ಚಿತ್ತಾರ ಅಂದರೆ ಕುಂಚದ ಕಲೆ ಅಲ್ಲ. ಇದು ಅಪ್ಪಟ ಗ್ರಾಮೀಣ ಕಲೆ.

ಗೇರುಕಾಯಿ, ಅಕ್ಕಿ ಮತ್ತು ಉದ್ದಿನ ಕಾಳನ್ನು ಕಪ್ಪಗೆ ಹುರಿದು ಪುಡಿ ಮಾಡುತ್ತಾರೆ. ಕುದಿಯುವ ನೀರಿಗೆ ನೇರಳೆ ಚಕ್ಕೆ ಹಾಕಿ ಈ ಪುಡಿಯನ್ನು ಬೆರೆಸಿದರೆ ಬುಟ್ಟಿಗಳ ಮೇಲೆ ಚಿತ್ರ ಬರೆಯಲು ಬಣ್ಣ ತಯಾರು. ಅಕಸ್ಮಾತ್ ಈ ಬಣ್ಣವೇನಾದರೂ ಗಟ್ಟಿಯಾದರೆ ಸ್ವಲ್ಪ ತೊಂಡೆ ಸೊಪ್ಪಿನ ಹಸಿರು ರಸ ಹಾಕುತ್ತಾರೆ. ಹೊಳೆಯಲ್ಲಿ ಸಿಗುವ ಕೆಂಪು ಕಲ್ಲನ್ನು ಅರೆದುಕೊಂಡರೆ ಅಪ್ಪಟ ಕೆಂಪು ಬಣ್ಣ ತಯಾರು. ಭತ್ತದ ಗರಿಕೆ, ಬಾಳೆ ದಿಂಡಿನಿಂದ ಮಾಡಿದ ಸಣ್ಣ ಕಡ್ಡಿ ಅಥವಾ ಪುಂಡಿ ನಾರನ್ನೇ ಬ್ರಷ್ಶಾಗಿಸಿಕೊಂಡು ಹೆಣ್ಣುಮಕ್ಕಳು ಚಿತ್ರ ಬಿಡಿಸಲು ಕೂರುತ್ತಾರೆ.

ಮೊದಲು ಬಿಳಿ ಬಣ್ಣವನ್ನು ಬುಟ್ಟಿಯ ಮೇಲ್ಭಾಗದಲ್ಲಿ ಹಾಗೂ ಕೆಳಭಾಗದಲ್ಲಿ ನಾಲ್ಕು ಸುತ್ತು ಬರುವಂತೆ ಗೆರೆ ಎಳೆಯುತ್ತಾರೆ. ಇದೇ ರೀತಿ ಬುಟ್ಟಿಯ ತಳಭಾಗದಲ್ಲೂ ಎರಡು ಗೆರೆ ಎಳೆಯುತ್ತಾರೆ. ನಂತರ ಕೆಮ್ಮಣ್ಣಿನಿಂದ ನಾಜೂಕಾಗಿ ಬಿಳಿಗೆರೆಗೆ ತಾಗಿಕೊಂಡಂತೆ ಕೆಂಪು ಗೆರೆ ಎಳೆದು ಅಂದಗೊಳಿಸುತ್ತಾರೆ.

ನಂತಗರ ಒಂದೊಂದೇ ಬದಿಗೆ ಗಿಡ, ಮರ, ಮನೆ, ಹೊಲ, ಗದ್ದೆ, ನೇಗಿಲು, ಕುಂಟೆ, ಬಾಲಕ-ಬಾಲಕಿ, ರಸ್ತೆ, ಹೊಳೆ, ಕೆರೆ, ಸೂರ್ಯ, ಚಂದ್ರ, ನಕ್ಷತ್ರ, ಆಕಾಶ, ಎತ್ತು ಗಾಡಿ, ಆಕಳು, ಎತ್ತು, ಎಮ್ಮೆ, ಹಗ್ಗ, ಪ್ರಾಣಿ-ಪಕ್ಷಿ, ಗಿಡ-ಮರ, ಮಕ್ಕಳು, ದಂಪತಿಗಳು, ಏಣಿ, ಹುಲ್ಲಿನ ಬಣವೆ, ಹಾವು, ಬೇಸಾಯೋಪಕರಣಗಳು ಹೀಗೆ ತಮ್ಮರಿವಿಗೆ ನಿಲುಕಿದ ಎಲ್ಲವನ್ನು ಬುಟ್ಟಿಗಳ ಮೇಲೆ ಬಿಡಿಸುತ್ತಾ ಹೋಗುತ್ತಾರೆ. ಬಿಳಿ ಜೇಡಿ ಮಣ್ಣಿನಿಂದ ಚಿತ್ರ ಬಿಡಿಸಿದ ನಂತರ ಆ ಚಿತ್ರಗಳ ಅಂಚಿಗೆ ಕೆಮ್ಮಣ್ಣು ಹಚ್ಚಿ ಇನ್ನಷ್ಟು ಮೆರುಗು ನೀಡುತ್ತಾರೆ. ಬುಟ್ಟಿಯ ಮೇಲೊಮ್ಮೆ ಕಣ್ಣಾಡಿಸಿದರೆ ಅಪ್ಪಟ ಗ್ರಾಮೀಣ ಪರಿಸರದ ಚಿತ್ರಗಳೇ ಅಲ್ಲಿ ಕಾಣಿಸುತ್ತವೆ. ಬುಟ್ಟಿಯ ಒಳಮೈಯಲ್ಲೂ ಭತ್ತದ ಸಸಿ, ತರಕಾರಿ ಬಳ್ಳಿ, ಬಾವಿ, ಹಗ್ಗ ಹೀಗೆ ಗ್ರಾಮೀಣ ಬದುಕಿನಲ್ಲಿ ಹಾಸುಹೊಕ್ಕಾಗಿರುವ ಪರಿಕರ, ಕಸುಬುಗಳ ಎಲ್ಲ ವಿಧದ ಚಿತ್ತಾರಗಳನ್ನು ಬಿಡಿಸುತ್ತಾರೆ. ಬಿದಿರಿನಿಂದ ಹೆಣೆದ ಸಾದಾ ಬುಟ್ಟಿಗಳು ಇವರ ಕುಸುರಿ ಕೆಲಸಕ್ಕೆ ಸಿಲುಕಿ ಕ್ರಮೇಣ ಭುಮ್ಮಣ್ಣಿ ಬುಟ್ಟಿಗಳಾಗಿ ಮಾರ್ಪಾಟಾಗುತ್ತವೆ. ಮೂರು ನಾಲ್ಕು ದಿವಸಗಳ ಈ ಸೂಕ್ಷ್ಮ ಮತ್ತು ಶ್ರದ್ಧೆಯ ಕೆಲಸ ಮನೆಯ ಹೆಂಗಸರದ್ದು.

ಹಬ್ಬದ ದಿನ ಈ ಬುಟ್ಟಿಯೊಳಗೆ ಮಾತ್ರ ಆಹಾರ ಪದಾರ್ಥಗಳು ಮತ್ತು ಪೂಜೆಯ ಸಾಮಗ್ರಿಗಳನ್ನು ಹಾಕಿಕೊಂಡು ಗದ್ದೆಗೆ ಹೋಗಬೇಕೆಂಬುದು ಸಂಪ್ರದಾಯ. ಇತರ ಯಾವುದೇ ಬುಟ್ಟಿ ಅಥವಾ ಪಾತ್ರೆಯಲ್ಲಿ ತೆಗೆದುಕೊಂಡು ಹೋಗುವಂತಿಲ್ಲ. ಸಾಮಾನ್ಯವಾಗಿ ಎರಡು ಬುಟ್ಟಿಗಳನ್ನು ತೆಗೆದುಕೊಂಡು ಹೋಗುವುದು ವಾಡಿಕೆ, ದೊಡ್ಡ ಕುಟುಂಬವಾದರೆ ಮೂರ್ನಾಲ್ಕು ಬುಟ್ಟಿ ಕೊಂಡೊಯ್ಯುತ್ತಾರೆ. ಅಷ್ಟರ ಮಟ್ಟಿಗೆ ಈ ಭುಮ್ಮಣಿ ಬುಟ್ಟಿಗಳಿಗೆ ವಿಶೇಷ ಮಹತ್ವವಿದೆ. ಗದ್ದೆಯಲ್ಲಿ ಪೂಜೆಯ ಕ್ರಿಯೆಗಳೆಲ್ಲಾ

ಮುಗಿದು ಹೊಲಕ್ಕೆ ಬಾಗಿನ ಅರ್ಪಿಸಿದ ನಂತರ ವಾಪಸಾಗುವಾಗಲೂ ಇವೇ ಬುಟ್ಟಿಗಳಲ್ಲಿ ಉಳಿದ ವಸ್ತುಗಳನ್ನು ಹಾಕಿಕೊಂಡು ಬರುತ್ತಾರೆ.

ಇನ್ನು ಭೂಮಿ ಹುಣ್ಣಿಮೆಯಲ್ಲಿ ಮಾಡುವ ಅಡುಗೆ ವೈವಿಧ್ಯವೋ! ಬಣ್ಣನೆಗೆ ನಿಲುಕದ್ದು. ಇತರೆ ಹಬ್ಬಗಳಲ್ಲಿ ಅಮ್ಮಮ್ಮಾ ಎಂದರೆ ಏಳೆಂಟು ಬಗೆಯ ಅಡುಗೆ ಇದ್ದೀತು. ಆದರೆ ಭೂಮಿ ಹುಣ್ಣಿಮೆಗೆ ಕಡಿಮೆ ಎಂದರೂ ಇಪ್ಪತ್ತೈದು ತರಹದ ಅಡುಗೆಗಳಿರುತ್ತವೆ. ಹಬ್ಬಕ್ಕೆ ಮಾಡುವ ತರಾವರಿ ಅಡುಗೆಗಳನ್ನು ನೋಡಿದರೆ ಅಚ್ಚರಿಯಾಗುತ್ತದೆ. ಅಲಸಂದೆ ಪಲ್ಯ, ಚೌಳಿಕಾಯಿ ಪಲ್ಯ, ಅಮ್ಟೆಕಾಯಿ ಪಲ್ಯ, ಹೀರೆಕಾಯಿ ಪಲ್ಯ, ಸೌತೆಕಾಯಿ ಪಚಡಿ, ಸೌತೆಕಾಯಿ ಕಡಬು, ಕೆಸುವಿನ ಕಡುಬು, ಅರಿಶಿನದ ಎಲೆ ಕಡುಬು.. ಬಾಯಲ್ಲಿ ನೀರು ಬಂತೆ? ಇನ್ನೂ ಮುಗಿದಿಲ್ಲ, ಹೋಳಿಗೆ, ಪಾಯಸ, ಹೆಸರು ಬೇಳೆ, ನೆಲ್ಲಕ್ಕಿ ಅನ್ನ, ಕೂಟು, ಸಾಂಬಾರು... ಇತ್ಯಾದಿ ಇತ್ಯಾದಿಗಳ ಜತೆಗೆ ಉಪ್ಪು ಹಾಕದೆ ಬೇಯಿಸಿದ ಸಾವಿರ ಸೊಪ್ಪಿನ ಪಲ್ಯ ಭೂಮಿ ತಾಯಿಗೆ ಎಡೆ ಹಾಕಲು ವಿಶೇಷವಾಗಿ ಮಾಡುತ್ತಾರೆ. ಬಯಲಲ್ಲಿ ಮತ್ತು ಹೊಲಗಳಲ್ಲಿ ಕಣ್ಣಿಗೆ ಬೀಳುವ ಎಲ್ಲಾ ಜಾತಿ ಸೊಪ್ಪುಗಳನ್ನೂ ಸ್ವಲ್ಪ-ಸ್ವಲ್ಪ ತಂದು ಉಪ್ಪು ಹಾಕದೆ ಬೇಯಿಸುತ್ತಾರೆ. ಇದಕ್ಕೆ ಕುಂಬಳ ಮತ್ತು ಬದನೆ ಎಲೆಗಳನ್ನು ಮಾತ್ರ ಹಾಕುವಂತಿಲ್ಲ. ಭೂಮಿ ತಾಯಿಗೆ ಅದು ನಿಷಿದ್ಧ ಎಂಬ ನಂಬಿಕೆ.

ಇದಲ್ಲದೆ ಭೂಮಿಗೆ ಚೆಲ್ಲಲು ಚರಗ ಅಥವಾ ಹಚ್ಚಂಬ್ಲಿ ಕಡ್ಡಾಯವಾಗಿ ಇರಲೇಬೇಕು. ಮಜ್ಜಿಗೆ, ಹಸಿ ಶುಂಠಿ ಹಾಕಿ ಮಾಡಿದ ಅನ್ನದ ಉಂಡೆಯನ್ನು ಹಚ್ಚಿಂಬ್ಲಿ ಎನ್ನುತ್ತಾರೆ.



ಗದ್ದೆಗೆ ಚರಗ ಚೆಲ್ಲುವುದು

ಇಷ್ಟೆಲ್ಲಾ ತರಹೇವಾರಿ ಅಡುಗೆಗೆ ಹೊಂದಿಸಿಕೊಳ್ಳಲೇ ಒಂದು ವಾರ ಬೇಕು. ಭೂಮಿ ಹುಣ್ಣಿಮೆಯ ಹಿಂದಿನ ಇಡೀ ರಾತ್ರಿ ಮನೆ ಹೆಣ್ಣು ಮಕ್ಕಳಿಗೆ ಅಡುಗೆ ಮಾಡುವುದೇ ಕೆಲಸ.

ಹುಣ್ಣಿಮೆಯ ದಿವಸ ಬೆಳ್ಳಂಬೆಳಿಗ್ಗೆ ಚಿತ್ತಾರಗೊಂಡ ಬುಮ್ಮಣ್ಣಿ ಬುಟ್ಟಿಗಳಲ್ಲಿ ಎಡೆ, ಪೂಜಾ ಸಾಮಗ್ರಿಗಳನ್ನೆಲ್ಲಾ ತುಂಬಿಕೊಂಡು ಮನೆ ಮಂದಿಯೆಲ್ಲಾ ಗದ್ದೆಗೆ ಹೋಗುತ್ತಾರೆ. ಒಂದು ನಿಗದಿತ ಸ್ಥಳದಲ್ಲಿ ಬಾಳೆ ಕಂದು, ಕಬ್ಬಿನ ಜಲ್ಲೆಗಳನ್ನು ನಿಲ್ಲಿಸಿ ಚಪ್ಪರ ಮಾಡಿ ಅದಕ್ಕೆ ಮಾವಿನ ತೋರಣ ಕಟ್ಟಿ, ಒಂದು ಹಿಡಿ ಬತ್ತದ ಪೈರನ್ನು ಒಟ್ಟುಕೂಡಿಸಿ ಅದಕ್ಕೆ ಬಳೆ-ಬಿಚ್ಚೋಲೆ ಮತ್ತು ತಾಳಿಯನ್ನು ತೊಡಿಸುತ್ತಾರೆ. ಅದರ ಮುಂದೆ ಕಳಸ ಇಟ್ಟು ಮಾಡಿದ ಎಲ್ಲಾ ಅಡುಗೆಗಳ ಎಡೆ ಇಟ್ಟು ಪೂಜಿಸುತ್ತಾರೆ. ಶಂಖ-ಜಾಗಟೆಯ ಸದ್ದು ಇಡೀ ಗದ್ದೆ ತುಂಬ ಮೊಳಗುತ್ತದೆ.

ಇಲ್ಲಿ ಇಲಿಗಳಿಗೂ ಎಡೆ ಉಂಟು! ಅಕಸ್ಮಾತ್ ಎಡೆ ಇಡದಿದ್ದರೆ ಅವು ಗದ್ದೆಯನ್ನೆಲ್ಲಾ ಕಡಿಯುತ್ತದೆಂದು ನಂಬಿಕೆ. ಇಲಿಗಳಲ್ಲದೆ ಕಾಗೆಗಳಿಗೂ ಎಡೆ ಹಾಕುತ್ತಾರೆ. ಕಾಗೆಗಳಿಗೆ ಎಡೆ ಇಟ್ಟು 'ಗುಳಿಯೋ ಬಾ ಗುಳಿಯೋ ಬಾ' ಎಂದು ಕೂಗುತ್ತಾರೆ. ಇದಾದ ನಂತರ ಭೂಮಿಗೆ ಮೀಸಲಾದ ಎಡೆಯನ್ನು ಗದ್ದೆಯ ಒಂದು ಮೂಲೆಯಲ್ಲಿ ಹೂಳುತ್ತಾರೆ. ಆ ಸ್ಥಳವನ್ನು ನೆನಪಿನಲ್ಲಿಟ್ಟುಕೊಂಡು ಕುಯಿಲಿನ ಸಮಯದಲ್ಲಿ ಇದನ್ನು ಈಚೆ ತೆಗೆದು ಸುಟ್ಟು ಬತ್ತ ತುಂಬುವ ಕಣಜಕ್ಕೆ ಹಾಕುತ್ತಾರೆ. ಹೀಗೆ ಮಾಡುವುದರಿಂದ ಕಣಜದಲ್ಲಿ ಸಂಗ್ರಹಿಸಿದ ಭತ್ತಕ್ಕೆ ಹುಳು ಬೀಳುವುದಿಲ್ಲವಂತೆ.

ಎಡೆ ಹಾಕುವ ಕ್ರಿಯೆಯ ನಂತರ ಗಂಡಸರು ಎಲ್ಲಾ ಬೆಳೆಗಳಿಗೂ ಹಚ್ಚಂಬ್ಲಿ ಎರಚಿಕೊಂಡು ಬರುತ್ತಾರೆ. ಪೂಜೆಯ ನಂತರ ಎಲ್ಲರೂ ಪರಸ್ಪರ ಕೈಗೆ ಕೆಂಪುದಾರ ಕಟ್ಟಿಕೊಳ್ಳುತ್ತಾರೆ. ಈ ದಾರವನ್ನು ಭತ್ತದ ಒಕ್ಕಣೆ ಸಂದರ್ಭದಲ್ಲಿ ತೆಗೆದು ಭತ್ತ ತುಳಿಸುವ ರೋಣುಗಲ್ಲಿಗೆ ಕಟ್ಟಬೇಕು. ಅಲ್ಲಿಯವರೆಗೆ ತೆಗೆಯುವಂತಿಲ್ಲ. ಅಷ್ಟೇ ಅಲ್ಲದೆ ಸಾವಿರ ಸೊಪ್ಪು ಬೇಯಿಸಿದ ಪಾತ್ರೆಯನ್ನು ದೀಪಾವಳಿಯ ಮರು ದಿನವೇ ತೊಳೆಯಬೇಕು. ಅಂದರೆ ಈ ಆಚರಣೆ ಕೇವಲ ಒಂದೆರದು ದಿವಸದ್ದಲ್ಲ. ಇದರ ವ್ಯಾಪ್ತಿ ಇಡೀ ಅರ್ಧ ವರ್ಷಕ್ಕೆ ಆವರಿಸಿಕೊಂಡಿರುತ್ತದೆ.

ಮಲೆನಾಡಿನ ಕುಣಬಿ ಜನಾಂಗದವರಲ್ಲಿ-ಹೊತ್ತು ಮೂಡುವ ಮುನ್ನವೇ ಗದ್ದೆಗೆ ಹಚ್ಚಂಬ್ಲಿ ಚೆಲ್ಲುವ ಪದ್ಧತಿ ಇದೆ.

ಪೂಜೆಯ ನಂತರ ಎಲ್ಲರೂ ಅಲ್ಲೇ ಊಟ ಮಾಡಿ ಮನೆಗೆ ಮರಳುತ್ತಾರೆ. ಮರಳಿದ ನಂತರ ಗಂಡಸರು ಸೋಬೇಟೆ ಆಡಲು ಕಾಡಿಗೆ ಹೊರಟರೆ ಹೆಂಗಸರು

ಮನೆಯಲ್ಲಿ ವಿವಿಧ ರೀತಿಯ ಆಟವಾಡುತ್ತಾ ವಿರಮಿಸುತ್ತಾರೆ. ಸಂಜೆಗೆ ಮಾಂಸದಡಿಗೆಯ ವಿಶೇಷ.

ಈ ಆಚರಣೆಯ ಸಂದರ್ಭದಲ್ಲಿ ಮಲೆನಾಡಿನಾದ್ಯಂತ ರಮಣೀಯ ವಾತಾವರಣ ವಿರುತ್ತದೆ. ಎಲ್ಲೆಲ್ಲೂ ಹಚ್ಚಹಸುರು, ಆಗೊಮ್ಮೆ-ಈಗೊಮ್ಮೆ ಹನಿಯುವ ಮಳೆ, ಎಳನೀರಿನಂತೆ ಶುಭ್ರವಾಗಿ ಹರಿಯುವ ನೀರು... ಇಂತಹ ಹೊತ್ತಲ್ಲಿ ಬೆಳ್ಳಂಬೆಳಿಗ್ಗೆ ಇಬ್ಬನಿ ಆರುವ ಮುಂಚೆಯೇ ನಡೆಯುವ ಭೂಮ್ತಾಯಿಗೆ ನಮಿಸುವ ಭೂಮಿಹುಣ್ಣಿಮೆ ಅತ್ಯಂತ ಅರ್ಥಪೂರ್ಣ ಆಚರಣೆ.

## ೩. ಮಕ್ಕಳ ಗುಡ್ಡೆ ಹುಣ್ಣಿಮೆ

ಮಲೆನಾಡಿನ ಕೆಲವು ಭಾಗದ ಹಳ್ಳಿಗಳಲ್ಲಿ ಮಕ್ಕಳೇ ಸೇರಿಕೊಂಡು ಆಚರಿಸುವ ವಿಶಿಷ್ಟ ಹಬ್ಬ 'ಗುಡ್ಡೆ ಹುಣ್ಣಿಮೆ'. ಉತ್ತಿ ಬಿತ್ತಿದ ಹೊಲಕ್ಕೆ ಕುಟುಂಬದ ಹಿರಿಯರು ಭೂಮಿ ಹುಣ್ಣಿಮೆಯ ಮೂಲಕ ಬಾಗಿನ ಅರ್ಪಿಸಿದಂತೆ ಗುಡ್ಡೆ ಅಥವಾ ಊರ ಹೊರಗಿನ ಬೇಣದ ಹುಲ್ಲಿಗೆ ಪೂಜೆ ಸಲ್ಲಿಸುವ ಪರಿ ಇದು. ಇದನ್ನು ಮಕ್ಕಳೇ ಆಚರಿಸುವುದು ವಿಶೇಷ. ಹೊಲದಲ್ಲಿ ನಡೆಯುವ ದೊಡ್ಡವರ ಭೂಮಿ ಹುಣ್ಣಿಮೆ ಹಬ್ಬದಲ್ಲಿ ಮಕ್ಕಳೂ ಇರುತ್ತಾರೆ. ಆದರೆ ಇಲ್ಲಿ ಮಕ್ಕಳೇ ತಮಗೆ ತಿಳಿದಂತೆ ಹಬ್ಬವನ್ನು ಆಚರಣೆ ಮಾಡುತ್ತಾರೆ.

ಹಬ್ಬದ ದಿನ ಬೆಳಿಗ್ಗೆ ಪ್ರತಿ ಮನೆಗೂ ಒಬ್ಬರಂತೆ ಮಕ್ಕಳು ಗುಂಪಾಗಿ ಸೇರಿ ಪೂಜೆಗೆ ಬೇಕಾಗುವ ಬಾಳೆ ಎಲೆ, ಸಣ್ಣ ಬಳೆ, ಹಬ್ಬದ ಅಡಿಗೆ, ಹೋಳಿಗೆ ಸೇರಿದಂತೆ ಇನ್ನಿತರ ವಸ್ತುಗಳನ್ನು ಸ್ವಲ್ಪ ಪ್ರಮಾಣದಲ್ಲಿ ಭುಮ್ಮಣಿ ಬುಟ್ಟಿಯಲ್ಲಿ ಹಾಕಿಕೊಂಡು ಹೊರಡುತ್ತಾರೆ. ಗ್ರಾಮಕ್ಕೆ ಹತ್ತಿರದ ಬೇಣಕ್ಕೆ ಹೊರಟು, ಅಲ್ಲಿ ಪೂಜೆ ನೆರವೇರಿಸಿ, ಬಾಗಿನ ಅರ್ಪಿಸಿ ಮಧ್ಯಾಹ್ನದ ಸುಮಾರಿಗೆ ಎಲ್ಲ ಮಕ್ಕಳೂ ಮನೆಗೆ ಹಿಂತಿರುಗುತ್ತಾರೆ.

ಗುಡ್ಡದ ಬಳಿ ಸಾಗುವ ಮಕ್ಕಳ ದಂಡು ಅಲ್ಲಿನ ಸಪಾಟಾಗಿರುವ ಸ್ವಲ್ಪ ಜಾಗವನ್ನು ಸ್ವಚ್ಛ ಮಾಡಿ ಮನೆಯಿಂದ ತಂದಿರುವ ಕಂಬಳಿಯನ್ನು ಸಾಲಾಗಿ ಹಾಸಿ ಎಲ್ಲರೂ ಕುಳಿತುಕೊಳ್ಳುತ್ತಾರೆ. ನಂತರ ಹುಲುಸಾಗಿ ಬೆಳೆದಿರುವ ಹುಲ್ಲಿಗೆ ವಿನಮ್ರವಾಗಿ ಪೂಜೆ ಸಲ್ಲಿಸುವ ಕಾರ್ಯ ಆರಂಭ. ಗುಡ್ಡೆಗೆ ಬಾಗಿನ ಅರ್ಪಿಸುವುದಕ್ಕೆ ನಾ ಮೊದಲು-ನೀ ಮೊದಲು ಎಂದು ಸ್ಪರ್ಧೆಯೇ ನಡೆಯುವುದು ಸಾಮಾನ್ಯ. ಪೂಜೆ ಮುಗಿಸಿದ ಮಕ್ಕಳು ತಾವು ಮನೆಯಿಂದ ತಂದಿದ್ದ ಅಡುಗೆ, ಹಣ್ಣು-ಹಂಪಲುಗಳನ್ನು ನಾಲ್ಕೈದು ಬಾಳೆ ಎಲೆಯಲ್ಲಿ ಹಾಕಿ (ಎಡೆ) ಸಾಲಾಗಿ ಇಡುತ್ತಾರೆ. ತೆಂಗಿನ ಕಾಯಿ ಒಡೆದು

ಎಲ್ಲರೂ ಕೈ ಮುಗಿದರೆ ಅಲ್ಲಿಗೆ ಗುಡ್ಡೆಗೆ ಬಾಗಿನ ಅರ್ಪಿಸುವ ಸಂಪ್ರದಾಯ ಮುಗಿದಂತೆ. ಇದಾದ ನಂತರ ಹಾಕಿದ ಎಡೆಯನ್ನು ಊಟ ಮಾಡುವುದು ನಡೆಯುತ್ತದೆ.

ಈ ಗುಡ್ಡೆ ಹುಣ್ಣಿಮೆಗೆ ದೊಡ್ಡವರ ಸಂಪರ್ಕವೇ ಇರದು. ಆಚರಣೆಯ ಮೊದಲಿನಿಂದ ಹಿಡಿದು ಕೊನೆಯ ತನಕವೂ ಮಕ್ಕಳದೇ ಜವಾಬ್ದಾರಿ, ಮಾರ್ಗದರ್ಶಕರೂ ಅವರೇ, ಮಾಡುವವರೂ ಅವರೇ. ಇದೆಲ್ಲಾ ಮುಗಿದ ನಂತರ ಸಣ್ಣ ರಂಪಾಟ ಮಾಡಿಕೊಂಡು ಮನೆಗೆ ಮರಳುತ್ತದೆ ಈ ಮಕ್ಕಳ ದಂಡು. ಬಹುಶಃ ತಮ್ಮ ದನ, ಎಮ್ಮೆ ಮುಂತಾದ ಜಾನುವಾರುಗಳಿಗೆ ಸದಾ ಹಚ್ಚ ಹಸುರಾದ ಮೇವುಣಿಸುವ ಗುಡ್ಡವನ್ನು ಗೌರವಿಸುವ ಸಲುವಾಗಿ ಈ ಆಚರಣೆ ಬೆಳೆದು ಬಂದಿರಬಹುದು.

## ೪. ತುಳು ನಾಡಿನ ಕೆಡ್ವಾಸ

ಕೆಡ್ವಾಸ ಎಂಬುದು ತುಳುನಾಡಿನವರ ಭೂಮಿ ಪೂಜೆ. ನಮ್ಮ ರಾಜ್ಯದ ಪಶ್ಚಿಮ ದಿಕ್ಕಿನಲ್ಲಿ ಅರಬ್ಬೀ ಸಮುದ್ರದ ಕರಾವಳಿಗೆ ಚಾಚಿಕೊಂಡಿರುವ ಪ್ರದೇಶವೇ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳು. ಇಲ್ಲಿನ ಬಹುತೇಕ ಜನಪದರ ಮಾತೃ ಭಾಷೆ ತುಳು. ಹಾಗಾಗಿ ಈ ಪ್ರದೇಶಕ್ಕೆ ಮುಂಚಿನಿಂದಲೂ ತುಳುನಾಡು ಎಂಬ ಮತ್ತೊಂದು ಹೆಸರಿನಿಂದಲೂ ಕರೆಯುತ್ತಾರೆ. ಈ ತುಳು ನಾಡಿನ ಸಂಸ್ಕೃತಿ ಅತ್ಯಂತ ವಿಶಿಷ್ಟವಾದದ್ದು, ಇಲ್ಲಿನ ಕೃಷಿಕರಲ್ಲಿ ಹತ್ತು ಹಲವು ಅಪರೂಪದ ಬೇಸಾಯ ಸಂಬಂಧಿ ಆಚರಣೆಗಳನ್ನು ಕಾಣಬಹುದು. ಅವುಗಳಲ್ಲಿ ಅತ್ಯಂತ ಮುಖ್ಯವಾದದ್ದು ಕೆಡ್ವಾಸ. *(ಈ ಪುಸ್ತಕದ ಬೇರೆ-ಬೇರೆ ಅಧ್ಯಾಯಗಳಲ್ಲಿ ತುಳುನಾಡಿನ ಇನ್ನಿತರೆ ಕೃಷಿ ಆಚರಣೆಗಳ ಮಾಹಿತಿಯನ್ನು ನೀಡಲಾಗಿದೆ.)*

ಕೆಡ್ವಾಸ ಆಚರಣೆಯಲ್ಲಿ ಹೆಣ್ಣು ಮಕ್ಕಳದೇ ಪ್ರಧಾನ ಪಾತ್ರ, ಅವರು ಹೊತ್ತು ಮೂಡುವ ಮುನ್ನ ಅಂಗಳವನ್ನು ಸಾರಿಸಿ ಸ್ವಚ್ಛಗೊಳಿಸಿ ಅಲ್ಲಿ ಮೊರದಗಲದ ವೃತ್ತವೊಂದನ್ನು ಬರೆಯುತ್ತಾರೆ. ಆ ವೃತ್ತಕ್ಕೆ ಸರೋಳಿ, (ಒಂದು ರೀತಿಯ ಮರ) ಮಾವಿನ ಚಿಗುರು, ಹಲಸಿನ ಚಿಗುರುಗಳನ್ನಿಟ್ಟು ಮಣ್ಣಿನ ದೀಪ ಹಚ್ಚಿಡುತ್ತಾರೆ. ಕೆಡ್ವಾಸದ ಮೂರು ದಿನ ಭೂಮಿ ತಾಯಿ ಬ್ರಹಿಷ್ಠೆಯಾಗಿರುತ್ತಾಳೆಂಬ ನಂಬಿಕೆಯಿಂದ ಭೂಮಿಯ ಉಳುಮೆಯಾಗಲೀ, ಅಗೆತವಾಗಲೀ ಮಾಡುವುದಿಲ್ಲ. ಅಷ್ಟೇ ಅಲ್ಲದೆ ಗಿಡ-ಮರಗಳನ್ನೂ ಸಹ ಕಡಿಯುವಂತಿಲ್ಲ. ಕೆಡ್ವಾಸದ ಸಂದರ್ಭದಲ್ಲಿ ನನ್ನೆರಿ ಅಕ್ಕಿ ಎಂಬ ವಿಶಿಷ್ಟ ಅಡುಗೆಯನ್ನು ತಯಾರಿಸುತ್ತಾರೆ.

ಭೂಮಿ ಮತ್ತು ರೈತನ ಸಂಬಂಧವನ್ನು ಗಟ್ಟಿಗೊಳಿಸುವ ಭೂಮಿ ಕುರಿತಾದ ಆಚರಣೆಗಳು ಒಟ್ಟಾರೆ ಕೃಷಿ ಆಚರಣೆಗಳ ಪೈಕಿ ಅತ್ಯಂತ ಪ್ರಮುಖವಾದವು. ❑

## ಅಧ್ಯಾಯ ಮೂರು

# ಬೆಳೆಯ ಸಿರಿ

### ಬೆಳೆ ಸಂಬಂಧಿ ಆಚರಣೆಗಳು

*ರೈತರು ನೆಲಕ್ಕೆ ಬೀಜ ಬಿತ್ತುವುದರಿಂದ ಹಾಗೂ ಸಸಿ ಮಡಿ ಹಾಕುವುದರಿಂದ ಮೊದಲುಗೊಂಡು ಬೆಳೆ ಕುಯಿಲಾಗುವ ತನಕ ಹೊಲದಲ್ಲಿ ವಿವಿಧ ರೀತಿಯ ಬೆಳೆ ಸಂಬಂಧಿ ಆಚರಣೆಗಳನ್ನು ನೆರವೇರಿಸುತ್ತಾರೆ. ಬೆಳೆಯ ವಿವಿಧ ಹಂತಗಳಲ್ಲಿ ಇವು ಜರುಗುತ್ತವೆ. ಇವುಗಳ ಉದ್ದೇಶ ಸ್ಪಷ್ಟ, ಮಾಡಿದ ಆರಂಬ ಕೈ ಹತ್ತಲಿ, ಬಿತ್ತಿದ ಬೀಜ ಮೊಳೆಯಲು ಯಾವುದೇ ಆತಂಕ ಅಡ್ಡಿಯಾಗದಿರಲಿ, ಬೆಳೆದ ಪೈರಿಗೆ ಕೀಟ- ರೋಗಾದಿಗಳ ಬಾಧೆ ತಗುಲದಿರಲಿ, ಅದರ ಹಸುರಿಗೆ ನೋಡುಗರ ಕಣ್ಣೆಸರು ತಾಗದಿರಲಿ ಮುಂತಾದ ಕಾರಣಗಳಿಂದ ಇವುಗಳನ್ನು ಆಚರಿಸಲಾಗುತ್ತದೆ.*

## ೧. ಕಾರಬ್ಬ

ದಕ್ಷಿಣ ಕರ್ನಾಟಕದ ರೈತಾಪಿಗಳಲ್ಲಿ ಆಚರಿಸಲ್ಪಡುವ ಬಹುಮುಖ್ಯವಾದ ಆಚರಣೆ. ಇದು ತುಂಬಾ ಸರಳವಾಗಿ ಆಚರಿಸಲ್ಪಡುವ ಕ್ರಿಯೆ. ಆದರೆ ಈ ಆಚರಣೆಯೇ ನಿರ್ದಿಷ್ಟ ವರ್ಷದ ಬೇಸಾಯದ ಕೆಲಸಗಳಿಗೆ ಮುನ್ನುಡಿ. ಗೊಲ್ಲ ಸಮುದಾಯಗಳಲ್ಲಿ ವಿಶೇಷವಾಗಿ ಕಾಣಬಹುದು. ಸಾಮಾನ್ಯವಾಗಿ ಮೃಗಶಿರ, ಆರಿದ್ರಾ ಮಳೆಗಳ ಸಂದರ್ಭದಲ್ಲಿ ಕಾರಬ್ಬವನ್ನು ಆಚರಿಸಲಾಗುತ್ತದೆ. ರಾಗಿ ಅಥವಾ ಭತ್ತದ ಸಸಿ ಮಡಿ (ಒಟ್ಲು ಬಿಡುವುದು) ಹಾಕುವ ಮುನ್ನ ಇದನ್ನು ಆಚರಿಸುವುದು ವಾಡಿಕೆ.

ಸಸಿ ಮಡಿ ಹಾಕುವ ದಿವಸದ ಬೆಳಿಗ್ಗೆ ಕರಿನ ಸೊಪ್ಪನ್ನು ತಂದು ತೋರಣ ಮಾಡಿ ಬಾಗಿಲಿಗೆ ಕಟ್ಟುತ್ತಾರೆ. ಕರಿನ ಸೊಪ್ಪೆಂದರೆ ಮಾವು, ಬೇವು ಮತ್ತು ಲಕ್ಕಿ – ಈ ಮೂರು ಸೊಪ್ಪುಗಳ ಸಂಗ್ರಹ. ಬೇಸಾಯದ ಸಲಕರಣೆಗಳಾದ ನೇಗಿಲು ನೊಗ ಮೇಣಿ ಇತ್ಯಾದಿ ಮುಟ್ಟುಗಳನ್ನೆಲ್ಲಾ ತೊಳೆದು ಅವುಗಳಿಗೆ ಸುಣ್ಣ-ಕೆಮ್ಮಣ್ಣು ಹಚ್ಚಿ, ಅಂಗುನೂಲು (ಹರಿಶಿನದ ದಾರ) ಕಟ್ಟಿ, ಎಡೆಹಾಕಿ ಪೂಜಿಸುತ್ತಾರೆ. ಎತ್ತು-ಕರಗಳಿಗೂ ಮೈತೊಳೆದು ಅವುಗಳ ಹಣೆಗೆ, ಗೋಪುರಕ್ಕೆ, ಮುಂಗೊರಸಿಗೆ ಅಕ್ಷತೆ (ಅಕ್ಕಸ್ತೆ) ಇಟ್ಟು, ಕೊರಳಿಗೆ ಅಂಗುನೂಲು ಕಟ್ಟಿ ಎಡೆ ತಿನ್ನಿಸುತ್ತಾರೆ. ಅದೇ ದಿನ ಸಾಯಂಕಾಲ ಮನೆಯಲ್ಲಿ



ಹೊಲದಲ್ಲಿ ಬೆನಕನ ಕಲ್ಲಿಗೆ ಪೂಜೆ

ಕುಕ್ಕೆಯೊಂದಕ್ಕೆ (ಬಿದಿರಿನಲ್ಲಿ ಮಾಡಿದ ಬುಟ್ಟಿ) ಬಿತ್ತನೆ ರಾಗಿ ತೋಡಿಕೊಂಡು, ನಡುಮನೆಯಲ್ಲಿ ನೆಲ ಸಾರಿಸಿ ರಂಗೋಲಿ ಬಿಡಿಸಿದ ಜಾಗದಲ್ಲಿ ಆ ಬುಟ್ಟಿಯನ್ನು ಇಟ್ಟು ಅದಕ್ಕೂ ಸಹ ಅಂಗುನೂಲು, ಅಕ್ಷತ್ತೆ ಇಟ್ಟು, ವಿಭೂತಿ ಧರಿಸಿ ಕುಕ್ಕೆ ಸಮೇತ ಹೊಲಕ್ಕೆ ತೆಗೆದುಕೊಂಡು ಹೋಗಿ ರಾಗಿ ಒಟ್ಲು ತೊಳೆಯುತ್ತಾರೆ.

**ಶೆಟ್ಟಿಕೆರೆಯ ವಿಶೇಷ ಕಾರಬ್ಬ:** ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಶೆಟ್ಟಿಕೆರೆಯಲ್ಲಿ ನಡೆಯುವ ಕಾರಬ್ಬ ವಿಶೇಷವಾದುದು. ಆ ವರ್ಷ ಯಾವ ಬೆಳೆ ಹುಲುಸಾಗುತ್ತದೆ, ಯಾವ ಬೆಳೆ ಚೆನ್ನಾಗಿ ಹುಲುಸುವರಿಯುವುದಿಲ್ಲ ಎಂಬುದನ್ನು ಇಲ್ಲಿ ನಡೆಯುವ ಧಾನ್ಯದ ಗಡಿಗೆ ಒಡೆಯುವ ಕ್ರಿಯೆಯ ಮೂಲಕ ರೈತಾಪಿಗಳು ತಿಳಿಯುತ್ತಾರೆ. ಹಳ್ಳಿಗರು ಕಾರಬ್ಬ ಮಾಡಿದ ಮರುದಿವಸ ಮೂಲಾ ನಕ್ಷತ್ರದಂದು ಇಲ್ಲಿ ಕಾರಬ್ಬ ನಡೆಯುತ್ತದೆ.

ಅಂದು ಊರಿನ ಸಕಲಾದಿ ಜನರೂ ಮತ್ತು ಸುತ್ತ-ಮುತ್ತಲ ಗ್ರಾಮಗಳ ಒಕ್ಕಲುಗಳೂ ಶೆಟ್ಟಿಕೆರೆಯ ಆಂಜನೇಯ ದೇವಾಲಯದ ಬಳಿ ಸೇರಿರುತ್ತಾರೆ. ಒಂದು ಮಣ್ಣಿನ ಗಡಿಗೆಯಲ್ಲಿ (ಕರಗ) ತಾವು ಬೆಳೆಯುವ ಸಕಲ ಧಾನ್ಯಗಳನ್ನೂ ಒಂದೊಂದು ಹಿಡಿಯಷ್ಟು ತುಂಬಿ ಆ ಗಡಿಗೆಗೆ ಕರಿನ ಸೊಪ್ಪು, ಅಂಗುನೂಲು, ಅಕ್ಷತೆಗಳನ್ನಿಟ್ಟು ಪೂಜಿಸುತ್ತಾರೆ. ಹೀಗೆ ಪೂಜಿಸಿದ ನಂತರ ಎಲ್ಲರ ಅಪ್ಪಣೆ ಪಡೆದು ಪೂಜಾರಪ್ಪನು ಅಥವಾ ನಿಗದಿತ ವ್ಯಕ್ತಿಯು ಆ ಧಾನ್ಯ ತುಂಬಿದ ಕರಗವನ್ನು ಜೋಡೇತ್ತಿನ ನೇಗಿಲಿನಿಂದ ಹೊಡೆಯುತ್ತಾನೆ.

ಹಾಗೆ ಹೊಡೆದ ರಭಸಕ್ಕೆ ಒಳಗಿನ ಧಾನ್ಯಗಳೆಲ್ಲಾ ದೂರಕ್ಕೆ ಚಲ್ಲಾಡುತ್ತವೆ. ಹೀಗೆ ಚೆಲ್ಲಿದ ಧಾನ್ಯಗಳಲ್ಲಿ ಯಾವುದು ಎಲ್ಲಕ್ಕಿಂತ ಮುಂದೆ ಬಿದ್ದಿರುತ್ತದೆಯೋ ಆ ಧಾನ್ಯ ಈ ವರ್ಷ ಉತ್ತಮ ಫಸಲು ಕೊಡುತ್ತದೆಂದು ಅಭಿಪ್ರಾಯ ಪಡುತ್ತಾರೆ. ಅಲ್ಲದೆ ಮುಂಗಾರು ಒಳ್ಳೆಯದೋ ಅಥವಾ ಹಿಂಗಾರು ಒಳ್ಳೆಯದೋ ಎಂಬುದನ್ನೂ ಸಹ ಈ ಆಚರಣೆ ಯಲ್ಲಿಯೇ ತಿಳಿಯುತ್ತಾರೆ. ಅಂದರೆ ಕರಗ ಹೊಡೆದಾಗ ಕಾಳುಗಳು ಮುಂದೆ ಬಿದ್ದಿದ್ದರೆ ಹಿಂಗಾರು ಒಳ್ಳೆಯದು ಮತ್ತು ರಾಗಿ ಮುಂದೆ ಬಿದ್ದಿದ್ದರೆ ಮುಂಗಾರು ಒಳ್ಳೆಯದು ಎಂದರ್ಥ.

## ೨. ಕೂರಿಗೆ ಪೂಜೆ

ಕೂರಿಗೆಯು ಬೀಜ ಬಿತ್ತನೆಗೆ ಬಳಸುವ ಒಂದು ಪ್ರಮುಖ ಉಪಕರಣ. ರಾಗಿ, ಜೋಳ, ಅಕ್ಕಡಿ ಕಾಳುಗಳು ಮುಂತಾದವನ್ನು ಸಾಲು ಬಿತ್ತನೆ ಮಾಡಲು ಕೂರಿಗೆಯನ್ನು ಬಳಸುತ್ತಾರೆ, ಇದು ಮುಖ್ಯವಾಗಿ ದಕ್ಷಿಣ ಮತ್ತು ಉತ್ತರ ಕರ್ನಾಟಕ ಭಾಗದಲ್ಲಿ ಚಾಲ್ತಿಯಲ್ಲಿದೆ. ಐದು ಮತ್ತು ಏಳು ತಾಳುಗಳುಳ್ಳ, ಅಂದರೆ ಐದು ಮತ್ತು ಏಳು ಸಾಲು ಬಿತ್ತುವ ಕೂರಿಗೆಗಳಿವೆ, ಕೂರಿಗೆಯ ದಿಂಡನ್ನು ಗಟ್ಟಿ ಮರದಲ್ಲಿ ಮಾಡಿದ್ದರೆ ಕೊಳವೆಗಳನ್ನು ಬಿದಿರಿನಲ್ಲಿ ಮಾಡಿರುತ್ತಾರೆ.

ಸಾಮಾನ್ಯವಾಗಿ ದಕ್ಷಿಣ ಕರ್ನಾಟಕದಲ್ಲಿ ರಾಗಿ ಬಿತ್ತುವ ದಿವಸ ಹಾಗೂ ಉತ್ತರ ಕರ್ನಾಟಕದಲ್ಲಿ ಜೋಳ ಬಿತ್ತುವ ದಿವಸ ಕೂರಿಗೆ ಪೂಜೆ ಮಾಡುವುದು ರೂಢಿ. ಎರಡೂ ಪ್ರದೇಶಗಳಲ್ಲಿನ ಆಚರಣೆಯ ಉದ್ದೇಶ ಒಂದೇ ಆದರೂ ಸಹ ಮಾಡುವ ರೀತಿಯಲ್ಲಿ ತುಸು ವ್ಯತ್ಯಾಸವಿದೆ.

ದಕ್ಷಿಣದಲ್ಲಿ ಒಂದು ಕುಟುಂಬಕ್ಕೆ ಸೀಮಿತವಾದ ಆಚರಣೆಯಾಗಿದ್ದು ಕೆಳಗೆ ವಿವರಿಸಿದ ರೀತಿ ಕೂರಿಗೆ ಪೂಜೆ ನಡೆಯುತ್ತದೆ.

ಬಿತ್ತನೆಗೆ ಸೂಕ್ತ ಹದವಿರುವ ದಿನ ಜನ–ಜಾನುವಾರು–ಬಿತ್ತನೆ ಸಮೇತ ಹೊಲಕ್ಕೆ ಹೋಗುತ್ತಾರೆ. ಅಲ್ಲಿ ಕೂರಿಗೆಗೆ ಎತ್ತುಗಳನ್ನು ಹೂಡಿ ನಿಲ್ಲಿಸಿ, ಮನೆ ಹೆಣ್ಣು ಮಗಳು ಎತ್ತುಗಳಿಗೆ ಹಾಗೂ ಕೂರಿಗೆಗೆ ಅರಿಶಿನ ಕುಂಕುಮ ಇಟ್ಟು, ಕೈಗಳನ್ನು ಕಣ್ಣಿಗೆ ಮುಟ್ಟಿಸಿ ನಮಾಡಿಕೊಂಡು ರಾಗಿ ಬಿತ್ತಲು ನಿಂತವರ ಮಡಿಲಿಗೆ ಮೂರು ಬೊಗಸೆ ಬಿತ್ತನೆಯನ್ನು ಹಾಕುತ್ತಾಳೆ. ರಾಗಿ ಬಿತ್ತುವ ವ್ಯಕ್ತಿ ಸೊಂಟಕ್ಕೆ ರಾಗಿ ತುಂಬುವ ಜೋಳಿಗೆಯನ್ನು ಕಟ್ಟಿಕೊಂಡಿರುತ್ತಾರೆ. ಆ ಜೋಳಿಗೆಯಲ್ಲಿ ವಿವಿಧ ಪದರಗಳಿದ್ದು ಅದರಲ್ಲಿ ಒಂದರಲ್ಲಿ ರಾಗಿ, ಉಳಿದವುಗಳಲ್ಲಿ ಅವರೆ, ತೊಗರಿ, ಹುರುಳಿ ಇತ್ಯಾದಿ ಅಕ್ಕಡಿ ಕಾಳುಗಳನ್ನು ಹಾಕಿಕೊಂಡಿರುತ್ತಾರೆ. ಹೆಣ್ಣುಮಗಳು ಮೂರು ಬೊಗಸೆ ಬಿತ್ತನೆಯನ್ನು ಹಾಕಿದ ನಂತರ ಒಳ್ಳೇದಾಗ್ಲಿ ಎಂದು ಉದ್ಘರಿಸುವುದರೊಂದಿಗೆ ಬಿತ್ತನೆ ಪ್ರಾರಂಭವಾಗುತ್ತದೆ.

ಉತ್ತರದಲ್ಲಿ ಈ ಆಚರಣೆಯ ರೀತಿ ಸ್ವಲ್ಪ ಭಿನ್ನ. ಅಲ್ಲಿ ಇದೊಂದು ಸಾಮುದಾಯಿಕ ಕ್ರಿಯೆ. ಅವರು ಕೂರಿಗೆಯನ್ನು ಮನೆಯಲ್ಲಿಯೇ ಇಟ್ಟು ಪೂಜಿಸಿ ನಂತರ ಹೊಲಕ್ಕೆ ತೆಗೆದುಕೊಂಡು ಹೋಗಿ ಬಿತ್ತಲು ಪ್ರಾರಂಭಿಸುತ್ತಾರೆ, ಅಲ್ಲದೆ ಈ ಪೂಜೆಗೆ ಊರಿನ ಹಿರಿ-ಕಿರಿಯರನ್ನು ಪ್ರಸಾದಕ್ಕೆ ಬರಹೇಳುವುದು ರೂಢಿ. ವಿಶೇಷ ಅಡುಗೆಗಳನ್ನು ಮಾಡಿ ಬಂದವರಿಗೆ ನೀಡುತ್ತಾರೆ. ಬೆಳೆ ಉತ್ತಮವಾಗಿ ಬರಬೇಕಾದರೆ ಬೀಜ ಬಿತ್ತನೆ ಸಾವಕಾಶವಾಗಿ, ಸಮರ್ಪಕವಾಗಿ, ಹೊಲದ ನಾಲ್ಕೂ ಮೂಲೆಗೆ ಒಂದೇ ಪ್ರಮಾಣದಲ್ಲಿ ಬೀಳಬೇಕು. ಹಾಗೆ ಬೀಜ ಬೀಳಬೇಕಾದರೆ ಬಿತ್ತುವ ಹತಾರ, ಅಂದರೆ ಕೂರಿಗೆ ಸರಿಯಾಗಿರಬೇಕು. ಹೀಗಾಗಿ ಆ ಕೂರಿಗೆ ಸರಿಯಾಗಿದೆಯೋ ಇಲ್ಲವೋ ಎಂದು ಪರೀಕ್ಷಿಸುವ ಸಲುವಾಗಿ ಕೂರಿಗೆ ಪೂಜೆಯನ್ನು ಮಾಡುತ್ತಾರೆ. ಪೂಜೆಯ ನೆಪದಲ್ಲಿ ಕೂರಿಗೆಯನ್ನು ಬಿಚ್ಚಿ ಅದರ ಕೊಳವೆಗಳು, ಕೊಳವೆಯ ರಂಧ್ರಗಳು ಸರಿಯಾಗಿವೆಯೋ, ಸದೃಢವಾಗಿವೆಯೋ ಎಂದು ನೋಡಲಾಗುತ್ತದೆ. ಒಂದು ವೇಳೆ ದೋಷವೇನಾದರೂ ಕಂಡು ಬಂದರೆ ಬಡಗಿಯನ್ನು ಕರೆಸಿ ಸರಿಪಡಿಸಲಾಗುತ್ತದೆ ಅಥವಾ ಮನೆಯವರೇ ಸರಿಪಡಿಸುತ್ತಾರೆ. ನಂತರ ಕೂರಿಗೆ ಪೂಜೆಗೆ ಅಣಿಯಾಗುತ್ತಾರೆ.

ಮನೆಯ ಪಡಸಾಲೆಯಲ್ಲಿ ಕಂಬಳಿ ಅಥವಾ ಬಟ್ಟೆಯನ್ನು ಹಾಸಿ ಕೂರಿಗೆಯ ನ್ನಿಡುತ್ತಾರೆ. ಅದರ ಈಚು ಅಥವಾ ದಂಡಿಗೆಗಳಿಗೆ ಹೂವಿನ ಮಾಲೆಗಳನ್ನು ಹಾಕಿ, ದಿಂಡು ಮತ್ತು ಮೇಣಿಗೆ ಸೇರಿಸಿ ಸೀರೆ ಉಡಿಸುತ್ತಾರೆ, ಕುಪ್ಪಸ ತೊಡಿಸುತ್ತಾರೆ. ಕೂರಿಗೆಯ ಕೊಳವೆಯ ಭಾಗಕ್ಕೆ ಉಡಿಚೀಲವನ್ನು ಕಟ್ಟಿ ಅದಕ್ಕೆ ಬಿತ್ತನೆ ಜೋಳವನ್ನು ಹಾಕುತ್ತಾರೆ. ಕೆಲವರು ಚಿನ್ನದ ಆಭರಣವನ್ನೂ ಸಹ ಕಟ್ಟುವುದುಂಟು. ಹೀಗೆ ಅಲಂಕರಿಸಿದ ಕೂರಿಗೆಗೆ ಹಿರಿಯರಿಂದ ಪೂಜೆ ಸಲ್ಲಿಸಲಾಗುತ್ತದೆ. ನಂತರ ದಿವಿನಾದ ಊಟ. ಊಟಕ್ಕೆ ಅವರವರ ಇಷ್ಟಾನುಸಾರ ಭಕ್ಷ್ಯಗಳಿರುತ್ತವೆ. ಸಾಮಾನ್ಯವಾಗಿ ಜೋಳ ಮತ್ತು ಸಜ್ಜೆಯ ಕಡುಬು, ಶೇಂಗಾ ಹೋಳಿಗೆ, ಎಣ್ಣೆಗಾಯಿ ಬದನೆಕಾಯಿ, ಅಗಸಿ ಚಟ್ನಿ, ಉಳ್ಳಾಗಡ್ಡಿ ಚಟ್ನಿ, ವಿವಿಧ ರೀತಿಯ ಪಲ್ಯಗಳು ಇರುವುದು ವಾಡಿಕೆ.

ಉತ್ತಮ ಫಸಲಿಗೆ ಉತ್ತಮ ಬಿತ್ತನೆಯೇ ಮೂಲ ಎಂಬುದನ್ನು ಅನುಭವದಿಂದ ತಿಳಿದಿರುವ ರೈತರು ಈ ಆಚರಣೆಯ ಮೂಲಕ ವಿಧಿವತ್ತಾಗಿ ಅದನ್ನು ನೆರವೇರಿಸುತ್ತಾರೆ.

## ೩. ಕೊಡಗಿನ ಹುತ್ತರಿ

ರಾತ್ರಿ ಎಂಟೂವರೆಯ ಸಮಯ, ಹುಣ್ಣಿಮೆ ಬೆಳದಿಂಗಳು ಎಲ್ಲೆಲ್ಲೂ ಹರಡಿದ ತಣ್ಣನೆಯ ವಾತಾವರಣ. ಡಿಸೆಂಬರ್ ತಿಂಗಳ ಕೊರೆ ಬೀಳುವ ಕಾಲ. ಕೊಡಗಿನಲ್ಲಿ ಭತ್ತದ ಹೊಲಗಳು ಹಾಲುದುಂಬಿ ತೆನೆಗಟ್ಟುವ ಸಮಯ. ಇಂತಹ ಸಂದರ್ಭದಲ್ಲಿ ಕೊಡಗಿನಾದ್ಯಂತ ಹುತ್ತರಿ ಹಬ್ಬದ ಸಂಭ್ರಮ. ಕೊಡವರಿಗೆ ಹುತ್ತರಿ ದೀಪಾವಳಿಗಿಂತಲೂ

ಮಿಗಿಲಾದ ಹಬ್ಬ. ಬಯಲು ಸೀಮೆಯವರಿಗೆ ಸಂಕ್ರಾಂತಿ ಸುಗ್ಗಿಯ ಆಚರಣೆಯಾದರೆ ಹುತ್ತರಿ ಕೊಡವರಿಗೆ ಸುಗ್ಗಿಯ ಕ್ಷಣ.

ಕೊಡವರಿಗೆ ಹುತ್ತರಿ ಹಬ್ಬ ಬಂತೆಂದರೆ ಹೊಸ ಸೊಸೆ ಮನೆ ತುಂಬಿದಷ್ಟೇ ಸಂಭ್ರಮ. ಹುಣ್ಣಿಮೆಯ ಪರಿಶುಭ್ರ ಬೆಳಕಿನಲ್ಲಿ, ಶುಭ ಸಂದರ್ಭವನ್ನು ನೋಡಿ ಈಡು ಹಾರಿಸುತ್ತಾ, ಪಟಾಕಿ ಸಿಡಿಸುತ್ತಾ ಭತ್ತದ ಕದಿರು ಕೊಯ್ಯುವುದರೊಂದಿಗೆ ಆಚರಿಸಲಾಗುವ ಹುತ್ತರಿ ಕೊಡವರ ಕೌಟುಂಬಿಕ ಪ್ರೀತಿ ಮತ್ತು ಸೌಹಾರ್ದತೆಯ ಸಂಕೇತ. ಹುತ್ತರಿ ಕೊಡವರ ನಾಡಹಬ್ಬವೆಂದೇ ಪ್ರಚಲಿತ. ಚಿಕ್ಕ ಮಕ್ಕಳಿಂದ ಮೊದಲ್ಗೊಂಡು ವಯೋ ವೃದ್ಧರವರೆಗೆ ಪ್ರತಿಯೊಬ್ಬರೂ ಪಾಲ್ಗೊಂಡು ಆಚರಿಸಲ್ಪಡುವ ಹುತ್ತರಿ ಕ್ಯಾಲೆಂಡರುಗಳಲ್ಲಿ ಸ್ಥಾನ ಪಡೆದಿರುವ ಬೆರಳೆಣಿಕೆಯ ಆಚರಣೆಗಳಲ್ಲೊಂದು. ಎಲ್ಲಾ ಪ್ರಮುಖ ಕ್ಯಾಲೆಂಡರುಗಳಲ್ಲಿ ಹುತ್ತರಿ ನಡೆಯುವ ದಿನಾಂಕವನ್ನು ಗಮನಿಸಬಹುದು. (ಡಿಸೆಂಬರ್ ತಿಂಗಳಿನಲ್ಲಿ)



ಸಾಂಪ್ರದಾಯಿಕ ಹುತ್ತರಿ (ಚಿತ್ರ : ಅನಿಲ್ ಹೆಚ್.ಟಿ.)

ಕೊಡವ ಭಾಷೆಯಲ್ಲಿ ಪುತ್ತರಿ (ಪುದಿಯ –ಅಕ್ಕಿ– ಹೊಸ ಅಕ್ಕಿ) ಎಂದು ಕರೆಯಲ್ಪಡುವ ಈ ಹಬ್ಬಕ್ಕೆ ಕನ್ನಡದಲ್ಲಿ ಹುತ್ತರಿ ಎಂದು ಕರೆಯುತ್ತಾರೆ. ಹಾಗೆಂದರೆ ಈಗಾಗಲೇ ಹೇಳಿದಂತೆ ಹೊಸ ಅಕ್ಕಿ ಎಂದರ್ಥ. ಹುತ್ತರಿ ಹಬ್ಬವು ಧಾನ್ಯ ಲಕ್ಷ್ಮಿಯನ್ನು

ಮನೆಗೆ ಬರಮಾಡಿಕೊಳ್ಳುವ ಒಂದು ವಿಧಾನ. ಅಂದರೆ ಭತ್ತದ ಕದಿರುಗಳನ್ನು ಕಡಿದು ತಂದು ಶಾಸ್ತ್ರೋಕ್ತವಾಗಿ ಮನೆತುಂಬಿಸಿಕೊಳ್ಳಲಾಗುತ್ತದೆ.

ಹಬ್ಬದ ದಿನ ಬೆಳಿಗ್ಗೆ ಪ್ರತಿ ಮನೆ-ಮನೆಯ ಕಿಟಕಿ ಬಾಗಿಲುಗಳು ಮಾವಿನ ತೋರಣ, ಚೆಂಡು ಹೂವಿನ ಮಾಲೆಗಳಿಂದ ಅಲಂಕೃತಗೊಳ್ಳುತ್ತವೆ. ಸಂಜೆ ಪೂರ್ವ ದಿಕ್ಕಿನಲ್ಲಿ ಚಂದ್ರ ಉದಯವಾಗುತ್ತಿದ್ದಂತೆ ಹುತ್ತರಿಯ ಆಚರಣೆಗೆ ರಂಗೇರುತ್ತದೆ. ನೆಲ್ಲಕ್ಕಿ ಬಾಡೆಯಿಂದ ಇದು ಪ್ರಾರಂಭವಾಗುತ್ತದೆ. ಕದಿರು ಕಡಿಯಲು ಹೋಗುವ ಈ ಸಂದರ್ಭದಲ್ಲಿ ಕುಲ ದೇವರಾದ ಇಗ್ಗುತಪ್ಪನಿಗೆ ನಮಿಸಿ ಈ ಶುಭ ಕಾರ್ಯದಲ್ಲಿ ಯಾವುದೇ ಅಡ್ಡಿ ಆತಂಕಗಳು ಎದುರಾಗದಂತೆ ಕಾಪಾಡು ಎಂದು ಬೇಡಿಕೊಳ್ಳಲಾಗುತ್ತದೆ.

ಈ ಹಬ್ಬದ ಆಚರಣೆಗೆ ಕೊಡವರು ತಮ್ಮ ಸಾಂಪ್ರದಾಯಿಕ ಉಡುಪು ಧರಿಸುತ್ತಾರೆ. ಅ ಉಡುಪಿನ ಜೊತೆಗೆ ಸೊಂಟಕ್ಕೆ ರೇಷ್ಮೆಯ ನಡುಪಟ್ಟಿ ಕಟ್ಟಿ ಅದರೊಳಕ್ಕೆ ಕತ್ತಿ ಸಿಗಿಸಿ ಮನೆಯ ಯಜಮಾನರಾದವರು ನೆಲ್ಲಕ್ಕಿ ಬಾಡೆಯಲ್ಲಿರುವ ಬೆಳಗುವ ದೀಪಕ್ಕೆ ಕೈಜೋಡಿಸಿ ನಮಿಸುತ್ತಾರೆ. ನಂತರ ಗುಂಪು-ಗುಂಪಾಗಿ ಭತ್ತದ ತಾಕಿನ ಕಡೆಗೆ ಸಾಗುತ್ತದೆ ಮೆರವಣಿಗೆ. ಡೋಲು ವಾದ್ಯಗಳು, ಕೋಲಾಟದ ತಂಡಗಳು ಜೊತೆಗೂಡುವುದರಿಂದ ಮೆರವಣಿಗೆ ಮತ್ತಷ್ಟು ಖದರು ಪಡೆಯುತ್ತದೆ.

ಗದ್ದೆಯ ಬಳಿ ತೆರಳಿ ಅಲ್ಲಿ ನಿಗದಿಪಡಿಸಿದ ಒಂದು ತಾಕಿನಲ್ಲಿ ಎಲ್ಲರೂ ಒಟ್ಟುಗೂಡಿ, ಹಾಲು-ಜೇನು ಹಾಗೂ ಹಣ್ಣು-ಕಾಯಿಯನ್ನು ಇಟ್ಟು, ಎಡೆಯನ್ನು ಭತ್ತದ ಪೈರಿನಡಿಗೆ ಸುರಿದು, ಸಾಂಬ್ರಾಣಿಯ ಹೊಗೆ ಕೊಟ್ಟು ಒಂದು ಹಿಡಿಯಷ್ಟು ಭತ್ತದ ಪೈರಿನ ಬುಡವನ್ನು ಕಟ್ಟಿ ಬಂದೂಕಿನಿಂದ ಗುಂಡು ಹಾರಿಸುತ್ತಾರೆ. ಬಳಿಕ ಮನೆ ಹಿರಿಯರು ಸುಬ್ರಹ್ಮಣ್ಯನನ್ನು ನೆನೆದು ಕದಿರು ಕೊಯ್ಯುತ್ತಾರೆ. ಈ ಸಂದರ್ಭದಲ್ಲಿ ಪೊಲಿ ಪೊಲಿದೇವ ಪೊಲಿಯೇ ಬಾ ಎಂಬ ಕೂಗು ಮುಗಿಲು ಮುಟ್ಟುತ್ತದೆ, ಈ ಆಚರಣೆಯ ವಿಶೇಷ ತಿಂಡಿಗಳಾದ ತಂಬಿಟ್ಟು, ಎಳಕ್ಕಿಪುಟ್‌ಗಳನ್ನು ಎಲ್ಲರಿಗೂ ಹಂಚಲಾಗುತ್ತದೆ. ನಂತರ ಕೊಯ್ದ ಭತ್ತದ ಕದಿರುಗಳನ್ನು ತಂದು ಮನೆತುಂಬಿಸಿಕೊಳ್ಳಲಾಗುತ್ತದೆ.

ಬಪ್ಪಕ ಪುತ್ತರಿ ಬಣ್ಣತೆ ಬಾತ್
ಪೋಪಕ ಪುತ್ತರಿ ಎಣ್ಣತೆ ಪೋಚ್
ದಮ್ಮಯ್ಯ ಪುತ್ತರಿ ಒಮ್ಮೆಲು ಪೋತೆ

ಎಂಬ ಹಾಡನ್ನು ಹಬ್ಬದ ಕೊನೆಯಲ್ಲಿ ಹಾಡಲಾಗುತ್ತದೆ.

ಈ ಹಾಡಿನ ಅರ್ಥ; ಬರುವಾಗ ಹುತ್ತರಿ ಸಡಗರದಿಂದ ಬಂತು, ಹೋಗುವಾಗ ಹುತ್ತರಿ ಯಾರಿಗೂ ಹೇಳದೆ ಹೋಯಿತು, ಆದರೆ ಹುತ್ತರಿ ನೀನು ಒಮ್ಮೆಯೂ ಹೋಗದಿರು.

ಹುತ್ತರಿಯಂದು ವಿಶೇಷ ಅಡುಗೆಗಳನ್ನು ಮಾಡಲಾಗುತ್ತದೆ. ಆಗ ತಾನೇ ಗದ್ದೆಯಿಂದ ಕುಯ್ದು ತಂದ ಭತ್ತದ ಕಾಳನ್ನು ಸುಲಿದು ಅಕ್ಕಿಯನ್ನು ಪಾಯಸಕ್ಕೆ ಸೇರಿಸಲಾಗುತ್ತದೆ. ಇದು ಹೊಸ ಅಕ್ಕಿ ಪಾಯಸ. ಇದನ್ನು ಬೇಯಿಸುವಾಗ ಐದಾರು ಪುಟ್ಟ-ಪುಟ್ಟ ಕಲ್ಲಿನ ಚೂರುಗಳನ್ನು ಸೇರಿಸುತ್ತಾರೆ. ಊಟಕ್ಕೆ ಕುಳಿತಾಗ ಯಾರಿಗೆ ಈ ಕಲ್ಲಿನ ಚೂರುಗಳು ಸಿಗುತ್ತವೋ ಅವರಿಗೆ ಕಲ್ಲಾಯುಷ್ಯ (ಧೀರ್ಘಾಯುಷ್ಯ) ಲಭಿಸುತ್ತದೆನ್ನುವ ನಂಬಿಕೆ ಇದೆ. ಪಾಯಸದ ಜೊತೆಗೆ ಬಾಳೆ ಹಣ್ಣಿನಿಂದ ತಯಾರಿಸಿದ ತಂಬಿಟ್ಟು, ಘಮಘಮಿಸುವ ಏಲಕ್ಕಿ ಪೂಟ್, ವಿವಿಧ ರೀತಿಯ ಎಣ್ಣೆ ಖಾದ್ಯಗಳ ಸತ್ಕಾರ ನಡೆಯುತ್ತದೆ.



ಪೈರು ಕೊಯ್ಯುವುದು (ಚಿತ್ರ : ಅನಿಲ್ ಹೆಚ್.ಟಿ.)

ಸಾಂಪ್ರದಾಯಿಕ ನೃತ್ಯಗಳು ಹಾಗೂ ಕ್ರೀಡೆಗಳ ಪ್ರದರ್ಶನ ಹುತ್ತರಿಯ ಮತ್ತೊಂದು ಆಕರ್ಷಣೆ. ಕೊಡವ ರೈತಾಪಿಗಳು ವಾರಗಟ್ಟಳೆ ಇದರಲ್ಲಿ ಪಾಲ್ಗೊಂಡು ತಮ್ಮ ಕೌಶಲ್ಯ ಮತ್ತು ಶೌರ್ಯ ಮೆರೆಯುತ್ತಾರೆ. ಮುಂಚೆ ಕ್ರೀಡಾ ಪ್ರದರ್ಶನಕ್ಕಾಗಿಯೇ ಊರ ಹೊರಗೆ ಕ್ರೀಡಾಂಗಣವೊಂದನ್ನು ಮಾಡಲಾಗುತ್ತಿತ್ತು. ಅದಕ್ಕೆ **ಮಂದ್** ಎಂಬ ಹೆಸರಿನಿಂದ ಕರೆಯಲಾಗುತ್ತದೆ. ಇಲ್ಲಿ ಊರ ಎಲ್ಲರೂ ಸೇರಿ ಜನಪದ ಗೀತೆಗಳನ್ನಾಡುತ್ತಾ ಗುಂಪಾಗಿ ಕೂಡಿ ಎರಡೂ ಕೈಗಳಲ್ಲಿ ಬೆತ್ತದ ಬಾರುಕೋಲುಗಳನ್ನು ಹಿಡಿದು ಅವುಗಳನ್ನು ವಿವಿಧ ಭಂಗಿಗಳಲ್ಲಿ ಲಯಬದ್ಧವಾಗಿ ತಿರುವುತ್ತಾ, ಬೀಸುತ್ತಾ ಕುಣಿಯುವ ಪರಿ ನೋಡಲು ಅದ್ಭುತ. ಇದಕ್ಕೆ ಹುತ್ತರಿ ಕೋಲಾಟ ಎಂದೇ ಕರೆಯಲಾಗುತ್ತದೆ. ಕೊಡವ ನೃತ್ಯಗಳಲ್ಲಿ ಇದು ಅತ್ಯಂತ ಜನಪ್ರಿಯ. ಹುತ್ತರಿಯ ಮತ್ತೊಂದು ಆಕರ್ಷಣೆ ಹೆಣ್ಣುಮಕ್ಕಳು ಭಾಗವಹಿಸುವ ಉಮ್ಮತ್ತಾಟ್ ನೃತ್ಯ.

ಕೃಷಿ ಆಚರಣೆಗಳಲ್ಲಿ ಕೊಡಗಿನ ಹುತ್ತರಿಗೆ ವಿಶಿಷ್ಟ ಸ್ಥಾನವಿದೆ. ಸುಗ್ಗಿಯನ್ನು ಅತ್ಯಂತ ಭಕ್ತಿ, ಶ್ರದ್ಧೆಯಿಂದ ಆಚರಿಸುವ ಹಾಗೂ ತಮ್ಮ ಜಾನಪದ ನೃತ್ಯ ಸಂಗೀತಗಳನ್ನು ತಲೆಮಾರಿನಿಂದ ತಲೆಮಾರಿಗೆ ಒಯ್ಯುವ ಸಾಧನವಾಗಿಯೂ ಸಹ ಈ ಆಚರಣೆ ಬಳಕೆಯಾಗುತ್ತಿರುವುದು ಮಹತ್ವದ ಸಂಗತಿ.

ಆದರೆ ಕೊಡಗಿನಲ್ಲಿ ಸಾಂಪ್ರದಾಯಿಕ ಬೆಳೆಯಾದ ಭತ್ತದ ಸ್ಥಾನವನ್ನು ನಿಧಾನಕ್ಕೆ ವಾಣಿಜ್ಯ ಬೆಳೆಗಳಾದ ಶುಂಠಿ ಮುಂತಾದವು ಆಕ್ರಮಿಸುತ್ತಿವೆ. ಇದು ಹುತ್ತರಿಗೆ ಶಾಶ್ವತ ಕುತ್ತು ತರುವ ಬದಲಾವಣೆಯಾಗಿದೆ. ಒಂದು ಬೆಳೆಯ ಬದಲಾವಣೆ ಸಮಗ್ರವಾಗಿ ನೋಡಿದರೆ ಚಿಕ್ಕ ಕ್ರಿಯೆಯಂತೆ ಕಂಡರೂ ಸಹ ಅದು ಒಂದು ಶ್ರೀಮಂತ ಕೃಷಿ ಸಂಸ್ಕೃತಿಯ ಕೊಂಡಿಯನ್ನೇ ಕಳಚಿ ಹಾಕುತ್ತಿರುವ ರೀತಿ ಭಯ ಹುಟ್ಟಿಸು ವಂತಹುದು.

## ೪. ಬೆಳೆ ರಕ್ಷಣೆಗೆ ಕಾಸರಕದ ಕೊಂಬೆ ನೆಡುವಿಕೆ

ತುಳುವರಿಗೆ ವರ್ಷದಲ್ಲಿ ಆಟಿ ತಿಂಗಳು (ಜುಲೈ-ಆಗಸ್ಟ್) ಬಹು ಮಹತ್ವದ ತಿಂಗಳುಗಳು. ಈ ಕಾಲದಲ್ಲಿ ಬೆಳೆಗಳಿಗೆ ಮತ್ತು ಮನುಷ್ಯರಿಗೆ ರೋಗಗಳು ಬರುವುದು ಸರ್ವೇ ಸಾಮಾನ್ಯ. ಇದರ ನಿವಾರಣೆಗಾಗಿ ಕೆಲವು ವಿಶಿಷ್ಟ ಆಚರಣೆಗಳು ಬಳಕೆಯಲ್ಲಿವೆ.

ಈ ತಿಂಗಳಿನಲ್ಲಿ ಬರುವ ಅಮಾವಾಸ್ಯೆಯ ದಿನ ಬೆಳಗಿನ ಜಾವದಲ್ಲಿ ಭತ್ತದ ಗದ್ದೆಗೆ ಕಾಸರಕದ ಗಿಡದ ರೆಂಬೆಗಳನ್ನು ನೆಡುತ್ತಾರೆ. ಈ ಸಂದರ್ಭದಲ್ಲಿ ವರ್ಷದ ಮೊದಲನೇ ಬೇಳೆ- ಅಂದರೆ ಎಣೆಲು ಬೆಳೆ ಚಾಲ್ತಿಯಲ್ಲಿರುತ್ತದೆ. ಹಾಗೂ ಈ ನಿರ್ದಿಷ್ಟ ತಿಂಗಳಿನಲ್ಲಿ ನಾಟಿ ಹಾಕಿದ ಭತ್ತದ ಸಸಿಗಳು ಇನ್ನೂ ಎಳೆಯದಾಗಿರುತ್ತದೆ. ಹಾಗಾಗಿ ಹುಳುಗಳ ಕಾಟ ಹೆಚ್ಚು. ಇದರಿಂದ ರಕ್ಷಣೆ ಪಡೆಯಲು ಆಚರಿಸುವುದೇ ಈ ಆಚರಣೆ.

ಈ ಕಾಸರಕದ-ತುಳುವಿನಲ್ಲಿ ಕಾಯೆರ್-ರೆಂಬೆ ನೆಡುವ ಕ್ರಿಯೆಯನ್ನು ಕಾಪು (ರಕ್ಷಣೆ) ಎನ್ನಲಾಗುತ್ತದೆ. ಹೀಗೆ ಮಾಡುವುದರಿಂದ ಬೆಳೆಗೆ ಅಮರಿಕೊಳ್ಳುವ ಮಾರಿ ಅರ್ಥಾತ್ ಹುಳಗಳ ಕಾಟವನ್ನು ಕಾಯೆರ್ ತಡೆಗಟ್ಟುತ್ತದೆ, ಆ ಮೂಲಕ ಬೆಳೆಯನ್ನು ರಕ್ಷಿಸುತ್ತದೆ, ನಮಗೆ ಸಮೃದ್ಧಿ ತರುತ್ತದೆ ಎಂಬ ನಂಬಿಕೆ ರೈತಾಪಿಗಳಲ್ಲಿದೆ. ಈ ಪ್ರದೇಶದಲ್ಲಿಯೇ ಮನುಷ್ಯರಿಗೆ ಮತ್ತು ಗ್ರಾಮಗಳಿಗೆ ಬರುವ ಮಾರಿಯನ್ನು ಓಡಿಸಲು ಆಚರಿಸಲಾಗುವ ಆಟಿಕಳೆಂಜ ಕ್ರಿಯೆಯೂ ಸಹ ಬಳಕೆಯಲ್ಲಿರುವುದನ್ನು ನಾವು ಕಾಣಬಹುದು.

## ೫. ಹಾಲೆ ಮರದ ಹಾಲು ಕುಡಿಯುವುದು

ಕರಾವಳಿಯ ತುಳು ಸಂಸ್ಕೃತಿಯಲ್ಲಿ ಸಾಮೂಹಿಕವಾಗಿ ಹಾಲೆಮರದ ಮದ್ದು (ಹಾಲು) ಕುಡಿಯುವ ಸಂಪ್ರದಾಯವೂ ಸಹ ಇದೇ ಆಟಿ ಮಾಸದ ಸಂದರ್ಭದಲ್ಲಿ ಇರುವುದು ವಿಶೇಷ. ತುಳುವಿನಲ್ಲಿ ಪಾಲೆ ಎಂದು ಕರೆಯಲ್ಪಡುವ ಹಾಲೆಯ ಸಸ್ಯ ಶಾಸ್ತ್ರೀಯ ಹೆಸರು Alstonia Scholaris.

ಆಟಿ ಮಾಸದಲ್ಲಿಯೇ ಹಾಲೆ ಮರದ ಹಾಲನ್ನು ಕುಡಿಯಲು ಒಂದು ಪ್ರಬಲವಾದ ಕಾರಣವಿದೆ, ಏನೆಂದರೆ; ತುಳುವರಿಗೆ ಮೇ-ಜೂನ್-ಜುಲೈ ತಿಂಗಳುಗಳು ಮಳೆಗಾಲದ ಆರಂಭದ ತಿಂಗಳುಗಳಾಗಿದ್ದು ಈ ಸಮಯದಲ್ಲಿ ಉಳುಮೆ ಕೆಲಸ, ಬೀಜ ಹಾಕುವ ಹಾಗೂ ಭತ್ತದ ಸಸಿಗಳನ್ನು ನಾಟಿ ಹಾಕುವ ಕೆಲಸವಿರುತ್ತದೆ. ಈ ಕೆಲಸಗಳನ್ನೆಲ್ಲಾ ಅವರು ಹೆಚ್ಚು-ಕಡಿಮೆ ಬಿರು ಮಳೆಯಲ್ಲಿದ್ದುಕೊಂಡೇ ಮಾಡುತ್ತಾರೆ. ಸದಾ ನೆನೆಯುವ ದೇಹವು ಛಳಿಯನ್ನು ತಾಳಿಕೊಳ್ಳಲು ಹುರಿದ ಹುಣಸೆ ಬೀಜಗಳನ್ನು ಹೆಚ್ಚು ತಿನ್ನುತ್ತಾರೆ. ಈ ಕಾರಣದಿಂದ ಹೊಟ್ಟೆಯಲ್ಲಿ ಹುಳದ ಬಾಧೆ ಕಾಣಿಸಿಕೊಳ್ಳುತ್ತದೆ. ಈ ತೊಂದರೆಯಿಂದ ಮುಕ್ತಿ ಪಡೆಯಲು ಅವರು ಅನುಭವದಿಂದ ಕಂಡುಕೊಂಡದ್ದು ಹಾಲೆ ಮರದ ಹಾಲು ಕುಡಿಯುವ ಪರಿಹಾರ.

ಹಾಲೆ ಮರದಿಂದ ಹಾಲು ಸಂಗ್ರಹಿಸುವ ವಿಧಾನವೂ ಸಹ ವಿಚಿತ್ರವಾಗಿದೆ. ಅಮಾವಾಸ್ಯೆಯ ರಾತ್ರಿ ಬೆಳಕು ಮೂಡುವ ಮುಂಚೆಯೇ ಬೆತ್ತಲೆಯಾಗಿ ಹಾಲೆ ಮರದ ಬಳಿ ಬಂದು ಮರಕ್ಕೆ ಮೂರು ಸುತ್ತು ಹಾಕಿ ತೊಗಟೆಯನ್ನು ಕಲ್ಲಿನಿಂದ ಕೆತ್ತಿ ತೆಗೆಯುತ್ತಾರೆ. ಮೈಮೇಲೆ ಬಟ್ಟೆ ಹಾಕಿಕೊಂಡು ಹೋದರೆ ಹಾಲಿನಲ್ಲಿರುವ ಔಷಧಿಯ ಅಂಶ ಹೋಗಿಬಿಡುತ್ತದಂತೆ. ಮತ್ತೊಂದು ನಿಷಿದ್ಧವೆಂದರೆ, ಹಾಲೆ ಮರದ ತೊಗಟೆ ತೆಗೆಯಲು ಕಬ್ಬಿಣ ಇಲ್ಲವೇ ಇನ್ನಾವುದೇ ಆಯುಧ ಬಳಸುವಂತಿಲ್ಲ. ಹಾಗಾಗಿಯೇ ಕಲ್ಲನ್ನು ಬಳಸುತ್ತಾರೆ. ತೊಗಟೆ ತೆಗೆದುಕೊಂಡ ನಂತರ ಮನೆಗೆ ಬರಬೇಕು. ಅಲ್ಲದೆ ಹಿಂದಿನ ದಿನವೇ ಮರದ ಬಳಿ ಹೋಗಿ ನಾಳೆ ಬರುತ್ತೇವೆ ಮದ್ದು ಕೊಡು ಎಂದು ಪ್ರಾರ್ಥಿಸಿ ಹೋಗಿರುತ್ತಾರೆ.

ತೊಗಟೆ ತಂದ ನಂತರ ಮನೆಯಲ್ಲಿ ಹೆಣ್ಣುಮಕ್ಕಳು ಅದನ್ನು ಜಜ್ಜಿ ರಸ ತೆಗೆದು ಅದಕ್ಕೆ ಬೆಳ್ಳುಳ್ಳಿ, ಮೆಣಸು ರಸವನ್ನು ಬೆರೆಸುತ್ತಾರೆ. ಅಲ್ಲದೆ ಒಂದು ಬೆಣಚು ಕಲ್ಲನ್ನು ಒಲೆಗೆ ಹಾಕಿ ಚೆನ್ನಾಗಿ ಕಾಯಿಸಿ ಬಿಸಿ ಮಾಡಿ ಆ ರಸಕ್ಕೆ ಒಗ್ಗರಣೆ ಹಾಕುತ್ತಾರೆ. *(ಹೀಗೆ ಬೆಣಚು ಕಲ್ಲಿನ ಒಗ್ಗರಣೆ ಕೊಡುವ ಪದ್ಧತಿ ಬಯಲು ಸೀಮೆಯಲ್ಲಿಯೂ ಸಹ ಪ್ರಚಲಿತದಲ್ಲಿದೆ, ಅಲ್ಲಿ ಬಿದಿರು ಕಳಲೆ ಸಾರು ಮಾಡುವಾಗ ಹೀಗೆ ಮಾಡುತ್ತಾರೆ)* ನಂತರ ಖಾಲಿ ಹೊಟ್ಟೆಗೆ ಎಲ್ಲರೂ ಅದನ್ನು ಕುಡಿಯುತ್ತಾರೆ. ಹಾಲೆ ಮರದ ರಸ ಉಷ್ಣ ಎಂಬ

ಭಾವನೆಯಿರುವುದರಿಂದ ಅದನ್ನು ಕುಡಿದ ನಂತರ ಮೆಂತ್ಯದ ಗಂಜಿಯನ್ನು ಎಲ್ಲರಿಗೂ ಕೊಡುವುದು ರೂಡಿ.

## ೬. ಬಲಿಪಾಡ್ಯಮಿಯ ವಿವಿಧ ಆಚರಣೆಗಳು

ದೀಪಾವಳಿ ಸಮಯದಲ್ಲಿ; ಅಂದರೆ ಅಕ್ಟೋಬರ್-ನವಂಬರ್ ತಿಂಗಳಿನಲ್ಲಿ ಎಲ್ಲೆಡೆ ಕುಯಿಲಿಗೆ ಸಿದ್ಧವಾಗುವ ಬೆಳೆಗಳನ್ನು ಕಾಣಬಹುದು. ರೈತಾಪಿಗಳಿಗೆ ವರ್ಷದ ದುಡಿಮೆ ಕೈಗೆ ಬರುವ ಸಮಯ. ಈ ಸಂದರ್ಭದಲ್ಲಿ ವಿವಿಧ ರೀತಿಯ ಕೃಷಿ ಆಚರಣೆಗಳೂ ಗರಿಗೆದರುತ್ತವೆ. ಬಯಲು ಸೀಮೆಯಲ್ಲಿ ಇವು ಸ್ವಲ್ಪ ಕಡಿಮೆಯಾದರೂ ಮಲೆನಾಡು ಮತ್ತು ಕರಾವಳಿ/ತುಳುನಾಡುಗಳಲ್ಲಿ ವಿಶೇಷವಾದ ಕೃಷಿ ಆಚರಣೆಗಳಿವೆ.

ಇದು ಮುಖ್ಯವಾಗಿ ಭತ್ತದ ಬೆಳೆ ತೆನೆ ಹೊಡೆದು ಕಾಳು ಕಟ್ಟುವ ಸಮಯ, ಅಡಿಕೆ ತೋಟದ ಕೆಲಸಗಳು ಇನ್ನೂ ಪ್ರಾರಂಭವಾಗಿರುವುದಿಲ್ಲ. ಸ್ವಲ್ಪ ಬಿಡುವಿನ ಮತ್ತು ನಿರಾಳತೆಯ ಕಾಲ. ಎಲ್ಲೆಲ್ಲೂ ಹಸಿರು. ಮಳೆಯ ಬಿರುಸು ಕಡಿಮೆಯಾಗಿದ್ದರೂ ಅದರ ಪರಿಣಾಮವಾಗಿ ಹೊಲ-ಗದ್ದೆಗಳಲ್ಲಿ, ಹಳ್ಳ-ಕಾಲುವೆಗಳಲ್ಲಿ ನೀರು ಹರಿಯುತ್ತಿರುತ್ತದೆ. ಇಂತಹ ಸಂದರ್ಭದಲ್ಲಿ ಕಾಲಿಡುವ ಬೆಳಕಿನ ಹಬ್ಬ ದೀಪಾವಳಿ ಹತ್ತು-ಹಲವು ಕೃಷಿ ಆಚರಣೆಗಳಿಗೆ ವೇದಿಕೆಯಾಗುತ್ತದೆ. ಮಲೆನಾಡಿನಲ್ಲಿ ನಡೆಯುವ ಕೆಲವು ಆಚರಣೆಗಳನ್ನು ನೋಡುವುದಾರೆ;

**ಬಲೀಂದ್ರ ಪೂಜೆ :** ದೀಪಾವಳಿ ಸಮಯದಲ್ಲಿ ಬಲಿಪಾಡ್ಯಮಿಯ ದಿವಸ ತುಳುನಾಡು ಮತ್ತು ಮಲೆನಾಡಿನಲ್ಲಿ ಭೂಮಿ ಪುತ್ರನಾದ ಬಲೀಂದ್ರನನ್ನು ಭೂಮಿಗೆ



ಅಂಗಳದಲ್ಲಿ ಬಾಳೆದಿಂಡಿನ ಬಲೀಂದ್ರ (ಚಿತ್ರ : ಶಾಮರಾಜ ದೊಡ್ಡಮಾಣಿ)

ಬರಮಾಡಿಕೊಳ್ಳುವ ಆಚರಣೆಯೇ ಬಲೀಂದ್ರ ಪೂಜೆ. ಅಂದು ಹೆಣ್ಣು ಮಕ್ಕಳು ಮನೆಯ ಮುಂದಿನ ತುಳಸಿ ಕಟ್ಟೆಯ ಬಳಿ ಕಳಸ ಹೂಡಿ, ಅದಕ್ಕೆ ಅಡಿಕೆ ಹಿಂಗಾರದಿಂದ ಅಲಂಕರಿಸಿ ವಿವಿಧ ಅಡುಗೆಗಳ ಎಡೆ ಹಾಕುತ್ತಾರೆ. ಕೆಲವು ಕಡೆ ಬಾಳೆ ದಿಂಡಿನಲ್ಲಿ ಬಲೀಂದ್ರನ ಪ್ರತಿಮೆ ಮಾಡಿ ತುಳಸಿ ಕಟ್ಟೆಯ ಬಳಿ ಸ್ಥಾಪಿಸುವ ಸಂಪ್ರದಾಯವನ್ನೂ ಸಹ ಕಾಣಬಹುದು.

ಅದೇ ದಿನ ಸಂಜೆ ಇನ್ನೇನು ಹೊತ್ತು ಮುಳುಗುತ್ತದೆ ಎನ್ನುವಾಗ ಗದ್ದೆಗೆ ದೀಪದ ಕೋಲುಗಳನ್ನಿಡುವ ವಿಶಿಷ್ಟವಾದ ಹಾಗೂ ಅರ್ಥಪೂರ್ಣವಾದ ಆಚರಣೆ ನಡೆಯುತ್ತದೆ, ಗಂಡಸರು ಹೊಲಕ್ಕೆ ದೀಪ ಹಚ್ಚಲು ಹೊರಡುತ್ತಾರೆ, ಮನೆಯಲ್ಲಿ ಅದಕ್ಕಾಗಿಯೇ ಉದ್ದನೆಯ ಬಿದಿರು ಕೋಲುಗಳಿರುತ್ತವೆ, ಇವು ಅಂದಾಜು ನಾಲ್ಕರಿಂದ ಐದು ಅಡಿ ಉದ್ದವಿರುತ್ತವೆ, ಇವುಗಳ ತುದಿಗೆ ಎಣ್ಣೆ ಸವರಿದ ಬಟ್ಟೆಯನ್ನು ಸುತ್ತಿರುತ್ತಾರೆ. ಒಬ್ಬೊಬ್ಬರು ಏಳೆಂಟು ಕೋಲುಗಳನ್ನು ಕಂಕುಳಲ್ಲಿ ಇಟ್ಟುಕೊಂಡು ಅವರವರ ಗದ್ದೆಯಲ್ಲಿ ಓಡಾಡುತ್ತಾ ಅಲ್ಲಲ್ಲಿ ನೆಡುತ್ತಾರೆ, ಒಂದು ಕಡೆ ಎರಡರಿಂದ ಮೂರು ಕೋಲುಗಳಂತೆ ಗದ್ದೆಯ ವಿವಿಧ ಭಾಗಗಳಲ್ಲಿ ನೆಡುವುದು ವಾಡಿಕೆ, ಹೀಗೆ ನೆಡುವಾಗ ಬಲಿಯೇ ಬಾ.. ಬಲಿಯೇ ಕೂ.. ಎಂದು ತಾರಕ ಸ್ವರದಲ್ಲಿ ಕೂಗುತ್ತಾರೆ.



ಗದ್ದೆಗೆ ಉರಿಯುವ ದೀಪದ ಕೋಲುಗಳನ್ನಿಡುವುದು

ಶಿವಮೊಗ್ಗದ ಭಾಗದಲ್ಲಿ ಈ ಆಚರಣೆಯನ್ನು ದೀವ್ಹೋಳಿಗೆ ಎಂದು ಕರೆಯುತ್ತಾರೆ. ಆಚರಣೆಯ ಉದ್ದೇಶ ಹಾಗೂ ವಿಧಾನ ಬಹುಮಟ್ಟಿಗೆ ಒಂದೇ ಆದರೂ ಕೂಗುವುದರಲ್ಲಿ ಸ್ವಲ್ಪ ವ್ಯತ್ಯಾಸವಿದೆ, ಇವರು ಓಳಿಗೆ.. ದೀಪ್ಹೋಳಿಗೆ... ಎಂದು ಗದ್ದೆಗಳಲ್ಲಿ ಲಯಬದ್ಧವಾಗಿ ಕೂಗುತ್ತಾ ಸಾಗುತ್ತಾರೆ.

ಎಲ್ಲರ ಗದ್ದೆಗಳಲ್ಲಿ ಹತ್ತಿ ಉರಿಯುವ ದೀಪದ ಕೋಲುಗಳನ್ನು ನೋಡುವುದು ಅತ್ಯಂತ ಮನೋಹರ.

**ಗದ್ದೆಗೆ ಹೂ ಹಾಕುವುದು :** ಇದೇ ಸಂದರ್ಭದಲ್ಲಿ ಆಚರಿಸಲ್ಪಡುವ ಗದ್ದೆಗೆ ಹೂ ಹಾಕುವ ಆಚರಣೆಯೂ ಸಹ ಅರ್ಥಪೂರ್ಣವಾದುದು. ಬಲಿಪಾಡ್ಯಮಿಯ ಸಂಜೆ ಗದ್ದೆಗಳಿಗೆ ಮುಂಡುಗದ ಹೂ, ಕಕ್ಕೆ ಹೂ ಮತ್ತು ಹುಲಿಗಿಡದ ಹೂಗಳನ್ನು ಹಾಕುತ್ತಾರೆ, ಹೀಗೆ ಮಾಡುವುದರಿಂದ ಗದ್ದೆಗೆ ಕಾಟಕೊಡುವ ಹುಳುಗಳು ಮತ್ತು ಕೀಟಗಳು ಈ ಹೂಗಳಿಗೆ ಆಕರ್ಷಿತವಾಗುತ್ತವೆ ಎಂದು ರೈತಾಪಿಗಳ ಅನಿಸಿಕೆ.

**ಅಂಟಿಗೆ-ಪಂಟಿಗೆ :** ಬಲಿಪಾಡ್ಯಮಿಯ ಸಂದರ್ಭದಲ್ಲಿಯೇ ಮಲೆನಾಡಿನಲ್ಲಿ ಕಾಣಬರುವ ಮತ್ತೊಂದು ವಿಶೇಷ ಕ್ರಿಯೆ ಅಂಟಿಗೆ-ಪಂಟಿಗೆ. ಬಲಿಪಾಡ್ಯಮಿಯಿಂದ ಮುಂದಿನ ಮೂರು ದಿವಸ ಕಾಲ ಯುವಕರ ಹಿಂಡು ಹಳ್ಳಿಯ ಪ್ರತಿ ಮನೆಗೂ ಭೇಟಿ ನೀಡಿ ದೀವ್ಹೋಳಿಗೆ ಪದಗಳನ್ನು ಹಾಡುತ್ತಾರೆ. ಇದು ಮಲೆನಾಡಿನ ಸಮೃದ್ಧ ಜನಪದ ಸಾಹಿತ್ಯವನ್ನು ಉಳಿಸುವ ಗಾಯನ ಪದ್ಧತಿಯಾಗಿದೆ.

## ೭. ಬೂರಿಹಬ್ಬ

ಸತತ ಐದು ದಿನಗಳ ಕಾಲ ನಡೆಯುವ ವಿಶಿಷ್ಟ ಹಬ್ಬ. ದೀಪಾವಳಿಯ ಹಿಂದಿನ ದಿನ ಪ್ರಾರಂಭ. ಪ್ರತಿ ದಿನ ಒಂದೊಂದು ಆಚರಣೆ, ಚಿಕ್ಕವರು ದೊಡ್ಡವರಾದಿಯಾಗಿ ಎಲ್ಲರೂ ಪಾಲ್ಗೊಂಡು ಖುಷಿ ಪಡುವ ರೀತಿ ಅನನ್ಯವಾದುದು.

ಮೊದಲ ದಿನ ಭೂತಗಳಿಗೆ ಕೋಳಿಯ ಬಲಿ ನಡೆಯುತ್ತದೆ, ಅವುಗಳನ್ನು ಸಂತೃಪ್ತಗೊಳಿಸಿದರೆ ಉಳಿದಿದ್ದೆಲ್ಲವೂ ಸುಸೂತ್ರ ಎಂದು ಜನಪದರ ನಂಬಿಕೆ, ಹಾಗಾಗಿ ಅವಕ್ಕೆ ಮೊದಲ ಆದ್ಯತೆ. ಅಂದು ಬೆಳಿಗ್ಗೆಯೇ ಅಡಿಕೆ ಹಿಂಗಾರ, ಪಚ್ಚೆತೆನೆ ಹಾಗೂ ಹಣ್ಣಡಿಕೆಗಳನ್ನು ಸುಟ್ಟು ಬೂದಿ ಮಾಡಿಕೊಳ್ಳುತ್ತಾರೆ. ಈ ಸಂದರ್ಭದಲ್ಲಿ ಹುಡುಗರು ಖುಷಿಗಾಗಿ ಕಳ್ಳತನ ಮಾಡುವ ಪ್ರಸಂಗ ವಿಶೇಷವಾದದ್ದು, ತೆಂಗಿನ ಕಾಯಿಗಳನ್ನು ಕದಿಯುತ್ತಾರೆ, ಹಸೆಕಲ್ಲನ್ನೇ ಎತ್ತಿ ಬಚ್ಚಿಟ್ಟುಬಿಡುತ್ತಾರೆ, ಅರೆಯಲು ಕಲ್ಲಿಲ್ಲದೆ ಹೆಂಗಸರ ಪರದಾಟ ಇವರಿಗೆ ನಗೆಪಾಟಲಿನ ಸಂಗತಿ. ಬೀದಿಯಲ್ಲಿ ನಿಲ್ಲಿಸಿದ್ದ ಗಾಡಿಯ ಚಕ್ರವನ್ನೇ ಬಿಚ್ಚಿ ಬೇರೆಡೆ ಸಾಗಿಸಿಬಿಡುತ್ತಾರೆ.

ಮರುದಿನ ಅಮಾವಾಸ್ಯೆ, ಅಂದು ಜಾನುವಾರುಗಳ ಹಬ್ಬ, ಅವುಗಳಿಗೆ ಮೈತೊಳೆದು, ಅಲಂಕಾರ ಮಾಡಿ ಬೆದರಿಸುತ್ತಾರೆ–ಅಂದರೆ ಓಡಿಸುತ್ತಾರೆ. ಅದರ ಮರುದಿನ ಪಾಡ್ಯ, ಅಂತಹ ವಿಶೇಷವೇನಿಲ್ಲ. ಆದರೆ ನಂತರದ ದಿನ–ಅಂದರೆ ನಾಲ್ಕನೆಯ ದಿನ ಅತ್ಯಂತ ಮುಖ್ಯವಾದುದು, ಅಂದು ಕರಿ ಹಬ್ಬ. ಬಲೀಂದ್ರನ ಪೂಜೆ, ಆಯುಧಗಳಿಗೆ ಪೂಜೆ ಮಾಡಲಾಗುತ್ತದೆ. ಎತ್ತಿನ ಗಾಡಿ, ನೇಗಿಲು, ನೊಗ, ಮಚ್ಚು, ಕುಡುಗೋಲು ಮುಂತಾದ ಸಕಲೆಂಟು ಹತಾರಗಳನ್ನು ಸ್ವಚ್ಛವಾಗಿ ತೊಳೆದು ಅಚ್ಚುಕಟ್ಟಾಗಿ ಜೋಡಿಸಿ ಅರಿಶಿನ–ಕುಂಕುಮ ಹೂ–ಪತ್ರೆಗಳನ್ನಿಟ್ಟು ಪೂಜೆ ಮಾಡುತ್ತಾರೆ.

ಐದನೇ ದಿನ ಹಾಗೂ ಕೊನೆಯ ದಿನ ವರ್ಷದ ತೊಡಕು. ಮನೆಯಲ್ಲಿ ಸಿಹಿ ಅಡುಗೆ. ಗದ್ದೆಯಿಂದ ಹೊಸ ಕದಿರು ತಂದು ಅಕ್ಕಿಯನ್ನು ಬಿಡಿಸಿ ಅದರಿಂದ ವಿಶೇಷ ತಿನಿಸುಗಳನ್ನು ಮಾಡಿ ಊಟ ಮಾಡುತ್ತಾರೆ. ಜೊತೆಗೆ ಭತ್ತದ ಕದಿರುಗಳನ್ನು ತಂದು ಮನೆಯ ವಿವಿಧ ಜಾಗಗಳಲ್ಲಿಡುವುದು ಸಂಪ್ರದಾಯ.

ಹೀಗೆ ಭೂತಗಳಿಗೆ ಬಲಿ ಕೊಡುವುದರಿಂದ ಶುರುವಾಗುವ ಬೂರಿ ಹಬ್ಬ ಭತ್ತದ ಹೊಸ ಕದಿರನ್ನು ತರುವ ಕ್ರಿಯೆಯೊಂದಿಗೆ ಮುಕ್ತಾಯವಾಗುತ್ತದೆ. ಭರ್ತಿ ಐದು ದಿನ ಕಾಲ ಬೇಸಾಯದ ವಿವಿಧ ಅವಿಭಾಜ್ಯ ಅಂಗಗಳಿಗೆ ನಮಿಸಿ ಧನ್ಯತೆ ಹೊಂದುವ ರೀತಿಯೇ ವಿಶಿಷ್ಟವಾದದ್ದು.

## ೮. ಚರಗ ಚೆಲ್ಲುವುದು

ಬೆಳೆಗಳಿಗೆ ಅಂಟುವ ಪೀಡೆ ಪರಿಹಾರಾರ್ಥವಾಗಿ, ರೋಗ ನಿವಾರಣಾರ್ಥವಾಗಿ ಚರಗ ಚಲ್ಲುವ ಆಚರಣೆ ವ್ಯವಸಾಯಗಾರರಲ್ಲಿ ದಟ್ಟವಾಗಿ ನೆಲೆಯೂರಿದೆ. ಚರಗ ಪದವನ್ನು ಕೇಳಿದಾಕ್ಷಣ ಸಾಮಾನ್ಯವಾಗಿ ಪ್ರಾಣಿಬಲಿಯ ನಂತರದ ರಕ್ತದ ಅನ್ನ ಹಾಗೂ ತಂಗಳು ಅಡುಗೆ ಪದಾರ್ಥಗಳಿಂದ ಮಾಡಿದ ಮಿಶ್ರಣ ನೆನಪಿಗೆ ಬರುತ್ತದೆ. ಪ್ರಾಣಿಬಲಿಯನ್ನು ನೀಡಿ ಮಾಡಿದ ಚರಗವು ಸಮಗ್ರವಾಗಿ ಊರಿನ ಕ್ಷೇಮವನ್ನು ಕಾಪಾಡುತ್ತದೆ ಎಂದು ಭಾವಿಸುವುದಾದರೆ, ಪ್ರತಿ ರೈತ ತನ್ನ ಹೊಲಗದ್ದೆಗಳಿಗೆ ಚೆಲ್ಲುವ ಚರಗ ಅವನ ಆರಂಬವನ್ನು ರಕ್ಷಿಸುತ್ತದೆ.

ಕೆಲವು ಪ್ರದೇಶಗಳಲ್ಲಿ ಚರಗದ ಕುಡಿಕೆಯೊಂದನ್ನು ಮನೆಯಲ್ಲಿ ಸದಾ ಇಟ್ಟುಕೊಂಡಿರುತ್ತಾರೆ. ಬೆಳೆಗಳಿಗೆ ಅಮಾವಾಸ್ಯೆಗೊಮ್ಮೆ ಹುಣ್ಣಿಮೆಗೊಮ್ಮೆ ಮುದ್ದೆ, ಅನ್ನ ಇಂತಹ ಯಾವುದಾದರೂ ಅಡಿಗೆಯನ್ನು ನೀರಿಗೆ ತೆಳ್ಳಗೆ ಕಲಸಿಕೊಂಡು ಹೊಲದ ಸುತ್ತ ಚಲ್ಲುತ್ತಾರೆ. ಹಾಗೆ ಮಾಡುವುದರಿಂದ ಬೆಳೆಗಳಿಗೆ ಅಪಾಯಕಾರಿಯಾಗುವ ಹುಳು–ಹುಪ್ಪಟೆಗಳ ನಿವಾರಣೆ ಮತ್ತು ಪೀಡೆ ಪರಿಹಾರ ಮಾಡಿದಂತಾಗುತ್ತದೆ ಎಂಬ

ಭಾವನೆ ರೈತಾಪಿಗಳಲ್ಲಿದೆ. ಎಲೆ ತೋಟ, ಬಾಳೆ ತೋಟಗಳಿಗಂತೂ ನಿಯಮಿತವಾಗಿ ಚರಗ ಚಲ್ಲುವುದನ್ನು ಕಾಣಬಹುದು, ಈ ಕ್ರಿಯೆ ಕ್ರಮಬದ್ಧವಾಗಿ ನಡೆಯುತ್ತದೆ.

ಸಾಮಾನ್ಯವಾಗಿ ಹೀಗೆ ಚರಗ ಚೆಲುವುದು ಇಬ್ಬರ ಕೆಲಸ. ಮುಂದಿರುವ ವ್ಯಕ್ತಿ ಒಂದು ಕೈಯಲ್ಲಿ ಬೆಂಡುಗೊಳ್ಳಿ ಮತ್ತೊಂದು ಕೈಯಲ್ಲಿ ಕುಡುಗೋಲು ಹಿಡಿದು ಹೊರಟರೆ, ಹಿಂದಿನವನು ಚರಗದ ಕುಡಿಕೆ ಹಿಡಿದು ಅದನ್ನು ಚಲ್ಲುತ್ತಾ 'ಹೋಲಿಗ್ಯ ಹೋಲಿಗ್ಯ ಎಂದು ಉದ್ಘರಿಸುತ್ತಾನೆ. ಹೋಲಿಗ್ಯ ಎಂಬ ಕೂಗು ಎಲ್ಲಿಯವರೆಗೆ ಕೇಳಿಸುತ್ತದೆಯೋ ಅಷ್ಟು ವ್ಯಾಪ್ತಿಯ ಬೆಳೆಗಳಿಗೆ ಒಳ್ಳೆಯದಾಗುತ್ತದೆ ಎಂದು ನಂಬಿಕೆ. ಒಂದು ಸುತ್ತು ಚರಗ ಚಲ್ಲಿದ ಮೇಲೆ ಮುಂದಿದ್ದವನು ಕುಡುಗೋಲಿನಿಂದ ಬಾಳೆಯ ಗಿಡವೊಂದನ್ನು ಕಡಿದು ಹಾಕಿ ಬೆಂಡುಗೊಳ್ಳಿಯನ್ನು ಬಿಸಾಕುತ್ತಾನೆ.

ಒಕ್ಕಣೆ ಮಾಡುವ ಸಂದರ್ಭದಲ್ಲಿ ಒಕ್ಕುವ ಕಣದಲ್ಲಂತೂ ಚರಗದ ಕುಡಿಕೆ ಸದಾ ತುಂಬಿರುತ್ತದೆ. ಪ್ರತಿ ಹಂತದಲ್ಲೂ ಬೆಳಿಗ್ಗೆ, ಸಂಜೆ ಚರಗ ಚಲ್ಲಿಯೇ ಕೆಲಸ ಆರಂಭವಾಗುವುದು. ಚರಗ ಚೆಲ್ಲುವ ಈ ಆಚರಣೆಯಿಂದ ಲೌಕಿಕ ಉಪಯೋಗವೂ ಇದೆ. ಚರಗದಲ್ಲಿರುವ ರಕ್ತ, ಅನ್ನದಗುಳು, ಮುದ್ದೆ ಚೂರು ಮುಂತಾದ ಆಹಾರದ ಪದಾರ್ಥಗಳನ್ನು ತಿನ್ನಲು ಬರುವ ಹಕ್ಕಿಗಳು ಅಲ್ಲಿರುವ ಆಹಾರವನು ತಿಂದು ಮುಗಿಸಿದ ನಂತರ ಅಲ್ಲಿಯೇ ಕಣ್ಣಿಗೆ ಬೀಳುವ ಹುಳುಗಳನ್ನು ತಿಂದು ಹಾಕುತ್ತವೆ. ಹಾಗಾಗಿ ಚರಗ ಚೆಲ್ಲುವುದು ಕೀಟ ನಿವಾರಣೆ ಮಾಡುವ ಸರಳ ವಿಧಾನವೂ ಆಗಿದೆ. ಜೋಡಲ ಗಿಡಗಳಿಗೆ, ಹೆಸರು ಗಿಡಗಳಿಗೆ ಹತ್ತಿದ ಹುಳಗಳನ್ನು ಚರಗ ಹಾಕಿ ಪಕ್ಷಿಗಳನ್ನು ಆಕರ್ಷಿಸಿ ನಿವಾರಣೆ ಮಾಡಿಕೊಂಡ ಉದಾಹರಣೆಗಳೂ ಸಾಕಷ್ಟು ಸಿಗುತ್ತವೆ.

## ೯. ಎಳ್ಳಮವಾಸ್ಯೆ

ವರ್ಷದ ಜನವರಿ ಅಥವಾ ಡಿಸೆಂಬರ್ ತಿಂಗಳಲ್ಲಿ ಉತ್ತರ ಕರ್ನಾಟಕದಲ್ಲಿ ಆಚರಿಸಲ್ಪಡುವ ಸಂಭ್ರಮದ ಆಚರಣೆ ಎಳ್ಳಮಾವಾಸ್ಯೆ. ಈ ತಿಂಗಳುಗಳು ಮುಂಗಾರಿನ ಬೆಳೆಗಳ ಕಟಾವು ಮತ್ತು ಹಿಂಗಾರಿ ಬೆಳೆಗಳ ಬಿತ್ತನೆಗಳೆರಡೂ ಏಕಕಾಲಕ್ಕೆ ನಡೆಯುವ ಸಂಭ್ರಮದ ಮತ್ತು ಸಂಧಿಗ್ಧದ ಸಮಯ. ಒಂದೆಡೆ ಮುಂಗಾರಿನ ಪ್ರಮುಖ ಬೆಳೆಯಾದ ಜೋಳದ ಕಟಾವು ನಡೆಯುತ್ತಿದ್ದರೆ, ಮತ್ತೊಂದೆಡೆ ಹಿಂಗಾರು ಬೆಳೆಗಳಾದ ಶೇಂಗಾ, ಕಡಲಿ, ಸೂರ್ಯಕಾಂತಿ, ಬೇಸಿಗೆ ಸಜ್ಜೆ ಮುಂತಾದ ಬೆಳೆಗಳ ಬಿತ್ತನೆ ನಡೆಯುತ್ತಿರುತ್ತದೆ. ಇದೇ ಸಂದರ್ಭದಲ್ಲಿ ಹಾಜರಾಗುವುದು ಎಳ್ಳಮವಾಸ್ಯೆಯ ಸಡಗರ. ಅಂದು ಎಲ್ಲಿ ನೋಡಿದರೂ ರಂಗುರಂಗಿನ ಬಟ್ಟೆ ತೊಟ್ಟ ಹೆಂಗಳೆಯರನ್ನು ಕರೆದೊಯ್ಯುವ ಸಾಲಂಕೃತ ಸಾಲು-ಸಾಲು ಎತ್ತಿನ ಗಾಡಿಗಳು ಎಲ್ಲರ ಗಮನ ಸೆಳೆಯುತ್ತವೆ. ಈ ಆಚರಣೆಯ ದಿವಸ ಎಳ್ಳಿನ ಅಡುಗೆಗಳ ವಿಶೇಷ.

ಅಂದು ಮೊದಲ ಕೋಳಿ ಕೂಗುವಾಗಲೇ ಊರಿಡೀ ಎಚ್ಚೆತ್ತಿರುತ್ತದೆ. ಯುವಕರು ಬಂಡಿ ತೊಳೆದು ಅದರ ಚಕ್ರಕ್ಕೆ ಕೀಲೆಣ್ಣೆ ಹಾಕಿ, ಕೊಲ್ಲಾರಿ ಕಟ್ಟಿ, ಎತ್ತುಗಳ ಮೈ ತೊಳೆದು, ಕೋಡುಗಳಿಗೆ ಬಣ್ಣ ಹಚ್ಚಿ ಕೊಂಬು ಗುಣುಸು ಹಾಕಿ, ಹಣೆ ಗೆಜ್ಜೆ, ಕೊರಳು ಗಂಟೆ ಕಟ್ಟಿ, ಮೈ ತುಂಬ ಚಿತ್ತಾರದ ಜೂಲ ಹಚ್ಚುತ್ತಿದ್ದರೆ... ಅತ್ತ ಹೆಣ್ಣು ಮಕ್ಕಳಿಂದ ಅಡುಗೆಮನೆ ಘಮಘಮಗುಟ್ಟುತ್ತಿರುತ್ತದೆ.

ಎತ್ತು-ಗಾಡಿಗಳನ್ನು ಅಲಂಕರಿಸಿ ಮನೆಯ ಎಲ್ಲರೂ ಸೇರಿ ಹೊಲದತ್ತ ಸಾಗುತ್ತಾರೆ. ಅವರು ತಂತಮ್ಮ ಹೊಲಗಳಿಗೆ 'ಚರಗ' ಆಚರಿಸಲು ಹೊರಟ ಪರಿ ಇದು. ಹಚ್ಚ ಹಸರಿನ ಬೆಳೆ ಹೊತ್ತ ಭೂಮಿ ತಾಯಿಗೆ ಇಂದು 'ಸೀಮಂತ' ಮಾಡಿ ಸಂತಸ ಹಂಚಿಕೊಳ್ಳುವ ಶುಭ ದಿನ ಈ ಎಳ್ಳು ಅಮಾವಾಸ್ಯೆ. ಅಂದು ಹೊಲಕ್ಕೆ ಯಾರೇ ಬಂದರೂ ಅವರು ಅತಿಥಿಗಳು.

ಎಳ್ಳಮವಾಸ್ಯೆಯ ಅಡುಗೆ ವೈವಿಧ್ಯ ಅಪಾರ. ಹಿಂದಿನ ದಿನ ಇಡೀ ರಾತ್ರಿ ತಯಾರಿಸಿದ ಎಳ್ಳು ಹೋಳಿಗೆ, ಎಳ್ಳು ಬಜಿ, ಕಡಕ್ ಸಜ್ಜೆ ರೊಟ್ಟಿ, ಕರಿಗಡಬು, ತರಾವರಿ ಮಸಾಲೆ ಉಸುಳಿ, ಖಾರಸಾರು, ಎಣ್ಣೆಗಾಯಿ ಬದನೆಕಾಯಿ ಪಲ್ಯೆ, ಕೆನೆ ಮೊಸರು, 'ಚರಗ'ದ ನೈವೇದ್ಯಕ್ಕೆ ತಯಾರಿಸಿದ ಜೋಳ, ಅವರೆ, ಅಕ್ಕಿ ಕಿಚಡಿ. ಈ ಎಲ್ಲಾ ಭಕ್ಷ್ಯಾನ್ನಗಳ ಬಿದಿರು ಬುಟ್ಟಿ ಭರ್ತಿಯಾಗಿ ಬಂಡಿ ಏರಿರುತ್ತವೆ. ಹೊಲಕ್ಕೆ



ಹೊಲದಲ್ಲಿ ಪೂಜೆ

ಸಾಗುವ ಬಂಡಿಗಳ ಸಂಭ್ರಮ ಮಾತಿಗೆ ನಿಲುಕದ್ದು. ನಾ ಮುಂದೆ– ತಾ ಮುಂದೆ ಎಂಬ ಸ್ಪರ್ಧೆಯೂ ನಡೆಯುತ್ತದೆ. ಹೊಸದಾಗಿ ಮದುವೆಯಾದ ಜೋಡಿಗಳೂ ಅಂದು ಈ ಆಚರಣೆಯಲ್ಲಿ ಪಾಲ್ಗೊಳ್ಳಬೇಕು.

'ಕಡಬು ಬಜಿ' ಇಂದಿನ ಅತ್ಯಂತ ವಿಶೇಷ ತಿನಿಸು. ಪ್ರತಿಯೊಂದು ಕಾಳು, ಕಾಯಿ ಪಲ್ಲೆ ಮತ್ತು ತರಕಾರಿಗಳನ್ನು ಸೇರಿಸಿ ಬೇಯಿಸಿದ್ದೇ ಕಡಬು ಬಜಿ. ಎಲ್ಲ ಪದಾರ್ಥಗಳನ್ನೂ ಸಹ ಸೇರಿಸುವುದರಿಂದ ಇದು ಅತ್ಯಂತ ರುಚಿಯಾಗಿರುತ್ತದೆ. ಅಲ್ಲದೆ ಜೋಳದ ಕಬ್ಬು (ಕಾಂಡ) ತಿನ್ನುವುದು ಇಂದಿನ ದಿನದ ಪದ್ಧತಿ. ಬೇರೆ ದಿನಗಳಲ್ಲಿಯೂ ತಿನ್ನುತ್ತಾರೆ ಆದರೆ ಎಳ್ಳಮವಾಸ್ಯೆಯಂದು ತಿಂದರೆ ತುಂಬಾ ರುಚಿಯಾಗಿರುತ್ತದೆ ಎಂಬುದು ಹಿರಿಯರ ಅನಿಸಿಕೆ.

ಹೊಲಕ್ಕೆ ಸಾಗಿದ ನಂತರ ಬನ್ನಿ ಗಿಡದ ಕೆಳಗಡೆ ಭರಮ ದೇವರೆಂದು ಕರೆಯುವ ಐದು ಕಲ್ಲುಗಳನ್ನು ಇಟ್ಟು ಪೂಜಿಸುತ್ತಾರೆ. ನೈವೇದ್ಯವನ್ನು ಹೊಲದ ನಾಲ್ಕು ದಿಕ್ಕಿಗೂ 'ಉಲ್ಲುಲ್ಲಗೋ... ಚಳಂಬ್ರಿಗೋ' ಎನ್ನುತ್ತಾ ಉಗ್ಗುತ್ತಾರೆ. ಹೊಲದಲ್ಲಿ ಬೆಳೆದಿರುವ ಜೋಳದ ತೆನೆಗಳಿಗೆ ಅರಿಶಿನ –ಕುಂಕುಮ ಇಟ್ಟು, ಆರತಿ ಬೆಳಗಿ ಮನೆಯ ಹಿರಿಯರು ಅಥವಾ ಹೆಣ್ಣು ಮಕ್ಕಳು ಪೂಜಿಸುತ್ತಾರೆ, ಅಲ್ಲದೆ ಹೊಲದಲ್ಲಿರುವ ಬಾವಿ, ಬೋರ್ ವೆಲ್‌ಗಳಿಗೂ, ಇತರ ಬೆಳೆಗಳಿಗೂ ಸಹ ಪೂಜಿಸಲಾಗುತ್ತದೆ. ಎಳ್ಳಮವಾಸ್ಯೆಯ ಮತ್ತೊಂದು ವಿಶೇಷವೆಂದರೆ ಅಂದು ಜೇನು ತಿಂದರೆ ಒಳ್ಳೆಯದೆಂಬ ಭಾವನೆಯಿದೆ. ಗಂಡಸರು ಹೊಲದಲ್ಲಿ ಜೇನು ಕಟ್ಟಿದ್ದರೆ ಕಿತ್ತು ತಂದು ತುಪ್ಪವನ್ನು ಎಲ್ಲರಿಗೂ ಹಂಚುತ್ತಾರೆ. ಹೊಲದಲ್ಲಿ ಜೇನಿರುವ ಸ್ಥಳ ಮುಂಚಿತವಾಗಿ ತಿಳಿದಿದ್ದರೂ ಸಹ ಎಳ್ಳಮವಾಸ್ಯೆಯ ದಿವಸವೇ ಕೀಳುವುದು ಪದ್ಧತಿ. ಇದಾದ ನಂತರ 'ಹುಲಸಾಗಿ ಬೆಳೆ ಬರಲಿ' ಎಂದು ಭೂಮಿ ತಾಯಿಗೆ ಉಡಿ ತುಂಬಿ ಎಲ್ಲರೂ ಒಂದೆಡೆ ಕುಳಿತು ಊಟ ಮಾಡುತ್ತಾರೆ.

ಸಂಜೆಯಾಗುತ್ತಿದ್ದಂತೆ ಚಕ್ಕಡಿಗಳು ಮತ್ತೆ ಒಂದೊಂದಾಗಿ ಊರ ದಾರಿ ಹಿಡಿಯುತ್ತವೆ.

## ೧೦. ಮಗೆ ಮುಂಡುಗ ಹಾಕುವುದು

ನಾಟಿಯಾದ ಸಸಿಗಳು ಗಟ್ಟಿಯಾಗಿ ಚಿಗುರತೊಡಗಿದಾಗ ಮಲೆನಾಡಿನ ವ್ಯವಸಾಯಗಾರರು 'ಎರಕಲು ಗೂಟ'ದ ಆಚರಣೆಗೆ ತೊಡಗುತ್ತಾರೆ. ಮಗೆ ಮಳೆ ಶುರುವಾಗುತ್ತದೆ ಎನ್ನುವಾಗ ಹಿಂದಿನ ಸಂಜೆಯೇ ಹಳ್ಳಗಳ ದಂಡೆಯಲ್ಲಿ ಬೆಳೆಯುವ ಮುಂಡುಗದ ತುಂಡುಗಳನ್ನು ಕಡಿದು ತಂದು ಗದ್ದೆಯ ಪ್ರತಿ ಹಾಳೆಯಲ್ಲೂ ಇಟ್ಟು ಬರುತ್ತಾರೆ. ರಾತ್ರಿಯ ಹೊತ್ತು ಒಬ್ಬ ಗಂಡಸು ಮೈಮೇಲೆ ನೂಲೆಳೆಯಿಲ್ಲದಂತೆ ಬೆತ್ತಲೆಯಾಗಿ

ಹೋಗಿ ಆ ತುಂಡುಗಳನ್ನು ಪ್ರತಿ ಹಾಳೆಯಲ್ಲಿ ನೆಟ್ಟು ಬರುತ್ತಾನೆ. ಇತ್ತೀಚೆಗೆ ಬೆತ್ತಲೆ ಹೋಗುವ ಮನುಷ್ಯ ಕರಿ ಕಂಬಳಿ ಹೊದೆಯಬಹುದೆಂಬ ರಿಯಾಯಿತಿ ನೀಡಿದ್ದಾರೆ. ಹೀಗೆ ಎರಕಲು ಗೂಟ ನೆಡುವುದರಿಂದ ಭೂಮಿ ತನ್ನ ಫಲವಂತಿಕೆಯನ್ನು ಕಳೆದುಕೊಳ್ಳುವುದಿಲ್ಲವೆಂತಲೂ, ಪೈರಿಗೆ ಯಾವ ರೋಗ ರುಜಿನ, ಹುಳು, ಉಪ್ಪಟೆಯ ಕಾಟವಿರುವುದಿಲ್ಲವೆಂತಲೂ, ಪ್ರಾಣಿಗಳಿಂದ ತೊಂದರೆ ಬರುವುದಿಲ್ಲವೆಂತಲೂ ನಂಬಲಾಗುವುದು. ಕೆಲವರು ಮುಂಡಗದ ತುಂಡಿನ ಬದಲು ಕವೆಕೋಲುಗಳನ್ನು ನೆಟ್ಟು ಅದರ ಮೇಲೆ ಬಿಳಿಕಲ್ಲಿಟ್ಟು 'ಕಣ್ಣಾಸರು' ಎಂದುಕೊಳ್ಳುತ್ತಾರೆ.



ಗದ್ದೆಯ ಮಧ್ಯೆ ಮಗೆ ಮುಂಡುಗ ನೆಟ್ಟಿರುವುದು

## ೧೧. ಕರಿಕೊಳ್ಳಿ ಹಾಕುವುದು

ಗದ್ದೆಯನ್ನು ಕೊಯ್ಲು ಮಾಡುವಾಗ ಪೈರನ್ನು ಸಂಪೂರ್ಣವಾಗಿ ಕಟಾವು ಮಾಡದಿರುವುದು ಒಂದು ವಿಶೇಷ. ಮಲೆನಾಡಿನ ಭಾಗಗಳಲ್ಲಿ ಕೊನೆಯಲ್ಲಿ ಐದು ಸಸಿಗಳನ್ನು ಉಳಿಸುತ್ತಾರೆ. ಕೊಯ್ಲು ಮಾಡಿದ ಹುಲ್ಲನ್ನು ಹೊರೆ ಮಾಡಿ ಬಣವೆಗೆ

ಹೊತ್ತು ಸಾಗಿಸುತ್ತಾರೆ. ಐದು ಸಸಿಗಳ ಜಾಗದ ಹತ್ತಿರದ ಕೊನೆಯ ಹೊರೆಯನ್ನು ನಿಶ್ಚಿತ ಮನುಷ್ಯನೊಬ್ಬ ಹೊತ್ತು ಹೊರಡುತ್ತಾನೆ. ಆಗ ಅವನು ಯಾರು ಮಾಡನಾಡಿಸಿದರೂ ಮಾತನಾಡದೆ ಬಣವೆಗೆ ಹಾಕಿ, ಮನೆಯ ಒಲೆಯಲ್ಲಿ ಕೊಳ್ಳಿಯೊಂದನ್ನು ತಂದು ಪ್ರಸ್ತುತ ಗದ್ದೆಗೆ ಹಣಿದು ಬರುತ್ತಾನೆ. ಇದಕ್ಕೆ 'ಕರಿಕೊಳ್ಳಿ ಹಾಕುವುದು' ಎನ್ನುತ್ತಾರೆ. ಇಷ್ಟು ದಿವನ ಪೈರಿನಿಂದ ತುಂಬಿ ತುಳುಕಿದ ಗದ್ದೆ ಬೋಳಾಗಿರುವುದನ್ನು ಕಂಡು ಯಾರೂ ಕಣ್ಣು ಹಾಕಬಾರದೆಂದು ಈ ಆಚರಣೆ.

ಬಯಲು ನಾಡಿನಲ್ಲಿ ಐದು ಸಸಿ ಉಳಿಸಿ ಪೂಜಿಸುವುದನ್ನೇ 'ಬೆಳೆಮುಂಬು' ಎಂದು ಕರೆಯುತ್ತಾರೆ. ಕೊನೆಯಲ್ಲಿನ ಸಸಿಗಳನ್ನು ತುದಿಗಂಟು ಹಾಕಿ ಕಟ್ಟಿ ಕುಡುಗೋಲು ಮಸಗಲ್ಲುಗಳನ್ನಿಟ್ಟು ಪೂಜಿಸಿ ಎಡೆ ಹಿಡಿದು ಊಟ ಮಾಡುತ್ತಾರೆ. ಬೆಳೆಮುಂಬು ಆಚರಣೆಗೆ ದಾಸಯ್ಯ ಪೂಜಾರಿಗಳನ್ನೂ ಆಹ್ವಾನಿಸುವುದುಂಟು. ಆಗ ಜೊತೆ – ಜೊತೆಗೆ ಮಂತ್ರ ಹೇಳುವುದು, ಶಂಖ ಊದುವುದು, ಜಾಗಟೆ ಬಾರಿಸುವುದು ನಡೆಯುತ್ತದೆ. ಬೆಳೆ ಮುಂಬನ್ನೇ ಹೋಲುವಂತಹ ಹತ್ತಿದೇವರ ಆಚರಣೆ ಒಂದಿದೆ. ಮೊದಲ ಬಾರಿಗೆ ಹತ್ತಿ ಬಿಡಿಸುವಾಗ ಆಯ್ದ ಗಿಡವೊಂದಕ್ಕೆ ಪೂಜಿಸಿ ಬಿಡಿಸಿದ ಮೊದಲ ಹತ್ತಿಯನ್ನು ಏರಿಸುತ್ತಾರೆ. ನಂತರ ಪ್ರತಿ ಸಾರಿ ಹಾಗೆಯೇ ಇರುತ್ತದೆ. ಎಲ್ಲ ಗಿಡಗಳನ್ನು ಕತ್ತರಿಸಿ ಹಾಕಿದರೂ ಹತ್ತಿ ದೇವರ ಗಿಡ ಮಾತ್ರ ಮುಂದಿನ ಉಳುಮೆಯಾಗುವ ತನಕ ಹಾಗೆಯೇ ಇರುತ್ತದೆ.

ಪ್ರಸ್ತುತ ಬೆಳೆಮುಂಬು ಮತ್ತು ಹತ್ತಿ ದೇವರ ಪೂಜೆ ಆಚರಣೆಯು ಪ್ರಾಕ್ತನ ಮಾನವನ ನಂಬಿಕೆಯ ಪಳೆಯುಳಿಕೆಯಂತೆ ಕಾಣುತ್ತದೆ. ಧಾನ್ಯಗಳಲ್ಲಿ, ಬೆಳೆಗಳಲ್ಲಿ ಆತ್ಮವಿದೆ. ಅದನ್ನು ಪೂರ್ಣ ಕೊಯ್ದು ಹಾಕಿದರೆ ಪುನಃ ನಮಗೆ ಸಿಕ್ಕಲಾರದು ಎಂಬ ನಂಬಿಕೆಯ ಪರಿಣಾಮವೂ ಇದ್ದಂತೆ ತೋರುತ್ತದೆ. ಪ್ರಪಂಚದಾದ್ಯಂತ ಹರಡಿರುವ ಇಂತಹ ಅನೇಕ ಆಚರಣೆಗಳನ್ನು ಫ್ರೇಜರ್‌ರವರು ಗಮನಿಸಿ ವಿಶ್ಲೇಷಿಸಿದ್ದಾರೆ. ಆದಿವಾಸಿಗಳ ಪ್ರಕಾರ ಒಂದು ಹೊಲದಲ್ಲಿ ಬೆಳೆ ಬೆಳೆದಿದ್ದರೆ ಹಾಗಾಗಲು ಅದರಲ್ಲಿ ಧಾನ್ಯಮಾತೃವಿನ ಆತ್ಮ ಇರುವುದೇ ಕಾರಣ. ಬೆಳೆಯನ್ನು ಕೊಯ್ಯುವವರೆಗೆ ಮಾತ್ರ ಧಾನ್ಯಮಾತೃ ಹೊಲವನ್ನು ಬಿಟ್ಟು ಎಲ್ಲಿಯೂ ಹೋಗುವುದಿಲ್ಲ. ಆದರೆ ಬೆಳೆಯನ್ನು ಕೊಯ್ಯುತ್ತಾ ಬಂದಂತೆ ಸಾಯುವುದನ್ನು ತಪ್ಪಿಸಿಕೊಳ್ಳಲು ಒಂದರಿಂದ ಇನ್ನೊಂದು ಪೈರಿಗೆ ಓಡುತ್ತದೆ. ಆದರೆ ಹೊಲದಲ್ಲಿ ಎಲ್ಲ ಪೈರನ್ನೂ ಕೊಯ್ದು ಇನ್ನೊಂದು ಮಾತ್ರ ಉಳಿದಿದ್ದರೆ ಅದರಲ್ಲಿಯೇ ಧಾನ್ಯಮಾತೃ ಇರುವುದೆಂದು ಅವರ ನಂಬಿಕೆ. ಆದುದರಿಂದ ಧಾನ್ಯಮಾತೃ ಆ ಕೊನೆಯ ಪೈರಿನಲ್ಲಿ, ಕೊನೆಯ ಕಂತೆಯಲ್ಲಿ, ಕೊನೆಯ ಪೈರನ್ನು

ಕೊಯ್ಯುವ ವ್ಯಕ್ತಿಯಲ್ಲಿ, ಕೊನೆಯ ಕಂತೆ ಕಟ್ಟುವ ವ್ಯಕ್ತಿಯಲ್ಲಿ ಇರಲು ಸಾಧ್ಯ. ಈ ಧಾನ್ಯಮಾತೃವನ್ನು ಹೊರಗೆ ಹೋಗದಂತೆ ಸಾಯಿಸಿದರೆ ಅದರ ಶಕ್ತಿ ಹೊಲದಲ್ಲಿಯೇ ಉಳಿದು ಮುಂದಿನ ವರ್ಷ ಬೆಳೆ ಬೆಳೆಯಲು ಸುಗಮವಾಗುತ್ತದೆ. ಈ ಮಾತುಗಳ ಆಧಾರದ ಮೇಲೆ ನಮ್ಮ ಬೆಳೆಮುಂಬು ಈ ಹೊಲದ ಧಾನ್ಯದ ಆತ್ಮವನ್ನು ತನ್ನಲ್ಲೇ ಉಳಿಸಿಕೊಂಡು ಮುಂದಿನ ಫಲಶಕ್ತಿಗೆ ಕಾರಣವಾಗುವ ಸಂಕೇತವಾಗಿದೆ. ಹತ್ತಿ ದೇವರ ಪೂಜೆ ಆಚರಣೆಯೂ ಇದನ್ನೇ ನೆನಪಿಸುತ್ತದೆ. ಪ್ರಾಯಶಃ ಬಲಿ ಕೊಡುವ ಪದ್ಧತಿ ಸುಧಾರಣೆ ಆಗಿ ಆಗಿ ಬೆಳೆ ಉಳಿಸುವ ಕ್ರಮಕ್ಕೆ ಬಂದು ನಿಂತಿದೆ.

## ೧೨. ವೀಳ್ಯದೆಲೆಗೆ ಗೌರಿ ಪೂಜೆ

ವೀಳ್ಯದೆಲೆಗೆ ನಮ್ಮ ಗ್ರಾಮೀಣ ಸಮುದಾಯ ನೀಡುವ ಪ್ರಾಮುಖ್ಯತೆ ನಮಗೆಲ್ಲರಿಗೂ ತಿಳಿದದ್ದೇ. ಶುಭ ಕಾರ್ಯವಾಗಲೀ, ಅಶುಭ ಕಾರ್ಯವಾಗಲೀ, ಭೂತ ಬಿಡಿಸುವುದಿರಲಿ, ಬಾಗಿನ ಕೊಡುವುದಿರಲಿ 'ಎರಡೆಲೆ ಎರಡಡಿಕೆ' ಇರಲೇಬೇಕು. ಏನೇ ಕೊಡು-ತೆಗೆದುಕೊಳ್ಳುವುದಿರಲಿ ಎಲೆಯಡಿಕೆ ಜೊತೆಯಲ್ಲಿಟ್ಟೇ ಕೊಡಬೇಕೆಂಬುದು ಒಂದು ಸಂಪ್ರದಾಯ, ತಾಂಬೂಲಕ್ಕಂತೂ ವೀಳ್ಯದೆಲೆಯೇ ಮೂಲ. ಹಾಗಾಗಿ ವೀಳ್ಯದೆಲೆ ಎಂದರೆ ರೈತರಿಗೆ ಸಾಕ್ಷಾತ್ ಗೌರಿ. ವೀಳ್ಯದೆಲೆ ತೋಟವನ್ನು ಅವರು ವಿಶೇಷ ಗೌರವದಿಂದಲೇ ಕಾಣುತ್ತಾರೆ. ಅಲ್ಲಿ ಚಪ್ಪಲು ಮೆಟ್ಟಬಾರದು, ಔಷಧ ಸಿಂಪರಣೆ ಕೂಡದು ಎಂಬ ನಿಷೇಧಗಳಿವೆ.

ವೀಳ್ಯದೆಲೆಯನ್ನು ಗೌರಿಯ ಅವತಾರ ಎಂದು ನಂಬುವುದು ಎಲ್ಲ ಪ್ರದೇಶಗಳಲ್ಲಿ ಕಾಣಬಹುದು. ಎಲೆ ತೋಟವಂತೂ ಸಾಕ್ಷಾತ್ ದೇವಾಲಯದಂತೆಯೇ ಪರಿಗಣಿಸುತ್ತಾರೆ. ದೇವಾಲಯದ ಸಕಲ ನಿರ್ಬಂಧಗಳೂ ಇಲ್ಲಿವೆ. ಕೃಷಿ ಏನೆಲ್ಲ ಆಧುನೀಕರಣಗೊಂಡಿದ್ದರು ಸಹ ಎಲೆ ತೋಟಕ್ಕೆ ಮಾತ್ರ ರಾಸಾಯನಿಕಗಳು ಸೋಂಕುವಂತಿಲ್ಲ. ವೀಳ್ಯದೆಲೆ ವಾಣಿಜ್ಯ ಬೆಳೆಯಾಗಿದ್ದರೂ ಈಗಲೂ ರೈತರಲ್ಲಿ ಎಲೆತೋಟದ ಬಗೆಗಿನ ಭಕ್ತಿ, ಗೌರವ, ನಂಬಿಕೆಗಳು ಬದಲಾಗಿಲ್ಲ. ತೋಟವಿರುವ ಪ್ರತಿಯೊಬ್ಬರೂ ಗೌರಿ ಹಬ್ಬದ ಸಮಯದಲ್ಲಿ ಗೌರಿಪೂಜೆ ಮತ್ತು ಬೊಮ್ಮಪ್ಪನ ಪೂಜೆಯನ್ನು ತೋಟದಲ್ಲೇ ಮಾಡುತ್ತಾರೆ. ಅದಕ್ಕೆ ಹಿನ್ನೆಲೆಯಾಗಿ ಸ್ವಾರಸ್ಯವಾದ ಕಥೆಯೊಂದು ಹೀಗಿದೆ:

*ಪಾಂಡವರ ತಾಯಿ ಕುಂತಿದೇವಿಯು ಗಜಗೌರಿ ವ್ರತವನ್ನು ಮಾಡಲು ದೇವಲೋಕದಿಂದ ತರಿಸಿದ ಐರಾವತ ಮುಂತಾದ ಅನೇಕ ವಸ್ತುಗಳಲ್ಲಿ ವೀಳ್ಯದೆಲೆ ಅಂಬು ಸಹ ಒಂದು. ಪೂಜೆ ಮುಗಿದ ನಂತರ ಮುಂಚೆಯೇ ಆದ ಕರಾರಿನಂತೆ ಅವು ದೇವಲೋಕದ ಕಡೆ ಹೊರಟವು. ಆದರೆ ಅವುಗಳನ್ನು ದೇವಲೋಕಕ್ಕೆ ಹೋಗಲು*



ಎಲೆ ಬಳ್ಳಿ ತೋಟ

ಬಿಡದೆ ಒಬ್ಬೊಬ್ಬರು ಒಂದೊಂದನ್ನು ಕಟ್ಟಿ ಹಾಕಿದರು. ಭೀಮ – ಐರಾವತವನ್ನು, ಧರ್ಮರಾಯ ಅವರೆಕಾಳನ್ನು, ನಕುಲ – ಸಹದೇವರು ಭತ್ತವನ್ನು ಹಿಡಿದು ಕಟ್ಟಿಹಾಕಿದರೆ ವೀಳ್ಯದೆಲೆ ಅಂಬನ್ನು 'ಬೊಮ್ಮಪ್ಪ'ನೆಂಬ ಗಂಗ ಮತಸ್ಥ ಬೆಸ್ತರವನು ಕಟ್ಟಿ ಹಾಕಿದನಂತೆ. ಹಾಗಾಗಿ ಅವೆಲ್ಲಾ ಭೂ ಲೋಕದಲ್ಲಿಯೇ ಉಳಿದವಂತೆ. ಈಗಲೂ ಸಹ ವೀಳ್ಯದೆಲೆ ಅಂಬು ಆಕಾಶದತ್ತ ಹರಿಯುವುದು ದೇವಲೋಕದ ಆಸೆಗಾಗಿಯೇ! ಅದಕ್ಕಾಗಿಯೇ ಪ್ರತಿ ವರ್ಷ ಎಲೆ ಅಂಬನ್ನು ಇಳಿಸುವ ಪದ್ಧತಿ ಇದೆ ಎನ್ನುತ್ತಾರೆ. ಮತ್ತು ವೀಳ್ಯದೆಲೆಯನ್ನು ಕಟ್ಟಿ ಹಾಕಿದ ಬೊಮ್ಮಪ್ಪನ ನೆನಪಿಗಾಗಿ ವರ್ಷಕ್ಕೊಮ್ಮೆ ಎಲೆ ಅಂಬನ್ನು ಇಳಿಸಿ ಎಡೆ ಹಾಕಿ ಪೂಜೆ ಮಾಡುತ್ತಾರೆ. ಜೊತೆಗೆ ಸಾಕ್ಷಾತ್ ಗೌರಿಯೇ 'ವೀಳ್ಯದೆಲೆ'ಯಾಗಿದ್ದಾಳೆ ಎಂದು ನಂಬಿದ ರೈತರು ಅದೇ ಸಮಯಕ್ಕೆ 'ಗೌರಿ ಪೂಜೆ'ಯನ್ನೂ ಮಾಡುತ್ತಾರೆ.

ಗೌರಿ ಹಬ್ಬದ ದಿನ ಅಥವಾ ಹಬ್ಬ ಮುಗಿದ ಒಂಭತ್ತು ದಿವಸಕ್ಕೆ ತೋಟದ ದೇವ ಮೂಲೆಯಲ್ಲಿ ಮೂಡಣ ದಿಕ್ಕಿಗೆ ಚಿಕ್ಕ ಚಪ್ಪರ ಹಾಕಿ ಬಾಳೆಕಂದು ಕಟ್ಟಿ ಕಳಸವಿಟ್ಟು ಗೌರಿಯ ಮುಖವನ್ನು ಬರೆದ ತೆಂಗಿನ ಕಾಯಿಯನು ಕಳಸದ ಬಾಯಿಗಿಡುತ್ತಾರೆ. ಆ ತೆಂಗಿನಕಾಯಿಗೆ ವಾಲೆ, ಜುಮುಕಿ, ಬಳೆ, ಸರ... ಮುಂತಾದ ಒಡವೆಗಳನ್ನು ತೊಡಿಸಿ, ಹೊಸ ಸೀರೆ, ಕುಬುಸದ ಕಣ ಉಡಿಸಿ ಎಳ್ಳಿನ ಚಿಗಳಿ, ಅಕ್ಕಿಯ ತಂಬಿಟ್ಟು, ಅಕ್ಷತೆ, ಸಿಹಿ ಅಡುಗೆ ಎಡೆ ಇಡುತ್ತಾರೆ. ತೋಟದಲ್ಲಿ ಬಳಸುವ ಕುಡುಗೋಲು, ಏಣಿ, ಎಲೆ ಕುಯ್ಯುವ ಉಗುರು, ನೀರು ಹುಯ್ಯುವ ಗುಂಬ ಎಲ್ಲವನ್ನೂ ಇಟ್ಟು ಸಿಂಗರಿಸಿ ಸಮೃದ್ಧವಾಗಿ ಸೇವಂತಿಗೆ ಹೂ ಮುಡಿಸಿ ಮೊದಲು ಗೌರಮ್ಮನ ತಂಗಿಯಾದ ಗಂಗೆಯನ್ನು ಪೂಜಿಸುತ್ತಾರೆ. ನಂತರ ಗೌರಿಗೆ ಪೂಜೆ ಮಾಡಿ ಮುತ್ತೈದೆಯರು ಅಕ್ಷತೆ ಹಚ್ಚಿ ಬಾಗಿನ ಕೊಡುತ್ತಾರೆ.

ಪೂಜೆಯೆಲ್ಲಾ ಹೆಂಗಸರ ಕೆಲಸ. ಆದರೆ ಬೊಮ್ಮಪ್ಪನಿಗೆ ಎಡೆ ಹಾಕುವುದು ಗಂಡಸರ ಕೆಲಸ. ಬೊಮ್ಮಪ್ಪನಿಗೆಂದೇ ಜೀರಿಗೆ ಮೆಣಸು ಹಾಕಿ ಮಾಡಿದ ಕಿಚಡಿ ಅನ್ನ, ನೀರು ಮತ್ತು ಗಂಧದ ಕಡ್ಡಿ. ಇವು ಮೂರನ್ನೂ ಒಬ್ಬೊಬ್ಬರು ಹಿಡಿದುಕೊಂಡು

> ಬೊಮ್ಮಪ್ಪೊ, ಬೊಮ್ಮಪ್ಪೊ,
> ವರಗುಡ್ಲು ಮಡಗಿವ್ನಿ, ಗುಂಬ ಮಡಗಿವ್ನಿ,
> ನಿಂಗೆ ಬೇಕಾದ್ದೆಲ್ಲ ಮಡಗಿವ್ನಿ

ಊಟ ಮಾಡಿ ಬೊಮ್ಮಪ್ಪೋ, ಒಳ್ಳೇದು ಮಾಡು ಬೊಮ್ಮಪ್ಪೋ...' ಎನ್ನುತ್ತಾ, ಅನ್ನ-ನೀರು ಎರಚುತ್ತಾ ತೋಟ ಮೂರು ಸುತ್ತು ಹಾಕುತ್ತಾರೆ. ಸಂಜೆ ಹೊತ್ತು ಈ ಪೂಜೆ ನಡೆಯುತ್ತದೆ.


ಇಳಿಗತ್ತಲ ಹೊತ್ತಿನಲ್ಲಿ ಹಳ್ಳಿಯ ಎಲ್ಲರೂ ವೀಳ್ಯದೆಲೆ ತೋಟದಲ್ಲಿ ಸೇರಿ ಗೌರಿಗೆ ಹಸೆ ಹಚ್ಚಿ, ಬೊಮ್ಮಪ್ಪನಿಗೆ ಎಡೆ ಹಾಕಿ, ಆ ಮೂಲಕ ತಮ್ಮ ಬೇಸಾಯವೆಂಬ ಕಾಯಕಕ್ಕೆ ದೈವತ್ವದ ಸ್ವರೂಪ ನೀಡಿ ಖುಷಿಪಡುತ್ತಾರೆ.

## ೧೩. ನೇಗಿಲು ಪೂಜೆ

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ, ಕನಕಪುರ ಮತ್ತು ತಮಿಳು ನಾಡು ಪ್ರದೇಶದ ಸಾವಿರ ಭತ್ತ ಮತ್ತು ಕೆಲವು ಹಳ್ಳಿಗಳಲ್ಲಿ ಯುಗಾದಿ ಹಿಂದೆ – ಮುಂದೆ ನೇಗಿಲು ಪೂಜೆ ಎಂಬ ವಿಶಿಷ್ಟ ಆಚರಣೆ ಮಾಡುತ್ತಾರೆ. ಹಸಿ ಸಗಣಿಯಲ್ಲಿ ಬಟ್ಟಲಾಕಾರ ಮಾಡಿ ಸ್ವಲ್ಪ ಒಣಗಿಸಿ ಅದಕ್ಕೆ ಕೆಮ್ಮಣ್ಣು ಹಾಕಿ ತಾವು ಮುಂದಿನ ವರ್ಷ ಬಿತ್ತುವ ೫, ೭ ಅಥವಾ ೯ ಜಾತಿಯ ಬೀಜಗಳನ್ನು ಸ್ವಲ್ಪ-ಸ್ವಲ್ಪ ಬಿತ್ತುತ್ತಾರೆ. ಸಾಮಾನ್ಯವಾಗಿ

ಅವರೆ, ತೊಗರಿ, ರಾಗಿ, ಭತ್ತ, ಜೋಳ, ನವಣೆ, ಹರಳು, ಹುರುಳಿ ಮುಂತಾದವನ್ನು ಬಿತ್ತುವುದು ರೂಢಿ.

ಬಿತ್ತಿದ ನಂತರ ಈ ಸಗಣಿ ಬಟ್ಟಲನ್ನು ಎರಡು ಮರದ ನೇಗಿಲುಗಳಿಗೆ ಕಟ್ಟುತ್ತಾರೆ. ನೇಗಿಲುಗಳು ಹೊಸತಾಗಿರಬೇಕು, ಹಳೆಯವನ್ನು ಬಳಸುವುದಿಲ್ಲ. ಹೀಗೆ ಬಿತ್ತಿದ ನಂತರ ಒಂಭತ್ತನೇ ದಿನದವರೆಗೆ ನೀರು ಹಾಕಿ ಕೊನೆಯ ದಿನ ಮನೆ ಹಿರಿಯರು ಮತ್ತು ಗ್ರಾಮದ ಹಿರಿಯರು ಸೇರಿ ಮೊಳಕೆಯನ್ನು ಪರೀಕ್ಷಿಸುತ್ತಾರೆ. ಯಾವ ಬೆಳೆ ಎಷ್ಟೆಷ್ಟು ಪ್ರಮಾಣದಲ್ಲಿ ಮೊಳಕೆ ಬಂದಿದೆಯೋ ಅಷ್ಟು ಬೆಳೆ ಮುಂದಿನ ವರ್ಷ ಆಗುತ್ತದೆ ಎಂಬುದು ನಿರೀಕ್ಷೆ.



ನೇಗಿಲು ಪೂಜೆಯಲ್ಲಿ ಮೊಳಕೆ ಪರೀಕ್ಷೆ

ಉದಾಹರಣೆಗೆ ರಾಗಿ ಐವತ್ತು ಪೈಸೆ (ಅರ್ಧ ಭಾಗ) ಮೊಳಕೆ ಬಂದಿದ್ದರೆ ಎಂಟಾಣೆ ಬೆಳೆ, ಮುಕ್ಕಾಲು ಭಾಗ ಬಂದಿದ್ದರೆ ಹನ್ನೆರಡಾಣೆ ಬೆಳೆ ಆಗುತ್ತದೆ. ಈ ರೀತಿ ನಿರ್ಧರಿಸಿ ಯಾವುದು ಹೆಚ್ಚು ಹುಲುಸಾಗಿ ಮೊಳಕೆ ಬಂದಿರುತ್ತದೆಯೋ ಅದನ್ನು ಈ ವರ್ಷ ಜಾಸ್ತಿ ಪ್ರಮಾಣದಲ್ಲಿ (ಒಂದ್ ಕೈ ಮುಂದೆ ಮಾಡಿ ಬಿತ್ಬೇಕು) ಬಿತ್ತಬೇಕೆಂದು ತೀರ್ಮಾನಿಸಿಕೊಳ್ಳುತ್ತಾರೆ. ಹೇಗೆಂದರೆ ಹೆಸರು ಕಾಳು ಉತ್ತಮವಾಗಿ ಮೊಳಕೆಯಾಗಿದ್ದರೆ ಅಕ್ಕಡಿ ಸಾಲಿಗೆ ಬೇರೆ ಕಾಳುಗಳನ್ನು ಕಡಿಮೆ ಮಾಡಿ ಹೆಸರುಕಾಳು ಜಾಸ್ತಿ ಮಾಡುತ್ತಾರೆ.

ತೊಗರಿ ಚೆನ್ನಾಗಿ ಮೊಳಕೆ ಬಂದಿದ್ದರೆ ಅದನ್ನು ಹೆಚ್ಚು ಮಾಡುತ್ತಾರೆ. ತೀರ್ಮಾನ ಮುಗಿದ ನಂತರ ಊರವರೆಲ್ಲರೂ ಸಾಮೂಹಿಕವಾಗಿ ತೆರಳಿ ಎಲ್ಲಾ ಮೊಳಕೆ ಬಂದ ಬಟ್ಟಲುಗಳನ್ನು ಗಂಗಮ್ಮನಿಗೆ (ನೀರಿನ ಸೆಲೆ) ಬಿಡುತ್ತಾರೆ.

ಇದನ್ನು ಆಚರಣೆಯ ಮಟ್ಟಕ್ಕಿಂತ ಆಚೆ ನಿಂತು ನೋಡಿದರೆ ಹೀಗನ್ನಿಸುತ್ತದೆ. ಯುಗಾದಿ ಮಾರ್ಚ್-ಏಪ್ರಿಲ್‌ನಲ್ಲಿ ಬರುತ್ತದೆ. ಡಿಸೆಂಬರ್, ಜನವರಿಯಲ್ಲಿ ಕುಯಿಲು, ಒಕ್ಕಣೆ ಮಾಡಿ ಸಂಗ್ರಹ ಮಾಡಿದ ಬೀಜಗಳನ್ನು ಜೂನ್-ಜುಲೈ ತಿಂಗಳಲ್ಲಿ ತೆಗೆದು ಬಿತ್ತನೆ ಮಾಡುತ್ತಾರೆ. ಈ ಎರಡು ಅವಧಿಯ ನಡುವೆ ನೇಗಿಲು ಪೂಜೆ ನೆಪದಲ್ಲಿ ಸಂಗ್ರಹವಾದ ಬೀಜಗಳನ್ನು ಒಮ್ಮೆ ಬಿಚ್ಚಿ ನೋಡಿದಂತಾಗುತ್ತದೆ. ಹುಳ-ಗಿಳ ಬಿದ್ದಿದ್ದರೆ ಹುಷಾರಾಗಬಹುದು. ಜೊತೆಗೆ ನೇಗಿಲು ಪೂಜೆಯಲ್ಲಿ ಚೆನ್ನಾಗಿ ಮೊಳಕೆ ಬರದಿದ್ದಾಗ ಬೀಜ ಹಾಳಾಗಿದೆ ಎಂಬ ಅಂಶ ತಿಳಿದುಬಂದು ಅದನ್ನು ಬದಲಾಯಿಸಬಹುದು ಮತ್ತು ಮೊಳಕೆ ಪ್ರಮಾಣ ಕಡಿಮೆಯಾಗಿದ್ದು ಗೊತ್ತಾಗಿ ಬಿತ್ತುವ ಬೀಜದ ಪ್ರಮಾಣವನ್ನು ಹೆಚ್ಚಿಸಬಹುದು. ಅಂದರೆ ಎಕರೆಗೆ ೧೪ ಕೆ.ಜಿ. ಬಿತ್ತುವ ಕಡೆ ೧೬ ಕೆ.ಜಿ. ಬಿತ್ತುವುದು... ಹೀಗೆ. ಆಗ ಅಲ್ಲಿಗಲ್ಲಿಗೆ ಸರಿಹೋಗುತ್ತದೆ.

ತಮಿಳುನಾಡಿನ ಹುಲಿಬಂಡೆ ಎಂಬ ಕಾಡುಹಳ್ಳಿಯಲ್ಲಿ ಇಡೀ ಗ್ರಾಮದ ಪ್ರತಿಯೊಂದು ಮನೆಯವರೂ ನೇಗಿಲು ಪೂಜೆಯನ್ನು ಅತ್ಯಂತ ಶ್ರದ್ಧೆಯಿಂದ ಕ್ರಮಬದ್ಧವಾಗಿ ಮಾಡುತ್ತಾರೆ.

ಬಿತ್ತನೆ ಬೀಜಗಳ ಮೊಳಕೆ ಶಕ್ತಿಯನ್ನು ಪರೀಕ್ಷಿಸುವ ಈ ಆಚರಣೆ ವಿಶಿಷ್ಟವಾದುದು ಮತ್ತು ರೈತರ ಜಾಣತನಕ್ಕೆ ಉತ್ತಮ ನಿದರ್ಶನ. ಆದರೆ ಈ ಆಚರಣೆ ಇಂದು ತೀರಾ ಅಪರೂಪವಾಗುತ್ತಿದೆ.

## ೧೪. ಬೆಳೆ ಹರಕೆಗಳು


ತನಗೆ ಖಾಯಿಲೆ-ಕಸಾಲೆ ಬಂದಾಗ ಅದು ವಾಸಿಯಾಗಲೆಂದು ಹೇಗೆ ಹರಕೆ ಕಟ್ಟಿಕೊಳ್ಳುತ್ತಾರೋ ಅದೇ ರೀತಿ ತನ್ನ ಬೆಳೆಗಳಿಗೂ ರೋಗ-ರುಜಿನಗಳು ಬಾರದಿರಲೆಂದು ಹರಕೆ ಕಟ್ಟಿಕೊಳ್ಳೂವುದನ್ನು ಕಾಣಬಹುದು. ದವಸ ಧಾನ್ಯಗಳಿಗೆ ದೆವ್ವ, ಪೀಡೆಯ ಕಾಟ ಬರದಿರಲೆಂದು, ಕಳ್ಳ-ಕಾಕರ ಕಾಟವಿರದಿರಲೆಂದು, ರೋಗ-ರುಜಿನಗಳು ಮುತ್ತದಿರಲೆಂದು ಹರಕೆ ಹಾಕಿಕೊಳ್ಳುತ್ತಾನೆ. ಅದು ಈಡೇರಿದರೆ ತಪ್ಪದೆ ಹರಕೆ ತೀರಿಸುತ್ತಾರೆ.

ಉದಾಹರಣೆಗೆ ಔಡಲಕ್ಕೆ ಕೊಂಡಲ ಹುಳ ಬಿದ್ದರೆ ಮನೆ ದೇವರಿಗೆ ಹರಳೆಣ್ಣೆ ತಂದು ಒಪ್ಪಿಸುವುದಾಗಿ ಹರಕೆ ಹಾಕಿಕೊಂಡು ದೇವರ ತೀರ್ಥ ತಂದು ಹಾಕುತ್ತಾನೆ.

ಜೋಳಕ್ಕೆ ಜೋನಿ ಬೀಳದಿರಲೆಂದು, ತೆಂಗಿನಕಾಯಿಯ ಹರಳುದುರದಿದ್ದರೆ ಸೂರೆ ಹಬ್ಬ ಮಾಡುತ್ತೇನೆಂದು, ಹೊಗೆಸೊಪ್ಪಿಗೆ ತೊಂಡ್ಲೆ ಹುಳ ಬೀಳದಿದ್ದರೆ ಬೆಳ್ಳಿಯ ಅಥವಾ ಬಂಗಾರದ ತೊಂಡ್ಲೆ ಮಾಡಿಸಿಕೊಡುತ್ತೇವೆಂದು ಹರಕೆ ಹಾಕಿಕೊಳ್ಳುತ್ತಾರೆ. ಪೈರು ಚೆನ್ನಾಗಿ ಬೆಳೆದರೆ ಕಣ್ಣಾಸರು ಆಗದಿರಲಿ ಎಂದು ಬೆರ್ಚು ನಿಲ್ಲಿಸುತ್ತಾರೆ. ಬೆರ್ಚು, ಬೆಳ್ತಲೆ, ಚಂದಪ್ಪ, ಬೆಕ್ಕಿನ ಸೋರೆ ಗಡಿಗೆ, ಮಡಕೆ ಎಂದೆಲ್ಲ ಕರೆಸಿಕೊಳ್ಳುವ ಈ ಸುಣ್ಣ ಹಚ್ಚಿದ ಬೋರಲು ಮಡಕೆ ಪ್ರತಿ ಹೊಲಗದ್ದೆಗಳಲ್ಲೂ ಕಾಣಸಿಗುತ್ತದೆ. ಅಡಿಕೆ, ಬಾಳೆ, ತೆಂಗಿನ ತೋಟಗಳಲ್ಲಂತೂ ಆಳೆತ್ತರದ ಮನುಷ್ಯನ ಆಕಾರವೇ ಬೆರ್ಚು ಆಗಿ ಕಾರ್ಯನಿರ್ವಹಿಸುತ್ತದೆ. ಬೆರ್ಚು ನಿಲ್ಲಿಸುವ ಪದ್ಧತಿ ಬಹಳ ಹಿಂದಿನಿಂದಲೇ ಇರುವಂತೆ ಕಾಣುತ್ತದೆ. ಜನ್ನ ಕವಿ ತನ್ನ ಯಶೋಧರ ಚರಿತೆಯಲ್ಲಿ 'ಪಾಪದ ಜೋಳದ ಬೆಳಸಿಂಗೆ ಬೆರ್ಚುಗಟ್ಟಿದ ತೆರದಿಂ' ಎಂದು ಪ್ರಯೋಗಿಸಿದ್ದಾನೆ. ಋಗ್ವೇದದ ಕಾಲದಲ್ಲೂ ಸಹ ಜೋಳದ ಜಮೀನಿನಿಂದ ಹಕ್ಕಿಗಳನ್ನು ದೂರವಿರಿಸಲು ಬೆದರು ಗೊಂಬೆಗಳನ್ನು ನಿಲ್ಲಿಸಲಾಗುತ್ತಿತ್ತು ಎಂದು ತಿಳಿದು ಬರುತ್ತದೆ.

**ಹೊಸ ಪೈರಿನ ಹಬ್ಬ :**

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕ್ರೈಸ್ತ ಬಂಧುಗಳು ಮಾತೆ ಮೇರಿಯ ಹುಟ್ಟಿದ ಹಬ್ಬವನ್ನು ಹೊಸ ಪೈರಿನ ಹಬ್ಬವನ್ನಾಗಿ ಆಚರಿಸುತ್ತಾರೆ. ಸಾಮಾನ್ಯವಾಗಿ ಆಗಸ್ಟ್-



ಸೆಪ್ಟೆಂಬರ್ ತಿಂಗಳಿನಲ್ಲಿ ಈ ಹಬ್ಬವನ್ನು ಆಚರಿಸುವುದು ವಾಡಿಕೆ. ಅಂದು ಮನೆಯನ್ನು ವಿಶೇಷವಾಗಿ ಅಲಂಕರಿಸಿ ವಿವಿಧ ರೀತಿಯ ತರಕಾರಿ ಮತ್ತು ವೈವಿಧ್ಯಮಯ ಬೆಳೆಗಳ ತೆನೆಗಳನ್ನು ಮನೆಗೆ ತಂದು ಮಾತೆ ಮೇರಿಯ ಮೂರ್ತಿಯ ಮುಂದಿರಿಸಿ ಶಾಖಾಹಾರಿ ಅಡುಗೆ ತಯಾರಿಸಿ ಎಲ್ಲ ಒಟ್ಟಿಗೆ ಕಲೆತು ಊಟ ಮಾಡಿ ಸಂಭ್ರಮಿಸುತ್ತಾರೆ.

**ಕೊನೆ ಮಹೂರ್ತ :**

ಮಲೆನಾಡಿನ ಸಾಂಪ್ರದಾಯಿಕ ಅಡಿಕೆ ಬೆಳೆಯುವ ಕುಟುಂಬಗಳಲ್ಲಿ ಪ್ರಚಲಿತವಿರುವ ಆಚರಣೆ. ವಿಜಯದಶಮಿಯ ದಿವಸ ಸಾಂಕೇತಿಕವಾಗಿ ಅಡಿಕೆ ಗೊನೆ ಇಳಿಸುತ್ತಾರೆ, ಹಾಗೆ ಮೊದಲ ಗೊನೆ ಇಳಿಸುವಾಗ ಮಾಡುವ ಆಚರಣೆಯೇ ಕೊನೆ ಮಹೂರ್ತ. ಒಂದು ನಿರ್ದಿಷ್ಟ ಅಡಿಕೆ ಮರವನ್ನು ಗುರುತಿಸಿ ಅದಕ್ಕೆ ಪೂಜೆ ನೆರವೇರಿಸಿ ಆ ಮರದಿಂದ ಐದು ಗೊನೆಗಳನ್ನು ಇಳಿಸಿ ಆ ಗೊನೆಗಳನು ತುಳಸಿಕಟ್ಟೆಯ ಮುಂದೆ ಇಟ್ಟು ಜಾಗಟೆ ಬಾರಿಸುವ ಮೂಲಕ ಪೂಜಿಸುತ್ತಾರೆ.

## ೧೫. ಗೌರಿ ಹಬ್ಬ

ಗೌರಿ ಮತ್ತು ಗಣೇಶನ ಹಬ್ಬ ಮುಖ್ಯವಾಗಿ ಭೂಮಿ ಮತ್ತು ಜಲ ಸಂಬಂಧದ ಆಚರಣೆಗಳನ್ನು ಹೊಂದಿವೆ. ಹೊಲಗದ್ದೆಗಳಲ್ಲಿ ಪೈರು ಮೊಳೆತು ಬೆಳೆ ಏಳುವುದರ ಆರಂಭಕಾಲದಲ್ಲಿ ಗೌರಿ–ಗಣೇಶ ಹಬ್ಬ ಕಾಲೂರುತ್ತದೆ. ಇದು ಹುಬ್ಬೆ–ಉತ್ತರೆ ಮಳೆಗಳ ತುಂಬು ಮಳೆಗಾಲ. ಬಯಲು ಸೀಮೆಯಲ್ಲಿ ರಾಗಿ, ಶೇಂಗಾ ಕಳೆ ತೆಗೆಯುವ ಹಂತದಲ್ಲಿರುತ್ತವೆ. ಈಗ ನಡೆಯುತ್ತಿರುವ ಆಬ್ಬರದ, ಆರ್ಭಟದ ಹಬ್ಬಕ್ಕೂ ಸಾಂಪ್ರದಾಯಿಕವಾದ ಹಬ್ಬಕ್ಕೂ ಅಜಗಜಾಂತರವಿದೆ. ಕೃಷಿಕರ ಗೌರಿ–ಗಣೇಶ ಆಚರಣೆಯ ಆಶಯವೇ ಬೇರೆ.

ಗಣೇಶನ ಇನ್ನೊಂದು ಹೆಸರು ವಿಘ್ನೇಶ್ವರ ಎಂಬುದು ನಮಗೆಲ್ಲ ತಿಳಿದಿದೆ. ಬಹಳ ಹಿಂದೆ ರೈತರು ಹೊಲಗದ್ದೆಗಳ ಕಡೆಯಿಂದಲೇ ಮರಳು ಮಿಶ್ರಿತ ಕೆಂಪು ಮಣ್ಣನ್ನು ತಂದು, ಅದರಿಂದಲೇ ಗಣೇಶನನ್ನು ನಿರ್ಮಿಸಿ ಪೂಜಿಸುತ್ತಿದ್ದರು. ಪೂಜಾ ಸಾಮಗ್ರಿಯಲ್ಲಿ ಮುಖ್ಯವಾದುದು ಗರಿಕೆ. ತೋಟಗಳಲ್ಲಿ ಬೆಳೆಗೆ ತೊಂದರೆ ಕೊಡುವ ಮುಖ್ಯ ಕಳೆ ಗರಿಕೆ. ಈ ಗರಿಕೆಯ ಜತೆಗೆ ಧಾನ್ಯ ಶತ್ರು ಇಲಿಯೂ ಇರುತ್ತದೆ. ಗಣೇಶನ ಕಾಲ ಅಡಿಯಲ್ಲಿ ಇಲಿ, ಗಣೇಶನ ಒಂದು ಕೈಯಲ್ಲಿ ಧಾನ್ಯದ ತೆನೆ, ಇನ್ನೊಂದು ಕೈಯಲ್ಲಿ ಅದೇ ಧಾನ್ಯದಿಂದ ತಯಾರಿಸಿದ ಕಡುಬು ಇರುತ್ತದೆ. ಜನಪದ ಗೀತೆಗಳಲ್ಲಿ ಭೂಮಿಯನ್ನು ಸ್ತುತಿಸುವಾಗ ಎಳ್ಳು ಬೆಳೆಯುವ ಭೂಮಿ ಎಂದು ಹೇಳಲಾಗುತ್ತದೆ.

ಈ ಎಳ್ಳಿನಿಂದ ತಯಾರಿಸಿದ ಉಂಡೆ ಗಣೇಶನಿಗೆ ಪ್ರಿಯ. ಇದರ ಜತೆಗೆ ಗಣೇಶನು ಚೆನ್ನಾಗಿ ಊಟ ಮಾಡಿದ್ದರಿಂದ ಆತನ ಹೊಟ್ಟೆ ದಪ್ಪವಾಗಿ, ಆ ಹೊಟ್ಟೆ ಒಡೆಯಬಾರದೆಂದು ಹಾವು ಸುತ್ತಿಕೊಂಡಿರುತ್ತಾನೆ ಎಂದು ಕಥೆ ಪ್ರಚಲಿತದಲ್ಲಿರುವುದು ಎಲ್ಲರೂ ತಿಳಿದ ವಿಷಯ. ಒಟ್ಟಾರೆ ಇಡೀ ಗಣೇಶನಲ್ಲಿ ಪ್ರಕೃತಿಯ ವಿವಿಧ ಅಂಗಗಳಿರುವುದನ್ನು ಗುರುತಿಸಬಹುದು.

ಗಣೇಶನ ಸಮೃದ್ಧಿಯ ಊಟ, ಒಂದು ಕೈಯ ತೆನೆ, ಇನ್ನೊಂದು ಕೈಯ ಕಡುಬು, ಕಾಲ ಕೆಳಗಿನ ಗರಿಕೆ ಮತ್ತು ಇಲಿ ಹಾಗೂ ಈ ಹಬ್ಬ ಬೆಳೆಗಳೆಲ್ಲಾ ಬೆಳವಣಿಗೆ ಹಂತದಲ್ಲಿರುವಾಗ ಬರುವುದು, ಇದೆಲ್ಲಾ ಭೂಮಿಯ ಮತ್ತು ಮಣ್ಣಿನ ವ್ಯವಸಾಯ ಸಂಬಂಧದ ಆಚರಣೆಯಾಗಿ ಕಾಣಿಸುತ್ತದೆ.

ಆದರೆ ಕಾಲಕ್ರಮೇಣ ಗಣೇಶನ ರೂಪ ಮತ್ತು ಇನ್ನಿತರ ವಿವರಗಳ ಮೇಲೆ ಬೇರೆ ಬೇರೆ ಕಥೆಗಳು ಹುಟ್ಟಿಕೊಂಡು ಪ್ರಚಾರಕ್ಕೆ ಬಂದವು.

ಗಣೇಶನ ಹಬ್ಬ ಭೂಮಿ ಮತ್ತು ಪ್ರಕೃತಿ ಪ್ರಜ್ಞೆಯನ್ನು ಸಂಕೇತಿಸಿದರೆ, ಇದರೊಡನೆ ಹೊಂದಿಕೊಂಡು ಬರುವ ಗೌರಿಹಬ್ಬ ನೀರಿನ ಪೂಜೆಯನ್ನು ಕುರಿತು ಹೇಳುತ್ತದೆ. ಗಣೇಶನ ಹಬ್ಬಕ್ಕಿಂತ ಒಂದು ದಿನ ಮುಂಚೆ ಗೌರಿ ಹಬ್ಬ ಬರುತ್ತದೆ. ಇದಕ್ಕೆ ಹಳ್ಳಿಗರು ನೀಡುವ ಕಾರಣ. ತವರು ಮನೆಗೆ ಬರುವ ಗೌರಮ್ಮನನ್ನು ಕೈಲಾಸಕ್ಕೆ ಕರೆದುಕೊಂಡು ಹೋಗಲು ಮಗನಾದ ಗಣೇಶ ಒಂದು ದಿನ ತಡೆದು ಬರುತ್ತಾನೆ.

ಹಬ್ಬದ ದಿನ ಬೆಳಿಗ್ಗೆ ಪ್ರತಿ ಮನೆಯ ಹೆಂಗಸರು ನೀರು ತುಂಬಿರುವ ಕೆರೆ, ಬಾವಿ ಅಥವಾ ಹರಿಯುವ ತೊರೆ ಕಡೆಗೆ ಹೋಗಿ ಆ ನೀರನ್ನು ಪೂಜಿಸಿ, ನೀರಿನೊಳಗೆ ಕೈಯಿಟ್ಟು ಒಂದು ಹಿಡಿ ಮರಳು ತರುತ್ತಾರೆ, ಅದನ್ನು ಮರಳು ಗೌರಮ್ಮ ಎಂದು ಕರೆಯುತ್ತಾರೆ. ಮತ್ತೆ ಕೆಲವೆಡೆ ಅರಿಷಿಣದ ಹುಂಡಿಯಿಂದ ತಯಾರಿಸಿದ ಮೂರ್ತಿಯನ್ನು ಗೌರಿಯೆಂದು ಮನೆಗೆ ತರುತ್ತಾರೆ. ವಾಸ್ತವವಾಗಿ ಇದು ಜಲಪೂಜೆಯೇ. ಈ ಗೌರಿ ಗಣೇಶನ ತಾಯಿಯೆಂದು ಹೆಸರಿಸಲಾಗಿದೆ. ಎಂದರೆ ಧಾನ್ಯ ದೇವತೆ ಗಣೇಶನಿಗೆ ಜಲದೇವತೆಯನ್ನು ತಾಯಿಯಾಗಿ ಕಲ್ಪಿಸಲಾಗಿದೆ.

ಮನೆಯಲ್ಲಿ ಗೌರಮ್ಮನನ್ನು ಕೂರಿಸಿ (ಪ್ರತಿಷ್ಠಾಪಿಸಿ) ಬಾಗಿನ ಕೊಡುತ್ತಾರೆ. ಈ ಬಾಗಿನದಲ್ಲಿ ಕಾರೆ ಹಣ್ಣು, ಯಲಚಿ ಹಣ್ಣು (ಬೋರೆ ಹಣ್ಣು) ಬಿಕ್ಕೆ ಹಣ್ಣು, ಹಸಿ ಅಕ್ಕಿ ತಂಬಿಟ್ಟು, ಎಳ್ಳಿನ ಚಿಗುಳಿ ಪ್ರಮುಖವಾಗಿರುತ್ತವೆ. ಹೊಸದಾಗಿ ಮದುವೆಯಾದವರು

ಗೌರಮ್ಮನಿಗೆ ಪೂಜಿಸಿ ಬಾಗಿನ ಅರ್ಪಿಸುತ್ತಾರೆ. ಈ ಹಬ್ಬಕ್ಕೆ ಮದುವೆಯಾಗಿ ಗಂಡನ ಮನೆಯಲ್ಲಿರುವ ಹೆಣ್ಣು ಮಕ್ಕಳು ಕಡ್ಡಾಯವಾಗಿ ತವರಿಗೆ ಬರುತ್ತಾರೆ. ಮರು ದಿವಸ ಗೌರಮ್ಮನ ಪಕ್ಕದಲ್ಲಿಯೇ ಗಣೇಶನ ವಿಗ್ರಹವನ್ನು ಕೂಡಿಸಿ ಕಡುಬಿನ ವಿಶೇಷ ಅಡುಗೆ ಮಾಡಿ ಅದರ ಮರುದಿನ ಇಬ್ಬರನ್ನೂ ನೀರಿಗೆ ಬಿಟ್ಟು ಬರುತ್ತಾರೆ.

ಭೂಮಿ ಮತ್ತು ಜಲ ಪೂಜೆಯ ಆಚರಣೆ ಹೊಂದಿರುವ ಗೌರಿ- ಗಣೇಶನ ಈ ಹಬ್ಬ ಇಂದು ತನ್ನ ಸ್ವರೂಪವನ್ನು ಸಂಪೂರ್ಣವಾಗಿ ಬದಲಿಸಿಕೊಂಡಿದೆ.

## ೧೬. ಕರಿಭಂಟನ ಪೂಜೆ

ಹುಬ್ಬೆ-ಉತ್ತರೆ ಮಳೆಯಲ್ಲಿ ಹುಲುಸಾಗಿ ಬೆಳೆದ ಬೆಳೆಗಳಿಗೆ ರೋಗ-ರುಜಿನ, ನೋಡುಗರ ಕೆಟ್ಟ ದೃಷ್ಟಿ ತಾಕದಿರಲಿ ಎಂಬ ಉದ್ದೇಶದಿಂದ ಬಯಲು ಸೀಮೆ ಹಳ್ಳಿಗರು ಆಚರಿಸುವ ಕರಿಭಂಟನ ಆಚರಣೆ ಅತ್ಯಂತ ವಿಶಿಷ್ಟವಾದದ್ದು. ಇಡೀ ಗ್ರಾಮ ಸಮುದಾಯ ಒಂದುಗೂಡಿ, ಮೂರು ದಾರಿ ಕೂಡುವಲ್ಲಿ ಬೂದಿಯಿಂದ ರಾಕ್ಷಸಿಯ ಚಿತ್ರ ಬರೆದು ಅದರ ಹೊಟ್ಟೆಯ ಮೇಲೆ ಹಾರೆಯಿಂದ ರಂಧ್ರ ಮಾಡಿ, ಹೊಲದಲ್ಲಿ ಪಚ್ಚಾಡಿ ಮರದ ಕೊಂಬೆಗಳನ್ನು ನೆಟ್ಟು ಹರಿಶಿಣದ ಬಟ್ಟೆಯಲ್ಲಿ ಸೇರಿಸಿದ ನವಧಾನ್ಯಗಳನ್ನು ಗಂಟು ಕಟ್ಟಿ ಪೂಜೆ ಸಲ್ಲಿಸಲಾಗುತ್ತದೆ. ಕೋಳಿ ಇಲ್ಲವೇ ಕುರಿ ಬಲಿ ಕೊಟ್ಟು ಅದರ ರಕ್ತದ ಜೊತೆ ರಾಗಿ ಪೈರಿನ ಎಳೆ ಗರಿಗಳನ್ನು ಸೇರಿಸಿ ಹೊಲಕ್ಕೆ ಬಲಿಯೋ ಬಲಿ ಎಂದು ಕೂಗುತ್ತಾ ಎರಚಲಾಗುತ್ತದೆ. ಬೆಳೆಗಳು ಬೆಳವಣಿಗೆ ಹಂತದಲ್ಲಿರುವಾಗ ಇದನ್ನು ಆಚರಿಸುವುದರಿಂದ ಬೆಳೆಗಳಿಗೆ, ಅದರಲ್ಲಿಯೂ ಮುಖ್ಯವಾಗಿ ರಾಗಿ ಪೈರಿಗೆ ಬರುವ ಇಲುಕು ರೋಗ ನಿವಾರಣೆಯಾಗುತ್ತದೆ ಎಂಬ ನಂಬಿಕೆ ರೈತರಲ್ಲಿದೆ.

ಈ ಆಚರಣೆಯು ವೈಯಕ್ತಿಕ ಮಟ್ಟದಲ್ಲಿ ಮತ್ತು ಸಾಮೂಹಿಕವಾಗಿ ಇಡೀ ಗ್ರಾಮವು ಒಗ್ಗಟ್ಟಾಗಿ ಮಾಡುವುದನ್ನು ಕಾಣಬಹುದು. ರಾಗಿ ಮುಖ್ಯ ಬೆಳೆಯಾಗಿ ಬೆಳೆಯುವ ಪ್ರದೇಶಗಳಲ್ಲಿ ಇದು ಅತ್ಯಂತ ವೈಭವಯುತವಾಗಿ, ಶ್ರದ್ಧೆಯಿಂದ ಆಚರಿಸಲ್ಪಡುತ್ತದೆ, ಉಳಿದ ಭಾಗಗಳಲ್ಲಿ ಸಾಧಾರಣ ರೀತಿಯಲ್ಲಿ ಹೊಲಕ್ಕೆ ಚರಗ ಚೆಲ್ಲಿ ಪಚ್ಚಾಡಿ ಕೊಂಬೆಗಳನ್ನು ನೆಡುವ ಮೂಲಕ ಆಚರಿಸುತ್ತಾರೆ.

**ಸಾಮೂಹಿಕ ಕರಿಭಂಟನ ಆಚರಣೆ :** ಇಡೀ ಗ್ರಾಮ ಸಮುದಾಯ ಸೇರಿ ಮಾಡುವ ಕರಿಭಂಟನ ಪೂಜೆಯ ವಿಧಿ-ವಿಧಾನಗಳು ಈ ರೀತಿ ಇರುತ್ತವೆ :



ಹೊಲದಲ್ಲಿ ಸಾಮೂಹಿಕ ಕರಿಭಂಟನ ಆಚರಣೆ

ಹುಬ್ಬೆ ಮಳೆ ಹುಟ್ಟಿದಾಗ ಗ್ರಾಮಸ್ಥರು ಒಂದೆಡೆ ಕಲೆತು ಹಬ್ಬ ಮಾಡುವ ದಿನಾಂಕವನ್ನು ಗೊತ್ತುಪಡಿಸುತ್ತಾರೆ. ಹಬ್ಬಕ್ಕಾಗಿ ಮನೆಗೆ ಇಂತಿಷ್ಟು ಹಣ ವಸೂಲು ಮಾಡಲಾಗುತ್ತದೆ. ಹಬ್ಬದ ಹಿಂದಿನ ದಿನವೇ ಗ್ರಾಮದ ಹಿರಿಯರು ಜವಾಬ್ದಾರಿಗಳನ್ನು ಎಲ್ಲರಿಗೂ ಹಂಚಿಬಿಡುತ್ತಾರೆ. ಆ ಪ್ರಕಾರ ಕೆಲವರು ಮೂರು ತೆರನಾದ ಬೂದಿ ತರಬೇಕು, ಮತ್ತೆ ಕೆಲವರು ಪಚ್ಚಾಡಿ ಮರದ ಕೊಂಬೆಗಳನ್ನು ಕಡಿದು ತರಬೇಕು, ಉಳಿದವರು ಬಲಿ ಕೊಡಲು ಮರಿ ವ್ಯವಸ್ಥೆ ಮಾಡಬೇಕು ಮತ್ತು ರಾಗಿ ಗರಿಗಳನ್ನು ಕತ್ತರಿಸಿ ತರಬೇಕು. ಹಾಗೆಯೇ ಹಿಂದಿನ ದಿನವೇ ಊರಿನಲ್ಲಿ ಡಂಗೂರ ಸಾರುವ ಮೂಲಕ ಹಬ್ಬದ ಬಗ್ಗೆ ತಿಳಿಸಲಾಗುತ್ತದೆ. ಎಲ್ಲ ಮನೆಯವರೂ ರಾತ್ರಿ ಅಡುಗೆ ಉಳಿಕೆಯನ್ನು- ಅಂದರೆ ಮುದ್ದೆ, ಅನ್ನ ಇತ್ಯಾದಿ- ಬೆಳಿಗ್ಗೆ ತಂದು ಒಂದೆಡೆ ಗುಡ್ಡೆ ಹಾಕಬೇಕು.

ಕರಿಭಂಟನ ಅಚರಣೆಗೆ ಮೂರು ರೀತಿಯ ಬೂದಿ ತರುವುದು ಕಡ್ಡಾಯ. ಒಂದು-ಕುಂಬಾರರ ಮನೆಯ ಬೂದಿ, ಎರಡು- ಕಮ್ಮಾರರ ಮನೆಯ ಬೂದಿ ಮತ್ತು ಮೂರು- ಮಡಿವಾಳರ ಮನೆ ಬೂದಿ. ಇವುಗಳಿಗೆ ಕ್ರಮವಾಗಿ ಆವಿಗೆ ಬೂದಿ, ಕುಲುಮೆ ಬೂದಿ, ಮತ್ತು ಉಬ್ಬೆ ಬೂದಿ ಎಂದು ಕರೆಯುತ್ತಾರೆ. ಈ ಮೂರು ಬಗೆಯ ಬೂದಿಗಳನ್ನು ತಂದು ಮಿಶ್ರ ಮಾಡಿ ಇಟ್ಟುಕೊಳ್ಳುತ್ತಾರೆ.

ಪಚ್ಚಾಡಿ ಕೊಂಬೆ ನೆಡುವುದು ಈ ಆಚರಣೆಯ ಅತ್ಯಂತ ಮುಖ್ಯ ಕ್ರಿಯೆ. Dalbarjia paniculata ಎಂಬ ವೈಜ್ಞಾನಿಕ ಹೆಸರಿನ ಪಚ್ಚಾಡಿ ಮರ ಕುರುಚಲು ಕಾಡುಗಳಲ್ಲಿ ಸಾಧಾರಣ ಎತ್ತರ ಬೆಳೆಯುವ ಮರ. ಕಾಂಡವು ಬಿಳುಪಾಗಿದ್ದು ಕಾಸಗಲದ ಎಲೆಗಳಿರುತ್ತವೆ. ಈ ಮರದ ವಿಶೇಷವೆಂದರೆ ಕೊಂಬೆಯನ್ನು ಕತ್ತರಿಸಿ ಹೊಲದಲ್ಲಿ ನೆಟ್ಟರೆ ೨೪ ಗಂಟೆಗಳೊಳಗಾಗಿ ಎಲೆಗಳು ಕಪ್ಪನೆ ಬಣ್ಣಕ್ಕೆ ತಿರುಗುತ್ತವೆಯೇ ಹೊರತು ಒಣಗಿ ಉದುರುವುದಿಲ್ಲ. ಬಹಳ ದಿವಸಗಳ ನಂತರ ಒಣಗಿದ ಎಲೆಗಳು ಉದುರುತ್ತವೆ.

ಹಬ್ಬದ ದಿನ ಬೆಳಿಗ್ಗೆಯೇ ಒಂದು ನಿಗದಿತ ಸ್ಥಳದಲ್ಲಿ ಎಲ್ಲರೂ ಸೇರಿ ಚಪ್ಪರ ಹಾಕುತ್ತಾರೆ, ಸಾಮಾನ್ಯವಾಗಿ ಮೂರು ದಾರಿ ಕೂಡುವ ಸ್ಥಳವನ್ನು ಚಪ್ಪರ ಹಾಕಲು ಆಯ್ಕೆ ಮಾಡುತ್ತಾರೆ. ಚಪ್ಪರಕ್ಕೂ ಸಹ ಪಚ್ಚಾಡಿ ಕೊಂಬೆಗಳನ್ನು ಬಳಸುತ್ತಾರೆ. ಅಷ್ಟೊತ್ತಿಗೆ ಎಲ್ಲ ಮನೆಯವರೂ ಉಳಿಕೆ ಅಡುಗೆಯನ್ನು ತಂದು ಅಲ್ಲಿ ಹಾಕುವುದು ನಡೆದಿರುತ್ತದೆ. ರಾಗಿ ಗರಿಗಳನ್ನು ತುಂಡು–ತುಂಡಾಗಿ ಕತ್ತರಿಸಿ ಅದಕ್ಕೆ ಮೂರು ರೀತಿಯ ಬೂದಿಯ ಮಿಶ್ರಣದಲ್ಲಿ ಸ್ವಲ್ಪವನ್ನು ಬೆರೆಸಲಾಗುತ್ತದೆ. ಮೂರು ದಾರಿ ಕೂಡುವ ಸ್ಥಳದಲ್ಲಿ ಬೂದಿಯಿಂದ ಒಂದು ರಾಕ್ಷಸಾಕೃತಿಯನ್ನು ಬರೆಯುತ್ತಾರೆ. ಹಳ್ಳಿಗರ ಪ್ರಕಾರ ಅದು ಉದ್ದಂಡಿ ಎಂಬ ರಾಕ್ಷಸಿ. ಕೇವಲ ಊರಿನ ಮೂರು ದಾರಿ ಕೂಡುವಲ್ಲಲ್ಲದೆ ಆಯಾ ಹೊಲದವರು ತಮ್ಮ ಹೊಲಗಳಲ್ಲಿಯೂ ಸಹ ಈ ರಾಕ್ಷಸಿ ಚಿತ್ರವನ್ನು ಬರೆಯುತ್ತಾರೆ. ಹಾಗೂ ಊರಿನ ಬೇರೆ–ಬೇರೆ ಭಾಗಗಳಲ್ಲಿಯೂ ಸಹ ಚಿತ್ರ ಬರೆಯುವುದು ರೂಢಿ. ಇದೆಲ್ಲ ಮುಗಿಯುವ ಹೊತ್ತಿಗೆ ಬಲಿ ಕೊಡುವ ಮರಿಯನ್ನು ತಂದು ಅದಕ್ಕೆ ಪೂಜೆ ಮಾಡಿ ಚಪ್ಪರದ ಮುಂದೆ ನಿಲ್ಲಿಸಿ ಊರವರ ಅಪ್ಪಣೆ ಕೇಳಿ ಬಲಿ ಕೊಡಲಾಗುತ್ತದೆ.

ಬಲಿ ಕೊಟ್ಟ ಪ್ರಾಣಿಯ ರಕ್ತವನ್ನು ಬೂದಿ ಮತ್ತು ರಾಗಿ ಗರಿ ಮಿಶ್ರಣದೊಂದಿಗೆ ಮತ್ತು ಉಳಿಕೆ ಅಡುಗೆಯೊಂದಿಗೆ ಬೆರೆಸುತ್ತಾರೆ. ಪ್ರತಿಯೊಂದು ಹೊಲದವರೂ ಒಂದೊಂದು ಬೋಕಿ ಬಿಂಚೆ (ಮಣ್ಣಿನ ಮಡಕೆಯ ಚೂರು) ಯನ್ನು ತಂದು ಹಿರಿಯರ ಕೈಲಿ ಆ ಚರಗವನ್ನು ಹಾಕಿಸಿಕೊಂಡು ತಮಗೆ ಎಷ್ಟು ಬೇಕೋ ಅಷ್ಟು ಪಚ್ಚಾಡಿ ಕೊಂಬೆಗಳನ್ನು ತೆಗೆದುಕೊಂಡು ಹೊರಡುತ್ತಾರೆ. ಕೈಯಲ್ಲೊಂದು ಹಾರೆಯೂ ಇರುತ್ತದೆ. ಇಬ್ಬರು ಮೂವರು ಗುಂಪಾಗಿ ಹೊರಟು ತಂತಮ್ಮ ಹೊಲಗಳಿಗೆ ಚರಗವನ್ನು ಚೆಲ್ಲುತ್ತಾ ಬಲಿಯೋ ಬಲಿ ಎಂದು ಕೂಗುತ್ತಾರೆ. ಹಾರೆಯಿಂದ ಒಂದು ದಸಿ ಹಾಕಿ ಪಚ್ಚಾಡಿ ಕೊಂಬೆಯನ್ನು ನೆಡುತ್ತಾರೆ, ಅಲ್ಲದೆ ರಾಕ್ಷಸಿ ಚಿತ್ರದ ಹೊಟ್ಟೆಯ ಭಾಗಕ್ಕೆ ಹಾರೆಯಿಂದ ತಿವಿಯುತ್ತಾರೆ.



ರಾಗಿ ಹೊಲದಲ್ಲಿ ಪಚಾಡಿ ಕೊಂಬೆ ನೆಟ್ಟು ಚರಗ ಎರಚುವುದು

ಎಲ್ಲರೂ ತಂತಮ್ಮ ಹೊಲಗಳಿಗೆ ಈ ರೀತಿ ಮಾಡಿ ಊರಿಗೆ ಹಿಂತಿರುಗುತ್ತಾರೆ, ನಂತರ ಬಲಿ ಕೊಟ್ಟ ಮರಿಯನ್ನು ಕೊಯ್ದು ಪಾಲು ಮಾಡಿ ಗುಡ್ಡೆ ಹಾಕಿ ಎಲ್ಲರೂ ಹಂಚಿಕೊಳ್ಳುತ್ತಾರೆ. ಅಂದು ಎಲ್ಲರ ಮನೆಯಲ್ಲಿ ವಿಶೇಷ ಅಡುಗೆ.

ಈ ಆಚರಣೆಗೆ ಹಸಿರುಬಲಿ, ಅತ್ತೆ ಮಳೆ ವಂಗಲು ಎಂಬ ಹೆಸರುಗಳೂ ಇವೆ. ಕೆಲವರು ಹಸಿರು ಬಲಿ ಮತ್ತು ಕರಿಬಂಟನ ಆಚರಣೆ ಬೇರೆ-ಬೇರೆ ಎನ್ನುತ್ತಾರಾದರೂ ಆಚರಿಸುವ ರೀತಿಯನ್ನು ನೋಡಿದರೆ ಹೆಚ್ಚು-ಕಡಿಮೆ ಒಂದೇ ರೀತಿ ಇರುತ್ತವೆ.

ಒಟ್ಟಾರೆ ಈ ಆಚರಣೆಯಿಂದ ರಾಗಿ ಬೆಳೆಗೆ ಬರುವ ಇಲುಕು ರೋಗ (Finger Blast) ನಿವಾರಣೆಯಾಗುತ್ತದೆ ಎಂದು ರೈತಾಪಿಗಳ ದೃಢವಾದ ನಂಬಿಕೆ. ಅಲ್ಲದೆ

ಹುಲುಸಾಗಿ ಬೆಳೆದ ಪೈರಿಗೆ ನೋಡುಗರ ದೃಷ್ಟಿ ತಾಗದಿರಲಿ ಎಂಬ ಆಶಯವೂ ಇದರ ಹಿಂದಿದೆ.

**ಆಚರಣೆಯ ಹಿಂದಿನ ಜನಪದ ನಂಬಿಕೆ :**

ಈ ಆಚರಣೆಯ ಕಾಲ, ಇಲ್ಲಿನ ವಿಧಿ ವಿಧಾನಗಳು, ಪಚ್ಚಾಡಿ ಕೊಂಬೆ ನೆಡುವಿಕೆ, ರಾಕ್ಷಸಿ ಚಿತ್ರ ಮುಂತಾದ ಕ್ರಿಯೆಗಳು ಕುತೂಹಲ ಮೂಡಿಸುತ್ತವೆ. ಈ ಎಲ್ಲವುಗಳಿಗೆ ಹಿನ್ನೆಲೆಯಾಗಿ ಒಂದು ಅದ್ಭುತವಾದ ಜಾನಪದ ಕಥೆಯಿದೆ. ಮೈಸೂರು ಸೀಮೆಯಲ್ಲಿ ಕರಿಭಂಟನ ಕುರಿತಾಗಿ ಅನೇಕ ಸಾಹಿತ್ಯ, ಕಥನ ಕಾವ್ಯಗಳು ಲಭ್ಯವಿವೆ, ಕರಿಬಂಟನ ಕಾಳಗ ಎಂಬ ಹೆಸರಿನ ಬಯಲು ನಾಟಕ, ಯಕ್ಷಗಾನಗಳೂ ಸಹ ಅಭಿನಯಿಸಲ್ಪಡುತ್ತವೆ. ಸಂಕ್ಷಿಪ್ತ ವಿವರಣೆಗಳನ್ನು ನೀಡುವುದಾರೆ...

ಕರಿಭಂಟ ಒಬ್ಬ ರಾಜ. ಮಾರಭೂಪ ಮತ್ತು ಬಲವಂತದೇವಿಯವರ ಮಗ. ವೀರ, ಶೂರ. ಆತ ಒಮ್ಮೆ ಬಲ್ಲಾಳರಾಯನೆಂಬ ರಾಜನ ಮಗಳಾದ ಧರಣಿಮೋಹಿನಿ ಎಂಬಾಕೆಯನ್ನು ಮದುವೆಯಾಗುವ ಸಲುವಾಗಿ ತನ್ನ ರಾಜ್ಯದಿಂದ ಬಲ್ಲಾಳರಾಜನ ರಾಜ್ಯಕ್ಕೆ ಪ್ರಯಾಣ ಹೊರಡುತ್ತಾನೆ, ಹೊರಡುವಾಗ ಕೆಲವು ಅಪಶಕುನಗಳಾಗುತ್ತವೆ. ಆತನ ತಾಯಿ ಪ್ರಯಾಣ ಬೇಡವೆನ್ನುತ್ತಾಳೆ, ಅದಕ್ಕೊಪ್ಪದ ಕರಿಭಂಟ ಏಕಾಂಗಿಯಾಗಿ ದಾರಿಗೆ ಬುತ್ತಿ ಕಟ್ಟಿಸಿಕೊಂಡು ಹೊರಡುತ್ತಾನೆ. ಬಲ್ಲಾಳರಾಯನ ರಾಜ್ಯ ತಲುಪಲು ಒಂದು ಗೊಂಡಾರಣ್ಯವನ್ನು ದಾಟಬೇಕಾಗಿರುತ್ತದೆ. ಆ ಗೊಂಡಾರಣ್ಯದಲ್ಲಿ ಉದ್ದಂಡಿ ಎಂಬ ರಾಕ್ಷಸಿಯು ವಾಸವಾಗಿರುತ್ತಾಳೆ, ಆಕೆಗೆ ಬೊಮ್ಮ ಎಂಬ ತಮ್ಮನಿರುತ್ತಾನೆ. ಕಾಡೆಲ್ಲಾ ಇವರಿಬ್ಬರದೇ, ಭಯಂಕರ ರೂಪದ ಇವರು ಅಲ್ಲಿಗೆ ಬರುವ ಮನುಷ್ಯರನ್ನು ಹಿಡಿದು ತಿನ್ನುತ್ತಾ ಕಾಲ ಕಳೆಯುತ್ತಿರುತ್ತಾರೆ. ರಾಕ್ಷಸಿಗೆ ಒಬ್ಬ ಮಗಳಿರುತ್ತಾಳೆ. ಹೆಸರು ಪುಂಡರೀಕಾಕ್ಷಿ. ಅವಳೋ ಈ ಅಮ್ಮ ಮತ್ತು ತಮ್ಮನ ಸ್ವಭಾವ, ರೂಪಗಳಿಗೆ ತದ್ವಿರುದ್ಧವಾದ ಗುಣದವಳು. ರೂಪ ಲಾವಣ್ಯವತಿ, ಸಾಧು ಸ್ವಭಾವ.

ಕರಿಭಂಟನು ಈ ರಾಕ್ಷಸರ ಹಾವಳಿಯಿರುವ ಕಾಡನ್ನು ದಾಟಬೇಕಾದರೆ ರಾಕ್ಷಸಿಯ ಮಗಳಾದ ಪುಂಡರೀಕಾಕ್ಷಿಯ ಕಣ್ಣಿಗೆ ಬೀಳುತ್ತಾನೆ. ಕರಿಬಂಟನ ರೂಪಿಗೆ ಮನಸೋತು ಅವನನ್ನೇ ವರಿಸುವ ಆಸೆಯಿಂದ ಉಪಾಯ ಮಾಡಿ ತನ್ನ ಮನೆಗೆ ಕರೆತರುತ್ತಾಳೆ. ರಾತ್ರಿ ಮನೆಗೆ ಬಂದ ಉದ್ದಂಡಿ ರಾಕ್ಷಸಿ ತನ್ನ ಮನೆಯಲ್ಲ ನರಮಾನವರ ವಾಸನೆ ಅರಿತು ಮಗಳನ್ನು ಕೇಳುತ್ತಾಳೆ. ಮಗಳು ತನ್ನಾಸೆಯನ್ನು ಹೇಳಿಕೊಂಡಾಗ ತನ್ನ ತಮ್ಮನಿಗೇ ಮಗಳನ್ನು ಕೊಟ್ಟು ಮದುವೆ ಮಾಡಬೇಕೆಂದಿದ್ದ ರಾಕ್ಷಸಿ ಮನಸ್ಸಿನಲ್ಲೇ ಕ್ರೋಧಗೊಳ್ಳುತ್ತಾಳೆ, ಆದರೂ ಹೊರಗೆ ತೋರ್ಪಡಿಸದೆ ಮಗಳ ಆಸೆಗೆ ಸಮ್ಮತಿಸಿದಂತೆ ಮಾಡಿ, "ಬೆಳಿಗ್ಗೆ

ನಿಮ್ಮಿಬ್ಬರಿಗೂ ಮದುವೆ ಮಾಡಿಸುತ್ತೇನೆ, ಇಂದು ರಾತ್ರಿ ಅವನು ಬೊಮ್ಮನ ಜೊತೆ ಮಲಗಿರಲಿ ಈ ದಾರವನ್ನು ನಿನ್ನ ಗಂಡನಾಗುವವನ ಕಾಲಿಗೆ ಕಟ್ಟು" ಎನ್ನುತ್ತಾಳೆ.

ಆದರೆ ಅಮ್ಮನ ಈ ವರ್ತನೆಯನ್ನು ಅನುಮಾನಿಸುವ ಮಗಳು ದಾರವನ್ನು ಕರಿಭಂಟನಿಗೆ ಬದಲಾಗಿ ಬೊಮ್ಮನ ಕಾಲಿಗೆ ಕಟ್ಟುತ್ತಾಳೆ.


ಅರ್ಧ ರಾತ್ರಿಯಲ್ಲಿ ಎದ್ದ ಉದ್ದಂಡಿ ರಾಕ್ಷಸಿ ದಾರ ಕಟ್ಟಿರುವ ಕಾಲಿನವನೇ ಕರಿಭಂಟನೆಂದು ತಿಳಿದು ತಮ್ಮನಾದ ಬೊಮ್ಮನನ್ನು ಸಿಗಿದು ಕೊಂದು ಹಾಕುತ್ತಾಳೆ. ಇದನ್ನು ಕಂಡ ಮಗಳು ಕರಿಬಂಟನನ್ನು ಎಬ್ಬಿಸಿ ನೀನು ಬದುಕಿರುವುದನ್ನು ನೋಡಿದರೆ ನಮ್ಮಮ್ಮ ನಿನ್ನನ್ನು ಬಿಡುವುದಿಲ್ಲ ಹೊರಟು ಹೋಗು ಎಂದು ಕಳಿಸಿಬಿಡುತ್ತಾಳೆ.

ಬೆಳಿಗ್ಗೆ ಎದ್ದು ಮಹದಾನಂದದಿಂದ ತಮ್ಮನನ್ನು ಕಾಣಲು ಬಂದ ಉದ್ದಂಡಿ ರಾಕ್ಷಸಿ ಸತ್ತು ಬಿದ್ದಿರುವ ತಮ್ಮನನ್ನು ಕಾಣುತ್ತಾಳೆ, ಕ್ಷಣಾರ್ಧದಲ್ಲಿ ಆಕೆಗೆ ನಿಜಾಂಶ ತಿಳಿಯುತ್ತದೆ. ಕರಿಭಂಟನ ಮೇಲೆ ರಣಕೋಪಗೊಂಡು ಆತನನ್ನು ಸಾಯಿಸೇ ತೀರುತ್ತೇನೆಂದು ಯೋಜನಾ ವೇಗದಲ್ಲಿ ಧಾವಿಸುತ್ತಾಳೆ. ಆಕೆ ಕರಿಬಂಟನನ್ನು ಸಮೀಪಿಸುವಾಗ ಆತ ಒಂದು ಹಳ್ಳಿಯ ಬಳಿ ಹೋಗುತ್ತಿರುತ್ತಾನೆ. ಆಗ ರಾಕ್ಷಸಿ ಬಾಣಂತಿಯಂತೆ ವೇಷ ಧರಿಸಿ ಆ ಹಳ್ಳಿಯ ೭ ಜನ ಗೌಡರನ್ನು ಭೇಟಿ ಮಾಡಿ ಈತ ನನ್ನ ಗಂಡ ನನ್ನನ್ನು ಬಿಟ್ಟು ಹೋಗುತ್ತಿದ್ದಾನೆ, ಈತನನ್ನು ನನ್ನ ಜೊತೆ ಕಳಿಸಿಕೊಡಿ ಎಂದು ರೋಧಿಸುತ್ತಾಳೆ. ಆದರೆ ಕರಿಭಂಟ ಈಕೆ ಯಾರೆಂಬುದೇ ನನಗೆ ಗೊತ್ತಿಲ್ಲ ನನಗಿನ್ನು ಮದುವೆಯೇ ಆಗಿಲ್ಲ ಎಂದು ವಾದ ಮಾಡುತ್ತಾನೆ. ಇದರಿಂದ ಗೊಂದಲಗೊಂಡ ಹಳ್ಳಿಯ ಗೌಡರು ಒಂದು ಸಲಹೆ ನೀಡುತ್ತಾರೆ. ಏನೆಂದರೆ, ಇಂದು ರಾತ್ರಿ ಇಬ್ಬರೂ ಈ ದೇವಾಲಯದಲ್ಲಿ ತಂಗಿರಿ ಬೆಳಿಗ್ಗೆ ತೀರ್ಪು ನೀಡುತ್ತೇವೆ ಎಂದು ಹೇಳುತ್ತಾರೆ.

ಅರ್ಧ ರಾತ್ರಿಯಲ್ಲಿ ತನ್ನ ನಿಜ ಸ್ವರೂಪ ತಾಳಿದ ರಾಕ್ಷಸಿ ಕರಿಭಂಟನನ್ನು ಕೊಂದು ದೇವಾಲಯದ ಸೂರನ್ನು ಮುರಿದುಕೊಂಡು ಪರಾರಿಯಾಗುತ್ತಾಳೆ.

ಬೆಳಿಗ್ಗೆ ಬಂದ ಗೌಡರು ಸತ್ತು ಬಿದ್ದಿರುವ ಕರಿಬಂಟನನ್ನು ಕಂಡು ಹೌಹಾರುತ್ತಾರೆ, ತಾವೇ ಕೈಯಾರ ಕರಿಬಂಟನನ್ನು ಕೊಂದಂತಾಯಿತಲ್ಲಾ ಎಂದು ಮರುಗಿದ ಅವರು ಅದಕ್ಕೆ ಪಶ್ಚಾತ್ತಾಪ ಕ್ರಮವಾಗಿ ಸಾಮೂಹಿಕ ಅಗ್ನಿಪ್ರವೇಶಕ್ಕೆ ಊರ ಹೊರಗೆ ಕುಂಡ ಸಿದ್ಧಪಡಿಸಿ ಒಬ್ಬೊಬ್ಬರಾಗಿ ಎಲ್ಲರೂ ಅಗ್ನಿಪ್ರವೇಶಿಸುತ್ತಾರೆ. ತನ್ನಿಂದಾಗಿ ಕರಿಭಂಟ ಸತ್ತನೆಂಬ ಕಾರಣದಿಂದ ರಾಕ್ಷಸಿಯ ಮಗಳು ಪುಂಡರೀಕಾಕ್ಷಿಯೂ ಸಹ ಬೆಂಕಿಗೆ ಹಾರುತ್ತಾಳೆ, ಬಲ್ಲಾಳರಾಯನ ಮಗಳಾದ ಧರಣಿಮೋಹಿನಿಯು ತನ್ನನ್ನು ಮದುವೆಯಾಗಲು ಬಂದಿದ್ದರಿಂದಲೇ ಕರಿಭಂಟ ಸಾವಿನ ದವಡೆಗೆ ಹೋಗಬೇಕಾಯಿತೆಂದು ಭಾವಿಸಿ ಅವಳೂ ಸಹ ಬಂದು ಬೆಂಕಿಗೆ ಹಾರುತ್ತಾಳೆ.

ಆಗ ಶಿವ-ಪಾರ್ವತಿಯರು ಪ್ರತ್ಯಕ್ಷವಾಗಿ ಕರಿಭಂಟನ ಸಮೇತ ಎಲ್ಲರನ್ನೂ ಬದುಕಿಸುತ್ತಾರೆ. ಊರ ೭ ಜನ ಗೌಡರ ಪ್ರಾಮಾಣಿಕತೆ ಎಲ್ಲರ ಜೀವ ಉಳಿಯಲು ಕಾರಣವಾಗುತ್ತದೆ. ಆದರೆ ಇದರಿಂದ ಕೆರಳಿದ ರಾಕ್ಷಸಿ  ಗೌಡರ ಮೇಲೆ ಕೋಪಗೊಂಡು



ಬೂದಿಯಲ್ಲಿ ರಾಕ್ಷಸಿ ಚಿತ್ರ ಬಿಡಿಸಿರುವ ಹಳ್ಳಿಗರು

ತಾನು ಪ್ರತಿ ವರ್ಷ ರೋಗವಾಗಿ ಬಂದು ಹಳ್ಳಿಗರ ಬೆಳೆ ಹಾಳು ಮಾಡುವುದಾಗಿ ಶಪಥ ಮಾಡುತ್ತಾಳೆ, ಆಗ ಕರಿಬಂಟ ತನ್ನಿಂದಾಗಿ ಹಳ್ಳಿಗರಿಗೆ ಈ ಸ್ಥಿತಿ ಬಂದೊದಗಿತಲ್ಲಾ ಎಂದುಕೊಂಡು ತಾನು ಪಚಾಡಿ ಮರವಾಗಿ ಹುಟ್ಟಿ ರೈತರ ಹೊಲದಲ್ಲಿ ನಿಂತು ರೋಗ-ರುಜಿನಗಳಿಂದ ಬೆಳೆ ರಕ್ಷಿಸುವುದಾಗಿ ಪಣ ತೊಡುತ್ತಾನೆ.

ಇದು ಕರಿಭಂಟನ ಆಚರಣೆಯ ಹಿಂದಿನ ಕತೆ.


## ೧೭. ಭತ್ತದ ಗದ್ದೆಗೆ ಗೊಡ್ಡೀಚಲು ಗರಿ ಇಡುವುದು

ಕರ್ನಾಟಕದ ಕನಕಪುರ, ಆನೇಕಲ್ ಪ್ರದೇಶಗಳಲ್ಲಿ ಪ್ರಚಲಿತವಿರುವ ವಿಶಿಷ್ಟ ಆಚರಣೆ ಗೊಡ್ಡೀಚಲು ಗಿಡದ ಕೊಂಬೆ ನೆಡುವುದು. ಭತ್ತದ ಗದ್ದೆ ನಾಟಿ ಮಾಡಿದ ೨೦ ದಿವಸ ಅಥವಾ ಒಂದು ತಿಂಗಳಿಗೆ ಇದನ್ನು ಮಾಡಲಾಗುತ್ತದೆ. ರೈತರು ಹೆಚ್ಚಾಗಿ ಮುಂಗಾರು ಹಂಗಾಮಿನ ಭತ್ತದ ತಾಕಿಗೆ ಈ ಆಚರಣೆ ಮಾಡುವುದು ರೂಢಿ. ಸಾಮಾನ್ಯವಾಗಿ ಮಗೆ (ಮಖಾ) ಮಳೆಯ ಅವಧಿಯಲ್ಲಿ ಇದರ ಆಚರಣೆಯನ್ನು ಕಾಣಬಹುದು.

ಒಂದು ಗೊತ್ತಾದ ದಿನ ಹಳ್ಳಿಯ ಎಲ್ಲರೂ ಹೊತ್ತಿಗೆ ಮುಂಚೆ ಹತ್ತಿರದ ಗುಡ್ಡಗಳಿಗೆ ಹೋಗಿ ಈಚಲು ಗರಿಗಳನ್ನು ತಂದು ತಮ್ಮ-ತಮ್ಮ ಗದ್ದೆಗಳಿಗೆ ನೆಡುತ್ತಾರೆ. ಸಾಮಾನ್ಯವಾಗಿ ಎಕರೆಗೆ ನಾಲ್ಕೈದು ಗರಿ ನೆಡುವುದು ವಾಡಿಕೆ. ಹೀಗೆ ನೆಟ್ಟ ಗರಿಗಳು ಬಹಳ ದಿವಸದವರೆಗೂ ಹಸಿರಾಗೇ ಇರುತ್ತವೆ. ಈ ಗರಿಗಳಲ್ಲಿ ಔಷಧೀಯ ಗುಣವಿದ್ದು ಅದು ಗಾಳಿಯ ಮೂಲಕ ಹಾದು ಭತ್ತದ ಪೈರುಗಳಿಗೆ ಸೋಕಿ ರೋಗ ನಿವಾರಣೆ ಯಾಗುತ್ತದೆ ಎನ್ನುತ್ತಾರೆ ರೈತರು. ಗರಿಗಳು ೧೫ ರಿಂದ ೨೦ ದಿವಸದ ನಂತರ ತುದಿಯ ಭಾಗದಿಂದ ಸ್ವಲ್ಪ-ಸ್ವಲ್ಪವೇ ಒಣಗುತ್ತಾ ಬರುತ್ತವೆ. ಗರಿಗಳು ಹೀಗೆ ಒಣಗಿದಂತೆ ಭತ್ತದ ಗದ್ದೆಯ ರೋಗವೂ ನಿಧಾನವಾಗಿ ಕಡಿಮೆಯಾಗುತ್ತದೆ ಎಂಬ ನಂಬಿಕೆ ರೈತರಲ್ಲಿದೆ.

ಗದ್ದೆಗೆ ಗರಿಗಳನ್ನು ನೆಟ್ಟ ನಂತರ ಕೆಲವರು ಕೋಳಿಯನ್ನು ಸುಟ್ಟು ಗದ್ದೆಯ ಸುತ್ತಲೂ ಬರುತ್ತಾರೆ. ಅದರ ಹೊಗೆ ಭತ್ತದ ಪೈರುಗಳಿಗೆ ಸೋಕಿದರೆ ರೋಗ-ಕೀಟಗಳು ಬೇಗ ವಾಸಿಯಾಗುತ್ತವೆಯಂತೆ. ಕೆರೆ ಹಿಂಭಾಗದಲ್ಲಿ ಗದ್ದೆಯಿರುವವರು ಒಟ್ಟಾಗಿ ಕಪ್ಪು ಬಣ್ಣದ ಹಂದಿಯನ್ನು ಸುಟ್ಟು ಈ ರೀತಿ ಸುತ್ತು ಹಾಕುತ್ತಾರೆ.

ಗೊಡ್ಡೀಚಲು ಗಿಡ ಈಚಲು ಜಾತಿಗೆ ಸೇರಿದ ಸಸ್ಯ. ಕಾಡು, ಬಯಲುಗಳಲ್ಲಿ ಬೆಳೆಯುತ್ತದೆ. ಇದರ ಗರಿಗಳು ಈಚಲು ಗರಿಗಳನ್ನೇ ಹೋಲುತ್ತವೆ. ಆದರೆ ಈಚಲು ಗರಿಗಳಿಗಿರುವಂತೆ ತುದಿಯಲ್ಲಿ ಚೂಪಾದ ಮುಳ್ಳುಗಳಿರುವುದಿಲ್ಲ,



ಗದ್ದೆಯ ಮಧ್ಯದಲ್ಲಿ ಗರಿ ನೆಟ್ಟಿರುವುದು

ಮತ್ತು ಈಚಲು ಗರಿಗಳಿಗಿಂತ ಗಾಢ ಹಸಿರು ಹಾಗೂ ಮೃದುವಾಗಿರುತ್ತವೆ. ನಗರಗಳಲ್ಲಿ ಮನೆಯ ಮುಂದೆ ಫ್ಯಾಷನ್‌ಗಾಗಿ ಗೊಡ್ಡೀಚಲು ಗಿಡಗಳನ್ನು ಹಾಕಿಕೊಂಡಿರುತ್ತಾರೆ.

## ೧೮. ಕಡ್ಲೆ ಕಾಯಿ ಹೊಲದಲ್ಲಿ ಕರಡಿ ಬೂತಪ್ಪ

ಕಡ್ಲೆಕಾಯಿ (ಶೇಂಗಾ) ಬೆಳೆಯುವ ಪ್ರದೇಶದಲ್ಲಿ ಕಂಡುಬರುವ ಆಚರಣೆ. ಹೊಲಕ್ಕೆ ಬಿತ್ತಿದ ಕಡ್ಲೆಕಾಯಿ ಹೊಲಕ್ಕೆ ಕರಡಿಗಳು ಧಾಳಿ ಮಾಡಿ ಬೆಳೆ ಹಾಳು ಮಾಡದಿರಲಿ ಎಂಬ ಆಶಯದಿಂದ ಆಚರಿಸಲಾಗುತ್ತದೆ.

ಕಡ್ಲೆ ಕಾಯಿ ಮುಖ್ಯ ಬೆಳೆಯಾದ ತುಮಕೂರು, ಹಿರಿಯೂರು ಭಾಗದಲ್ಲಿ ಕರಡಿಗಳು ವಿಪರೀತ. ಇವು ಕಡ್ಲೆ ಬೀಜವನ್ನು ಹೊಲಕ್ಕೆ ಬಿತ್ತಿದ ಎರಡು–ಮೂರು ದಿವಸಕ್ಕೇ ಹೊಲಕ್ಕೆ ಧಾಳಿ ಇಡುತ್ತವೆ, ಇನ್ನೂ ಮೊಳಕೆಯಾಗದೆ ಇರುವ ಬೀಜಗಳನ್ನು ಮೂತಿಯಲ್ಲಿ ಮಣ್ಣು ಬಗೆದು ಆರಿಸಿ ತಿನ್ನುತ್ತವೆ. ಸಾಲು ಹಿಡಿದು ತಿನ್ನುತ್ತಾ ಹೋಗುವುದರಿಂದ ಅಷ್ಟು ಜಾಗ ಖಾಲಿ ಬೀಳುತ್ತದೆ.

ಇದಲ್ಲದೆ ಕಡ್ಲೆ ಗಿಡದಲ್ಲಿ ಕಾಯಿ ಬಲಿತ ಹೊತ್ತಿಗೆ ಮತ್ತೆ ದಾಳಿ ಶುರು. ಗಿಡವನ್ನು ಅನಾಮತ್ ಹೊರಳಿಸಿ ಕಾಯಿಗಳನ್ನು ಅಲ್ಲೇ ಕಡಿದು ಬೀಜ ತಿನ್ನುತ್ತವೆ. ಗಿಡ ಹಸಿರಾಗೇ ಇದ್ದರೂ ಸಹ ಬುಡದಲ್ಲಿ ಕಾಯಿ ಇರುವುದಿಲ್ಲ.

ಈ ಕರಡಿಗಳ ನಿಯಂತ್ರಣಕ್ಕಾಗೇ ಕರಡಿ ಭೂತಪ್ಪನ ಆಚರಣೆ ಮಾಡುತ್ತಾರೆ. ಹೊಲಕ್ಕೆ ಬೀಜ ಬಿತ್ತಿದ ಹತ್ತು ಹದಿನೈದು ದಿವಸದಲ್ಲಿ ಇದನ್ನು ನೆರವೇರಿಸಲಾಗುತ್ತದೆ. ಅದರ ವಿಧಾನ ಹೀಗಿದೆ.

ಕಡ್ಲೆ ಬೀಜಗಳನ್ನು ಹುರಿದು ತಂಬಿಟ್ಟು ಆರತಿ ಮಾಡಿಕೊಂಡು ಹೊಲಕ್ಕೆ ಹೋಗುತ್ತಾರೆ. ಅಲ್ಲಿ ಪೂಜೆ ಮಾಡಿ ತಂಬಿಟ್ಟಿನ ಆರತಿಯನ್ನು ಕರಡಿಗಳು ಹೆಚ್ಚಾಗಿ ಯಾವ ದಿಕ್ಕಿನಿಂದ ಬರುತ್ತವೆಯೋ ಆ ದಿಕ್ಕಿಗೆ ಬೆಳಗುತ್ತಾರೆ. ನಮ್ಮ ಹೊಲ ಹಾಳು ಮಾಡಬೇಡ ಸ್ವಾಮಿ ಎಂದು ಹೇಳುತ್ತಾ ಸಣ ಮಾಡುತ್ತಾರೆ. ತಂಬಿಟ್ಟನ್ನು ಬಂದವರಿಗೆಲ್ಲ ಹಂಚಿ ಮನೆಗೆ ತೆರಳುತ್ತಾರೆ.

ಯಾರು ಕರಡಿ ಭೂತಪ್ಪನನ್ನು ಮಾಡಿರುತ್ತಾರೋ ಅವರ ಹೊಲಕ್ಕೆ ಕರಡಿಗಳು ಹಾನಿ ಮಾಡುವುದಿಲ್ಲ ಎಂಬ ನಂಬಿಕೆ ಇದೆ.

❑



## ಅಧ್ಯಾಯ ನಾಲ್ಕು

# ಓಲಿಗ ಸ್ವಾಮಿ ಓಲಿಗ

### ಸುಗ್ಗಿ ಆಚರಣೆಗಳು

ಪ್ರಕೃತಿಯ ವೇಳಾಪಟ್ಟಿಯಂತೆ ರೈತನ ಕೃಷಿ ಚಟುವಟಿಕೆಗಳು ಸಾಗುತ್ತವೆ. ಒಂದು ನಿಗದಿತ ವೇಳೆಗೆ ಆರಂಭವಾಗುತ್ತವೆ ಮತ್ತು ಅಂತಿಮಗೊಳ್ಳುತ್ತವೆ. ಸಾಮಾನ್ಯವಾಗಿ ಏಪ್ರಿಲ್ ತಿಂಗಳ ಎರಡನೇ ವಾರ ಬೀಳುವ ಅಶ್ವಿನಿ ಮಳೆಯಿಂದ ಕೃಷಿ ಚಟುವಟಿಕೆಗಳಿಗೆ ಚಾಲನೆ ದೊರೆತು ಅದೇ ತಿಂಗಳ ಕೊನೆಯ ವಾರ ಬೀಳುವ ಭರಣಿ ಮಳೆಯಿಂದ ಸಂಪೂರ್ಣವಾಗಿ ಬೇಸಾಯದ ಪ್ರಕ್ರಿಯೆಗಳು ಪ್ರಾರಂಭ.


'ಭರಣಿ ಮಳೆಯಲ್ಲಿ ಬಡವ ಏರು ಕಟ್ಟು' ಎಂಬ ವಾಡಿಕೆ ಮಾತಿದೆ. ಯುಗಾದಿ ಹಬ್ಬದ ಏಳು ದಿನಗಳ ಅಂತರದ ಹಿಂದು-ಮುಂದು ಮುಂಗಾರು ಮಳೆ ಬೀಳುತ್ತದೆ. ಮುಂಗಾರು ಮಳೆ ಬಿದ್ದ ಮಾತ್ರದಿಂದಲೇ ರೈತರು ಕೃಷಿ ಚಟುವಟಿಕೆಯನ್ನು ಆರಂಭಿಸುವುದಿಲ್ಲ. ಆ ಸಂದರ್ಭದಲ್ಲಿ ನೆಲ ನೆನೆಯಲು ಬಿಡುತ್ತಾರೆ. ಈ ನೆಲ ನೆನೆಯುವ ಕ್ರಿಯೆಯಲ್ಲಿ ಕೆಲ ಸೂಕ್ಷ್ಮ ಜೀವಿಗಳು ಉತ್ಪತ್ತಿಯಾಗಿ ಬೆಳವಣಿಗೆ ಹೊಂದುತ್ತವೆ. ಅವುಗಳು ಭೂಮಿಯ ಫಲವತ್ತತೆ ಹೆಚ್ಚಿಸುವಲ್ಲಿ ಸಹಕರಿಸುತ್ತವೆ. ಇಷ್ಟು ಹೊತ್ತಿಗೆ ಹೊಲಕ್ಕೆ ಗೊಬ್ಬರ-ಗೋಡು ಹಾಕುವುದು, ಉದಿ-ಬದು ಭದ್ರಪಡಿಸುವುದು, ಬೇಲಿ ಸವರುವುದು ಮುಂತಾದ ಕೆಲಸಗಳು ಮುಗಿದಿರುತ್ತವೆ. ಇದಾದ ನಂತರ ಬೀಳುವ ಮಳೆಯ ನಂತರ ಸಾಂಪ್ರದಾಯಿಕ ಹೊನ್ನೇರು ಪೂಜೆಯೊಂದಿಗೆ ರೈತರು ಉಳುಮೆ ಕಾರ್ಯವನ್ನು ಆರಂಭಿಸುತ್ತಾರೆ.

ಮೇ, ಜೂನ್, ಜುಲೈ, ಆಗಸ್ಟ್, ತಿಂಗಳುಗಳಲ್ಲಿ ಬಿತ್ತಿದ ಬೀಜ ಮೊಳೆತು, ಎರಡೆಲೆ ಇಟ್ಟು, ನೋಡ-ನೋಡುತ್ತಲೆ ನೆಲ ಕಾಣದಂತೆ ಬೆಳೆದು, ಹೊಟ್ಟೆಯೊಡೆದು, ಹೂಕಾಯ್ದು, ತೆನೆಯಾಗಿ, ಆ ತೆನೆ ಬಲಿತು ಹಣ್ಣಾಗಿ ಕಟಾವಿಗೆ ಸಿದ್ಧವಾಗುತ್ತದೆ. ಬೆಳೆ ಕಟಾವಾಗಿ ಕಣಕ್ಕೆ ಸಾಗಿದರೆ ರೈತನಿಗೆ ನಿಸೂರು. ಆ ನಿಸೂರಾದ ಭಾವದಲ್ಲಿ ಸುಗ್ಗಿ ಮಾಡಲು ಸಕಲ ತಯಾರಿ ನಡೆಯುತ್ತದೆ. ನಾಡಿನಾದ್ಯಂತ ಹತ್ತು-ಹಲವು ತೆರನಾದ ಸುಗ್ಗಿ ಆಚರಣೆಗಳನ್ನು ಕಾಣಬಹುದು. ರಾಗಿ ಕಣದಲ್ಲಿ ನಡೆಯುವ ಸುಗ್ಗಿಯ ಖದರು ಒಂದು ತೆರನಾದರೆ,

*ಉತ್ತರ ಕರ್ನಾಟಕದ ಜೋಳದ ಹೊಲದಲ್ಲಿ ನಡೆಯುವ ಸುಗ್ಗಿಯ ಸಿರಿ ಮತ್ತೊಂದು ತೆರನಾದದ್ದು. ಮಲೆನಾಡಿಗರ ಭತ್ತದ, ಅಡಿಕೆಯ ಸುಗ್ಗಿಯ ಸೊಗಸೇ ಬೇರೆ.*

## ೧. ಸಂಕ್ರಾಂತಿ–ಸುಗ್ಗಿಯ ಸಂಭ್ರಮ

ಸಂಕ್ರಾಂತಿಗೆ ವಾರದ ಮುಂಚಿನಿಂದಲೇ ಅದಕ್ಕಾಗಿ ಸಿದ್ಧತೆ. ಹದವಾಗಿ ಹುರಿದ ಎಳ್ಳು, ಸಮನಾಗಿ ಸಣ್ಣಗೆ ಹೆಚ್ಚಿದ ಕೊಬ್ಬರಿ–ಬೆಲ್ಲ, ಹುರಗಡಲೆ, ಕಂದು ಬಣ್ಣಕ್ಕೆ ಬಾರದಂತೆ ಜೋಪಾನವಾಗಿ ಹುರಿದ ಕಡಲೆ ಬೀಜದ ಮಿಶ್ರಣ. 'ಎಳ್ಳು–ಬೆಲ್ಲದ' ಜೊತೆಗೆ ಮಕ್ಕಳಿಗೆ ಪ್ರಿಯವಾದ ಸಕ್ಕರೆ ಅಚ್ಚು ಹಾಗೂ ಕಬ್ಬನ್ನು ತಮಗೆ ಪ್ರಿಯವಾದವರೆಲ್ಲರಿಗೆ ನೀಡುತ್ತಾ ಅಂದರೆ ಬೀರುತ್ತಾ, 'ಎಳ್ಳು–ಬೆಲ್ಲ ತಿಂದು ಒಳ್ಳೆಯ ಮಾತನ್ನಾಡೋಣ' ಎಂದೋ 'ತೀಳ್‌ಗುಳ್ ಘ್ಯಾ ಗೂಡಗೂಡ ಬೋಲ್' ಎಂದೋ ಕುಸುರಿ ಎಳ್ಳನ್ನು ಕೈಗಿಟ್ಟು ಸ್ನೇಹಭಾವ ಪ್ರದರ್ಶಿಸಲಾಗುತ್ತದೆ. ತನ್ನ ಬಳಿ ಇರುವುದನ್ನು ಇತರರಿಗೂ ಕೊಟ್ಟು ಎಲ್ಲರೂ ಸಮರಸದಿಂದ ಬಾಳುವೆ ಬಾಳೋಣ ಎಂಬ ಸದ್ಭಾವನೆಯೂ ಇದರಲ್ಲಡಗಿದೆ. ಸಂಕ್ರಾಂತಿಯೆಂದರೆ ಸಮೃದ್ಧಿಯ ಸಂಕೇತ.



ದನಗಳನ್ನು ಕಿಚ್ಚು ಹಾಯಿಸುವುದು (ಚಿತ್ರ : ಜಿ. ಕೃಷ್ಣಪ್ರಸಾದ್)

ನಮ್ಮ ಎಲ್ಲ ಹಬ್ಬಗಳಿಗಿರುವಂತೆಯೇ ಸಂಕ್ರಾಂತಿಗೂ ಒಂದು ಪೌರಾಣಿಕ ಹಿನ್ನೆಲೆಯಿದೆ. ತಿಲಾಸುರನ ವಧೆ ಈ ಹಬ್ಬದಾಚರಣೆಗೆ ಮೂಲ ಕಾರಣ. ಅದರ ವಿವರ ಹೀಗಿದೆ.

ತಿಲಾಸುರನೆಂಬ ರಾಕ್ಷಸನೊಬ್ಬ ಬ್ರಹ್ಮನಿಂದ ವರ ಪಡೆಯುತ್ತಾನೆ. ಆ ವರದ ಬಲದಿಂದ ಉನ್ಮತ್ತನಾಗಿ ಲೋಕ ಪೀಡಕನಾಗುತ್ತಾನೆ. ಆಗ ಸೂರ್ಯ ದೇವ 'ಮಕರ' ಮತ್ತು 'ಕರ್ಕ' ಎಂಬಿಬ್ಬರು ಮಹಿಳೆಯರ ಸಹಾಯದಿಂದ ಆ ತಿಲಾಸುರನನ್ನು ನಿವಾರಿಸಲು ಮುಂದಾಗುತ್ತಾರೆ. 'ಮಕರ'ನು ತಿಲಾಸುರನ ಸಂಹಾರಕ್ಕಾಗಿ ಆತನ ಹೊಟ್ಟೆಯನ್ನು ತನ್ನ ಭಲ್ಲೆಯಿಂದ ತಿವಿದಾಗ ಅಲ್ಲಿಂದ ರಾಶಿ ರಾಶಿ ಎಳ್ಳು ಹೊರಬರುತ್ತವೆ. ಕೊನೆಗೆ ಅಸುರ ಮೃತಪಡುತ್ತಾನೆ. ಈ ಕಾರಣಕ್ಕಾಗಿ ಭೂಮಿಗೆ ಎಳ್ಳಿನ ಪ್ರವೇಶವಾಗುತ್ತದೆ. ಆಗ ಸೂರ್ಯದೇವನು ಮಕರನನ್ನು ಆತನ ಸಾಹಸಕ್ಕಾಗಿ ಹೊಗಳಿ 'ನಿನ್ನನ್ನು ಮತ್ತು ನೀನು ಶೋಧಿಸಿದ ಎಳ್ಳನ್ನು ಪೂಜಿಸಿದವರಿಗೆ ಒಳಿತಾಗಲಿ' ಎಂದು ಹಾರೈಸುತ್ತಾನೆ. ಈ ರೀತಿ ಎಳ್ಳು ಬೀರುವ ಸಂಪ್ರದಾಯ ಬಂದಿದೆ ಎನ್ನಲಾಗಿದೆ. ಅದಕ್ಕಾಗಿಯೇ ಈ ಹಬ್ಬಕ್ಕೆ ಮಕರ ಸಂಕ್ರಾಂತಿ ಎಂತಲೂ ಕರೆಯುತ್ತಾರೆ.

ಈ ಹಬ್ಬಕ್ಕೆ ವೈಜ್ಞಾನಿಕ ಮಹತ್ವವೂ ಇದೆ. ಜೀವರಾಶಿಯ ಚೇತನ 'ಸೂರ್ಯ' ಕರ್ಕಾಟಕ ರಾಶಿಯಿಂದ ಉತ್ತರಾಯಣ 'ಮಕರ' ರಾಶಿಯತ್ತ ತನ್ನ ದಿಕ್ಕು ಬದಲಿಸುವ, ಹಾಗೆಯೇ ತನ್ನ ಪರಧಿಯಲ್ಲಿ ತಿರುವು ಪಡೆದು ಸೂರ್ಯನ ಸಮೀಪಕ್ಕೆ ಸಾಗುವ– ಅಂದರೆ ಬೇಸಿಗೆಯತ್ತ ಭೂಮಿ ಸಾಗಲಾರಂಭಿಸುವ ಶುಭ ಕಾಲ ಜನವರಿ ೧೪. 'ಸಂಕ್ರಮಣ' ಎಂದರೆ ಪರಿವರ್ತನೆ ಎಂದೂ ಆಗಬಹುದಾದ್ದರಿಂದ ನಕ್ಷತ್ರ–ಗ್ರಹಗಳ ಚಲನೆಯಲ್ಲಿನ ಪರಿವರ್ತನಾ ಕಾಲವನ್ನು ಶುಭವೆಂದು ಪರಿಗಣಿಸಿ ಅದಕ್ಕೆ ಹಬ್ಬದ ಮಹತ್ವ ಕೊಡಬಹುದಾಗಿದೆ.

ಇನ್ನು ಸಾಮಾಜಿಕವಾಗಿ ಈ ಹಬ್ಬದ ಆಚರಣೆಯತ್ತ ನಾವು ಗಮನಹರಿಸ ಬಹುದಾದರೆ, ಪ್ರಕೃತಿಯ ಮಡಿಲಲ್ಲಿ ಅದರ ಏರಿಳಿತಗಳಿಗೆ ಸ್ಪಂದಿಸುತ್ತಾ ಹಾಯಾಗಿರುವ ಮಾನವ ಚಳಿಗಾಲದ ಮೈ ಮರಗಟ್ಟಿಸುವ ಚಳಿಯಿಂದ ಹೊರ ಬಂದು, ಹೊಸ ಹುರುಪು, ಹೊಸ ಚೈತನ್ಯ ನೀಡುವ ಬೇಸಿಗೆಯತ್ತ ಸಾಗಲು ಇಲ್ಲಿಂದ ಮುಂದೆ ಉತ್ಸುಕನಾಗುತ್ತಾನೆ. ಅದರಲ್ಲೂ ಜನವರಿ ತಿಂಗಳಲ್ಲಿ ತುಂಬಾ ಅನುಕೂಲಕರ ಹಿತ ವಾತಾವರಣವಿರುತ್ತದೆ. ಇದು ಶಿಶಿರ ಋತುವಿನ ಕಾಲ. ಬೇಸಿಗೆಯ ನಿರೀಕ್ಷೆಯಿರುತ್ತದಾ ದರೂ ಸಹ ಈ ತಿಂಗಳಲ್ಲಿ ವಿಪರೀತ ಛಳಿಯೂ ಇರುತ್ತದೆ. ಎಲ್ಲಿ ನೋಡಿದರೂ ಮರ ಗಿಡಗಳು ಎಲೆಯುದುರಿಸಿ ಬೋಳಾಗಿರುತ್ತವೆ. ಈ ಸಮಯದಲ್ಲಿ ಬರುವ ಸಂಕ್ರಾಂತಿ ಹಲವಾರು ಕಾರಣಗಳಿಂದ ಮಹತ್ವದ್ದು.

ತಮಿಳುನಾಡಿನಲ್ಲಿ 'ಪೊಂಗಲ್' ಎಂದು ಕರೆಸಿಕೊಳ್ಳುವ ಸಂಕ್ರಾಂತಿ ಮೇಲ್ನೋಟಕ್ಕೆ ದಕ್ಷಿಣ ಭಾರತದ ಹಬ್ಬದಂತೆ ಕಂಡು ಬಂದರೂ ಈ ಹಬ್ಬದಾಚರಣೆ ದೇಶದ ವಿವಿಧ ಭಾಗಗಳಲ್ಲಿ ಇದೆ. ಬಂಗಾಳ, ಉತ್ತರ ಪ್ರದೇಶ, ರಾಜಾಸ್ತಾನ, ಮಹಾರಾಷ್ಟ್ರ, ತಮಿಳುನಾಡು, ಕೇರಳ, ಪಂಜಾಬ್ ಹೀಗೆ ಅನೇಕ ರಾಜ್ಯಗಳಲ್ಲಿ ಸೂರ್ಯ – ಭೂಮಿಯರ ಚಲನೆಯಲ್ಲಿನ ಬದಲಾವಣೆಯನ್ನು ಜನ ಗುರುತಿಸಿ ಆ ದಿನವನ್ನು ಸಂಭ್ರಮದಿಂದ ಆಚರಿಸುತ್ತಾರೆ. ಉತ್ತರ ಭಾರತದ ಹಲವಾರು ರಾಜ್ಯಗಳಲ್ಲಿ ಜನರು ತ್ರಿವೇಣಿ ಸಂಗಮದ ಸ್ನಾನಕ್ಕಾಗಿ ಪ್ರಯಾಗ, ಕಾಶಿಯಂತಹ ಪವಿತ್ರ ಸ್ಥಳಗಳಿಗೆ ಧಾವಿಸಿ ನದಿಯಲ್ಲಿ ಮಿಂದು 'ಸೂರ್ಯ'ನಿಗೆ ನಮಸ್ಕರಿಸಿದರೆ, ಕೇರಳದಲ್ಲಿ ಲಕ್ಷಾಂತರ ಯಾತ್ರಿಗಳು 'ಮಕರವಿಳಕ್ಕು' ಎಂಬ ಅಲೌಕಿಕ ಜ್ಯೋತಿಯ ದರ್ಶನಕ್ಕಾಗಿ ಶಬರಿಮಲೈಯತ್ತ ಧಾವಿಸುತ್ತಾರೆ.

ಮಹಾರಾಷ್ಟ್ರದಲ್ಲಿ ಕುಸುರೆಳ್ಳನ್ನು ನೆಂಟರಿಷ್ಟರಿಗೆ ನೀಡಿ ಶುಭ ಹಾರೈಸಿದರೆ, ಪಂಜಾಬಿ ಮಹಿಳೆಯರು, ಸಂಕ್ರಾಂತಿಯ ಮುನ್ನಾದಿನ 'ಲೋಡಿ' ಆಚರಿಸಲು ಮನೆಯ ಮುಂದಿನ ಬಯಲಲ್ಲಿ ಬೆಂಕಿ ಹಾಕಿ ಅದರ ಸುತ್ತ ಪ್ರದಕ್ಷಿಣೆಯಲ್ಲಿ ಸಾಗುತ್ತಾ ಜೋಳ, ಕಡಲೆ ಕಾಯಿಗಳನ್ನು ಬೆಂಕಿಯಲ್ಲಿ ಹಾಕುತ್ತಾರೆ. ಪ್ರದಕ್ಷಣೆಯ ನಂತರ ದೇವರನ್ನು ಪ್ರಾರ್ಥಿಸಿ, ಸಂಭ್ರಮದಿಂದ ನರ್ತಿಸುತ್ತಾ ಎಲ್ಲರೂ ಸಹಭೋಜನ ಮಾಡುತ್ತಾರೆ. ಮಾರ್ವಾಡಿಗಳ ಮನೆಯಲ್ಲಿ ಹೆಂಗಸರು ೧೩ ಜನ ಮುತ್ತೈದೆಯರಿಗೆ ತಮ್ಮ ಕೈಲಾದ –ಅಂದರೆ ಹಣೆಬೊಟ್ಟಿನಿಂದ ಹಿಡಿದು ಸೀರೆಯವರೆಗೂ ಯಾವುದಾದರೂ ಸರಿ ಎಳ್ಳುಂಡೆಗಳೊಡನೆ ಅವರ ಮನೆಗೆ ಹೋಗಿ ನೀಡಿ ನಮಸ್ಕರಿಸಿ ಬರುತ್ತಾರೆ.

ನೆರೆಯ ರಾಜ್ಯ ತಮಿಳುನಾಡಿನ ಬಹುದೊಡ್ಡ ಹಬ್ಬ 'ಪೊಂಗಲ್'. ಮೂರು ದಿನಗಳ ಕಾಲ ಆಚರಿಸುವ ಈ ಹಬ್ಬದ ಮೊದಲ ದಿನ 'ಬೋಗಿ'. ಅಂದು ಮನೆಯನ್ನೆಲ್ಲಾ ಶುಭ್ರಗೊಳಿಸಿ ಊರ ಹೊರಗೆ ಹಾಕಿದ ಬೆಂಕಿಯಲ್ಲಿ ಹಳೆಯ ಬಟ್ಟೆಗಳನ್ನೆಲ್ಲಾ ರಾತ್ರಿ ಹೊತ್ತು ಸುಟ್ಟು ಅದರ ಸುತ್ತ ಹಾಡಿ ಕುಣಿದು ಖುಷಿಪಡುತ್ತಾರೆ. ಮರುದಿನ ಎಳ್ಳೆಣ್ಣೆ ಹಚ್ಚಿಕೊಂಡು ಸ್ನಾನ ಮಾಡಿ ಹೆಸರುಬೇಳೆ, ಅಕ್ಕಿ ಬೆಲ್ಲದ ಸ್ವಾದಿಷ್ಟ 'ಪೊಂಗಲ್' ಸಿದ್ಧ ಮಾಡಿ ಸಹ ಭೋಜನ ಮಾಡುತ್ತಾರೆ. ಅಣ್ಣಂದಿರು ತಂಗಿಯರಿಗೆ ಉಡುಗೊರೆ ನೀಡಿ ಶುಭ ಹಾರೈಸುತ್ತಾರೆ. ಹತ್ತಿರದವರೆಲ್ಲ ಒಂದೆಡೆ ಸೇರಿ ಹಬ್ಬವನ್ನಾಚರಿಸುವುದರಿಂದ ಅಲ್ಲಿ ನೂತನ ಸಂಬಂಧ ಬೆಳೆಯಲೂ ಅವಕಾಶವಿರುತ್ತದೆ.

ಕರ್ನಾಟಕದಲ್ಲಿ ಕೊಡಗಿನವರು ಸಂಕ್ರಾಂತಿ ಹಿಂದೆ–ಮುಂದೆ 'ಹುತ್ತರಿ ಹಬ್ಬ' ಆಚರಿಸಿ ತಮ್ಮನ್ನು ಕಾಪಾಡುವ 'ಇಗ್ಗುತಪ್ಪಾ'ನಿಗೆ ಭಕ್ತಿಯಿಂದ ನಮಸ್ಕರಿಸುತ್ತಾರೆ. ಉತ್ತರ ಕರ್ನಾಟಕದಲ್ಲಿ ಬಹುತೇಕವಾಗಿ ಮಹಾರಾಷ್ಟ್ರದ ಕುಸುರೆಳ್ಳು ಸಂಪ್ರದಾಯವಿದ್ದು, ಅಲ್ಲಿ ಮಕ್ಕಳಿಗೆ, ಹೊಸದಾಗಿ ಮದುವೆಯಾದವರಿಗೆ ಕುಸುರೆಳ್ಳಿನಿಂದ ಮಾಡಿದ ಆಭರಣಗಳನ್ನು

ತೊಡಿಸಿ ಸಂಭ್ರಮಿಸುತ್ತಾರೆ. ದಕ್ಷಿಣದ ಕರ್ನಾಟಕದಲ್ಲಿ ಎಳ್ಳು, ಕಡಲೆ, ಹುರಗಡಲೆ, ಕೊಬ್ಬರಿ, ಬೆಲ್ಲದ ಮಿಶ್ರಣದ ಎಳ್ಳು-ಬೆಲ್ಲ ಬೀರುವ ಸಂಪ್ರದಾಯ. 'ಪೊಂಗಲ್' ಹುಗ್ಗಿ ಗೊಜ್ಜಿನ ಸಿದ್ಧತೆ ಕೂಡ ಇಲ್ಲಿ ಪ್ರಾಶಸ್ತ್ಯ ಪಡೆಯುತ್ತದೆ. ಹಳ್ಳಿಗಳಲ್ಲಿನ ಕಣಜದ ಪೂಜೆ, ಭೂಮಿ ಪೂಜೆ, ಕುಣಿತಗಳು ನಗರಗಳಲ್ಲಿ ಇಲ್ಲವಾದರೂ, ಸಂಕ್ರಾಂತಿಯ ಸಂದರ್ಭದಲ್ಲಿ ಎಲ್ಲೆಡೆ ಗೋಪೂಜೆ ಸಾಮಾನ್ಯ, ಹಳ್ಳಿಗಳಲ್ಲಿ ಹಸು, ಎತ್ತುಗಳನ್ನು ತೊಳೆದು ಕೊಂಬಿಗೆ ಬಣ್ಣ ಬಳಿದು 'ಗೋವಿನ' ಅಲಂಕಾರ ಮಾಡುತ್ತಾರೆ. ಅವುಗಳ ಮೆರವಣಿಗೆಯೂ ಕೆಲವೆಡೆ ನಡೆಯುತ್ತದೆ. ವರ್ಷವಿಡೀ ತಮಗಾಗಿ ದುಡಿದ ಪ್ರಾಣಿಗಳನ್ನು ಪೂಜಿಸಿ ಅವಕ್ಕೆ ದೃಷ್ಟಿ ತಾಗದಿರಲೆಂದು 'ಕಿಚ್ಚು' ಹಾರಿಸುತ್ತಾರೆ.

ದೇಶದ ನಾನಾ ಕಡೆ ಅತ್ಯುತ್ಸಾಹದಿಂದ ಆಚರಿಸುವ ಈ ಹಬ್ಬದ ಸಂದರ್ಭದಲ್ಲಿ ಅದರಲ್ಲೂ ನಮ್ಮ ರಾಜ್ಯದಲ್ಲಿ ಬಣ್ಣ ಬಣ್ಣದ ಉಡುಗೆ ತೊಟ್ಟು, ಅಲಂಕರಿಸಿಕೊಂಡು ಮನೆ ಮನೆಗೆ ಹೋಗಿ ಎಳ್ಳು ಬೆಲ್ಲ ಹಂಚಿ ಬರುವ ಹೆಣ್ಣು ಮಕ್ಕಳ ಸಡಗರ ಕಂಡು ಹಿರಿಯ ಕವಿ ಹೃದಯಗಳೂ ಸ್ಪಂದಿಸಿ 'ಮನೆ-ಮನೆಯ ಸುಖವನ್ನೆಲ್ಲ ಬೀರಿ ಬನ್ನಿ...' ಎಂದು ಹಾಡಿ ಸಂಭ್ರಮಿಸಿವೆ. ಎಳ್ಳು ಬೀರುವುದರ ಜೊತೆಗೇ ಇವು ನಮ್ಮನೆ 'ಎಳ್ಳು-ಅಚ್ಚು' ಎಂದೆಲ್ಲಾ ಹೇಳಿಕೊಂಡು ಸಂಭ್ರಮಿಸುವ ಮಹಿಳೆಯರನ್ನು ಕಂಡಾಗ ಹಬ್ಬದಾಚರಣೆಯ ಖುಷಿ ಉಳಿದವರಲ್ಲೂ ಪಸರಿಸುತ್ತದೆ.

ಎಳ್ಳು-ಬೆಲ್ಲ ಅಥವಾ ಕುಸುರೆಳ್ಳು ಹಿಡಿದು ತಮಗೆ ಪಾಠ ಮಾಡುವ, ಮಾಡದಿರುವ ಎಲ್ಲ ಅಧ್ಯಾಪಕರಿಗೆ, ಹಿರಿಯರಿಗೆ, ನೆಂಟರಿಗೆ, ಮಿತ್ರರಿಗೆ ಅವರ ಮನೆಗೇ ಹೋಗಿ, ಇಲ್ಲವೇ ಎದುರಿಗೆ ಸಿಕ್ಕಾಗ ಎಳ್ಳು ನೀಡಿ ನಮಸ್ಕರಿಸಿ, ಆಶೀರ್ವಾದ ಪಡೆವ ಸಂಪ್ರದಾಯ, ಸಂಭ್ರಮ ಈಗ ಕಣ್ಮರೆಯಾಗುತ್ತಿದೆ. 'ಎಳ್ಳು ಬೆಲ್ಲ ಕೊಳ್ಳಿ, ಒಳ್ಳೊಳ್ಳೆ ಮಾತನಾಡಿ' ಎಂದು ಉತ್ತಮ ಸಂವಹನದ ಹಾದಿಯನ್ನು ತೋರುವ ಹಬ್ಬ. 'ಹೂವಾಗಿ ಬಾಳೋಣ, ಜಳ್ಳನ್ನು ಗಾಳಿಗೆ ತೂರೋಣ' ಎಂದು ಸಮರಸದ ಬದುಕಿಗೆ ಆಹ್ವಾನವಿರುವ ಈ ಹಬ್ಬ, ಒಡೆದ ಚರ್ಮಕ್ಕೆ ಕಾಂತಿ ನೀಡುವ ಎಳ್ಳು, ಕೊಬ್ಬರಿ, ಕಡಲೆಕಾಯಿ, ಬೆಲ್ಲ, ಕಬ್ಬು ಸವಿಯಿರಿಯೆನ್ನುವ ಈ ಹಬ್ಬ ಸಮೃದ್ಧಿಯ ಸಂಕೇತವೂ ಹೌದು.

**ಜಾನುವಾರುಗಳ ಸಂಕ್ರಾಂತಿ** : ಜನವರಿ ತಿಂಗಳ ಕೊರೆ ಬೀಳುವ ಕಾಲದಲ್ಲಿ ಆಚರಿಸಲ್ಪಡುವ ಸಂಕ್ರಾಂತಿ ಎಲ್ಲೆಡೆ ಬಳಕೆಯಲ್ಲಿರುವ ಸುಗ್ಗಿ ಹಬ್ಬ. ಸಂಕ್ರಾಂತಿ ಬರುವ ಕಾಲವಾದರೂ ಎಂತಹುದು? ಸಕಲೆಂಟು ಧಾನ್ಯಗಳೂ ಮನೆಯ ಮೂಲೆ-ಮೂಲೆಯಲಿರುವ ಚೀಲ, ಗುಡಾಣ, ಹರಿವಿ, ಮಡಕೆ ಸಾಲುಗಳು, ಕಣಜವೇ ಮುಂತಾದವುಗಳಲ್ಲಿ ತುಂಬಿ ಇಟ್ಟಾಡುವ ಕಾಲ. ಎಂತಹ ಬಡವರ ಮನೆಯಲ್ಲೂ ಕಾಳು-ಕಡಿಗಳು ತುಂಬಿ-ತುಳುಕುವ ಈ ಸಮಯದಲ್ಲಿ ಆ ಸಮೃದ್ಧಿಗೆ ಕಾರಣವಾದ



ದನಗಳನ್ನು ಬೆದರಿಸುವುದು

ದನ-ಕರುಗಳನ್ನು ಗೌರವದಿಂದ ಕಾಣುವ ಸಲುವಾಗಿಯೇ ಬರುವುದು ಸಂಕ್ರಾಂತಿ. ಇಡೀ ವರ್ಷ ತಮ್ಮ ಜೊತೆ-ಜೊತೆಗೇ ದುಡಿದ ಬಸವನನ್ನು ನೆನೆವ ದಿನ.

ಇದು ರೈತನ ಆಧಾರವಾಗಿರುವ ದನಕರುಗಳ ಸಂಬಂಧದಲ್ಲಿ ಆಚರಿಸುವ ಹಬ್ಬ. ಈ ಹಬ್ಬದ ಹೊತ್ತಿಗೆ ಹೊಲಗದ್ದೆಗಳ ಕೊಯ್ಲು ಮುಗಿದು ದನಕರುಗಳು ಕೂಡ ಕೊಂಚ ಬೇಸಾಯದ ಕೆಲಸದಿಂದ ವಿರಾಮ ಹೊಂದುತ್ತಿರುತ್ತವೆ. ಹಬ್ಬದಂದು ಕೊಟ್ಟಿಗೆ ಸಾರಿಸಿ, ದನ-ಕರುಗಳ ಮೈತೊಳೆದು ಸಿಂಗರಿಸಿ ಮೆರವಣಿಗೆ ಮಾಡಿ ಕಿಚ್ಚು ಹಾಯಿಸಿ, ಕಷ್ಟಗಳನ್ನು ಎದುರಿಸುವ ಶಕ್ತಿ ಅವುಗಳಿಗೆ ಸಿಗಲಿ ಎಂದು ಪ್ರಾರ್ಥಿಸುತ್ತಾರೆ. ರೈತರು ದನಕರುಗಳನ್ನು ಪೂಜಿಸುವುದರೊಂದಿಗೆ ಅಂದು ಗೋವಿನ ಕಥೆಯನ್ನು ಓದಲಾಗುತ್ತದೆ. ಈ ಕಥೆ ಒಂದು ಹಸುವಿನ ಸತ್ಯ ಸ್ವಭಾವವನ್ನು, ಸಾಧುತ್ವವನ್ನು ವಿವರಿಸುವಂಥದ್ದು. ಹುಲಿ ನಮ್ಮ ಸಾಂಸ್ಕೃತಿಕ ಪರಂಪರೆಯಲ್ಲಿ ಆಯಾ ವ್ಯಕ್ತಿಯ ಶಕ್ತಿಯನ್ನು ಅಳೆಯುವ ಸಾಧನವಾಗಿದೆ ಎಂದರೆ ವೀರರೊಡನೆ ಅದು ಹೋರಾಡು ವಂಥದ್ದು. ಸಾಧು ಶರಣರಿಗೆ, ಋಷಿಗಳಿಗೆ ಅದು ಚರ್ಮದ ಹಾಸಿಗೆಯಾದರೆ, ದೇವತೆಗಳಿಗೆ ಹುಲಿ ವಾಹನವೇ ಆಗಿ ಬಿಡುತ್ತದೆ. ಇಂಥ ಹುಲಿ ಜನಪದರು ಸೃಷ್ಟಿಸಿರುವ ಗೋವಿನ ಕಥೆಯಲ್ಲಿ, ಪುಣ್ಯಕೋಟಿಯ ಸತ್ಯಕ್ಕೆ ಮೆಚ್ಚಿ ಅದರ ಎದುರೇ ಆತ್ಮಹತ್ಯೆ ಮಾಡಿಕೊಳ್ಳುತ್ತದೆ. ಹೀಗೆ ಗೋವು

ಜನಪದರಿಗೆ ದೇವರು, ಸಾಧು–ಸಂತರು, ವೀರರಿಗಿಂತ ಪೂಜ್ಯ ಎಂದಾಯಿತು. ಪ್ರಾಚೀನ ಕಾಲದಿಂದಲೂ ರೈತ ವರ್ಗಕ್ಕೆ ಜೀವನಾಡಿಯಾಗಿ ಬಂದಿರುವ ಪಶು ಸಮೂಹದ ಬಗ್ಗೆ ಕಾಲಕ್ರಮೇಣ ಇಂಥ ಮಹತ್ವದ ಕಥೆಯೊಂದು ಹುಟ್ಟಿಕೊಂಡು ಬಂದಿರುವುದರಲ್ಲಿ ಆಶ್ಚರ್ಯವಿಲ್ಲ.

ನಾಡೆಲ್ಲಾ ಸಂಕ್ರಾಂತಿ ಆಚರಿಸಿದರೂ ಅದಕ್ಕೊಂದು ವಿಶಿಷ್ಟತೆ ಬರುವುದು ಹಳ್ಳಿಗಾಡಿನಲ್ಲಿ. ನಗರದ ಜನತೆಗೆ ಸಂಕ್ರಾಂತಿ ಬರೀ ಎಳ್ಳು – ಬೆಲ್ಲ ತಿಂದು ಒಳ್ಳೆ ಮಾತಾಡುವ ದಿನವಾದರೆ ಹಳ್ಳಿಗರಿಗೆ ಇಡೀ ವರ್ಷದ ಸುಗ್ಗಿಯನ್ನು ಸಂಭ್ರಮಿಸುವ ದಿನ. ಈಗಾಗಲೇ ಹೇಳಿದಂತೆ ಎಂಥಾ ಬಡವರ ಮನೆಯಲ್ಲೂ ಮಡಿಕೆ – ಕುಡಿಕೆ, ಕಣಜಗಳು, ಕಾಳು–ಕಡ್ಡಿಯಿಂದ ತುಂಬಿರುವ ಕಾಲದಲ್ಲಿ ಬರುವ ಸಂಕ್ರಾಂತಿ ನೆಮ್ಮದಿಯ ಮನಸ್ಸಿನಿಂದ ಆಚರಿಸಿಕೊಳ್ಳುವ ಹಬ್ಬ.

ಕರ್ನಾಟಕ, ತಮಿಳುನಾಡು, ಆಂಧ್ರಪ್ರದೇಶಗಳಲ್ಲಿ ಸರಿಸುಮಾರು ಒಂದೇ ಸಮಯಕ್ಕೆ ಆಚರಿಸಲ್ಪಡುವ ಸಂಕ್ರಾಂತಿ ಹಬ್ಬದ ಮೂಲ ಉದ್ದೇಶ ಒಂದೇ ಆದರೂ ಮಾಡುವ ವಿಧಾನದಲ್ಲಿ ತುಸು ಬದಲಾವಣೆಗಳಿವೆ. ತಮಿಳುನಾಡಿನಲ್ಲಿ 'ಪೊಂಗಲ್' ಎಂದು ಕರೆಯಲ್ಪಡುವ ಮಕರ ಸಂಕ್ರಾಂತಿ ಬಹುದೊಡ್ಡ ಸಾರ್ವತ್ರಿಕ ಹಬ್ಬ. ಎರಡು ದಿನ ಆಚರಿಸಲ್ಪಡುವ ಹಬ್ಬದಲ್ಲಿ ಮೊದಲ ದಿನ ಹೊಸದಾಗಿ ಒಕ್ಕಣೆಯಾದ ಅಕ್ಕಿಯನ್ನು ವಿಧಿವತ್ತಾಗಿ ಬೇಯಿಸಿ ಸೇವಿಸುತ್ತಾರೆ. ಹಸು ಹಾಗೂ ಹೋರಿಗಳಿಗೆ ಕೃತಜ್ಞತೆ ಸಲ್ಲಿಸುವ ಮರುದಿನದ ಹಬ್ಬಕ್ಕೆ ಇದು ನಾಂದಿಯಾಗುತ್ತದೆ.


ಕರ್ನಾಟಕದಲ್ಲಿಯೂ ಸಹ ಬೇರೆ–ಬೇರೆ ಭಾಗಗಳಲ್ಲಿ ವಿವಿಧ ರೀತಿಯಲ್ಲಿ ಸಂಕ್ರಾಂತಿ ಆಚರಿಸಲ್ಪಡುತ್ತದೆ. ಮೇಲ್ನೋಟಕ್ಕೆ ಒಂದೇ ಎನಿಸಿದರೂ ಸೂಕ್ಷ್ಮವಾಗಿ, ವಿವರಗಳಲ್ಲಿ ನೋಡಿದರೆ ಈ ವೈವಿಧ್ಯತೆ ಸ್ಪಷ್ಟವಾಗಿ ಗೋಚರಿಸುತ್ತದೆ. ತುಮಕೂರು, ಚಿತ್ರದುರ್ಗ ಮುಂತಾದ ಬಯಲುಸೀಮೆ ಪ್ರದೇಶದಲ್ಲಿ ಈ ಹಬ್ಬ ಒಂದು ರೀತಿ ಸೊಗಸಿದರೆ ಬೆಂಗಳೂರು ಗ್ರಾಮಾಂತರ, ಮಂಡ್ಯ, ಮೈಸೂರು ಪ್ರದೇಶದಲ್ಲಿನ ಐಸಿರಿಯೇ ಬೇರೆ ರೀತಿಯದು. ಅಂದಿನ ದಿನ ನಡೆಯುವ ಬಹುಮುಖ್ಯ ಕಾರ್ಯಗಳೆಂದರೆ ದನಗಳ ಮೆರವಣಿಗೆ, ದನ ಓಡಿಸುವುದು, ಕಿಚ್ಚು ಹಾಯಿಸುವುದು ಮುಂತಾದುವು. ಈ ಆಚರಣೆಗಳ ಮೂಲಕ ಯಶಸ್ವಿ ಸುಗ್ಗಿಗೆ ಕಾರಣೀಭೂತವಾದ ಜಾನುವಾರುಗಳಿಗೆ ಅರ್ಥಪೂರ್ಣ ಕೃತಜ್ಞತೆಗಳನ್ನು ಸಲ್ಲಿಸಲಾಗುತ್ತದೆ. ಅಲ್ಲದೆ ಹಬ್ಬದ ವಿವಿಧ ಹಂತಗಳಲ್ಲಿ ತುಂಬೆ ಹೂ, ಅಣ್ಣೆ ಹೂ, ತಂಗಡಿ ಹೂ, ಹೊನ್ನೆ ಹೂ, ಉಗುನಿ ಹೂ ಮುಂತಾದುವುಗಳನ್ನು ಬಳಸಿ ಪ್ರಕೃತಿಗೂ ಗೌರವವನ್ನು ನೀಡಲಾಗುತ್ತದೆ.



ಅಲಂಕಾರಗೊಂಡ ದನಗಳ ಮೆರವಣಿಗೆ

**ದನಗಳ ಮೆರವಣಿಗೆ :** ಹಬ್ಬದ ದಿನ ಬೆಳಿಗ್ಗೆ ತಂತಮ್ಮ ಎತ್ತು – ಹಸು ಕರುಗಳಿಗೆಲ್ಲಾ ಮೈತೊಳೆದು ಶೃಂಗರಿಸಿ ಮೆರವಣಿಗೆ ಮಾಡುವ ಮೂಲಕ ಸಂಕ್ರಾಂತಿ ಪ್ರಾರಂಭ. ಪಶುಪಾಲಕರು ಪೈಪೋಟಿಯ ಮೇಲೆ ಶಕ್ತ್ಯಾನುಸಾರ ತಮ್ಮ ರಾಸುಗಳನ್ನು ಅಲಂಕರಿಸುತ್ತಾರೆ. ಕೊಂಬುಗಳಿಗೆ ನವಿಲುಗರಿ, ಕನ್ನಡಿ, ಬಣ್ಣದ ಪೇಪರಿನ ಪಟಾವಳಿ ಕಟ್ಟಿ, ಗೆಜ್ಜೆ ಸರ ಸುತ್ತಿ, ಹೂವಿನ ದಂಡೆ ಹಾಕಿ, ಕೊರಳಿಗೆ ಕರಿದಾರದ ಹುರಿಕಟ್ಟಿ ಅದಕ್ಕೆ ಗಂಟೆ, ಶಂಖಗಳನ್ನು ಪೋಣಿಸಿ, ಬೆನ್ನ ಮೇಲೆ ಹೊಳೆಯುವ ಗೌನನ್ನು ಹೊದಿಸಿದರೆ ಪ್ರತಿಯೊಂದು ರಾಸೂ ದೇವಲೋಕದ ಐರಾವತದಂತೆ ಮತ್ತು ಅವುಗಳನ್ನು ಹಿಡಿದ ಯಜಮಾನ ಸಾಕ್ಷಾತ್ ದೇವೇಂದ್ರನಂತೆ ಕಂಗೊಳಿಸುತ್ತಾರೆ. ಮಂಗಳವಾದ್ಯದೊಂದಿಗೆ ಊರೆಲ್ಲಾ ಒಂದು ಸುತ್ತು ಹಾಕಿ ಮೆರವಣಿಗೆ ಮುಗಿಯುತ್ತದೆ.

ದನ ಬಿಡುವುದು : ಇದೊಂದು ಮೈನವಿರೇಳಿಸುವ ನೋಟ ಮತ್ತು ಹಬ್ಬದ ಬಹುಮುಖ್ಯ ಆಕರ್ಷಣೆ. ದನ ಬಿಡುವುದರಲ್ಲಿ ಪಾಲ್ಗೊಳ್ಳಲು ಅಕ್ಕಪಕ್ಕದ ಊರುಗಳಿಂದೆಲ್ಲಾ ಜನರು ಹಾಜರಾಗಿರುತ್ತಾರೆ. ಮೆರವಣಿಗೆ ಆದ ನಂತರ ಮಧ್ಯಾಹ್ನದ ಊಟ ಮುಗಿಸಿ ದನ ಬಿಡಲು ಶುರು ಮಾಡಿದರೆ ಸೂರ್ಯ ಪಶ್ಚಿಮದಲ್ಲಿ ಕೆಂಪಾಗುವವರೆಗೂ ನಿಲ್ಲುವುದಿಲ್ಲ. ಇದೊಂದು ರೀತಿ ದನಗಳ ಮತ್ತು ಜನಗಳ ನಡುವಿನ ಸ್ಪರ್ಧೆ.



ಓಡುವ ದನಗಳನ್ನು ಹಿಡಿಯುತ್ತಿರುವುದು

ದನ ಬಿಡುವುದೆಂದರೆ ಎತ್ತು, ಹಸು, ಹೋರಿಗಳ ಒಡೆಯರು ಅವುಗಳ ಕೊಂಬುಗಳಿಗೆ ಹೊಸಬಟ್ಟೆ ಅಥವಾ ದುಡ್ಡನ್ನು ಕಟ್ಟಿ ಜೋರಾಗಿ ತಮಟೆ ಹೊಡೆಯುತ್ತಾ, ಕೂಗುತ್ತಾ ಹಿಂದಿನಿಂದ ಓಡಿಸುವುದು ಮತ್ತು ಅಡ್ಡ ನಿಂತ ಜನ ಅವುಗಳನ್ನು ಹಿಡಿಯುವುದು. ಊರಿನ ಪ್ರಮುಖ ಬೀದಿಯಲ್ಲಿ ನಡೆಯುವ ಇದನ್ನು ನೋಡಲು ಜನರು ಮಾಳಿಗೆಗಳ ಮೇಲೆ, ಮರಗಳ ಮೇಲೆ ಜೇನು ಹುಳುಗಳಂತೆ ಮುತ್ತಿ ಕೊಂಡಿರುತ್ತಾರೆ. ಒಬ್ಬರಾದ ನಂತರ ಒಬ್ಬರಂತೆ ಸರದಿ ಪ್ರಕಾರ ದನ ಬಿಡುತ್ತಿದ್ದರೆ ಅವು ದಿಢೀರ್ ತಮಟೆಯ ಸದ್ದಿಗೂ, 'ಹೋ' ಎನ್ನುವ ಜನಗಳ ಕೇಕೆಗೂ ಏಕಾಏಕಿ ಬೆದರಿ, ಕೊಂಬುಗಳನ್ನು ಮುಂದಕ್ಕೆ ಚಾಚಿ ಸಿರ್ ಸಿರ್ ಎಂದು ಉಸಿರುಬಿಡುತ್ತಾ ನಾಗಾಲೋಟದಿಂದ ಓಡುತ್ತವೆ. ಹಸಿಮೇವು ತಿಂದು ಚೆನ್ನಾಗಿ ಕೊಬ್ಬಿರುವ ಅವುಗಳ ಆಕಾರ ಮತ್ತು ನುಗ್ಗುವ ರಭಸಕ್ಕಂಜಿ ಅರ್ಧಕ್ಕರ್ಧ ದನಗಳನ್ನು ಹಿಡಿಯದೇ ಬಿಟ್ಟು

ಬಿಡುತ್ತಾರೆ. ಆದರೂ ಕೆಲವರು ಕುಶಲತೆಯಿಂದ ಅವುಗಳ ಮೇಲೆ ಜಿಗಿದು, ಮೂಗುದಾರ ಎಳೆದು ಹಿಡಿದೇ ಬಿಡುತ್ತಾರೆ. ಸಾಮಾನ್ಯವಾಗಿ ದನಗಳನ್ನು ಬಿಡುವವರು ಹಬ್ಬ ಮಾಡುವ ಅದೇ ಊರವರು ಮತ್ತು ದನಗಳನ್ನು ಹಿಡಿಯುವವರು ಅಕ್ಕ-ಪಕ್ಕದ ಊರವರಾದ್ದರಿಂದ ಇದು ಪ್ರತಿಷ್ಠೆಯ ವಿಷಯವಾಗಿಬಿಡುತ್ತದೆ. ಈ ಸ್ಪರ್ಧೆಯನ್ನು ನೋಡುವುದೆಂದರೆ ಭಯ, ಕುತೂಹಲ, ರೋಮಾಂಚನ ಎಲ್ಲಾ ಒಟ್ಟೊಟ್ಟಿಗೇ ಆಗುತ್ತಿರುತ್ತದೆ.

**ಕಾಟುಮ್ ರಾಯ :** ಸಂಕ್ರಾಂತಿಯಲ್ಲಿ ಇದೊಂದು ಕುತೂಹಲಕರ ಅಂಶ. ಹಬ್ಬದ ದಿನ ಊರ ಹೊರಭಾಗದಲ್ಲಿ ಒಂದು ಹಸಿ ಜೇಡಿ ಮಣ್ಣಿನ ಗುಡಿಯನ್ನು ಕಟ್ಟುತ್ತಾರೆ. ಪಿರಮಿಡ್ಡಿನಾಕಾರದಲ್ಲಿರುವ ಅದನ್ನು ಕಾಟುಮ್ ರಾಯ, ಕಾಟ್ ಮೆಟ್ರಾಯ, ಸಂಕ್ರಾಂತೆಮ್ಮನ ಗುಡಿ ಮುಂತಾಗಿ ಕರೆಯುತ್ತಾರೆ. ಅದನ್ನು ಸಿಂಗರಿಸುವ ರೀತಿ ತುಂಬ ಸುಂದರ, ಕಾರೆ ಗಿಡದ ಕೊಂಬೆಗಳನ್ನು ಮುಳ್ಳು ಸಮೇತ ಕಿತ್ತು ತಂದು ಮುಳ್ಳುಗಳ ತುದಿಗೆ ಉಗುನಿ ಹೂವುಗಳನ್ನು ಚುಚ್ಚಿ ಗುಡಿಯ ನಾಲ್ಕೂ ಕಡೆ ಸಿಕ್ಕಿಸುತ್ತಾರೆ. ತಿಳಿ ಹಸಿರು ತೊಟ್ಟಿನಿಂದ ಕೂಡಿದ ಅಚ್ಚ ಬಿಳಿ ಬಣ್ಣದ ಉಗುನಿ ಹೂವು ಆಕರ್ಷಕ ರಚನೆ ಹೊಂದಿದ್ದು, ಮುಳ್ಳಿಗೆ ಜೋಡಿಸಿದ ಅವುಗಳನ್ನು ನೋಡುವುದೇ ಒಂದು ಚಂದ. ಜೊತೆಗೆ ಗುಡಿಯ ಮೇಲೆ ಉತ್ತರಾಣಿ ಕಡ್ಡಿಗಳನ್ನು ಚುಚ್ಚಿ ಅರಿಶಿನ – ಕುಂಕುಮ ಬಳಿದು ಅದರ ಮಧ್ಯದಲ್ಲೊಂದು ತೂತು ಮಾಡಿ ದೀಪ ಹಚ್ಚಿಟ್ಟು ಎಡೆಹಾಕಿ ಸಿಂಗರಿಸಿದ ದನಗಳನ್ನು ತಂದು ಅಲ್ಲಿ ಪೂಜಿಸುತ್ತಾರೆ.


**ಕಿಚ್ಚು ಹಾಯಿಸುವುದು :** 'ಸ್ವರ್ಗಕ್ಕೆ ಕಿಚ್ಚು ಹಚ್ಚುವುದೆಂದರೆ' ಇದೇ ಇರಬಹುದೆನ್ನುವ ಭಾವನೆ ಉಂಟು ಮಾಡುವ ಕ್ರಿಯೆ. ಹಬ್ಬದ ದಿನ ಸಂಜೆ ನಡೆಯುವ ಈ ಆಚರಣೆ ಎಷ್ಟು ಮನಮೋಹಕವೋ ಅಷ್ಟೇ ಅರ್ಥಪೂರ್ಣ. ಕಾಟುಮ ರಾಯನಿಗೆ ಪೂಜೆ ಸಲ್ಲಿಸಿದ ನಂತರ ಕಿಚ್ಚು ಹಾಯಿಸಲು ತಯಾರಿ ನಡೆಸಲಾಗುತ್ತದೆ. ದೇವಸ್ಥಾನದ ಮುಂಭಾಗದಲ್ಲಿ ಅಥವಾ ಸ್ವಲ್ಪ ವಿಶಾಲವಾದ ಸ್ಥಳದಲ್ಲಿ ಸುತ್ತಲೂ ಜನ ನಿಂತು ಒಂದು ಕಡೆ ಮಾತ್ರ ದಾರಿ ಬಿಟ್ಟು ಆ ದಾರಿಗಡ್ಡಲಾಗಿ ಬೆಂಕಿ ಹಾಕಿ, ಉರಿಯುವ ಬೆಂಕಿಯ ಜ್ವಾಲೆಗಳ ಮೇಲೆ ದನಗಳನ್ನು ಹಾರಿಸುತ್ತಾರೆ. ಏಳೆಂಟು ಅಡಿ ಎತ್ತರದ ಬೆಂಕಿ ಜ್ವಾಲೆಯಲ್ಲಿ ಅಲಂಕೃತಗೊಂಡ ಎತ್ತುಗಳು ಮತ್ತು ಅವುಗಳ ಒಡೆಯ ನೆಗೆಯುವ ದೃಶ್ಯ ನಿಜಕ್ಕೂ ಅಪೂರ್ವವಾದುದು. ಮಬ್ಬುಗತ್ತಲು ಅದಕ್ಕೊಂದು ವಿಶಿಷ್ಟ ಮೆರಗನ್ನು ನೀಡಿರುತ್ತದೆ. ದೃಷ್ಟಿ ನಿವಾರಣೆಯಾಗಲಿ, ದನಗಳ ಮೈಮೇಲಿನ ಕ್ರಿಮಿ ಕೀಟಗಳು ನಾಶವಾಗಲಿ ಎಂಬುದು ಕಿಚ್ಚು ಹಾಯಿಸುವುದರ ಉದ್ದೇಶ. ಕಿಚ್ಚು ಹಾದು ಗಾಬರಿಗೊಂಡ

ದನಗಳನ್ನು ಹಿಡಿದು ಮೈದಡವಿ ಕೊಟ್ಟಿಗೆಗೆ ಕಟ್ಟಿ ಮನೆ ಹೆಣ್ಣು ಮಕ್ಕಳು ಎಡೆ ತಿನ್ನಿಸುವುದರೊಂದಿಗೆ ಸಂಕ್ರಾಂತಿಯ ಸಡಗರಕ್ಕೆ ತೆರೆ ಬೀಳುತ್ತದೆ.

ಸುಗ್ಗಿಯ ಸಂಭ್ರಮದ ನಡುವೆ ಬರುವ ಸಂಕ್ರಾಂತಿ ಕೇವಲ ಒಂದು ದಿನಕ್ಕೆ ಮುಗಿಯುವ ಹಬ್ಬವಲ್ಲ. ಇಂದು ಈ ಹಳ್ಳಿ ನಾಳೆ ಮತ್ತೊಂದು ಹಳ್ಳಿ... ಹೀಗೆ ತಿಂಗಳುದ್ದಕ್ಕೂ ಅದರ ಸಡಗರ ಚಾಚಿಕೊಂಡಿರುತ್ತದೆ.

## ೨. ದೇಸಿ ಸಂಸ್ಕೃತಿಯ ಪ್ರತಿಬಿಂಬ ರಾಶಿಪೂಜೆ

*ಕಣಜ ತುಂಬುವಷ್ಟು ಧಾನ್ಯ ಕೊಟ್ಟ ಮಣ್ಣು, ನೀರು, ಗಾಳಿ, ಪಶು–ಪಕ್ಷಿ ಮೊದಲಾದ ಜೀವ ಸಂಕುಲದ ಸಕಲೆಂಟು ಘಟಕಗಳಿಗೂ ಗೌರವದಿಂದ ನಮಿಸುವ ವಿಶಿಷ್ಟ ಆಚರಣೆ ರಾಶಿ ಪೂಜೆ. ಇಲ್ಲಿ ಮೊರ ನೀರಿನ ಸಂಕೇತವಾದರೆ, ಮರ–ಗಿಡ ಎಲೆಗಳು ಕೀಟಗಳನ್ನು ಪ್ರತಿನಿಧಿಸುತ್ತವೆ. ನೆಲದ ಸಾರವನ್ನು ಪಿಳ್ಳೆರಾಯನ ಮೂಲಕ, ಕಳೆಯನ್ನು ಗರಿಕೆಯ ಮೂಲಕ ಸಮೀಕರಿಸಲಾಗುತ್ತದೆ. ಹೀಗೆ ಜೀವ ಸಂಕುಲದ ವಿವಿಧ ಘಟಕಗಳನ್ನು ಒಂದಾಗಿ ಕಾಣುವ, ರೈತ ತಾನು ಬೇಸಾಯ ಮಾಡಲು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸಹಕರಿಸಿದ ಪ್ರತಿಯೊಂದು ಜೀವಿ ಮತ್ತು ವಸ್ತುಗಳಿಗೂ ಗೌರವ ಸಲ್ಲಿಸುವ ರಾಶಿಪೂಜೆ ಬಯಲು ಸೀಮೆಯ ರಾಗಿ ಬೆಳೆವ ಪ್ರದೇಶಗಳಲ್ಲಿ ಇವತ್ತಿಗೂ ಸಾಮಾನ್ಯ. ಇಲ್ಲಿ ಅಡಂಬರವಿಲ್ಲ. ರಾಶಿ ಪೂಜೆಗೆ ಹೆಚ್ಚು ಮಾಡುವುದು ಎಂಬ ಮತ್ತೊಂದು ಹೆಸರೂ ಇದೆ.*



ಸಿಂಗಾರಗೊಂಡ ರಾಗಿ ರಾಶಿ

ರಾಶಿ ಪೂಜೆ ಎಂಬುದು ರೈತಬಾಂಧವರಿಗೆ ಸಂಭ್ರಮದ ಕೆಲಸ. ಮುಂಗಾರು ಮತ್ತು ಹಿಂಗಾರು ಹಂಗಾಮಿನಲ್ಲಿ ಆಯಾ ಕಾಲಕ್ಕೆ ತಕ್ಕ ಬೆಳೆಯನ್ನು ಬೆಳೆದ ರೈತರು ಹೊಲದಲ್ಲಿ ರಾಶಿಪೂಜೆ ಮಾಡುತ್ತಾರೆ. ರಾಶಿಯ ಪ್ರತಿಯೊಂದು ಕಾಳೂ ಭೂತಾಯಿ ಕೊಟ್ಟ ವರವೆನ್ನುವಂತೆ ಸಂಭ್ರಮಿಸುತ್ತಾರೆ. ಅದರಲಿಯೂ ಹಳೆ ಮೈಸೂರು ಭಾಗದಲ್ಲಿ ಆಚರಿಸಲ್ಪಡುವ ರಾಗಿ ಕಣದ ರಾಶಿ ಪೂಜೆ ಮತ್ತು ಉತ್ತರ ಕರ್ನಾಟಕದ ಜೋಳದ ಗೂಡು ಪೂಜೆ ಅತ್ಯಂತ ವಿಶೇಷವಾದುವು.

ದಕ್ಷಿಣ ಕರ್ನಾಟಕದಲ್ಲಿ ಅಕ್ಟೋಬರ್ ಕೊನೆಯ ವಾರದಿಂದ ಡಿಸೆಂಬರ್ ಮೊದಲನೆ ವಾರದವರೆಗೆ ವಿವಿಧ ಕಟಾವು ಕಾರ್ಯ ಆರಂಭವಾಗಿ ಅಂತಿಮ ಹಂತಕ್ಕೆ ಬರುತ್ತದೆ. ಕಟಾವು ಮಾಡಿದ ಬೆಳೆಯನ್ನು ಒಕ್ಕಣೆ ಮಾಡುವವರೆಗೂ ಸುರಕ್ಷಿತವಾಗಿ ಇರಲೆಂದು ಹೊಲದಲ್ಲೇ ವಿಶೇಷವಾಗಿ ತಯಾರಿಸಿದ ಕಣದಲ್ಲಿ ಪ್ರಧಾನ ಬೆಳೆಯಾದ ರಾಗಿ ಬೆಳೆಯನ್ನು ಬಣವೆ ರೂಪದಲ್ಲಿ ಸಂಗ್ರಹಿಸಲಾಗುತ್ತದೆ. ಮೈಸೂರು ಸೀಮೆಯಲ್ಲಿ ಬಣವೆಯನ್ನು ಮೆದೆ ಎಂದೂ, ಉತ್ತರ ಕರ್ನಾಟಕದಲ್ಲಿ ಗೂಡು ಎಂದೂ ಕರೆಯುತ್ತಾರೆ.

**ಕಣ ಸಂಸ್ಕೃತಿ:** ಕಣ ಅಂದರೆ ಧಾನ್ಯವನ್ನು ಒಕ್ಕುವ ಸ್ಥಳ. ರೈತರ ದೇವರ ಮನೆಯೆಂದೇ ಕರೆಸಿಕೊಳ್ಳುತ್ತದೆ. ಕಣಗಾಲದಲ್ಲಿ ತಿಂಗಳೊಪ್ಪತ್ತು ಕಾಲ ರೈತರು ಮನೆಯಲ್ಲಿ ಸಿಗುವುದಕ್ಕಿಂತಲೂ ಕಣದಲ್ಲಿ ಸಿಗುವುದೇ ಹೆಚ್ಚು, ಅವರಿಗೆ ಆ ಕಾಲದಲ್ಲಿ ಕಣವೇ ಮನೆ, ಕಣವೇ ಸರ್ವಸ್ವ

**ಕಣದ ವಿಧಗಳು:** ರೈತರ ಸಾಮರ್ಥ್ಯಕ್ಕನುಗುಣವಾಗಿ ಇಪ್ಪತ್ತು ಎತ್ತುಗಳ ಕಣ, ಹತ್ತು ಎತ್ತುಗಳ ಕಣ ಮುಂತಾಗಿ ಬೇರೆ-ಬೇರೆ ವ್ಯಾಸದ ಕಣಗಳಿರುತ್ತವೆ, ೧೦-೧೫ ಎಕರೆ ವ್ಯಾಪ್ತಿಯ ದೊಡ್ಡ ರೈತರು ಇಪ್ಪತ್ತು ಎತ್ತುಗಳ ಕಣ ಮಾಡಿದರೆ ಉಳಿದವರು ಹತ್ತು ಎತ್ತುಗಳ ಕಣ ಮಾಡುವುದು ರೂಢಿ. ಹೊಲದಲ್ಲಿ ವಿಶಾಲವಾದ ಬಂಡೆ ಇದ್ದರೆ ಅದನ್ನೇ ಕಣದ ಉದ್ದೇಶಕ್ಕೆ ಬಳಸಲಾಗುತ್ತದೆ. ಇಲ್ಲವಾದರೆ ನೆಲದಲ್ಲಿಯೇ ಕಣ ಮಾಡುತ್ತಾರೆ.

ಮನೆ ಇಲ್ಲವೇ ಊರಿಗೆ ಸಮೀಪದಲ್ಲಿ ಕಣ ಮಾಡುತ್ತಾರೆ. ಕಣ ಮಾಡಲು ನಿರ್ದಿಷ್ಟ ಸ್ಥಳವನ್ನು ಗುರುತಿಸಿ ಅಲ್ಲಿ ಹುಲ್ಲು ಕೆತ್ತಿ ಹಸನು ಮಾಡುತ್ತಾರೆ, ಇದಕ್ಕೆ ಬ್ರೇಸ್ತವಾರ ಅಥವಾ ಗುರುವಾರ ಶ್ರೇಷ್ಠ ಎಂಬ ನಂಬಿಕೆ ಇದೆ. ನಂತರ ಚೆನ್ನಾಗಿ ನೀರು ಚಿಮುಕಿಸಿ ಧಮಸ್ ಮಾಡಿ ಕಣದ ಮಧ್ಯ ಭಾಗದಲ್ಲಿ ಮೇಟಿ ಕಂಬ ನೆಡುತ್ತಾರೆ. ನೆಡುವ ಸಂದರ್ಭದಲ್ಲಿ ಪೂಜೆ ಸಲ್ಲಿಸಲಾಗುತ್ತದೆ. ಮೇಟಿ ಕಂಬ ಭದ್ರವಾಗಿರಬೇಕೆಂಬ ನಂಬಿಕೆಯಿಂದ ಆಯ್ದ ಮರವನ್ನೇ ನಿಲ್ಲಿಸುತ್ತಾರೆ.

ಸಾಮಾನ್ಯವಾಗಿ ಮೇಟಿ ಕಂಬಕ್ಕೆ ಬ್ಯಾಟೆ (ಕಕ್ಕೆ) ಗಿಡದ ಕೊಂಬೆ ನೆಟ್ಟರೆ ಅತ್ಯಂತ ಶ್ರೇಷ್ಠ ಎಂಬುದು ಹಿರಿಯರ ನಂಬಿಕೆ.

ಮೇಟಿ ಕಂಬ ನೆಟ್ಟ ಎರಡು ದಿನಗಳ ನಂತರ ಕಣಕ್ಕೆ ಮಂದವಾಗಿ ಸಗಣಿ ಬಗ್ಗಡವನ್ನು ಕದರಿ, ತೆಂಗು, ಅಡಕೆ ಗರಿ ಅಥವಾ ಇನ್ನಾವುದೇ ಸೊಪ್ಪಿನಿಂದ ಸರಿಸುತ್ತಾರೆ. ಎರಡು–ಮೂರು ದಿನ ಚೆನ್ನಾಗಿ ಒಣಗಿದ ನಂತರ ಒಕ್ಕಣೆಗೆ ಕಣ ಸಿದ್ಧ. ಒಂದೇ ಕಣವನ್ನು ನಾಲ್ಕೈದು ಕುಟುಂಬದವರು ಬಳಸುವುದೂ ಉಂಟು, ಅಂತಹ ಸಂದರ್ಭದಲ್ಲಿ ಒಬ್ಬರ ಒಕ್ಕಣೆ ಮುಗಿದ ನಂತರ ಮತ್ತೊಬ್ಬರು ಒಕ್ಕಣೆ ಶುರು ಮಾಡುತ್ತಾರೆ. ಕಣವನ್ನು ಬಳಸಿದ ಹಾಗೆಲ್ಲಾ ಕಿತ್ತು ಹೋಗುವುದರಿಂದ ಆಗಾಗ ಸಾರಿಸುತ್ತಾರೆ.

ಈಗಾಗಲೇ ಹೇಳಿದಂತೆ ಕಣ ರೈತರಿಗೆ ಅತ್ಯಂತ ಪವಿತ್ರವಾದುದು. ಚಪ್ಪಲಿ ಮೆಟ್ಟಿಕೊಂಡು ಅಲ್ಲಿಗೆ ಬರುವಂತಿಲ್ಲ. ಕಣದಲ್ಲಿ ಕೆಲಸ ಮಾಡುವಾಗ ಎಲೆ–ಅಡಿಕೆ ಹಾಕುವಂತಿಲ್ಲ. ರಾಶಿ ತೂರುವಾಗ ಮಾತನಾಡುವಂತಿಲ್ಲ, ಬಹುಶಃ ಕಣವು ತಿನ್ನುವ ಅನ್ನವನ್ನು ಒಕ್ಕುವ ಸ್ಥಳವಾದ್ದರಿಂದ ಅಲ್ಲಿ ಚಪ್ಪಲಿ ಮೆಟ್ಟಿ ಅಡ್ಡಾಡಿದರೆ, ಎಲೆಯಡಿಕೆ ಹಾಕಿದರೆ ಗಲೀಜಾಗುತ್ತದೆ, ಇನ್ನು ರಾಶಿ ತೂರುವಾಗ ಮಾತನಾಡಿದರೆ ಬಾಯೊಳಗೆ ಧೂಳು–ದುಂಬು ಹೋಗಿ ಉಸಿರಾಟಕ್ಕೆ ತೊಂದರೆಯಾಗುತ್ತದೆಂದು ಹೀಗೆ ನಿಯಮ ಗಳನ್ನು ಮಾಡಿರಬಹುದು.



ಕಣದ ಪೂಜೆಗೆ ಸಿದ್ಧತೆ

ಇನ್ನು ಕಣದಲ್ಲಿ ಒಕ್ಕಣೆ ಕಾರ್ಯಕ್ಕೆ ಬಳಸುವ ವಸ್ತುಗಳನ್ನು ಅವುಗಳ ನಿಜ ಹೆಸರಿನ ಮೂಲಕ ಕರೆಯುವುದು ನಿಷಿದ್ಧ. ಅವುಗಳ ಮೂಲ ಹೆಸರನ್ನು ಬಿಟ್ಟು ಬೇರೆ ಹೆಸರಿನಿಂದ ಕರೆಯಲಾಗುತ್ತದೆ. ಉದಾಹರಣೆಗೆ; ಹುಲ್ಲು ತುಳಿಸುವ ಗೋಣುಗಲ್ಲಿಗೆ ರಥ (ಏಯ್ ರಥ ಸರ್ಯಾಗಿ ನಿಲ್ಸು) ರಾಗಿ ತೂರುವ ಉದ್ದಿಗೆಗೆ ಕುದುರೆ (ಕುದುರೆ

ಎತ್ರ ಜಾಸ್ತಿ ಆಯ್ತು ರವಷ್ಟು ಕಮ್ಮಿ ಮಾಡಿ), ಊಟಕ್ಕೆ ಕವಳ (ಎಲ್ರೂ ಕವಳಕ್ಕೆ ಬರ್ರಿ), ಪೊರಕೆಗೆ ಬುದ್ಧಿವಂತ, (ಯತ್ತಾಗೋಯ್ತಲ ಬುದ್ವಂತ) ತೂರುವ ಮೊರಕ್ಕೆ ಕೊಂಗ, (ಏ ಮಗ ಈ ಕೊಂಗ ಕಿತ್ತೋಗದೆ ಇನ್ನೊಂದ್ ಕೊಂಗ ತಕಬಾ) ಬೂದಿಗೆ ವಿಭೂತಿ, ಗುಡಿಸುವುದಕ್ಕೆ ಬೆಳಗು, ರಾಗಿಗೆ ಕೃಷ್ಣ ಸ್ವಾಮಿ ಅಥವಾ ಕೆಂಪು ಅಥವಾ ರಜ, ಗುಂಡುಕಲ್ಲುಗೆ ರಥ, ಉದ್ದಿಗೆಗೆ ಕುದುರೆ, ಮೆರೆಗೋಲಿಗೆ ಮೆರೆಬಸವ, ಎತ್ತುಗಳಿಗೆ ಬಸವ, ಕತ್ತೆಗಳಿಗೆ ಮುತ್ತಿನ ಶೆಟ್ಟಿ, ಕುಡಿಗೋಲಿಗೆ ಬಸವಣ್ಣ ಅಥವಾ ಆಯುಧ... ಹೀಗೆ ಒಂದೊಂದಕ್ಕೆ ಒಂದೊಂದು ಹೆಸರಿಟ್ಟು ಕರೆಯುತ್ತಾರೆ. ಕಣದ ಭಾಷೆಯೇ ವಿಶಿಷ್ಟ ಮತ್ತು ಕೇಳಲು ಚಂದ, ಆದರೆ ಹೊಸಬರು ಯಾರಾದರೂ ಕಣಕ್ಕೆ ಹೋದರೆ ತಬ್ಬಿಬ್ಬಾಗುವುದು ಖಚಿತ.

ಈ ರೀತಿ ನಿಯಮ ಬರಲು ಒಂದು ಪುಟ್ಟ ಕಥೆಯಿದೆ.

ಒಮ್ಮೆ ರೈತ ಮಹಿಳೆಯೊಬ್ಬಳು ಕಣದಲ್ಲಿ ಆಳುದ್ದ ಬಿದ್ದಿದ್ದ ರಾಗಿ ರಾಶಿಯನ್ನು ಕಂಡು ಬೆರಗಾಗಿ 'ಇಷ್ಟೊಂದು ರಾಗಿ ರಾಶಿಯನ್ನು ಬೀಸಿ ಹಿಟ್ಟು ಮಾಡಿ ಮುದ್ದೆ ಕಟ್ಟುವುದು ನನ್ನಿಂದ ಸಾಧ್ಯವೇ?' ಎಂದು ಉದ್ಗಾರ ತೆಗೆದಳಂತೆ. ಆ ಕೂಡಲೇ ಕಣದಲ್ಲಿದ್ದ ರಾಗಿ ರಾಶಿಯು ಸೇರಿದಂತೆ ಒಕ್ಕಣೆ ಕಾರ್ಯಕ್ಕೆ ಬಳಸಿದ ಎಲ್ಲಾ ವಸ್ತುಗಳು ಕಲ್ಲಾಗಿ ಬಿಟ್ಟವಂತೆ! ಆಗಿನಿಂದ ಅವುಗಳ ನಿಜ ಹೆಸರುಗಳಿಂದ ಕರೆಯುವುದನ್ನು ನಿಲ್ಲಿಸಲಾಯಿತು ಎಂಬುದು ಪ್ರತೀತಿ.

ಒಂದು ವೇಳೆ ಯಾರಾದರೂ ಬಾಯಿತಪ್ಪಿ ಮೂಲ ಹೆಸರನ್ನು ಹೇಳಿಬಿಟ್ಟರೆ ತಕ್ಷಣವೇ 'ಓಲಗ' ಅಥವಾ 'ಬಿಡ್ತು' ಎಂದು ಕೂಗಲಾಗುತ್ತದೆ. ಆ ರೀತಿ ಕೂಗುವುದು ಶಾಂತಿ ಸೂಚಕ ಎಂದು ಹಿರಿಯರು ಹೇಳುತ್ತಾರೆ.

ವಾರ, ಹದಿನೈದು ದಿವಸಗಳವರೆಗೂ ಈ ರೀತಿ ಒಕ್ಕುವ ಕೆಲಸ ನಡೆಯುತ್ತದೆ. ಒಕ್ಕಣೆ ಪೂರ್ತಿ ಮುಗಿದ ದಿವಸ ರಾಶಿ ಪೂಜೆ ಮಾಡಿ ಒಂದು ರಾತ್ರಿ ಕಣದಲ್ಲೇ ರಾಶಿಯನ್ನು ಬಿಟ್ಟು ಮರುದಿನ ಮನೆಗೆ ಕೊಂಡೊಯ್ಯುತ್ತಾರೆ.


ಪೂಜೆಯ ದಿನ ರಾಗಿಯನ್ನು ಐದು ರಾಶಿಗಳನ್ನಾಗಿ ವಿಂಗಡಿಸಲಾಗುತ್ತದೆ. ಅವುಗಳೆಂದರೆ ದೊಡ್ಡ ರಾಶಿ, ದೇವರ ರಾಶಿ, ಬುದ್ಧಿವಂತ ರಾಶಿ, ಗೌರಮ್ಮನ ಗುಡ್ಡೆರಾಶಿ, ಕಡ್ಡಿ ರಾಶಿ. ಕಣದ ಸುತ್ತಲೂ ಬೂದಿಯಿಂದ ರಂಗೋಲಿ ಬಿಡಿಸುತ್ತಾರೆ. ಅಲ್ಲದೆ ರಾಶಿಯ ಸುತ್ತಲೂ ಹಸೆ ಬರೆಯುತ್ತಾರೆ, ನಂತರ ದೊಡ್ಡ ರಾಶಿಯ ಮೇಲೆ ಸೂರ್ಯ-ಚಂದ್ರ, ತ್ರಿಶೂಲ, ಸರ್ಪ ಮುಂತಾದವನ್ನು ಬಿಡಿಸಲಾಗುತ್ತದೆ. ಜೊತೆಗೆ ಕಣದಲ್ಲಿ ಹುಲಿ, ಹುದ್ದಿಗೆ, ಮೊರ, ಗುಂಡು ಮುಂತಾದ ಚಿತ್ರಗಳನ್ನೂ ಸಹ ಬಿಡಿಸಲಾಗುತ್ತದೆ. ಬಿಳಿ ಕಣಗಿಲೆ ಹೂವು, ಬನ್ನಿ ಪತ್ರೆ, ತುಂಬೆ ಹೂವು, ಮಾವಿನ ಪತ್ರೆ, ಚೆಂಡು ಹೂವು,



ರಾಶಿಗಳಿಗೆ ಹೆಣ್ಣುಮಕ್ಕಳಿಂದ ಪೂಜೆ

ಲಕ್ಕಿ ಪತ್ರೆ, ಅಣ್ಣೆ ಹೂವು, ಜೋಳದ ಬೆಂಡು, ಬಾಳೆ ಎಲೆ, ಮೇಟು ಕುಳಿ ಅಂಬು ಮುಂತಾದವುಗಳಿಂದ ರಾಶಿಯನ್ನು ಅಲಂಕರಿಸಲಾಗುತ್ತದೆ. ಒಕ್ಕಣೆಯಲ್ಲಿ ತೊಡಗಿಸಿದ್ದ ಎಲ್ಲ ಕೃಷಿ ಉಪಕರಣಗಳನ್ನು ಅಲ್ಲಿ ಒಂದೆಡೆ ಇಡಲಾಗುತ್ತದೆ. ಅವುಗಳಿಗೂ ಸಹ ಅಲಂಕರಿಸಲಾಗುತ್ತದೆ.

ಇತ್ತ ಕಣದ ಅಲಂಕಾರ ನಡೆಯುತ್ತಿರಬೇಕಾದರೆ, ಹೊಲದ ಒಡೆಯರು ಊರವರನ್ನು ಕಳದಲ್ಲಿ ಹೆಚ್ ಮಾಡಿದ್ದೀವಿ ಊಟಕ್ ಬರ್ರಿ ಎಂದು ಕರೆದು ಬರುತ್ತಾರೆ. ನಂತರ, ಬಿದರಿನ ಕೊಳಗದಲ್ಲಿ ಪೂಜಾ ಸಾಮಗ್ರಿಗಳಾದ ಹಾಲು, ತುಪ್ಪ, ಊದ ಬತ್ತಿ, ಕರ್ಪೂರ, ಎಲೆ ಅಡಿಕೆ, ಹಣ್ಣುಗಳನ್ನು ಇಟ್ಟು ಅದನ್ನು ರಾಶಿಯ ಸುತ್ತಲೂ ಮೂರು ಬಾರಿ ಬಳಸಲಾಗುತ್ತದೆ. ಕೆಲವು ಕಡೆ ಎಡಗೈಯ ಬೆರಳುಗಳನ್ನು ಬಲ ಮೊಣಕೈಯ ಮೇಲಿಟ್ಟುಕೊಂಡು, ಬಲಗೈಯಲ್ಲಿ ಮೊರ ಹಿಡಿದುಕೊಂಡು ಅದರ ತುದಿಯಿಂದ ಬರೆಯುವ ರೀತಿಯಲ್ಲಿ ಮೂರು ಸುತ್ತು ಹಾಕುತ್ತಾರೆ. ಅಲ್ಲದೆ ಕಣದ ಸುತ್ತಲೂ ಒಬ್ಬರು ನೀರು ಚಿಮುಕಿಸುತ್ತಾ ಹೆಚ್ಚೆಚ್ಚೆಚ್ಚು ಓಲಗ ಎಂದು ಹೇಳಿಕೊಂಡು ಹೋದರೆ, ಅವರ ಹಿಂದೆ ಮತ್ತೊಬ್ಬರು ಬಲ್ ಬಲ್ ಬಲ್ ಓಲಗ ಎನ್ನುತ್ತಾ ಮೂರು ಸುತ್ತು ಹಾಕುತ್ತಾರೆ. ನಂತರ ಓಲಗನನ್ನು ಇಡುವುದು ಶುರುವಾಗುತ್ತದೆ,



ರಾಶಿ ಸಿಂಗಾರದ ಮತ್ತೊಂದು ಪರಿ

ಓಲಗ ಹುಲಿ ದೇವ, ಓಲಗ ಶಂಕರ ದೇವ
ಕಾಡಕ್ಕಿ ಕುಣಿದಾಡಿದ ಕಣವೇ ಓಲಗ
ಉದ್ದಿಗೆ ಎದ್ದಾಡಿದ ಕಣವೇ ಓಲಗ
ರಾಗಳ್ಳಿ ಬೆಟ್ಟ ಬೆಳ್ದಂಗೆ ಬೆಳೆಯೋ ಓಲಗ
ಓಲಗ ಅಂದ್ರೆ ಹುಲುಸು ಕೊಡೋ ಓಲಗ ಓಲಗೋ

ಮುಂತಾಗಿ ಈ ಸಂದರ್ಭದಲ್ಲಿ ಹೇಳುವ ಪದ ತುಂಬಾ ಅರ್ಥ ಪೂರ್ಣವಾದುದು. ಒಬ್ಬರು ಓಲಗನನ್ನು ಇಟ್ಟರೆ ಉಳಿದವರು ಅವರು ಒಂದು ಸಾಲು ಹೇಳಿದ ಕೊನೆಗೆ ಓಲಗೋ ಎಂದು ಸೇರಿಸುತ್ತಾರೆ.

ಇದಲ್ಲದೆ ಕಣದಲ್ಲಿರುವ ವಸ್ತುಗಳ ಬಗೆಗೂ ಸಹ ಪದ ಕಟ್ಟಿ ಹಾಡುತ್ತಾರೆ,

ಹುದ್ದಿಗೆ ಎದ್ದಾಡಿದ ಕಣವೇ ಓಲಗ ಓಲಗೊ
ಮೇಟಿ ಮೆರೆದಾಡಿದ ಕಣವೇ ಓಲಗ ಓಲಗೊ
ಮೊರವೆ ಮೆರೆದಾಡಿದ ಕಣವೆ ಓಲಗ ಓಲಗೊ...
ಹೀಗೆ ಮುಂದುವರಿದು ಹಕ್ಕಿ-ಪಕ್ಷಿಗಳಿಗೂ ಓಲಗನನ್ನು ಇಡಲಾಗುತ್ತದೆ.
ಸ್ವಾರಕ್ಕಿ ಸುಳಿದಾಡಿದ ಕಣವೆ ಓಲಗ ಓಲಗೊ
ಕಾಡಕ್ಕಿ ಕುಣಿದಾಡಿದ ಕಣವೆ ಓಲಗ ಓಲಗೊ...

ಎಂಬ ಪದ ಹೇಳುವ ಕ್ರಿಯೆ ಬಹು ಕಾಲ ಮುಂದುವರಿಯುತ್ತದೆ.

## ಕಣದಲ್ಲಿ ಬಳಸುವ ವಿವಿಧ ಹತಾರಗಳು ಮತ್ತು ಅವುಗಳ ಕೆಲಸ

ಕನಿಷ್ಟ ೧೫ ರಿಂದ ೨೦ ದಿವಸಗಳ ಕಾಲ ನಡೆಯುವ ಕಣದ ಕೆಲಸಕ್ಕೆ ಹತ್ತು ಹಲವಾರು ವಸ್ತುಗಳು ಬಳಸಲ್ಪಡುತ್ತವೆ. ದಕ್ಷಿಣ ಕರ್ನಾಟಕದ ರಾಗಿ ಕಣದಲ್ಲಿ ಬಳಸುವ ವಸ್ತುಗಳ ವೈವಿಧ್ಯತೆಯನ್ನೇ ನೋಡಿ.

೧. ಮೆರೆಗೋಲು-ಆರೇಳು ಅಡಿ ಉದ್ದದ ಬಿದಿರಿನ ಕೋಲು, ತುದಿ ಬಾಗಿರುತ್ತದೆ. ಕಣಕ್ಕೆ ಹಾಸಿದ ಹುಲ್ಲನ್ನು ತಿರುವು ಹಾಕಲು ಬಳಸುತ್ತಾರೆ.

೨. ಕಲ್ಲುಗುಂಡು/ರೋಣಗಲ್ಲು- ಕಲ್ಲಿನದು. ಚಕ್ರದಂತಿರುತ್ತದೆ. ಕಾಳು ಬೇರ್ಪಡಿಸುವ ಮುಖ್ಯ ಸಾಧನ.

೩. ಮೊರ-ಕಾಳು ರಾಶಿ ಮಾಡಲು, ಏರು ಹಾಕಲು, ಗಾಬು ಹೊಡೆಯಲು, ತೂರುವುದೇ ಮುಂತಾದ ಅನೇಕ ಕೆಲಸಗಳಿಗೆ ಉಪಯುಕ್ತ. ಕಣದಲ್ಲಿ ಒಂದಕ್ಕಿಂತ ಹೆಚ್ಚು ಮೊರಗಳಿರುತ್ತವೆ.

೪. ಕಡ್ಡಿವಂದರಿ- ಕಾಳುಗಳಲ್ಲಿನ ಕಡ್ಡಿ ಬೇರ್ಪಡಿಸುವುದು.

೫. ಸಣ್ಣವಂದರಿ- ಕಾಳುಗಳಲ್ಲಿನ ಸಣ್ಣ-ಸಣ್ಣ ಮಣ್ಣು ಧೂಳು ತೆಗೆಯಲು.

೬. ದೊಡ್ಡವಂದರಿ-ಜರಡಿ ಮಾಡಲು

೭. ಮುಳ್ಳುಗಡ್ಡಿ- ರಾಗಿ ಹುಲ್ಲು ತುಳಿಸಿದ ನಂತರ ದೊಡ್ಡ ಹುಲ್ಲನ್ನು ಕೈಯಿಂದ ತೆಗೆದು ಉಳಿದ ಸಣ್ಣ ಕಡ್ಡಿ, ಹುಬ್ಬಲು, ಗುಂಗು ಹೊಡೆಯಲು ಬಳಸುತ್ತಾರೆ. ಕಾರೆ ಗಿಡದ ಕೊಂಬೆಯನ್ನು ಮುಳ್ಳುಗಡ್ಡಿಯನ್ನಾಗಿ ಬಳಸುತ್ತಾರೆ.

೮. ಕುಕ್ಕೆ- ಎತ್ತುಗಳು ಹುಲ್ಲಿಗೆ ಬಾಯಿ ಹಾಕದಂತೆ ಮೂತಿಗೆ ಕಟ್ಟುವ ಸಾಧನ. ದಾಗಡಿ ಬಳ್ಳಿಯಿಂದ ಹೆಣೆದಿರುತ್ತಾರೆ.

೯. ಬರಲು/ಸಾಣಿ/ಪೊರಕೆ- ಕಣ ಗುಡಿಸಲು. ಒಂದು ಕಣದಲ್ಲಿ ಹಂಚಿ ಪೊರಕೆ, ತೆಂಗಿನ ಪೊರಕೆ, ಬಂದರೆ ಪೊರಕೆ ಹೀಗೆ ಹಲವಾರು ಪೊರಕೆಗಳಿರುತ್ತವೆ. ಪ್ರತಿಯೊಂದರ ಕೆಲಸವೂ ಭಿನ್ನ.

೧೦. ಉದ್ದಗೆ- ರಾಗಿಯನ್ನು ತೂರಲು ನಿಲ್ಲುವ ಸಾಧನ.

೧೧. ಕುಡುಗೋಲು- ಸಣ್ಣ-ಪುಟ್ಟ ಕೆಲಸಗಳಿಗೆ ಮತ್ತು ರಾಶಿ ಪೂಜೆಯಲ್ಲಿ ರಾಶಿ ತುದಿಗೆ ಚುಚ್ಚಲು ಬಳಕೆ.

೧೨. ಗೂಡೆ- ಹುಬ್ಬಲನ್ನು ಎತ್ತಿ ಬೇರೆ ಕಡೆ ಹಾಕಲು.

೧೩. ಕೋಲುಗಳು- ರೋಣುಗಲ್ಲಿನಿಂದ ತಪ್ಪಿಸಿಕೊಂಡ ತೆನೆಗಳನ್ನು ಸಣ್ಣೇಟಿನಲ್ಲಿ ಬಡಿಯಲು ಬಳಸುತ್ತಾರೆ.

ಈ ಸಂದರ್ಭದಲ್ಲಿ ನೀರಿನ ಕೊಡವೊಂದರಿಂದ ನೀರನ್ನು ಚಿಮುಕಿಸಲಾಗುತ್ತದೆ (ಚಳೇವು). ನಂತರ ಅಲಂಕೃತಗೊಂಡ ರಾಶಿಗೆ ಸಂಪ್ರದಾಯಬದ್ಧ ಪೂಜೆ ಸಲ್ಲಿಸಿ ನಂತರ ರಾಶಿಯಿಂದ ಕೆಲವರಿಗೆ ದಾನ ನೀಡಲಾಗುತ್ತದೆ. ಇದೆಲ್ಲಾ ನಡೆಯುವುದು ಸಾಮಾನ್ಯವಾಗಿ ಸಂಜೆಯ ಹೊತ್ತು. ಹೀಗೆ ಪೂಜೆ, ಹಾಡು ಮುಗಿದ ನಂತರ ಎಲ್ಲರಿಗೂ ಕಣದಲ್ಲಿಯೇ ಊಟಕ್ಕೆ ಬಡಿಸಲಾಗುತ್ತದೆ. ದೊಡ್ಡ ಆರಂಬಗಾರರಾದರೆ ರಾಶಿ ಪೂಜೆಗೆ ಮರಿ ಹೊಡೆಯುತ್ತಾರೆ. ಕೆಲವರು ಕೋಳಿ ಸಾರು ಮಾಡುತ್ತಾರೆ, ಉಳಿದಂತೆ ಹಸಿ ಅವರೆ ಕಾಳಿನ ಸಾರು, ಬಿಸಿ-ಬಿಸಿ ಮುದ್ದೆ, ಕೊತ್ತಲಸಿನ ಕಾಯಿ ತಾಳದ, ಉಂಡಕ್ಕಿ ಪಾಯಸ ಮುಂತಾದ ಅಡುಗೆ ಮಾಡುವುದು ರೂಢಿ.

ಇವೆಲ್ಲಾ ಮುಗಿದ ಬಳಿಕ ರಾಶಿಯನ್ನು ಅಂದು ರಾತ್ರಿ ಅಲ್ಲಿಯೇ ಬಿಡುತ್ತಾರೆ, ಮರುದಿನ ಬೆಳಿಗ್ಗೆ ಮತ್ತೆ ಪೂಜೆ ಮಾಡಿ ರಾಗಿಯನ್ನು ಮನೆಗೆ ಸಾಗಿಸಲಾಗುತ್ತದೆ. ಪದ್ಧತಿಯಂತೆ ಬೆಳೆದ ಬೆಳೆಯಲ್ಲಿ ಒಂದಿಷ್ಟನ್ನು ಅಲ್ಲಿಯೇ ಬಿಡುತ್ತಾರೆ, ಅದು ಹಕ್ಕಿ-ಪಕ್ಷಿಗಳು ತಿನ್ನಲಿ ಎಂದು. ಈ ಎಲ್ಲಾ ಕ್ರಿಯೆಯಲ್ಲಿ ಹೊಲದ ವಾರಸುದಾರ ಮತ್ತು ಆತನ ಕುಟುಂಬ ವರ್ಗದವರೊಂದಿಗೆ ಅಕ್ಕಪಕ್ಕದ ರೈತಾಪಿ ಜನರು ಸಹ ಸಕ್ರಿಯವಾಗಿ ಪಾಲ್ಗೊಳ್ಳುತ್ತಾರೆ.

ಇದೆಲ್ಲಾ ಏಕೆ ಎಂದು ಹಿರಿಯರನ್ನು ಕೇಳಿದರೆ ಹೇಳುತ್ತಾರೆ, "ಋಣ ತೀರಿಸ ಬೇಕಲ್ಲ ಭೂಮ್ ತಾಯಿದು, ವರ್ಷೊಂಭತ್ತು ಕಾಲ ಗೆಯ್ಕಂಡು ಕೊನಿಗೆ ಆ ತಾಯಿಗೆ ಏನೇನ್ ಬೇಕೊ ಅದುನ್ನೆಲ್ಲ ಮಾಡಿ ಹೋಗ್ಲಿಲ್ಲ ಅದ್ರೆ ಮುಂದಿನ ವರ್ಷ ಕೈ ಬಿಟ್ ಬಿಡ್ತಳೆ."

ರಾಶಿಪೂಜೆಯ ನಂತರ ರೈತರು ತಮ್ಮ ತಮ್ಮ ಹೊಲಗಳನ್ನು 'ಅಕ್ಕಲು' ಎಂದು ಘೋಷಿಸುತ್ತಾರೆ. ಅಂದರೆ ಯಾವ ಜಾನುವಾರುಗಳಿಗೂ ನಿರ್ಬಂಧ ಇಲ್ಲದೆ ಅಳಿದುಳಿದಿರುವ ಬೆಳೆಯನ್ನು ಮೇಯಬಹುದು. ಆ ಸಂದರ್ಭದಲ್ಲಿ ಹೊಲಗಳ ಉಸ್ತುವಾರಿಗೆ ಯಾವ ಕಾವಲುಗಾರರೂ ಇರುವುದಿಲ್ಲ.

## ೩. ಗೂಡು ಪೂಜೆ

ಇದು ಉತ್ತರ ಕರ್ನಾಟಕದವರ ರಾಶಿ ಪೂಜೆ. ನವಂಬರ್ ಡಿಸೆಂಬರ್ ತಿಂಗಳಿನಲ್ಲಿ ನಡೆಯುತ್ತದೆ. ಜೋಳ, ಸಜ್ಜೆ ಮುಂತಾದ ಬೆಳೆಗಳನ್ನು ತೆನೆ ಸಮೇತ ಕಟಾವು ಮಾಡಿ ಹೊಲದಲ್ಲಿಯೇ ಗೋಪುರಾಕೃತಿಯಲ್ಲಿ ಜೋಡಿಸಿರುತ್ತಾರೆ, ಇದನ್ನೇ ಗೂಡು ಎನ್ನುತ್ತಾರೆ. ಒಂದು ಶುಭದಿನ ಬೆಳಿಗ್ಗೆ ಹೋರಿಗಳನ್ನು ಹೂಡಿದ ಬಂಡಿಯಲ್ಲಿ ಬುತ್ತಿ ಬಂಡಾರಗಳನ್ನು ತುಂಬಿಕೊಂಡು ಮನೆ- ಮಂದಿಯೆಲ್ಲಾ ಹೊಲಕ್ಕೆ ಹೋಗಿ ಗೂಡಿಗೆ ಶ್ರದ್ಧೆ ಭಕ್ತಿಗಳಿಂದ ಪೂಜಿಸುತ್ತಾರೆ.



ಗೂಡುಪೂಜೆ ನಿರತ ರೈತರು

ಮಿಂಚು ದೇವ ಪಂಚಕಲ್ಲುಗಳ
ಪಂಚ ಭೂಷಣದ ಮೆರುಗು
ಅವುಗಳೆಡೆಯಲಿ ಸಜ್ಜೆ ಕಡುಬಿನ ನೈವೇದ್ಯ
ಗಾಳಿ ದೇವಗ ಭೂದೇವಗ
ಭೂತಾಯಿ ಮಡಿಲೊಳಗೆ ಸಾಗೇತಿ ಗೂಡು ಪೂಜೆ

ಎಂದು ಪದ ಹಾಡುತ್ತಾ, ಹಿರಿಯರು ಹೊಲದ ಬದುವನ್ನು ಸುತ್ತುಹಾಕಿ, ಸಜ್ಜೆ ಕಡುಬಿನ ನೈವೇದ್ಯವನ್ನು ಗೂಡಿನ ಮುಂದಿಟ್ಟು ಬೀಜ ಹೊತ್ತು ಬೆಳೆಸಿದ ಭೂತಾಯಿಗೆ ನಮ್ಮ ಮೊದಲ ತುತ್ತು ಎನ್ನುತ್ತಾರೆ.

## ೪. ಕೃಷಿಕರ ಯುಗಾದಿ


ಯುಗಾದಿ ರೈತರ ಸಂಪೂರ್ಣ ಬಿಡುವಿನ ಕಾಲದಲ್ಲಿ ಬರುವಂಥದ್ದು. ಅಥವಾ ವಿರಾಮದ ಕೊನೆ ಮತ್ತು ದುಡಿಮೆಯ ಆರಂಭ ಇವೆರಡರ ನಡುವಣ ಹಬ್ಬ. ಅದರಿಂದಲೇ ಈ ಹಬ್ಬದಲ್ಲಿ ಬೇವು ಬೆಲ್ಲದ ಮಿಶ್ರಣವಿರುತ್ತದೆ. ಈ ಸಂದರ್ಭದಲ್ಲಿ ಭೂಮಿ ತಾಯಿ ಕೂಡ ಬಹಿಷ್ಠೆಯಾಗಿರುತ್ತಾಳೆಂದು ರೈತರ ನಂಬಿಕೆ. ಯುಗಾದಿಯ ಮೂರನೇ ದಿನ ಸಾಮಾನ್ಯವಾಗಿ ಜನಪದರು ಮಾಂಸದೂಟ ಬಯಸುವುದುಂಟು. ಈ ಮಾಂಸ ಕಾಡಿನಲ್ಲಿ ಬೇಟೆಯಾಡಿ ತಂದ ಪ್ರಾಣಿಯದೇ ಆಗಿರಬೇಕು. ಆದ್ದರಿಂದ

ಯುಗಾದಿಯ ಮರುದಿನ ಜನಪದರು ಬೇಟೆಗಾಗಿ ಕಾಡಿನ ಕಡೆ ಹೋಗಿ ಸಿಕ್ಕಿದ ಪ್ರಾಣಿಯನ್ನು ಬೇಟೆಯಾಡಿ ತರುವರು. ತಂದ ಬೇಟೆಯನ್ನು ಎಲ್ಲರೂ ಹಂಚಿಕೊಳ್ಳ ಬೇಕು. ಇದು ಪ್ರಾಚೀನ ಪದ್ಧತಿ. ಈಗಲೂ ಕೆಲವು ಅರಣ್ಯವಾಸಿ ಬುಡಕಟ್ಟುಗಳಲ್ಲಿ ಈ ಪದ್ಧತಿ ಇದೆ.

ಯುಗಾದಿ ಯಾವುದೇ ದೇವ-ದೇವತೆಗಳ ಸೋಕಿಲ್ಲದ ನಿಸರ್ಗದ ಹಬ್ಬ. ಜನಪದರಿಗೆ ಹೊಸ ವರ್ಷದ ಮೊದಲ ದಿನ. ಹೊಸ ಮಳೆಗಾಲಕ್ಕೆ ಶ್ರೀಕಾರ. ಒಳ್ಳೆಯದು – ಕೆಟ್ಟದ್ದನ್ನು ಸಮನಾಗಿ ಸ್ವೀಕರಿಸುವ ಆಶಯದಿಂದ ಬೇವು-ಬೆಲ್ಲ ಬಾಯಿಗೆ ಹಾಕಿಕೊಳ್ಳುತ್ತಾರೆ. ಅಂದು ಹೊಸ ಬಟ್ಟೆ ತೊಟ್ಟು ಹೊಟ್ಟೆ ತುಂಬಾ ಒಬ್ಬಟ್ಟು ತಿಂದು ಆಗತಾನೇ ಎಳೆ ಚಿಗುರಿಡುತ್ತಿರುವ ಹೊಂಗೆ ಮರದ ನೆರಳಲ್ಲಿ ಹಳ್ಳಿಗರು ಮಲಗುವುದು ಸಾಮಾನ್ಯ. ಇಸ್ಪೀಟು ಈ ಹಬ್ಬಕ್ಕೆ ಹೇಗೆ ತಳುಕು ಹಾಕಿಕೊಂಡಿತೆಂಬುದು ತಿಳಿಯುತ್ತಿಲ್ಲ. ಯುಗಾದಿ ಮರುದಿನ ಹೊಸತಡುಕು, ಚಂದ್ರ ದರ್ಶನ. ಮಾಂಸಾಹಾರಿಗಳಿಗೆ ಸಡಗರ. ಕೆಲವೆಡೆ ಸಾಮೂಹಿಕ ಬೇಟೆಯೂ ಉಂಟು.

ಯುಗಾದಿ ಬರುವ ಸ್ವಲ್ಪ ದಿನ ಮುಂಚೆ ಕಾಮನ ಹಬ್ಬ ಬಂದಿರುತ್ತದೆ. ಕಾಮನ ಹಬ್ಬವನ್ನು ಹಳ್ಳಿಗರು ಕದಿರೆ ಹುಣ್ಣಿಮೆ ಎಂತಲೂ ಕರೆಯುತ್ತಾರೆ. ಕಾಮನ ಹಬ್ಬ ನಿಸರ್ಗದ ವರ್ಷದಲ್ಲಿ ಕೊನೆಯ ಹಬ್ಬ. ಹಳೆಯ ವಸ್ತುಗಳನ್ನು ಸುಟ್ಟು ಹೊಸ ವಸಂತದ ಆಗಮನಕ್ಕೆ ಸಿದ್ಧವಾಗುವ ಪರ್ವ ಕಾಲ. ಇದಾದ ಸ್ವಲ್ಪ ದಿನಕ್ಕೆ ಬರುವ ಯುಗಾದಿ ನಿಸರ್ಗ ವರ್ಷದ ಮೊದಲ ಹಬ್ಬ. ಯುಗದ ಆದಿ. ಶಾಲಿವಾಹನ ಶಕೆಯ ಹೊಸ ಸಂವತ್ಸರದ ಶುರು.

ಯುಗಾದಿಯ ನೈಜತೆ ಉಳಿದಿರುವುದೇ ರೈತಾಪಿಗಳಲ್ಲಿ. ನಗರವಾಸಿಗಳಿಗೆ ಯುಗಾದಿ ಕೇವಲ ಒಂದು ಹಬ್ಬ ಅಷ್ಟೇ. ಅವರು ಹೆಚ್ಚೆಂದರೆ ಎರಡು ದಿವಸ ಹಬ್ಬ ಮಾಡಿಯಾರು. ಆದರೆ ರೈತರ ಹಬ್ಬದ ಸಂಭ್ರಮ ಹದಿನೈದು ದಿನ ಮುಂಚೆಯೇ ಶುರು. ಆಗ ಯಾರು ಏನು ಕೇಳಿದರೂ ಅವರ ಉತ್ತರ ಒಂದೇ "ಹಬ್ಬ ಮುಗಿಲಿ ತಡಿರಿ". ಕೊಟ್ಟ ಸಾಲ ಕೇಳಲು ಬಂದವರಿಗೂ ಅಥವಾ ತಮ್ಮಿಂದ ಸಾಲ ಕೇಳುವವರಿಗೂ ಸಹ ಇದೇ ಉತ್ತರ. ಮನೆಯ ಹೆಣ್ಣು ಮಕ್ಕಳು ಎರಡು ವಾರ ಮುಂಚೆಯೇ ಮನೆ ಸ್ವಚ್ಛಗೊಳಿಸಲು ಶುರುಮಾಡುತ್ತಾರೆ. ಪ್ರತಿಯೊಂದು ವಸ್ತುವನ್ನು ತೊಳೆದು ಬೆಳಗಿ ಹಸನು ಮಾಡುತ್ತಾರೆ. ಅಟ್ಟ, ಗೋಡೆ, ಅಂಗಳ, ಮಾಡುಗಳ ಧೂಳೊಡೆಯುತ್ತಾರೆ. ಮನೆ ಮುಂಭಾಗದ ಗೋಡೆಗಳಿಗೆ ಕೆಮ್ಮಣ್ಣು-ಸಗಣಿಯಿಂದ ಸಾರಿಸುತ್ತಾರೆ. ಇಡೀ ಮನೆ ಸುಣ್ಣ-ಬಣ್ಣ ಕಾಣುತ್ತದೆ.



ಸಗಣಿಯ ಪಿಳ್ಳೆರಾಯ

ಗಂಡಸರು ಹೊಸ ಬಟ್ಟೆ–ಬರೆ ತೆಗೆಯುವುದು, ಬೇಸಾಯಕ್ಕೆ ಬೇಕಾದ ಹೊಸ ಸಲಕರಣೆಗಳಾದ ನೇಗಿಲು, ನೊಗ, ಮೇಣಿ, ದೊಡ್ಡಮಿಣಿ, ಹಗ್ಗ, ಚಿಲಕ್ಕಣ್ಣಿ, ಮಕಾಡ, ಕೊಳದಂಡೆ, ಕುಂಟೆ, ಕುಳ, ಅಲುಗು, ಕೂರಿಗೆ ಮುಂತಾದವುಗಳನ್ನು ಹೊಂಚುವ ಧಾವಂತದಲ್ಲಿರುತ್ತಾರೆ. ದನಗಳ ಪರಿಶೆಗಳೂ ಇದೇ ಸಂದರ್ಭದಲ್ಲಿ ಬರುವುದರಿಂದ ಮನೆಯ ದನಗಳನ್ನು ಮಾರುವುದು, ಹೊಸ ದನಗಳನ್ನು ಕೊಳ್ಳುವುದು ನಡೆಯುತ್ತಿರುತ್ತದೆ.

ಯುಗಾದಿ ಮೂರು ದಿನದ ಹಬ್ಬ. ಮೊದಲ ದಿನ ಮುಸುರೆ ಹಬ್ಬ. ಪಾತ್ರೆ–ಪಗಡಗಳನ್ನು ತೊಳೆದು ಹೊಸ ನೀರು ತಂದು ತುಂಬಿಸುತ್ತಾರೆ. ಹದಿನೈದು ದಿನಗಳ ಸ್ವಚ್ಛತಾ ಕಾರ್ಯಕ್ಕೆ ಅಂತಿಮ ರೂಪ. ಒಂದು ರೀತಿಯ ಫೈನಲ್ ಟಚ್ಚಿಂಗ್ ಎನ್ನಬಹುದು. ಎರಡನೇ ದಿನ ಸೀ..ಹಬ್ಬ. ಮನೆ ಮಕ್ಕಳೆಲ್ಲಾ ಎಣ್ಣೆ ಸ್ನಾನ ಮಾಡಿ ಹೊಸ ಬಟ್ಟೆ ತೊಡುತ್ತಾರೆ. ಎಲ್ಲಾ ಬಾಗಿಲುಗಳ ಹೊಸ್ತಿಲಿಗೂ, ದನಗಳ ಕೊಟ್ಟಿಗೆಗೂ ಮಾವಿನ

ಎಲೆ ತೋರಣ ಕಟ್ಟಿ ಬೇವಿನ ಚಿಕ್ಕ–ಚಿಕ್ಕ ಕೊಂಬೆಗಳನ್ನು ಮನೆಯ ಎಲ್ಲಾ ಕಡೆಗೂ ಸಿಗಿಸಲಾಗುತ್ತದೆ. ಮನೆ ಯಜಮಾನ ಎಲ್ಲರಿಗೂ ಬೇವು–ಬೆಲ್ಲ ಹಂಚುತ್ತಾರೆ. ಮನೆಗೆ ಯಾರೇ ಬಂದರೂ ಅವರಿಗೆ ಬೇವು–ಬೆಲ್ಲ ನೀಡಲಾಗುತ್ತದೆ. ಹೋಳಿಗೆ, ಗಟ್ಟಕ್ಕಿ ಪಾಯಸ, ಅಕ್ಕಿ ಪಾಯಸ, ಕಡುಬು ವಿಶೇಷ ಅಡುಗೆಗಳು. ಅಂದು ಕೆಲವೆಡೆ ಎತ್ತುಗಳಿಗೆ ಗೌಸು ಹೊದಿಸಿ, ಚೆಂಡು ಹೂವಿನ ಹಾರ ಹಾಕಿ, ಬಂಡಿ ಕಟ್ಟಿ ದೇವಾಲಯಕ್ಕೆ ಮೂರು ಸುತ್ತು ಬರುತ್ತಾರೆ. ಅವಕ್ಕೆ ವಿಶೇಷ ಎಡೆ ಇರುತ್ತದೆ. ಹೊಸ ಬಟ್ಟೆ ತೊಡುವ ಮುಂಚೆ ದನಗಳ ಬೆನ್ನ ಮೇಲೆ ಹಾಕುವುದು ರೂಢಿ. ಮೈಸೂರು ಸೀಮೆಯಲ್ಲಿ ಧವಸ ಧಾನ್ಯಗಳನ್ನು ಕಣದಲ್ಲಿ ಒಟ್ಟಿ ಪೂಜಿಸುವುದು ಕಂಡು ಬರುತ್ತದೆ.

ಉತ್ತರ ಕರ್ನಾಟಕದ ಕೆಲವೆಡೆ ಚಕ್ಕಡಿ (ಗಾಡಿ)ಗೆ ತರಾತರ ಬಣ್ಣ ಹಚ್ಚಿ ಸಿಂಗರಿಸುತ್ತಾರೆ. ಚಕ್ಕಡಿಯ ಒಂದೊಂದು ಭಾಗಕ್ಕೆ ಒಂದೊಂದು ಬಣ್ಣ, ಗಾಲಿಗಳಿಗೆ ಕೆಮ್ಮಣ್ಣು, ಗಾಲಿ ಅಂಚಿಗೆ, ಗುಂಭಗಳಿಗೆ, ಗುಜ್ಜುಗಳಿಗೆ ಸುಣ್ಣ ಬಳಿಯುವುದು ವಾಡಿಕೆ. ಬಯಲು ಸೀಮೆಯಲ್ಲಿ ಕೆಲವು ಜನಾಂಗದವರು ಕೃಷಿ ಆಯುಧಗಳನ್ನಿಟ್ಟು ಪೂಜಿಸುತ್ತಾರೆ. ಹಿರಿಯರ ಸಮಾಧಿಗಳಿಗೆ ಹೋಗಿ ಹಣ್ಣು–ಕಾಯಿ ಮಾಡಿ, ಎಡೆ ಹಾಕಿ ಸಣ ಮಾಡುತ್ತಾರೆ. ಅಂದು ಮನೆಯಲ್ಲಿನ ಹಳೆಯ ಮಣ್ಣಿನ ಮಡಕೆಗಳನ್ನು ಎಸೆದು ಹೊಸ ಮಡಕೆ ತರುತ್ತಾರೆ. ಈ ಭಾಗದಲ್ಲಿ ವಿಶೇಷ ಗಳೆ ಪೂಜೆ ಇರುತ್ತದೆ.

ಮೂರನೇ ದಿನ ಹೊಸತಡುಕು. ಇದಕ್ಕೆ ಕರಿ ಹಬ್ಬ ಎಂಬ ಜನಪ್ರಿಯ ಹೆಸರಿದೆ. ಅಂದು ಮಾಂಸದೂಟದ ಸಂಭ್ರಮ. ಒಂದು ರೀತಿಯಲ್ಲಿ ಮೊದಲ ಎರಡು ದಿನಗಳು ಹೆಂಗಸರ ಸಡಗರವಾದರೆ ಮೂರನೇ ದಿನ ಗಂಡಸರದೇ ದರ್ಬಾರು. ಬೆಳಗಿನ ಜಾವ ಮೊದಲ ಕೋಳಿ ಕೂಗುವಾಗಲೇ ಮಾಂಸ ಬೇಯಿಸುವ ಪಾತ್ರೆಗಳು ಸದ್ದು ಹೊರಡಿಸುತ್ತವೆ. ಸಾಮೂಹಿಕ ಬೇಟೆಯ ಸಂಪ್ರದಾಯವಿದೆ. ಮನೆಗೆ ಒಂದಾಳಿನಂತೆ ಬೇಟೆಯಲ್ಲಿ ಭಾಗವಹಿಸಬೇಕು. ಹೆಚ್ಚಾಗಿ ಕಾಡುಹಂದಿ ಮತ್ತು ಮೊಲದ ಬೇಟೆ ಇರುತ್ತದೆ. ಈಗೀಗ ಬೇಟೆಗೆ ಹೋಗುವುದು ಇಲ್ಲವೇ ಇಲ್ಲ ಎನ್ನುವಷ್ಟು ಕಡಿಮೆ.

**ಚಂದ್ರನ ನೋಡಿ ಮಳೆ–ಬೆಳೆ ನಿರ್ಧಾರ :** ಯುಗಾದಿ ಎರಡನೇ ದಿನ ಸಂಜೆ ಚಂದ್ರನನ್ನು ನೋಡುವುದು ಹಳ್ಳಿಗಳಲ್ಲಿ ರೂಢಿ. ಅಮಾವಾಸ್ಯೆಯಾಗಿ ಒಂದು ದಿನವಾಗಿರುವುದರಿಂದ ಚಂದ್ರ ಕಂಡೂ ಕಾಣದಂತಿರುತ್ತಾನೆ. ಹಿರಿಯರ ಸಮ್ಮುಖದಲ್ಲಿ ಸೂಕ್ಷ್ಮವಾಗಿ ಗಮನಿಸಿ ಚಂದ್ರನ ಯಾವ ಭಾಗ ಎದ್ದಿರುತ್ತದೆಯೋ ಆ ಭಾಗಕ್ಕೆ ಉತ್ತಮ ಫಸಲು, ಯಾವ ಭಾಗ ಬಿದ್ದಿರುತ್ತದೆಯೋ ಆ ಭಾಗಕ್ಕೆ ಸಾಧಾರಣ ಫಸಲು ಎಂದು ಹೇಳುತ್ತಾರೆ. ಚಂಗ್ರನ ತುದಿಗಳನ್ನು ಕೋಡು ಎಂದು ಕರೆಯುತ್ತಾರೆ. ಕೆಲವೆಡೆ ಆ ಕೋಡುಗಳನ್ನು ಅನ್ನದ ಕೋಡು, ಹೊನ್ನಿನ ಕೋಡು ಎಂದು ಹೇಳುತ್ತಾ ಈ

ವರ್ಷ ಅನ್ನದ ಬೆಲೆ ಜಾಸ್ತಿಯೋ, ಚಿನ್ನದ ಬೆಲೆ ಜಾಸ್ತಿಯೋ ಎಂದು ಚರ್ಚೆಯಾಗುತ್ತದೆ. ದಾವಣಗೆರೆಯ ಕಡೆ ಚಂದ್ರನ ಎಡ ಭಾಗ ತುಸು ಮೇಲಕ್ಕೆ ಇದ್ದರೆ ಉತ್ತಮ ಮಳೆ-ಬೆಳೆ, ಬಲ ಭಾಗ ಮೇಲಕ್ಕೆ ಇದ್ದರೆ ಮಳೆ-ಬೆಳೆ ಕಡಿಮೆ ಎಂದು ನಂಬುತ್ತಾರೆ. ಚಂದ್ರ ದರ್ಶನದ ನಂತರ ಸಣ್ಣ ಮಕ್ಕಳು ದೊಡ್ಡವರ ಕಾಲಿಗೆ ಬೀಳುತ್ತಾರೆ. ಹಾಗೆ ನಮಸ್ಕರಿಸಿದವರಿಗೆ ದುಡ್ಡು ಕೊಡುವುದು ವಾಡಿಕೆ. ತೊಟ್ಟಿರುವ ಹೊಸ ಬಟ್ಟೆಯಲ್ಲಿ ಒಂದು ಎಳೆ ಕಿತ್ತು ಚಂದ್ರನಿಗೆ ಎಸೆಯುತ್ತಾರೆ.

**ಪಂಚಾಂಗ ನೋಡಿ ಮಳೆ-ಬೆಳೆ ನಿರ್ಧಾರ :** ಹಬ್ಬದ ಮೊದಲ ದಿನ ಊರಿನ ಪೂಜಾರಪ್ಪ, ಜ್ಯೋತಿಷಿ ಅಥವಾ ಹಿರಿಯರ ಸಮ್ಮುಖದಲ್ಲಿ ಪಂಚಾಂಗ ಓದಿಸುತ್ತಾರೆ. ಈ ವರ್ಷದ ಮಳೆ ಪ್ರಮಾಣ, ಬೆಳೆ ಪ್ರಮಾಣ ಹಾಗೂ ಅವರವರ ಭವಿಷ್ಯದ ಬಗ್ಗೆ ಕೇಳಲಾಗುತ್ತದೆ. ಆದರೆ ಇತ್ತೀಚೆಗೆ ಇದು ಕಂಡು ಬರುತ್ತಿಲ್ಲ.

**ಆನೆ ಪರುವು :** ಕನಕಪುರದ ಕಾಡುಹಳ್ಳಿಗಳಲ್ಲಿ ಯುಗಾದಿ ಆದ ೨ ದಿನಕ್ಕೆ ಆನೆ ಪರುವು ಎಂಬ ಹೆಸರಿನ ಆಚರಣೆ ಮಾಡುತ್ತಾರೆ. ಅಂದು ಊರವರೆಲ್ಲಾ ಸೇರಿ ಮಣ್ಣಿನ ಆನೆ ಮಾಡಿ ಪೂಜಿಸುತ್ತಾರೆ. ಹೀಗೆ ಮಾಡಿದರೆ ಮುಂದೆ ನಮ್ಮ ಹೊಲಗಳಿಗೆ ಆನೆಗಳ ಕಾಟವಿರುವುದಿಲ್ಲ ಎಂದು ರೈತರ ನಂಬಿಕೆ. ಕೆಲವರು ಪೂಜೆಯ ನಂತರ ಅಲ್ಲಿ ಕನ್ನಡಿಯೊಂದನ್ನು ಇಡುತ್ತಾರೆ. ಹಾಗೆ ಮಾಡುವುದರಿಂದ ಆನೆಗಳು ಆ ಹೊಲದತ್ತ ಸುಳಿಯುವುದಿಲ್ಲವಂತೆ.

## ೫. ಸೋಲಿಗರ ರೊಟ್ಟಿ ಹಬ್ಬ

ಸೋಲಿಗ ಜನಾಂಗದವರು ಈ ಸಂದರ್ಭದಲ್ಲಿ ರೊಟ್ಟಿ ಹಬ್ಬ ಎಂಬ ವಿಶೇಷ ಆಚರಣೆಯನ್ನು ಮಾಡುತ್ತಾರೆ. ಎಲ್ಲರೂ ಒಂದೆಡೆ ಸೇರಿ ದೊಡ್ಡದಾಗಿ ಬೆಂಕಿ ಹಾಕಿ ಕೆಂಡ ಮಾಡಿ, ಒಂದು ನಿರ್ದಿಷ್ಟ ಜಾತಿಯ ಮರದ ಎಲೆಗಳ ಮೇಲೆ ರೊಟ್ಟಿಯನ್ನು ತಟ್ಟಿ ಆ ಕೆಂಡದ ಮೇಲೆ ಹಾಕಿ ಸುಡುತ್ತಾರೆ. ಸುಟ್ಟ ನಂತರ ಅದನ್ನು ಪ್ರಸಾದವೆಂದು ಪರಿಗಣಿಸಿ ಎಲ್ಲರಿಗೂ ಹಂಚುತ್ತಾರೆ.

ಯುಗಾದಿಯ ಸಂದರ್ಭದಲ್ಲಿ ಮಾಡುವ ಇಂತಹ ಎಷ್ಟೋ ಕೃಷಿ ಸಂಬಂಧಿ ಆಚರಣೆಗಳು ಇಂದು ತಮ್ಮ ಸ್ವರೂಪ ಬದಲಿಸಿಕೊಂಡಿವೆ, ಎಷ್ಟೋ ಆಚರಣೆಗಳು ಕಣ್ಮರೆಯಾಗಿವೆ. ಯುಗಾದಿ ಹಬ್ಬಕ್ಕೂ ಕೃಷಿಗೂ ಇರುವ ಸಂಬಂಧ ಅವಿನಾಭಾವಿಯಾದದ್ದು. ಹಬ್ಬದಂದು ರೈತಾಪಿಗಳ ಪ್ರತಿಯೊಂದು ಕ್ರಿಯೆಗೂ ವಿಭಿನ್ನ ಅರ್ಥಗಳಿರುತ್ತವೆ. ಕಾಲಾನುಕ್ರಮದಲ್ಲಿ ಹಬ್ಬದ ಜಾಡು ತುಸು ಬದಲಾಗಿದೆ ಎನಿಸಿದರೂ ಆರಂಭದಲ್ಲಿ ಹೇಳಿದಂತೆ, ಯುಗಾದಿಯ ಮೂಲ ಸ್ವರೂಪ, ಖುಷಿ, ಮುಗ್ಧತೆಗಳು ಇಂದಿಗೂ ಕೃಷಿಕರಲ್ಲಿ ಉಳಿದಿವೆ.

## ೬. ಬೆಳದಿಂಗಳಪ್ಪನ ಪೂಜೆ

ತುಮಕೂರು ಸೀಮೆಯಲ್ಲಿ ಆಚರಣೆಯಲ್ಲಿರುವ ಕುತೂಹಲಕರ ಆಚರಣೆ, ಬೇಸಾಯಕ್ಕೆ ನೇರ ಸಂಬಂಧ ಇಲ್ಲದಿದ್ದರೂ ಸಹ ಹಳ್ಳಿ ಹೆಣ್ಣು ಮಕ್ಕಳು ಇದರಲ್ಲಿ ತೊಡಗಿಸಿಕೊಳ್ಳುವುದರಿಂದ ಇದಕ್ಕೊಂದು ವಿಶಿಷ್ಟತೆಯಿದೆ. ಹಾಗೂ ಬೆಳದಿಂಗಳಿಗಾಗಿಯೇ ಒಂದು ನಿರ್ದಿಷ್ಟ ಆಚರಣೆಯಿರುವುದು ಗಮನಿಸಬೇಕದ ಅಂಶ. ಅಲ್ಲದೆ ಈ ಆಚರಣೆ ಬೇಸಿಗೆ ಕಾಲದಲ್ಲಿ, ಅಂದರೆ ಕೃಷಿಕರಿಗೆ ಬಿಡುವಿನ ಕಾಲದಲ್ಲಿ ಬರುವುದರಿಂದ ಇದನ್ನು ಸುಗ್ಗಿ ವಿಭಾಗದಲ್ಲಿ ಸೇರಿಸಲಾಗಿದೆ.

ಕದಿರೆ ಹುಣ್ಣಿಮೆ (ಯುಗಾದಿ ಹಿಂದೆ-ಮುಂದೆ) ಸಮಯದಲ್ಲಿ ಸತತ ಒಂದು ವಾರ ಕಾಲ ಬೆಳದಿಂಗಳಪ್ಪನ ಪೂಜೆ ನಡೆಯುತ್ತದೆ. ಇದನ್ನು ಚಂದ್ರಮ್ಮನನ್ನು ಹಾಕುವುದು ಎಂದೂ ಕರೆಯುತ್ತಾರೆ. ಹುಣ್ಣಿಮೆಗೆ ಒಂದು ವಾರ ಮುಂಚೆ ಪ್ರಾರಂಭವಾಗಿ ಹುಣ್ಣಿಮೆಯಂದು ಚಂದ್ರಮ್ಮನನ್ನು ಸಾಗಹಾಕುತ್ತಾರೆ. ಹದಿ-ಹರಯದ ಹೆಣ್ಣು ಮಕ್ಕಳು ಖುಷಿಗಾಗಿ ಮಾಡುವ, ಆ ಮೂಲಕ ತಮಗೆ ಹಾಲಿನಂತಹ ಬೆತ್ತಿಂಗಳನ್ನು ಚೆಲ್ಲುವ ಚಂದ್ರನಿಗೆ ನಮಿಸುವ ಆಚರಣೆ.

ಒಂದು ವಾರ ಪ್ರತಿ ದಿನ ಸಂಜೆ ಎಲ್ಲರ ಮನೆ ಮುಂದೆ ಹಾಗೂ ಬೀದಿಗಳಲ್ಲಿ ಸಾರಿಸಿ ರಂಗೋಲಿ ಬಿಡಲಾಗುತ್ತದೆ. ಈ ರಂಗೋಲಿಗಳು ಹೆಚ್ಚು ವಿಸ್ತಾರವಾಗಿರುತ್ತವೆ. ರಾತ್ರಿ ಊಟದ ನಂತರ ಎಲ್ಲ ಹೆಣ್ಣು ಮಕ್ಕಳು ಒಂದೆಡೆ ಕಲೆತು ಹಾಡು ಹೇಳುತ್ತಾ, ನಗಸಾರ ಮಾಡುತ್ತಾ ಕಾಲ ಕಳೆಯುತ್ತಾರೆ. ಸರಿ ಹೊತ್ತಿನವರೆಗೂ ಇದು ಸಾಗುತ್ತದೆ. ಕೊನೆಯ ದಿನ-ಹುಣ್ಣಿಮೆಯ ದಿನ ಇಬ್ಬರು ಹುಡುಗರನ್ನು ಗಂಡು-ಹೆಣ್ಣಿನಂತೆ ಸಿಂಗರಿಸಿ ಮದುವೆ ಶಾಸ್ತ್ರ ಮಾಡಲಾಗುತ್ತದೆ. ನಂತರ ಅವರನ್ನು ಊರ ಹೊರಗೆ ಮೆರವಣಿಗೆ ಮಾಡುತ್ತಾ, ಹಾಡು ಹೇಳುತ್ತಾ ಸಾಗುತ್ತಾರೆ. ಒಂದು ನಿರ್ದಿಷ್ಟ ಸ್ಥಳಕ್ಕೆ ಸಾಗಿ ಪೂಜೆ ಮಾಡಿ ವಾಪಸಾಗುತ್ತಾರೆ.

## ಅಡಿಕೆ ಸುಗ್ಗಿ

ಹಿಂದಿನ ಕಾಲದಲ್ಲಿ ಮಲೆನಾಡಿನಲ್ಲಿ ಘಟ್ಟದ ಕೆಳಗಿನವರು (ಕನ್ನಡ ಜಿಲ್ಲೆಯವರು) ಘಟ್ಟದ ಮೇಲೆ (ತೀರ್ಥಹಳ್ಳಿ ಇತ್ಯಾದಿ) ಹೋಗಿ ಅಡಿಕೆ ಸಂಭಾವನೆ ಪಡೆದು ಬರುವ ರೂಢಿ ಇತ್ತು. ಪ್ರತಿಯೊಂದು ವರ್ಗದವರೂ ಈ ಕೆಲಸಕ್ಕೆಂದು ಹೋಗುತಿದ್ದರು. ಬೆಳೆಗಾರರು ದಾನ-ಧರ್ಮ ಮಾಡಬೇಕೆಂಬ ಮನೋಭಾವದಿಂದ ತಾವು ಬೆಳೆದದ್ದರಲ್ಲಿ ಸ್ವಲ್ಪ ಭಾಗವನ್ನು ಈ ಸಂಭಾವನೆಗಾಗಿ ಮೀಸಲಿಟ್ಟಿರುತ್ತಿದ್ದರು. ಸಂಭಾವನೆಗೆ ಬಂದವರಿಗೆ ಬಂದವರ ಯೋಗ್ಯತೆಯಾನುಸಾರ ದಾನ ನೀಡುತಿದ್ದರು.

## ಅವರೆಕಾಳು ಭೂಮಿಗೆ ಹೇಗೆ ಬಂತು ?

ಪಾಂಡವರನ್ನು ಕೊಲ್ಲುವ ಸಲುವಾಗಿ ಕೌರವರು ಅನೇಕ ಉಪಾಯ ಮಾಡುತ್ತಾರೆ. ಅದರಲ್ಲಿ ಅರಗಿನ ಮನೆಯಲ್ಲಿ ಉಪಾಯದಿಂದ ಕೂಡಿ ಹಾಕಿ ಬೆಂಕಿ ಹಚ್ಚುವ ಪ್ರಸಂಗ ಎಲ್ಲರಿಗೂ ತಿಳಿದಿದೆ. ಈ ರೀತಿ ಬೆಂಕಿ ಹಚ್ಚಿದಾಗ ಅದರಿಂದ ಪಾಂಡವರು ತಪ್ಪಿಸಿಕೊಂಡು ಬದುಕುಳಿಯುತ್ತಾರೆ. ಹಾಗೆ ಬದುಕಿ ಬಂದವರು ತಾವು ಇನ್ನೂ ಬದುಕಿದ್ದೇವೆ ಎಂಬುದನ್ನು ಸಾರಲು ಅವರೆಕಾಳನ್ನು ಸೃಷ್ಟಿ ಮಾಡಿ "ಪಾಂಡವರು ಇನ್ನೂ ಅವ್ರೆ" ಎಂದು ಕೂಗುತ್ತಾ ಜಗತ್ತಿಗೆಲ್ಲಾ ಎರಚಿದರಂತೆ. ಇದನ್ನು ನೋಡಿದ ಕೌರವರು ಕಡು ರೋಷದಿಂದ ನೀವು ಸೃಷ್ಟಿಸಿದ ಅವರೆಗೆ ನಾವು ಹುಳುಗಳಾಗಿ ಕಾಡಿ ನಾಶ ಮಾಡುತ್ತೇವೆ ಎಂದು ಶಪಥ ಮಾಡಿದರಂತೆ.

ಹೀಗೆ ಜಗತ್ತಿಗೆ ಅವರೆಕಾಯಿ ಮತ್ತು ಅದಕ್ಕೆ ಬೀಳುವ ಹುಳುಗಳ ಸಂತತಿ ಬಂದಿತಂತೆ.

*(ಕನಕಪುರ ತಾಲ್ಲೂಕು ಹೇರಿಂದ್ಯಾಪನ ಹಳ್ಳಿಯಲ್ಲಿ ಸಿಂಗೇಗೌಡರ ರಾಗಿ ಕಣದ ರಾಶಿ ಪೂಜೆಗೆ ಹೋಗಿದ್ದಾಗ ಅಲ್ಲಿಗೆ ಬಂದಿದ್ದ ಗೌಡರ ನೆಂಟರಾದ ಹಲಗೂರು ಚಿಕ್ಕಣ್ಣ ಹೇಳಿದ ಕಥೆ)*

## ಅವರೆ ಕಾಳಿಗೆ ಗೆರೆ ಯಾಕಿರುತ್ತದೆ?

ಬಹಳ ಹಿಂದೆ ಅವರೆಕಾಳು, ರೋಜನ್ ಕಡ್ಡಿ ಮತ್ತು ಬೆಂಕಿ ಕೆಂಡ ಮೂವರೂ ಸ್ನೇಹಿತರಂತೆ. ಅವು ಒಂದು ದಿನ ಅವರ ಊರಿನಿಂದ ಇನ್ನೊಂದು ಊರಿಗೆ ಹೋಗಬೇಕಾಗಿರುತ್ತದೆ. ಅದಕ್ಕೆ ನದಿಯೊಂದನ್ನು ದಾಟಬೇಕಾಗಿರುತ್ತದೆ. ನದಿ ದಡದಲ್ಲಿ ನಿಂತು ಹೇಗೆ ದಾಟುವುದೆಂದು ಮೂವರೂ ಯೋಚಿಸುತ್ತಾರೆ. ಅವರೆಕಾಳು ತಾನು ನೀರೊಳಗೆ ಬಿದ್ದರೆ ಮುಳುಗಿಬಿಡುತ್ತೇನೆ ಎಂದರೆ, ಬೆಂಕಿ ಕೆಂಡವು ನಾನು ನೀರಿಗೆ ಬಿದ್ದರೆ ಇದ್ದಿಲಾಗಿಬಿಡುತ್ತೇನೆ ಎಂದು ಭಯ ಪಟ್ಟಿತಂತೆ. ಆಗ ರೋಜನ್‌ಕಡ್ಡಿಯು ನಿಮಗ್ಯಾಕೆ ಭಯ ನಾನು ನಿಮ್ಮನ್ನು ಜೋಪಾನವಾಗಿ ಕರೆದುಕೊಂಡು ಹೋಗುತ್ತೇನೆ ಎನ್ನುತ್ತದೆ. ಆಗ ಅವರೆಕಾಳು ಹೇಗೆ ಕರೆದೊಯ್ಯುತ್ತೀಯಾ ಎಂದು ಕೇಳಿದಾಗ ಕಡ್ಡಿಯು ನಾನು ಎಂತಹ ಪ್ರವಾಹ ಇದ್ದರೂ ತೇಲುತ್ತೇನೆ ನನ್ನ ಮೇಲೆ ಕುಳಿತುಕೊಳ್ಳಿ ಹೋಗೋಣ ಎಂದಿತಂತೆ.

ಆದರೆ ಅವರೆಕಾಳಿಗೆ ಇದರ ಜೊತೆ ಹೋದರೆ ಅಪಾಯ ಎಂದು ತಿಳಿದಿರುತ್ತದೆ. ಹಾಗಾಗಿ ನಾನು ಬರುವುದಿಲ್ಲ ಎಂದು ದಡದಲ್ಲೇ ಉಳಿಯುತ್ತದೆ. ಆಗ ರೋಜನ್‌ಕಡ್ಡಿಯು ಬೆಂಕಿ ಕೆಂಡವನ್ನು ಬೆನ್ನ ಮೇಲೆ ಕೂರಿಸಿಕೊಂಡು ಹೋಗುತ್ತದೆ. ಸ್ವಲ್ಪ ದೂರ ಹೋಗುವ ಹೊತ್ತಿಗೆ ರೋಜನ್‌ಕಡ್ಡಿಯು ಬೆಂಕಿ ಕೆಂಡದ ಕಾವಿಗೆ ಸೀದು ಹೋಗುತ್ತದೆ. ಕೆಂಡವು ಮುಣುಗಿ ಇದ್ದಿಲಾಗುತ್ತದೆ. ಅದನ್ನು ದಡದಲ್ಲಿ ನಿಂತು ನೋಡುತ್ತಿದ್ದ ಅವರೆಕಾಳಿಗೆ ಹೊಟ್ಟೆ ಬಿರಿಯುವಂತೆ ಸಿಕ್ಕಾಪಟ್ಟೆ ನಗು ಬರುತ್ತದೆ. ಹೀಗೆ ಅದು ಜೋರಾಗಿ ನಗುತ್ತಿರುವಾಗ ಅದರ ಹೊಟ್ಟೆ ಒಡೆದುಹೋಗುತ್ತದೆ. ಆಗ ದೇವರು ಬಂದು ಅವರೆಕಾಳಿನ ಹೊಟ್ಟೆಗೆ ಹೊಲಿಗೆ ಹಾಕುತ್ತದೆ. ಆ ಹೊಲಿಗೆಯೇ ಈಗಲೂ ಅವರೆ ಕಾಳಿನ ಮೇಲಿರುವ ಬಿಳಿ ಪಟ್ಟೆ.

*(ತುಮಕೂರು ಜಿಲ್ಲೆ ಶಿರಾ ತಾಲ್ಲೂಕು ಕಳ್ಳಂಬೆಳ್ಳದ ನರಸಿಂಹಜ್ಜಿಕಟ್ಟೆ ರಂಗಜ್ಜಿ ಹೇಳಿದ್ದು)*

## ಅಧ್ಯಾಯ ಐದು

# ಕಾಲ್ನಡೆಗಳ ಕಥೆ

## ಜಾನುವಾರು ಕುರಿತಾದ ಆಚರಣೆಗಳು

*ಜಾನುವಾರುಗಳಿಲ್ಲದ ನಮ್ಮ ಕೃಷಿಯನ್ನಾಗಲೀ ಕೃಷಿಕನನ್ನಾಗಲೀ ಕಲ್ಪಿಸಿಕೊಳ್ಳಲೂ ಸಾಧ್ಯವಿಲ್ಲ. ಒಕ್ಕಲುಮಕ್ಕಳೆಂದರೆ ಅವರಿಗೆ ಕರಾವಿಗೆ, ಉಳುಮೆಗೆ, ಸಾಗಾಣಿಕೆಗೆ, ಸಗಣಿಗೆ, ಗೊಬ್ಬರಕ್ಕೆ ದನಗಳಿರಲೇ ಬೇಕು. ನಮ್ಮ ಹಳ್ಳಿಗಳು ಹಾಗೇ ಇದ್ದವೂ ಕೂಡ. ಒಬ್ಬೊಬ್ಬರ ಮನೆಯಲ್ಲೂ ಐದು, ಹತ್ತು, ಹದಿನೈದು, ಇಪ್ಪತ್ತು, ಕೆಲವರ ಮನೆಗಳಲ್ಲಿ ಐವತ್ತು ನೂರರವರೆಗೂ ದನ-ಎಮ್ಮೆಗಳಿರುವುದನ್ನು ಕಾಣಬಹುದು. ಕನಕಪುರ, ಚಾಮರಾಜನಗರ ಪ್ರದೇಶದ ಕಾಡುಹಳ್ಳಿಗಳಲ್ಲಿ ದೊಡ್ಡಕುಟುಂಬಗಳು ಇನ್ನೂರರವರೆಗೂ ದನಗಳನ್ನು ಸಾಕಿರುತ್ತಾರೆ. ಪ್ರಸ್ತುತ ಈ ಸಂಖ್ಯೆ ಕಡಿಮೆಯಾಗಿರುವುದಾದರೂ ಸಹ ಹಳ್ಳಿಗಳಲ್ಲಿ ದನ-ಕರುಗಳೊಂದಿಗಿನ ಆ ನಂಟು ಹಾಗೇ ಇದೆ. ಊರ ದನ ಮತ್ತು ಎಮ್ಮೆ ಹಿಂಡುಗಳನ್ನು (ಮಂದೆ ದನ) ನಿಗದಿತ ವ್ಯಕ್ತಿಯೊಬ್ಬ ಕಾಯುವ ಸಂಪ್ರದಾಯ ಈಗಲೂ ಸಹ ಕೆಲವೆಡೆಗಳಲ್ಲಿ ಚಾಲ್ತಿಯಲ್ಲಿದೆ. ಬೀಜದ ಹೋರಿ ಮತ್ತು ಕೋಣವನ್ನು, ಸಾಕುವುದು ಹಿಂದೆ ಪ್ರತಿಷ್ಠೆಯ ವಿಷಯವಾಗಿತ್ತು.*


*ತನ್ನ ಆರಂಬದ ಪ್ರತಿಯೊಂದು ಚಟುವಟಿಕೆಗಳಲ್ಲಿ ಹೆಗಲಿಗೆ ಹೆಗಲು ಕೊಟ್ಟು ದುಡಿಯುವ ದನ-ಕರುಗಳಿಗೆ ವಿಶೇಷ ಗೌರವ ಸಲ್ಲಿಸುವ ರೈತ ತನ್ನ ಮನೆಯಲ್ಲಿ ಯಾವುದೇ ಹಬ್ಬ-ಹರಿದಿನವಾದರೂ ಅವುಗಳಿಗೆ ನಮಿಸುವ ಪರಿಪಾಠ ಇಟ್ಟುಕೊಂಡಿದ್ದಾನೆ. ಮಳೆ ಬಾರದಿದ್ದಾಗ ಎತ್ತಿನ ಶಾಸ್ತ್ರ ಕೇಳುವುದು, ದನಗಳನ್ನು ಓಡಿಸಿ ಯಾವ ಬಣ್ಣದ ದನ ಮುಂದೆ ಬರುತ್ತದೆಯೋ ಆ ಬಣ್ಣದ ಕಾಳು ಈ ವರ್ಷ ಹುಲುಸಾಗುತ್ತದೆ ಎಂದು ನಂಬುವುದು, ದನಗಳಿಗೆ ಕಿಚ್ಚು ಹಾಯಿಸುವುದು ಮುಂತಾದವೆಲ್ಲ ಜಾನುವಾರು ಗಳನ್ನೇ ಮುಖ್ಯ ಕೇಂದ್ರವಗಿಟ್ಟುಕೊಂಡ ಆಚರಣೆಗಳು. ಹಾಗೂ ರೈತ ಮತ್ತು ಜಾನುವಾರುಗಳ ಅವಿನಾಭಾವ ಸಂಬಂಧವನ್ನು ಸಾರುವ ಮತ್ತು ಅದನ್ನು ತಲೆಮಾರಿನಿಂದ ತಲೆಮಾರಿಗೆ ಕೊಂಡ್ಹೊಯ್ಯುವ ಸಾಧನಗಳು.*

*ಕಾಲ್ನಡೆಗಳ ಬಗ್ಗೆ ಪ್ರಚಲಿತದಲ್ಲಿರುವ ಕೆಲವು ಆಚರಣೆಗಳ ವಿವರ ಇಲ್ಲಿದೆ.*

## ೧. ದನಗಳ ದೇಸೀ ದೀಪಾವಳಿ

ನಮಗೆಲ್ಲಾ ತಿಳಿದಿರುವಂತೆ ಮುಂಗಾರು ತನ್ನ ಖದರು ಕಳೆದುಕೊಳ್ಳತೊಡಗಿ ಹಿಂಗಾರು ಮೆಲ್ಲಗೆ ಕಾಲಿಡುವ ಸಂದರ್ಭದಲ್ಲಿ ಎಲ್ಲೆಡೆ ದೀಪಾವಳಿ ಸಂಭ್ರಮ. ಅದೇ ತಾನೆ ತೆನೆ ಕೀಳುತ್ತಿರುವ ಪೈರಿಗೆ ಪೂಜೆ–ಪುನಸ್ಕಾರ ಸಲ್ಲಿಸಿದ ರೈತರು ದಣಿವಾರಿಸಿಕೊಳ್ಳುವ ಕಾಲವದು. ದನ–ಕರುಗಳಿಗೂ ಸಹ ಬಿಡುವಿನ ಕಾಲ. ಆಗ ಬರುವ ದೀಪಾವಳಿ ಹಬ್ಬವನ್ನು ದನಗಳ ಪೂಜೆಗೆ ಮೀಸಲಾಗಿರಿಸುವುದು ರೈತರ ವಿಶೇಷ. ಅದಕ್ಕಾಗೇ ಈ ಹಬ್ಬಕ್ಕೆ ಹಟ್ಟಿ ಹಬ್ಬ ಎಂಬ ಹೆಸರೇ ಇದೆ. ಹಟ್ಟಿ ಹಬ್ಬ, ದೀವಳಿಗೆ ಹಬ್ಬ, ದೊಡ್ಡ ಹಬ್ಬ, ಪಣತಿ ಹಬ್ಬ – ಹೀಗೆ ದೀಪಾವಳಿಗೆ ಹಲವು ಹೆಸರುಗಳಿವೆ. ದೇಸಿ ದೀಪಾವಳಿ ನೋಡುವ ಆಸೆ ಇರುವವರು ಅಂದು ರೈತರ ಹಟ್ಟಿಗೆ ಬರಬೇಕು. ಅದರಲ್ಲಿಯೂ ಮಲೆನಾಡಿನಲ್ಲಿ ಇದು ಬಲು ಜೋರು. ಅಲ್ಲಿ ಬಸವನಿಗೆ ಬಾಸಿಂಗ ಕಟ್ಟುವುದೇನು? ಅವನ ಮದುವೆ ಸಂಭ್ರಮವೇನು ?

ದೀಪಾವಳಿ ಮೂರು ದಿನಗಳ ಆಚರಣೆ, ನರಕ ಚತುರ್ದಶಿ, ಲಕ್ಷ್ಮೀಪೂಜೆ ಹಾಗೂ ಬಲಿಪಾಡ್ಯಮಿ– ಈ ಮೂರು ಆಚರಣೆಗಳು ಒಂದೊಂದು ದಿನ ನಡೆಯುತ್ತವೆ. ನರಕಾಸುರ ಎನ್ನುವ ದೈತ್ಯನನ್ನು ಶ್ರೀಕೃಷ್ಣ ಸಂಹರಿಸಿದ ದಿನದ ನೆನಪಿಗಾಗಿ ನರಕ ಚತುರ್ದಶಿಯನ್ನು ಆಚರಿಸುತ್ತಾರೆ. ಇದಕ್ಕೆ 'ನೀರು ತುಂಬುವ ಹಬ್ಬ' ಎಂದೂ



ಜೋಡೆತ್ತುಗಳಿಗೆ ಅಲಂಕಾರ

ಕರೆಯಲಾಗುತ್ತದೆ. ಮಲೆನಾಡಿನ ಊರುಗಳಲ್ಲಿ ಇದಕ್ಕೆ ಬೂರೆ ನೀರು ಎಂಬ ಮತ್ತೊಂದು ಹೆಸರಿನಿಂದಲೂ ಕರೆಯುತ್ತಾರೆ. ಹಬ್ಬದ ಹಿಂದಿನ ದಿನವೇ ಬೂರೆ ಹಾಯುವ ಸಂಪ್ರದಾಯ ಇಲ್ಲಿದೆ.

ಬೂರೆ ಹಾಯುವುದು ಎಂದರೆ ಒಂದು ರೀತಿಯಲ್ಲಿ ಹುಸಿ ಕಳ್ಳತನ, ಊರಿನ ಯುವಕರು ಹಾಗೂ ಹಿರಿಯರು ರಾತ್ರಿ ವೇಳೆ ಮನೆಗಳಲ್ಲಿ ಬೆಳೆದ ತರಕಾರಿ, ಹಣ್ಣು, ಹೂವು ಹಾಗೂ ದವಸ ಧಾನ್ಯಗಳನ್ನು 'ಕದ್ದು' ತಂದು ದೇವರ ಗುಡಿಯಲ್ಲಿ ಇಟ್ಟು ನರಕ ಚತುರ್ದಶಿಯ ದಿನ ಅದೇ ತರಕಾರಿ ಧಾನ್ಯಗಳಿಂದ ಪ್ರಸಾದ ತಯಾರಿಸಿ ಮನೆ-ಮನೆಗೂ ಹಂಚುತ್ತಾರೆ.

ಮಾರನೆ ದಿನ ಮನೆಗೆ ಲಕ್ಷ್ಮಿಯನ್ನು ಬರಮಾಡಿಕೊಳ್ಳುವ ಪೂಜೆ ನಡೆಯುತ್ತದೆ. ಅಂದು ಯಾರೂ ಯಾರಿಗೂ ಸಾಲ ಕೊಡುವುದಿಲ್ಲ. ಸಾಲ ಕೊಟ್ಟರೆ ವರ್ಷ ಪೂರ್ತಿ ಲಕ್ಷ್ಮೀ ಕೈಬಿಟ್ಟು ಹೋಗುತ್ತಾಳೆ ಎಂಬ ಆತಂಕ ಜನರಿಗೆ. ನಂತರದ್ದು ಬಲಿಪಾಡ್ಯಮಿ. ಬಸವನಿಗೆ-ಅರ್ಥಾತ್ ದನ-ಕರುಗಳಿಗೆ ವಿಶೇಷ ದಿನ. ಈ ದಿನ ರೈತರ ಹಟ್ಟಿಯಲ್ಲಿ ಹಬ್ಬದ ಸಂಭ್ರಮಕ್ಕೆ ವಿಶೇಷ ಕಳೆ. ಈ ಸಂಭ್ರಮ ಪಾಡ್ಯಮಿಯ ಹಿಂದಿನ ಅಮಾವಾಸ್ಯೆಯ ದಿನವೇ ಆರಂಭವಾಗುತ್ತದೆ. ಚೆಂಡು ಹೂ ಕೊಯ್ದು, ಬಾಳೆ ಪಟ್ಟೆಯಲ್ಲಿ ಅಥವಾ ಪುಂಡಿ ನಾರಿನಲ್ಲಿ ಮಾಡಿದ ಹಗ್ಗದಲ್ಲಿ ಹೂ ಪೋಣಿಸಿ ಮಾಲೆಗಳನ್ನು ತಯಾರಿಸುತ್ತಾರೆ. ಹಿರಿಯರಿಂದ ಕವಲು ನಾರಿನಲ್ಲಿ ಹೊಸ ಹಗ್ಗ ತಯಾರಾಗುತ್ತದೆ. ಹೂ ಮಾಲೆ ಆದ ನಂತರ ಅಡಿಕೆ ಮಾಲೆ, ಸಿಂಗಾರದ ಮಾಲೆ ಮುಂತಾಗಿ ನಾಲ್ಕೈದು ಮಾಲೆಗಳು ಸಿದ್ಧವಾಗುತ್ತವೆ.

'ಕವಲು' (ಕವ್ಲು) ಗಿಡದಲ್ಲಿ ಮಾಡಿದ ಹಗ್ಗ ಪೂಜೆಗೆ ಪವಿತ್ರ ಎಂಬ ಪ್ರತೀತಿ ರೈತಾಪಿಗಳಲ್ಲಿ ಇದೆ. ನೆಲದಲ್ಲಿ ವಿಸ್ತಾರವಾಗಿ ಬಿಟ್ಟಿರುವ ಕವ್ಲು ಗಿಡದ ಬೇರುಗಳನ್ನು ಅಗೆದು, ಅದನ್ನು ಚೆನ್ನಾಗಿ ನಾದು ಮಾಡಿ ಹಗ್ಗ ತಯಾರಿಸಿ, ಎತ್ತು ಕರುಗಳನ್ನು ಕಟ್ಟುತ್ತಾರೆ. ಅಂದು ನಕ್ಷತ್ರಾಕಾರದ ಚಪ್ಪೆ ರೊಟ್ಟಿ ವಿಶೇಷ ಅಡುಗೆ.

ಮುಂಜಾನೆಯೇ ರೈತರು ಹಿಂದಿನ ದಿನವೇ ಮೈ ತೊಳೆದ ಜಾನುವಾರುಗಳನ್ನು ಹಟ್ಟಿಯಿಂದ ಹೊರಗೆ ಕಟ್ಟುತ್ತಾರೆ. ನಂತರ ಹಟ್ಟಿಯನ್ನು ಸಾರಿಸಿ ಅಲ್ಲಿ 'ಹಟ್ಟೆವ್ವ'ನನ್ನು ಪ್ರತಿಷ್ಠಾಪಿಸಲಾಗುತ್ತದೆ. ಆಕಳ ಸಗಣಿಯಿಂದ ಶಂಕುವಿನಾಕಾರದಲ್ಲಿ ಮೈದಳೆದ ಹಟ್ಟೆವ್ವನಿಗೆ ವಿವಿಧ ಹೂವುಗಳಿಂದ, ಜೋಳದ ದಂಟು-ಧಾನ್ಯಗಳಿಂದ ಅಲಂಕರಿಸಲಾಗುತ್ತದೆ. ಇದು ದೊಡ್ಡ ಹಟ್ಟೆವ್ವನ ಕಥೆ. ಇದೇ ರೀತಿ ಚಿಕ್ಕ ಹಟ್ಟೆವ್ವಗಳನ್ನು ಮನೆಯ ವಿವಿದೆಡೆ ಪೂಜಿಸಲಾಗುತ್ತದೆ. ಆ ನಂತರ ಕುಸುರಿ ಕೆಲಸ ಪ್ರಾರಂಭ.

ಜಗಲಿಯಿಂದ ಮನೆಯ ಮುಂಬಾಗಿಲವರೆಗೆ ಕೆಮ್ಮಣ್ಣು ಪಟ್ಟಿ ಬರೆದು, ಪಟ್ಟಿಯ ಮಧ್ಯದಲ್ಲಿ ಎರಡೆರಡು ಸುಣ್ಣದ ಬಟ್ಟಲು ಇಡಲಾಗುತ್ತದೆ. ಅನಂತರ ಎರಡೂ ಮುಷ್ಠಿಗಳನ್ನು ಸುಣ್ಣದಲ್ಲಿ ಅದ್ದಿ ಮನೆಯ ಹೊರಗಿನಿಂದ ದೇವರ ಕೋಣೆಯವರೆಗೆ ಗೋಪಾದದಂಥ ಗುರುತುಗಳನ್ನು ಮೂಡಿಸಲಾಗುತ್ತದೆ. ಒನಕೆ, ಕಡೆಗೋಲು, ಕುಡುಗೋಲುಗಳಂಥ ವಸ್ತುಗಳಿಗೂ ಪೂಜೆ, ಪಾಯಸದ ಎಡೆ ಸಲ್ಲುತ್ತದೆ.

ಸಾಗರದ ಕಡೆ ಎತ್ತುಗಳಿಗೆ ಬಾಸಿಂಗ ಹಾಕುವ ಪದ್ಧತಿ ಇದೆ. ಇದಕ್ಕೆ ಹಟ್ಟಿ ಮದುವೆ ಎಂದು ಕರೆಯಲಾಗುತ್ತದೆ. ಬಾಸಿಂಗ ಎಂದರೆ ಹೂವಿನ ಕೋಲುಗಳಿಂದ ಮಾಡಿದ ಬಾಸಿಂಗ. ಕೇವಲ ಚೆಂಡು ಹೂವಿನಲ್ಲಿ ಮಾಡುವ ಬಾಸಿಂಗಕ್ಕೆ ತನ್ನದೇ ಇತಿಹಾಸವಿದೆ. ಬಿದಿರು ಕೋಲುಗಳಿಂದ ತ್ರಿಕೋನಾಕಾರದಲ್ಲಿ ಮಾಡಿದ ಬಾಸಿಂಗಕ್ಕೆ ಪೂಜೆ ಸಲ್ಲಿಸಿ, ಕೃಷಿ ಕೆಲಸದಲ್ಲಿ ಬಳಸುವ ಎರಡು ಎತ್ತುಗಳಿಗೆ ಜೋಡಿಸಲಾಗುತ್ತದೆ. ಅವುಗಳನ್ನು ಮದುಮಗ ಎಂದು ಕರೆಯುವ ಹಳ್ಳಿಗರು ಅಡಿಕೆ ಸರದ ಮಾಲೆ, ಹೂವಿನ ಮಾಲೆ, ಚಪ್ಪೆ ರೊಟ್ಟಿ ಮಾಲೆ ಹಾಕಿದ ಹಸುಗಳನ್ನು ಮದುವಣಗಿತ್ತಿ ಎಂದು ಕರೆದು ಮದುವೆಯ ಸಂಭ್ರಮ ಅನುಭವಿಸುತ್ತಾರೆ. ಹಟ್ಟಿಯ ಬಾಸಿಂಗ ದೀಪಾವಳಿಯ ವಿಶೇಷ.

ಹಟ್ಟಿಯಲ್ಲಿಯೇ ಪೂಜೆ ಮಾಡಿ, ದನಕರುಗಳಿಗೆ ಕಡುಬು ಸೇರಿದಂತೆ ಇನ್ನಿತರ ಆಹಾರಗಳನ್ನು ತಿನ್ನಲು ನೀಡಿದ ನಂತರ ಎತ್ತಿನ ಮೆರವಣಿಗೆ ಆರಂಭವಾಗುತ್ತದೆ. ರಾಜ್ಯದ ಉಳಿದ ಭಾಗಗಳಲ್ಲಿ ಸಂಕ್ರಾಂತಿಯಂದು ನಡೆಸುವ ಕಿಚ್ಚು ಹಾಯಿಸುವ ಆಚರಣೆ ಮಲೆನಾಡು ಭಾಗದಲ್ಲಿ ದೀಪಾವಳಿಯ ಸಂದರ್ಭದಲ್ಲಿದೆ.

ಹೀಗೆ ಜಾನುವಾರುಗಳಿಗೆ ಗೌರವ ಸಲ್ಲಿಕೆ ಒಂದೆಡೆಯಾದರೆ, ಚರ್ಮವ್ಯಾಧಿಗೆ ಔಷಧೋಪಚಾರ ಮಾಡುವುದು ಇನ್ನೊಂದೆಡೆ ನಡೆಯುತ್ತದೆ. ಜೇಡಿ ಹಾಗೂ ಕೆಮ್ಮಣ್ಣಿನಿಂದ ಮಾಡಿದ ಡಾಬುವನ್ನು ದನಕರುಗಳ ಮೈಮೇಲೆ ಅಕ್ಕಿ, ಭತ್ತ ಅಳೆಯುವ ಗಿದ್ನ ಅಥವಾ ಸೇರಿನ ಡಬ್ಬದಿಂದ ತಾಗಿಸಿದರೆ ಕಾಡು ನೊಣಗಳು ಇವುಗಳ ರಕ್ತ ಹೀರುವುದನ್ನು ಬಿಡುತ್ತವೆ ಎಂಬ ನಂಬಿಕೆ ಇದೆ. ಇದು ಹಳ್ಳಿಗರ ಔಷಧೋಪಚಾರ. ದೀಪಾವಳಿ ಸಮಯದಲ್ಲಿ ಬಲಿತಿರುವ ನೊಣಗಳು, ಕೆಮ್ಮಣ್ಣಿನಿಂದ ಮಾಡಿದ ಡಾಬು ಹಚ್ಚಿದ ನಂತರ ದನಗಳ ಹತ್ತಿರವೂ ಬರುವುದಿಲ್ಲವಂತೆ. ಕಿಚ್ಚು ಹಾಯಿಸಿದ ನಂತರ ಗದ್ದೆ ಪೂಜೆ, ಮಧ್ಯಾಹ್ನದ ಸಮಯದಲ್ಲಿ ಊರ ಮುಂದಿನ ಜಾಗದಲ್ಲಿ ಗ್ರಾಮೀಣ ಆಟ, ಮರದಲ್ಲಿ ಕಾಯಿ ಕಟ್ಟಿ ಕೋಲಿನಿಂದ ಹೊಡೆಯುವ ಆಟ, ಹೀಗೆ ದೇಸೀ ದೀಪಾವಳಿ ಸಂಭ್ರಮಿಸುತ್ತದೆ.

## ನರಕ ಚತುರ್ದಶಿ ಕತೆ

ನರಕ ಚತುರ್ದಶಿ ಮತ್ತು ದೀಪಾವಳಿ ಆಚರಣೆಗೆ ಹಿನ್ನೆಲೆಯಾಗಿ ನಮ್ಮ ಜನಪದರಲ್ಲಿ ಒಂದು ಸುಂದರ ಕತೆಯಿದೆ. ನರಕ ಚತುರ್ದಶಿ ಅಂದರೆ ನರಕಾಸುರ ಸತ್ತ ದಿನ. ಅದಕ್ಕೂ ಕೃಷಿಕರಿಗೂ, ದನಗಳ ಪೂಜೆಗೂ ಎಲ್ಲಿಂದೆಲ್ಲಿಯ ಸಂಬಂಧ ಅನ್ನುವುದನ್ನು ಈ ಕತೆ ತಿಳಿಸುತ್ತದೆ.

ಶ್ರೀಕೃಷ್ಣನ ದ್ವಾರಕಾ ನಗರಿ ಅಂದಿನ ಕಾಲಕ್ಕೆ ವ್ಯವಸಾಯ ಮತ್ತು ಹೈನುಗಾರಿಕೆಗೆ ಬಹು ಪ್ರಸಿದ್ಧ. ಹಾಲು ಮೊಸರು ಬೆಣ್ಣೆ ತುಪ್ಪಗಳ ಹೊಳೆ ಪ್ರತಿ ನಿತ್ಯ. ಇಡೀ ವಹಿವಾಟು ಮಹಿಳೆಯರ ಕೈಯಲ್ಲಿ. ಎಲ್ಲಿ ನೋಡಿದರೂ ಸಮೃದ್ಧಿ. ಈಗಿನ ಅಸ್ಸಾಂ ಬಳಿಯ ಪ್ರಾಗ್‌ಜ್ಯೋತಿಷಪುರದ ಅರಸ ನರಕಾಸುರನಿಗೆ ದ್ವಾರಕೆಯ ಸಮೃದ್ಧಿಯ ಸುದ್ದಿ ತಿಳಿಯುತ್ತದೆ. ತಕ್ಷಣ ದ್ವಾರಕೆಗೆ ಬಂದ ಆತ ಅಲ್ಲಿನ ನದಿ ತೀರದ ಕಾಡಿನಲ್ಲಿ ಅವಿತು ಕುಳಿತ.

ನದಿಗೆ ನೀರಾಡಿಕೆಗೆ ಬಂದ ದನ-ಕರುಗಳನ್ನು ಕದ್ದು ತಿಂದ, ನೀರೊಯ್ಯಲು ಬಂದ ಗೋಪಿಕೆಯರನ್ನು ಅಪಹರಿಸಿದ. ಬಹಳ ದಿನ ಹೀಗೇ ನಡೆಯುತ್ತಿರಲು, ಅಪಾರ ಪ್ರಮಾಣದಲ್ಲಿ ಕಾಣೆಯಾದ ಗೋವುಗಳು ಮತ್ತು ಗೋಪಿಕೆಯರ ಬಗ್ಗೆ ದ್ವಾರಕೆಯಲ್ಲಿ ಕೋಲಾಹಲವಾಯಿತು. ಸುದ್ದಿ ಕೃಷ್ಣ-ಬಲರಾಮರನ್ನೂ ಮುಟ್ಟಿತು. ಅವರು ಕಾಡು ಹೊಕ್ಕಿದ ನರಕಾಸುರನ್ನು ಹುಡುಕಿ ಹಿಡಿದರು. ಕಾಡಿನಲ್ಲಿದ್ದ ಹಸಿರು ಬಳ್ಳಿಯೊಂದರಿಂದ ಅವನ ಕುತ್ತಿಗೆ ಬಿಗಿದು ಕೊಂದು ಹಾಕಿದರು. ಅವನನ್ನು ಕೊಲ್ಲಲು ಬಳಸಿದ ಬಳ್ಳಿಯೇ ಮಾಲಿಂಗನ ಬಳ್ಳಿ. ಅದು ಪೂಜನೀಯವಾಯಿತು. ಮಲಿನಗೊಂಡಿದ್ದ ನದಿ ಪವಿತ್ರವಾಗಿ ನೀರಿನ ಪೂಜೆ ಆರಂಭವಾಯಿತು.

ನರಕಾಸುರನನ್ನು ಸಂಹರಿಸಿದ ನೆನಪಿಗಾಗಿ ದ್ವಾರಕೆಯಲ್ಲಿ ದೊಡ್ಡ ಹಬ್ಬವೇ ಪ್ರಾರಂಭವಾಯಿತು. ದನಗಳ ಪೂಜೆಗೊ ಇದೇ ಮೂಲ. ಹೀಗೆ ಕಾರ್ತೀಕ ಶುದ್ಧ ಪಾಡ್ಯದ ದಿನ ಶ್ರೀಕೃಷ್ಣನ ಪ್ರೀತಿಯ ಗೋವುಗಳಿಗೆ ಪೂಜಾ ದಿನವಾಯ್ತು. ಇಂದಿಗೂ ಸಹ ಮಾಲಿಂಗನ ಬಳ್ಳಿಯನ್ನು ಹಬ್ಬದ ದಿನ ದನಗಳ ಕೊರಳಿಗೆ ಹಾಕುವುದನ್ನು ನೋಡಬಹುದು.

### ೨. ಕಂಬಳ

ತುಳುನಾಡಿನ ಕೃಷಿಕರಲ್ಲಿ ಹಿಂದಿನಿಂದಲೂ ಹತ್ತು ಹಲವು ರೀತಿಯ ಮನರಂಜನೆಯ ಸ್ಪರ್ದೆಗಳು ಬಳಕೆಯಲ್ಲಿವೆ. ಇಲ್ಲಿನ ಗ್ರಾಮೀಣ ಜನರ ಮುಖ್ಯ ಕಸುಬು ಬೇಸಾಯ. ಅದರಲ್ಲೂ ಮುಖ್ಯವಾಗಿ ಭತ್ತ ಇಲ್ಲಿನ ಮುಖ್ಯ ಬೆಳೆ. ನೀರಿನ ಆಸರೆಯಲ್ಲಿರುವ ಕಡೆ

ವರ್ಷಕ್ಕೆ ಎಣೆಲು, ಸುಗ್ಗಿ ಮತ್ತು ಕೊಳಕೆ ಎಂಬ ಮೂರು ಬೆಳೆ ಬೆಳೆಯುತ್ತಾರೆ. ಎಣೆಲು ಬೆಳೆ ಮುಗಿದು ಸುಗ್ಗಿ ಬೆಳೆಯನ್ನು ಇಡುವ ಮುಂಚೆ ಗದ್ದೆಗಳಲ್ಲಿ ಕಂಬಳ ಸ್ಪರ್ಧೆ ನಡೆಯುತ್ತದೆ. ಕಂಬಳ ಎಂದರೆ ಚೆನ್ನಾಗಿ ಉತ್ತು ಕೆಸರು ಮಾಡಿ ನೀರು ನಿಲ್ಲಿಸಿರುವ ವಿಶೇಷ ಸ್ಥಳಗಳಲ್ಲಿ ಕೋಣಗಳ ಜೋಡಿಯನ್ನು ಓಡಿಸುವ ರೋಮಾಂಚಕ ಕ್ರೀಡೆ.



ಚಿತ್ರ : ಆನಂದಭಕ್ತಿ

ಕಂಬಳ ಎಂದರೆ ಕೆಸರು ಗದ್ದೆ ಎಂಬ ಅರ್ಥವೂ ಇದೆ. ಇದು ದಕ್ಷಿಣ ಕನ್ನಡ, ಕಾಸರಗೋಡು ಪ್ರದೇಶಗಳ ಅತ್ಯಂತ ಪುರಾತನ ಕ್ರೀಡೆ. ಜೋಡಿ ಕೋಣಗಳಿಗೆ ನೊಗ, ಹಲಗೆ ಹೂಡಿ ಬಿಸಿಲಿಗೆ ಮಿರ–ಮಿರನೆ ಮಿಂಚುವ ಕೊಬ್ಬಿದ ಕೋಣಗಳ ಬೆನ್ನ ಹಿಂದೆ ಹಗ್ಗ ಹಿಡಿದು ಓಡುವ ರೈತಾಪಿಗಳ ಸಾಹಸ ಪದಗಳಿಗೆ ನಿಲುಕದ್ದು, ಹಾಗೆ ಓಡುವಾಗ ಎತ್ತರಕ್ಕೆ ಕೆಸರು ಚಿಮ್ಮಿಸುವ ಮತ್ತು ವೇಗದ ಅಂಶವನ್ನಾಧರಿಸಿ ವಿಜೇತರನ್ನು ನಿರ್ಧರಿಸಲಾಗುತ್ತದೆ.

ನಾಲ್ಕನೇ ಶತಮಾನದಿಂದಲೇ ಈ ಸ್ಪರ್ಧೆ ಚಾಲ್ತಿಯಲ್ಲಿದ್ದ ಬಗ್ಗೆ ಮಾಹಿತಿ ಲಭ್ಯವಿದೆ, ಆಗ ತುಳುನಾಡನ್ನು ಆಳುತ್ತಿದ್ದ ತುಳುಪ ಅರಸರು ಮನರಂಜನೆಗಾಗಿ ಕೋಣಗಳ ಓಟವನ್ನು ಏರ್ಪಡಿಸುತ್ತಿದ್ದರು. ಅದನ್ನು ಅರಸು ಕಂಬಳ ಎನ್ನುತ್ತಿದ್ದರು. ಪ್ರತಿವರ್ಷ

ಇವು ನಡೆಯುತ್ತಿದ್ದವು. ತುಳುಭಾಷೆಯ ಪಾಡ್ದನಗಳಲ್ಲಿಯೂ ಸಹ ಕಂಬಳದ ಬಗೆಗೆ ಮಾಹಿತಿ ಇರುವುದನ್ನು ಕಾಣಬಹುದು.

ಕಂಬಳದಲ್ಲಿ ಸ್ಪರ್ದೆಗಿಳಿಸುವ ಕೋಣಗಳನ್ನು ಅತಿ ಕಾಳಜಿಯಿಂದ ಸಾಕಲಾಗುತ್ತದೆ. ಇದೊಂದು ಶ್ರದ್ಧೆಯ ಹಾಗೂ ಮುತುವರ್ಜಿಯ ಕೆಲಸ. ಕಂಬಳದ ಕೋಣದ ಮರಿಯನ್ನು ಆರಿಸುವುದರಿಂದ ಮೊದಲ್ಗೊಂಡು ಅದಕ್ಕೆ ಮೇವು ನೀಡುವುದು, ಸಂಜ್ಞೆಗಳನ್ನು ಕಲಿಸುವುದು, ಪಳಗಿಸುವುದು ಮುಂತಾದವುಗಳ ಜ್ಞಾನ ಪರಂಪರೆಯಿಂದ ಬಂದುದಾಗಿರುತ್ತದೆ. ಅದೊಂದು ವಿದ್ಯೆ, ಅದಕ್ಕಾಗಿಯೇ ವಿಶೇಷ ಜನರನ್ನು ನೇಮಿಸಿಕೊಳ್ಳುತ್ತಾರೆ. ಪ್ರೀತಿಯಿಂದ ಸಾಕಿದ ಈ ಕೋಣಗಳು ಯಜಮಾನ ಅಥವಾ ಪಳಗಿಸಿದ ಆಳು ಹೇಳಿದಂತೆ ಕೇಳುತ್ತವೆ. ಎಮ್ಮೆ ಜಾತಿಗೆ ಬುದ್ಧಿ ಕಡಿಮೆ ಎಂದು ಹೇಳುವವರು ಈ ಕೋಣಗಳ ಚಾಲೂಕುತನವನ್ನು ನೋಡಿದರೆ ತಮ್ಮ ಅಭಿಪ್ರಾಯ ಬದಲಿಸಿಕೊಳ್ಳುತ್ತಾರೆ. ಅವು ತಮ್ಮ ಯಜಮಾನ ಮಲಗು ಎಂದರೆ ಮಲಗುತ್ತವೆ, ಏಳು ಅಂದರೆ ಏಳುತ್ತವೆ, ಬಗ್ಗಿ ನಡಿ ಎಂದರೆ ಮುಂಗಾಲು ಮಡಿಚಿ ನಡೆಯುವುದೂ ಉಂಟು.

ಕಂಬಳದ ಓಟದಲ್ಲಿ ಭಾಗವಹಿಸುವ ಕೋಣಗಳನ್ನು ಗದ್ದೆ ಉಳುಮೆಗಾಗಲೀ ಅಥವಾ ಇತರ ಕೆಲಸಗಳಿಗಾಗಲೀ ಬಳಸುವುದಿಲ್ಲ. ಎಷ್ಟೋ ಬಾರಿ ಅವುಗಳನ್ನು ಕೊಟ್ಟಿಗೆಯಿಂದ ಹೊರಗೇ ಬಿಡುವುದಿಲ್ಲ. ಇತರ ಎಮ್ಮೆ ಅಥವಾ ಕೋಣಗಳ ಜೊತೆಗೂ ಸೇರಿಸುವುದಿಲ್ಲ. ಜನರ ದೃಷ್ಟಿ ತಾಗುತ್ತದೆಂಬ ಕಾರಣಕ್ಕಾಗಿ ಈ ರೀತಿ ಮಾಡುತ್ತಾರೆ. ಕಂಬಳದ ಕೋಣಗಳನ್ನು ತುಳು ಭಾಷೆಯಲ್ಲಿ ಗಿಡ್ಡೆರು ಎನ್ನುತ್ತಾರೆ. ಈ ಗಿಡ್ಡೆರುಗಳು ಕೊಟ್ಟಿಗೆಯ ತಂಪಿನಲ್ಲಿ, ಉತ್ತಮ ಆರೈಕೆಯಲ್ಲಿ ಕೊಬ್ಬಿ ಬೆಳೆದು ಮಿರ-ಮಿರನೆ ಮಿಂಚುತ್ತಿರುತ್ತವೆ. ನೋಡಲು ಭಯ ಹುಟ್ಟಿಸುವ ಆಕೃತಿ ಇವುಗಳದ್ದು, ಅಪರಿಚಿತರು ಬಂದರೆ ಸಿರ-ಬುಸ ಎಂದು ಗಲಾಟೆ ಮಾಡುತ್ತವೆ.

ಇವಕ್ಕೆ ದೃಷ್ಟಿ ತಾಗದಿರಲಿ ಎಂದು ತರಹೇವಾರಿ ಕ್ರಮಗಳನ್ನು ಕೈಗೊಳ್ಳುತ್ತಾರೆ. ಅವುಗಳ ಕುತ್ತಿಗೆಗೆ ಮಂತ್ರಿಸಿದ ತಾಯಿತ, ಎಡಗಾಲಿನ ಹಳೆಯ ಮೆಟ್ಟು (ಚಪ್ಪಲಿ), ಕಾಸರಕನ ಮರದಲ್ಲಿ ಮಾಡಿದ ತಾಳಿ, ಕಬ್ಬಿಣದ ಇಲ್ಲವೇ ಕಳ್ಳಿ ಗಿಡದ ಉಂಗುರ.. ಹೀಗೆ ಹಲವಾರು ದೃಷ್ಟಿ ನಿವಾರಕ ವಸ್ತುಗಳನ್ನು ಕಟ್ಟುತ್ತಾರೆ. ಇದನ್ನು ಕಟ್ಟುವುದಕ್ಕೂ ಸಹ ಮಾಂತ್ರಿಕರನ್ನು ಕರೆಸುತ್ತಾರೆ. ಅವುಗಳ ಚೋಟುದ್ದದ ಕೊಂಬುಗಳು ಥಳ-ಥಳ ಹೊಳೆಯುವಂತಾಗಲು ಗಾಜಿನ ಚೂರಿನಿಂದ, ಇಲ್ಲವೇ ಅದಕ್ಕಾಗಿಯೇ ಇರುವ ಚಿಕ್ಕ ಕತ್ತಿಯಿಂದ ಎರೆಯುತ್ತಾರೆ, ಎಣ್ಣೆ ಹಚ್ಚಿ ಪಾಲಿಷ್ ಮಾಡುತ್ತಾರೆ. ಹೊಟ್ಟೇಲಿ ಹುಟ್ಟಿದ ಮಕ್ಕಳಿಗಿಂತಲೂ ಮಿಗಿಲಾದ ಆರೈಕೆ, ಕಾಳಜಿ ಕೋಣಗಳಿಗೆ, ಅದೊಂದು ಖಾಯಿಷ್.

ಕಂಬಳದ ಕೋಣಗಳನ್ನು ಸಣ್ಣ ಮರಿಯಾಗಿದ್ದಾಗ ತಂದು ಸಾಕಿ ತಯಾರು ಮಾಡುತ್ತಾರೆ, ಮೈಮೇಲೆ ಕೂದಲುಗಳಿಲ್ಲದ ಉತ್ತಮ ಜಾತಿಯ ಮರಿಗಳನ್ನು ಹುಷಾರಿನಿಂದ ಆಯ್ಕೆ ಮಾಡಲಾಗುತ್ತದೆ. ಕೋಣದ ಜೊತೆಯನ್ನು ಈಡು ಎಂದು ಕರೆಯುತ್ತಾರೆ, ಈ ಈಡುಗಳಲ್ಲಿ ಒಂದು ಕಪ್ಪಗಿರಬೇಕು ಮತ್ತೊಂದು ಕೆಂಚನೆ ಬಣ್ಣಕ್ಕಿರಬೇಕು ಎಂಬುದು ನಂಬಿಕೆ. ಅಂತಹ ಬಣ್ಣದವನ್ನೇ ನೋಡಿ ತರುತ್ತಾರೆ.



ಚಿತ್ರ : ಆನಂದಭಕ್ಷಿ

ಇನ್ನು ಅವಕ್ಕೆ ಒದಗಿಸುವ ಮೇವು ಉತ್ಕೃಷ್ಟವಾದದ್ದು, ಅದನ್ನು ಮೇವು ಎನ್ನುವುದಕ್ಕಿಂತ ತಿಂಡಿ ಅಥವಾ ಊಟ ಅನ್ನುವುದೇ ಉತ್ತಮ, ಏಕೆಂದರೆ ಅದು ಹೆಚ್ಚು-ಕಡಿಮೆ ಮನುಷ್ಯರಿಗೆ ಕೊಡುವ ಆಹಾರವೇ ಆಗಿರುತ್ತದೆ ಮತ್ತು ಕೊಡುವ ರೀತಿಯೂ ಸಹ ಹಾಗೇ ಇರುತ್ತದೆ. ಮಾಮೂಲಿ ಎಮ್ಮೆಗಳಿಗೆ ಹಾಕಿದಂತೆ ಕೊಟ್ಟಿಗೆಯ ಗ್ವಾಂದಿಗೆಗೆ ಭತ್ತದ ಹುಲ್ಲನ್ನೋ ಹಸಿ ಮೇವನ್ನೋ ಹಾಕಿ ಬರುವಂತೆ ಕಂಬಳದ ಕೋಣಗಳಿಗೆ ಮಾಡುವುದಿಲ್ಲ. ಹುರುಳಿ ಹಿಟ್ಟು, ಕಡಲೆ ಹಿಂಡಿ, ತೆಂಗಿನ ಹಿಂಡಿ, ಹದವಾಗಿ ಬೇಯಿಸಿದ ಅನ್ನ, ಅಂಬಲಿ ಇತ್ಯಾದಿ ಪೌಷ್ಟಿಕ ಆಹಾರಗಳನ್ನು ಹೊತ್ತು-ಹೊತ್ತಿಗೆ ಸರಿಯಾಗಿ ಸೇವಕರು ತಿನ್ನಿಸುತ್ತಾರೆ. ಮೈಗೆಲ್ಲಾ ಎಳ್ಳಿನ ಎಣ್ಣೆಯನು ಹಚ್ಚಿ,

ತಿಕ್ಕಿ ಮಸಾಜು ಮಾಡಿ ಹಬೆಯಾಡುವ ಬಿಸಿ ನೀರಲ್ಲಿ ಸ್ನಾನ ಮಾಡಿಸುತ್ತಾರೆ, ಸಣ್ಣವಿರುವಾಗಲೇ ಆದೇಶಗಳನ್ನು ಪಾಲಿಸುವುದನ್ನೂ ಸಹ ಕಲಿಸುತ್ತಾರೆ. ಹೀಗೆ ತರಬೇತಿ ನೀಡುವುದಕ್ಕೆ ತುಳುಭಾಷೆಯಲ್ಲಿ ಬಾಸೆ ಕಲಿಸುವುದು ಎಂದು ಕರೆಯಲಾಗುತ್ತದೆ. ಬಹುಶಃ ರೇಸಿನ ಕುದುರೆಗಳಿಗೆ ಹೊರತುಪಡಿಸಿದರೆ ಕಂಬಳದ ಕೋಣಗಳಿಗೇ ಇರಬೇಕು ಈ ಪರಿಯ ಆರೈಕೆ, ಮುತುವರ್ಜಿ ಮತ್ತು ಕಾಳಜಿಗಳಿರುವುದು. ಕುದುರೆ ಸಾಕುವಷ್ಟೆ ಖರ್ಚೂ ಸಹ ಕೋಣ ಸಾಕಲು ಬರುತ್ತದೆ.

ಕಂಬಳದ ಕಾಲ ಬರುವ ಹೊತ್ತಿಗೆ ಕೋಣಗಳ ಈಡು ಸಂಪೂರ್ಣ ಸಜ್ಜಾಗಿರುತ್ತವೆ. ಕಂಬಳದ ದಿನದ ಸಂಭ್ರಮಕ್ಕೆ ಸಾಟಿಯೇ ಇಲ್ಲ. ಭರ್ತಿ ಅರ್ಧ ದಿನದ ಮೆರವಣಿಗೆ. ಮದುಮಕ್ಕಳ ಮೆರವಣಿಗೆ ಇದರ ಮುಂದೆ ಏನೇನೂ ಅಲ್ಲ. ಕೋಣಗಳಿಗೆ ಮಾಡುವ ಸಿಂಗಾರವೇನು? ಅವುಗಳನ್ನು ಮುಂದೆ ಬಿಟ್ಟುಕೊಂಡು ಹಿಂದೆ ನಡೆಯುವವರ ಗತ್ತೇನು? ಅಲ್ಲಿನ ವೈಭವ, ಉಮೇದು ಬಣ್ಣಿಸಲಸದಳ. ಕೋಣಗಳ ಬೆನ್ನ ಮೇಲೆ ಮಕಮಲ್ಲಿನ ಗೌಸು ಹೊದೆಸಿರುತ್ತಾರೆ, ಆ ಗೌಸಿನ ಮೇಲೆ ತರತರದ ಚಿತ್ರಗಳು, ಸೂರ್ಯ–ಚಂದ್ರ, ವಿವಿಧ ಕಸೂತಿಗಳು, ದೇವರ ಚಿತ್ರಗಳು, ಯಜಮಾನರ ಮತ್ತು ಅವರ ಊರಿನ ಹೆಸರು ಮುಂತಾದವುಗಳಿರುತ್ತವೆ. ಕಾಲುಗಳಿಗೆ ಗಗ್ಗರಗಳನ್ನು ಕಟ್ಟಿರುತ್ತಾರೆ, ಅವು ನಡೆದಂತೆಲ್ಲಾ ಘಲ್ಲೆಂದು ಸದ್ದು ಮಾಡುತ್ತವೆ, ಕತ್ತಿಗೆ ಸಣ್ಣ–ಸಣ್ಣ ಘಂಟೆಗಳಿರುವ ಗೆಜ್ಜೆ ಸರ ಹಾಕಿರುತ್ತಾರೆ, ಕತ್ತು ಆಡಿಸಿದಾಗೆಲ್ಲಾ ಅವು ಝುಣ್ಣೆಂದು ಸದ್ದು ಮಾಡುತ್ತವೆ. ಕತ್ತು, ಕೊಂಬುಗಳು ಹಾಗೂ ಹೊಟ್ಟೆಗಳಿಗೆ ಸುತ್ತಿದ ಕೆಂಪನೆಯ ಚೆಂಡು ಹೂವಿನ ಹಾರಗಳು. ಕಣ್ಣೆಸರು ಆಗದಿರಲೆಂದು ಎರಡೂ ಕೊಂಬುಗಳ ತುದಿಗೆ ನಿಂಬೆ ಹಣ್ಣುಗಳನ್ನು ಚುಚ್ಚಿರುತ್ತಾರೆ.

ಹೀಗೆ ಅಲಂಕರಿಸಿದ ಕೋಣದ ಈಡುಗಳ ಹಿಂದೆ–ಮುಂದೆ ಮಂದಿ–ಮಾರ್ಬಲದ ಹಿಮ್ಮೇಳ, ಮೆಲ್ಲಗೆ ಸರಿಯುವ ಮೆರವಣಿಗೆಯ ಮುಂಭಾಗದಲ್ಲಿ ತರಹೇವಾರಿ ವಾದ್ಯದವರ ಹಿಂಡು, ಡೋಲು, ಕೊಂಬು–ಕಹಳೆಯ ಸದ್ದು, ಮೆರವಣಿಗೆ ಅಲ್ಲಲ್ಲಿ ನಿಂತಾಗ ಡಮಾರ್ ಎಂದು ಗುರ್ನಾಲು ಹಾರಿಸಿ ಕೇಕೆ ಹಾಕುವ ಜನ. ಈ ಎಲ್ಲಾ ಸದ್ದುಗಳಿಗೆ ಕೋಣಗಳು ಬೆದರದಂತೆ, ತಲೆ ಕೊಡವಿ ಚಿಮ್ಮದಂತೆ ಅವುಗಳನ್ನು ಆ ಕಡೆ– ಈ ಕಡೆ ಭದ್ರವಾಗಿ ಮಕಾಡ (ದುಡಿ ಬಳ್ಳು) ಹಾಕಿ ಹಿಡಿದ ಆಳುಗಳು. ಒಂದೊಂದು ಕಡೆ ಹಿಡಿಯಲು ಕನಿಷ್ಠ ನಾಲ್ಕು ಜನರಾದರೂ ಇರುತ್ತಾರೆ. ಕೋಣದ ಈಡಿನ ಹಿಂದೆ ಅವುಗಳನ್ನು ಸಾಕಿ–ಸಲಹಿದವರು, ಪಾಠ ಕಲಿಸಿ ಪಳಗಿಸಿದವರು ಮತ್ತು ವಿಶೇಷ ಗತ್ತಿನಿಂದ ಗಂಭೀರವಾಗಿ ನಡೆಯುವ ಯಜಮಾನ. ಯಜಮಾನರನ್ನೂ ಮೊದಲ್ಗೊಂಡು ಎಲ್ಲರೂ ತಲೆಗೆ ಕೆಂಪು ಬಣ್ಣದ ರುಮಾಲು ಸುತ್ತಿರುತ್ತಾರೆ, ಯಜಮಾನರ

ಕೈಯಲ್ಲಿ ಚಿನ್ನದ ಕಡಗ ಹೊಳೆಯುತ್ತಿರುತ್ತದೆ. ಅವರ ಪಕ್ಕದಲ್ಲಿ ಅಂದಿನ ದಿನ ಕಂಬಳದಲ್ಲಿ ಕೋಣಗಳನ್ನು ಓಡಿಸುವ ಓಟಗಾರನೂ ನಡೆಯುತ್ತಿರುತ್ತಾನೆ. ಇವರಷ್ಟೇ ಅಲ್ಲದೆ ಸ್ಪರ್ದೆಗೆ ಅಗತ್ಯವಾಗಿ ಬೇಕಾದ ಸಲಕರಣೆಗಳಾದ ಹಲಗೆ, ಹಗ್ಗಗಳು, ನೊಗ ಮುಂತಾದವುಗಳನ್ನು ಹಿಡಿದ ಆಳುಗಳ ದಂಡೂ ಬರುತ್ತಿರುತ್ತದೆ. ಅಕ್ಷರಶಃ ಯುದ್ಧಕ್ಕೆ ಹೊರಟ ದಂಡಿನ ರೀತಿ ಆ ಮೆರವಣಿಗೆ ಇರುತ್ತದೆ, ಎಲ್ಲರ ಮುಖದಲ್ಲಿ–ಕೋಣಗಳನ್ನೂ ಸಹ ಒಳಗೊಂಡಂತೆ– ಸಂಭ್ರಮ, ನಿರೀಕ್ಷೆ, ಆತಂಕ, ಕುತೂಹಲದ ಭಾವಗಳ ಸಮ್ಮಿಲನ.

ಹೀಗೆ ವಿವಿಧ ಭಾಗಗಳಿಂದ ಹೊರಟ ಮೆರವಣಿಗೆಗಳು ಕಂಬಳ ನಡೆಯುವ ಸ್ಥಳಕ್ಕೆ ಬಂದು ಸೇರುತ್ತವೆ, ಅಲ್ಲಿ ಈಗಾಗಲೇ ಕಂಬಳ ನಡೆಯುವ ಅಂಕವನ್ನು ಸಿದ್ಧಪಡಿಸಲಾಗಿರುತ್ತದೆ. ಆ ಅಂಕವು ಸಾಮಾನ್ಯವಾಗಿ ಮುನ್ನೂರರಿಂದ ೪೫೦ ಅಡಿಗಳಷ್ಟು ಉದ್ದವಿರುತ್ತದೆ, ಈ ಉದ್ದವನ್ನು ಕೋಲು ಎಂದು ಕರೆಯುತ್ತಾರೆ, ನೂರು ಕೋಲು ಅಂದರೆ ಮುನ್ನೂರು ಅಡಿಗಳು. ಕಂಬಳದ ಅಕ್ಕ–ಪಕ್ಕ ನೋಡುವವರಿಗೆ ಅನುಕೂಲವಾಗುವಂತೆ ಎತ್ತರದ ಸ್ಥಳವಿರುತ್ತದೆ.

ಕೋಣಗಳು ಸ್ಪರ್ದೆಯ ಸ್ಥಳ ಸೇರಿದ ತಕ್ಷಣ ಮಾಡುವ ಕೆಲಸ ಅವುಗಳ ಹಣೆಗೆ ಪಣೆನೊಗ ಕಟ್ಟುವುದು, ಅಂದರೆ ಅವುಗಳ ಹಣೆಗೆ ಮತ್ತು ಹೆಗಲಿನ ಮೇಲಿರುವ ನೊಗಕ್ಕೆ ಸೇರಿಸಿ ಅಡಿಕೆ ಮರದಲ್ಲಿ ಮಾಡಿದ ಎರಡು ಅಂಗುಲ ವ್ಯಾಸದ ದೊಣ್ಣೆಯನ್ನು ಬಿಗಿಯಾಗಿ ಎಳೆದು ಕಟ್ಟುವುದು. ಓಟದಲ್ಲಿ ಈ ಪಣೆಹಗ್ಗದ ಪಾತ್ರ ಅತ್ಯಂತ ಮುಖ್ಯವಾಗಿರುವುದರಿಂದ ನುರಿತವರು, ಅನುಭವಿಗಳು ಮಾತ್ರ ಈ ಕೆಲಸಕ್ಕೆ ನಿಯೋಜಿತವಾಗಿರುತ್ತಾರೆ. ಇಲ್ಲಿ ಹಲವಾರು ರೀತಿಯ ಹಗ್ಗಗಳನ್ನು ಬಳಸುತ್ತಾರೆ, ಪ್ರತಿಯೊಂದು ಉದ್ದೇಶಕ್ಕೂ ಬೇರೆ–ಬೇರೆ ರೀತಿಯ ಹೆಸರಿನ ಹಗ್ಗಗಳಿರುತ್ತವೆ. ಅವುಗಳ ಪ್ರತಿಯೊಂದರ ಉದ್ದ, ರಚನೆ, ಬಿಗಿತಗಳೂ ವಿಶಿಷ್ಟವಾಗಿರುತ್ತವೆ. ಇವೆಲ್ಲಾ ಅತ್ಯಂತ ಸೂಕ್ಷ್ಮ ಕೆಲಸಗಳು, ನಿಗಾ ಇಟ್ಟು ಮಾಡುವಂತಹವು.

ಈ ತಯಾರಿ ಆದ ಮೇಲೆ ಸ್ಪರ್ದೆ ಶುರು. ಕಂಬಳದಲ್ಲಿ ಮೂರು ವಿಧ,

ಒಂದು; ಹಗ್ಗದ ಓಟ, ಇಲ್ಲಿ ಕೋಣಗಳ ಹೆಗಲಿಗೆ ಕಟ್ಟಿದ ನೊಗಕ್ಕೆ ಹಗ್ಗವನ್ನು ಕಟ್ಟಿ ಓಡಿಸುವವ ಅದನ್ನು ಆಧಾರವಾಗಿ ಹಿಡಿದು ಓಡಿಸುತ್ತಾನೆ. ಇಲ್ಲಿ ಯಾವ ಈಡು ಬೇಗ ತನ್ನ ನಿಗದಿತ ಗುರಿ ಮುಟ್ಟುತ್ತದೆಯೋ ಅದನ್ನು ವಿಜೇತ ಎಂದು ತೀರ್ಮಾನಿಸುತ್ತಾರೆ.

ಎರಡನೆಯದು ಕಣೆಹಲಗೆಯ ಓಟ; ಇಲ್ಲಿ ಇಂಗ್ಲಿಷಿನ ಟಿ ಆಕಾರದ ಹಲಗೆಯನ್ನು ಕೋಣಗಳ ಕೊರಳಿನ ನೊಗಕ್ಕೆ ಕಟ್ಟಿರುತ್ತಾರೆ. ಕೋಣಗಳ ಓಟಗಾರ ಹಲಗೆಯ ಮಧ್ಯೆ ನಿಂತು ಹಗ್ಗ ಹಿಡಿದು ಸಮತೋಲನ ತಪ್ಪದಂತೆ ನಿಂತು ಓಡಿಸುತ್ತಾನೆ. ಕೋಣಗಳ ಬೆನ್ನ ಮೇಲೆ ಚಾವಟಿಯಿಂದ ಎರಡೇಟು ಹಾಕಿ ಕೂಗುತ್ತಾ ಗಲಾಟೆ ಮಾಡುತ್ತಾ

ಬಿರುಸಾಗಿ ಓಡಿಸುತ್ತಾರೆ, ಹೀಗೆ ಓಡಿಸುವಾಗ ಹಲಗೆಯ ಹಿಂಭಾಗದಿಂದ ಕೆಸರು ನೀರು ಆಕಾಶಕ್ಕೆ ಚಿಮ್ಮುತ್ತದೆ, ಆ ದೃಶ್ಯ ರೋಮಾಂಚನಕಾರಿಯಾದದ್ದು, ಅಲ್ಲದೆ ಹೀಗೆ ಕೆಸರು ನೀರು ಎತ್ತರಕ್ಕೆ ಚಿಮ್ಮುವುದೇ ಗೆಲುವನ್ನು ನಿರ್ಧರಿಸುವ ಮಾನದಂಡ. ಬೇಗ ಗುರಿಮುಟ್ಟುವುದನ್ನೂ ಸಹ ಗಣನೆಗೆ ತೆಗೆದುಕೊಳ್ಳುತ್ತಾರೆ.

ಮೂರನೆಯದು ಹಲಗೆಯ ಓಟ; ಇದೂ ಸಹ ಕಣೆ ಹಲಗೆಯ ರೀತಿಯಲ್ಲೇ ಇರುತ್ತದೆ.

ಮುಖ್ಯ ಸ್ಪರ್ದೆಯ ಮುನ್ನ ಪೊಲಬ್ಬು ಓಟವಿರುತ್ತದೆ. ಅಂದರೆ ಟ್ರಯಲ್ ಓಟ. ಇದು ಕೋಣಗಳಿಗೆ ಮತ್ತು ಓಟಗಾರನಿಗೆ ಪೂರ್ವ ತಯಾರಿ. ಸ್ಪರ್ದೆಯ ಸ್ಥಳವು ಕೋಣದ ಈಡಿನ ಮನೆಯವರು, ಅವರ ನೆಂಟರಿಷ್ಟರು, ಬಂಧುಗಳು, ಸ್ನೇಹಿತರು, ತೀರ್ಪುಗಾರರು, ಗಣ್ಯರು ಹಾಗೂ ನೋಡುಗರಿಂದ ಮತ್ತು ಅಂಗಡಿ-ಮುಂಗಟ್ಟು ಹಾಕಿರುವವರಿಂದ ತುಂಬಿ ಹೋಗಿರುತ್ತದೆ. ಎಲ್ಲೆಲ್ಲಿಯೂ ಜನ ಜನ ಜನ.

ಒಂದೊಂದು ಈಡು ಕೋಣಗಳು ಸ್ಪರ್ದೆಗೆ ಬಂದಾಗಲೂ ಜನರ ಹೋ ಎಂಬ ಉದ್ಘಾರ, ಗುರ್ನಾಲಿನ ಸದ್ದು, ಆಳುಗಳ ಗಡಿ-ಬಿಡಿಯ ಮಾತುಗಳು, ಕೂಗಾಟಗಳು, ಕೆಲವರು ತುಳು, ಕೆಲವರು ಕನ್ನಡ, ಇಂಕೆಲವರು ತುಳುಗನ್ನಡ ಮಾತಾಡುತ್ತಾ ಗೌಜು ಗದ್ದಲ, ಕಲರವ ಏರ್ಪಟ್ಟಿರುತ್ತದೆ. ಊರ ಪ್ರಮುಖರ, ಹೆಗ್ಗಡೆಯವರ, ಶೆಟ್ಟರ ಕೋಣಗಳು ಇಳಿದಾಗಲಂತೂ ಇದು ಮತ್ತಷ್ಟು ಜೋರು. ಕೋಣಗಳ ಮತ್ತು ಓಟಗಾರನ ಕಣ್ಣುಗಳು ಗುರಿಯತ್ತ, ವೇಗದತ್ತ ನೆಟ್ಟಿದ್ದರೆ, ನೆರೆದವರ ಕಣ್ಣುಗಳು ಅವರ ಮೇಲೆ ನೆಟ್ಟಿರುತ್ತವೆ. ವರ್ಷ ಪೂರ್ತಿ ನಡೆಸಿದ ತಯಾರಿಗೆ ಪ್ರತಿಫಲ ಸಿಗುವ ಕ್ಷಣ ಅದು.

ಓಟಗಾರ ಕೇವಲ ಕಚ್ಚೆ ಪಂಚೆ ಮತ್ತು ತಲೆಗೆ ರುಮಾಲು ಸುತ್ತಿರುತ್ತಾನೆ, ಮೈ ಹುರಿಗಟ್ಟಿರುತ್ತದೆ, ನರಗಳ ಉದ್ವೇಗದ ಬಿಗಿತ ಎದ್ದು ಕಾಣುತ್ತಿರುತ್ತದೆ, ಬಲ ಗೈಯಲ್ಲಿ ಚಾವಟಿ ಅಥವಾ ಬಡು, ಎಡಗೈಯಲ್ಲಿ ಹಗ್ಗ ಹಿಡಿದಿರುತ್ತಾನೆ. ಯಜಮಾನರ ಛಲದ ಆವಾಹನೆಯಾಗಿರುತ್ತದೆ. ಆತ ಕೋಣಗಳ ಬಾಲದ ಬುಡದ ಭಾಗಕ್ಕೆ, ನೊಗಕ್ಕೆ ಮತ್ತು ನೀರಿಗೆ ಎರಡೂ ಕೈಯಿಟ್ಟು ಸಣಮಾಡಿ ಕಣ್ಣಿಗೊತ್ತಿಕೊಳ್ಳುತ್ತಾನೆ. ತೀರ್ಪುಗಾರರ ಹಸಿರು ನಿಶಾನೆ ದೊರೆತ ಮರುಕ್ಷಣ ಅಲ್ಲಿ ಮಿಂಚಿನ ಸೆಳಕು, ಕಾಣುವುದು ಕೇವಲ ಎಡಬಲಗಳಿಗೆ ಚಿಮ್ಮುವ ಕೆಸರಿನ ತೆರೆಗಳು ಮಾತ್ರ, ಓಟದ ವೇಗಕ್ಕೆ ಅನುಗುಣವಾಗಿ ಕೆಸರಿನ ತೆರೆಗಳು ಮೇಲಕ್ಕೆದ್ದು ಕೆಳಗಿಳಿಯುತ್ತವೆ. ನೆರೆದ ಮಂದಿಯ ಬಾಯಿಂದ ಹೋ ಶಬ್ದ ಮುಗಿಯುವಷ್ಟರಲ್ಲಿ ಅವು ಗುರಿ ಮುಟ್ಟಿರುತ್ತವೆ, ಇತ್ತ ಮತ್ತೊಂದು ಜೊತೆ ಅದೇ ಉದ್ವೇಗ, ಅದೇ ನಿರೀಕ್ಷೆಯಲ್ಲಿ ಓಟಕ್ಕೆ ಸಜ್ಜು.

ಸ್ಪರ್ಧೆಗೆ ಬಂದ ಎಲ್ಲ ಈಡುಗಳ ಓಟ ಮುಗಿದ ನಂತರ ಗೆದ್ದ ಕೋಣದ ಈಡುಗಳಿಗೆ, ಓಟಗಾರನಿಗೆ ಮತ್ತು ಯಜಮಾನರಿಗೆ ಮೆಡಲ್ಲುಗಳ ವಿತರಣೆ, ಬಂಗಾರ, ಬೆಳ್ಳಿ, ಬಾಳೆಗೊನೆ ಮುಂತಾದವುಗಳ ವಿತರಣೆ, ಗೆದ್ದವರಿಗೆ ಮುಮ್ಮಡಿ ಉತ್ಸಾಹ, ಸೋತವರು ಮುಂದಿನ ವರ್ಷ ಸರಿಯಾದ ತಯಾರಿಯೊಂದಿಗೆ ಬರುವ ಉತ್ಸಾಹ. ಸೋತ ಕೆಲವು ಯಜಮಾನರು ಕೋಣಗಳನ್ನು ಗದ್ದೆ ಕೆಲಸಕ್ಕೆ ಹಚ್ಚಿ, ಅಥವಾ ಅಲ್ಲೇ ಮಾರಾಟ ಮಾಡಿ ಹೊಸ ಮರಿಗಳಿಗೆ ಹುಡುಕಾಟ ಆರಂಭಿಸುತ್ತಾರೆ. ನೆರೆದವರು ಗುಜು–ಗುಜು ಸದ್ದಿನೊಂದಿಗೆ ನಿರ್ಗಮಿಸುವುದರೊಂದಿಗೆ ಆ ದಿನದ ಕಂಬಳ ಮುಕ್ತಾಯ.

ಆದರೆ ನಾಳೆ ಮತ್ತೊಂದೆಡೆ, ಮುಂದಿನ ವಾರ ಇನ್ನೊಂದೆಡೆ ಕಂಬಳ ಇದ್ದೇ ಇರುತ್ತದೆ, ಅದೇ ಸಂಭ್ರಮ, ನಿರೀಕ್ಷೆಗಳೊಂದಿಗೆ, ಎಲ್ಲ ಕಡೆ ಮುಗಿಯಿತು ಎಂದಾದರೂ ಸಹಿತ ಮುಂದಿನ ವರ್ಷ ಇದ್ದೇ ಇರುತ್ತದೆ. ಈ ಪ್ರಕ್ರಿಯೆ ಸಾವಿರಾರು ವರ್ಷಗಳಿಂದ ನಡೆಯುತ್ತಲೇ ಬರುತ್ತಿದೆ, ಅಲ್ಪ–ಸ್ವಲ್ಪ ಬದಲಾಗಿರಬಹುದು. ಆದರೆ ಪರಂಪರೆ ಮುಂದುವರಿಯುತ್ತಿದೆ.

ಕಡುಬಡವರಿಂದ ಸಿರಿವಂತರ ತನಕ ಎಲ್ಲ ಒಂದೆಡೆ ಸೇರಿ ಸಂಭ್ರಮಿಸುವ ಕಂಬಳ ಅಪ್ಪಟ ರೈತರ ಮನರಂಜನಾ ಕ್ರೀಡೆ. ಪ್ರತಿವರ್ಷ ನವಂಬರಿನಿಂದ ಜನವರಿ ಯವರೆಗೆ ನಡೆಯುತ್ತಿರುತ್ತದೆ. ಮಳೆಗಾಲ ಹಿಂದೆ ಸರಿದು ಚಳಿಗಾಲ ಶುರುವಾಗುವ ಸಮಯದಲ್ಲಿ ಮೈ ಬಿಸಿಯೇರಿಸುವ ರೋಮಾಂಚಕಾರಿ ಕಂಬಳ, ನಗರದವರ ಕುದುರೆ ರೇಸಿನ ಎಲ್ಲ ಲಕ್ಷಣಗಳನ್ನೂ ಮೈಗೂಡಿಸಿಕೊಂಡಿರುವಂತಹುದು. ಹಣದ ಬಾಜಿಯ ಕೆಟ್ಟ ಮುಖವಿಲ್ಲದ ಅಪ್ಪಟ ಮನರಂಜನೆಯ ಕ್ರೀಡೆಯಾದ ಇದು ಕುದುರೆ ರೇಸಿಗಿಂತಲೂ ಒಂದು ಕೈ ಮೇಲೆ. ಮತ್ತು ಒಂದು ರೀತಿ ಸ್ಪೈನ್ ದೇಶದ ಗೂಳಿ ಕಾಳಗವನ್ನೂ ಸಹ ಹೋಲುತ್ತದೆ. ಆದರೆ ಅಲ್ಲಿನಂತೆ ಕ್ರೂರತೆ ಇಲ್ಲಿಲ್ಲ.

## ೩. ಆಣಿ–ಪೀಣಿ

ಹುಲ್ಲಿನ ಎಸಳುಗಳಲ್ಲಿ ಐದು ಅಥವಾ ಏಳು ಸುತ್ತಿನ ಅಂದರೆ ಹೆಡೆಗಳ ಸಿಂಬೆಯಾಕಾರದಲ್ಲಿ ಹೆಣೆದು ಅದರೊಳಗೆ ಹಣತೆಯನ್ನು ಕೂರಿಸುತ್ತಾರೆ, ಇದೇ ಆಣಿ–ಪೀಣಿ. ಇದನ್ನು ಕೈಯಲ್ಲಿ ಹಿಡಿದು ದನಕಾಯುವ ಹುಡುಗರು ಮನೆ–ಮನೆ ಸುತ್ತುತ್ತಾರೆ, ಪ್ರತಿಯೊಂದು ಮನೆಯೂ ದನ–ಕರುಗಳಿಂದ ತುಂಬಿರಲಿ, ಅವುಗಳಿಂದ ಸಮೃದ್ಧಿಯಾಗಲಿ, ಅವುಗಳಿಗೆ ಯಾವುದೇ ರೀತಿಯ ರೋಗ–ರುಜಿನಾದಿಗಳು ಬಾರದಿರಲಿ, ಆ ಮೂಲಕ ಊರಿನ ಪಶು ಸಂಪತ್ತು ಹೆಚ್ಚಿ ಸರ್ವರಿಗೂ ಒಳಿತಾಗಲಿ ಎಂಬ ಅರ್ಥ ಬರುವಂತಹ ಪದಗಳನ್ನು ಹಾಡಲಾಗುತ್ತದೆ. ಹೀಗೆ ಹಾಡುತ್ತಾ–

ಹಾಡುತ್ತಾ ಪ್ರತಿ ಮನೆ ಮುಂದೆ ನಿಂತಾಗಲೂ ಅಲ್ಲಿನ ಜಾನುವಾರುಗಳಿಗೆ ಆಣಿ–ಪೀಣಿಯ ಜ್ಯೋತಿಯಿಂದ ಬೆಳಗುತ್ತಾರೆ.

ಮುಂಗಾರಿನ ಬೆಳೆಗಳು ಕುಯಿಲಾಗಿ, ಒಕ್ಕಣೆಯೂ ಆಗಿ ಮನೆಯು ಕಾಳುಕಡಿಗಳಿಂದ ತುಂಬಿರುವಾಗ, ಹಿಂಗಾರಿಯ ಶೇಂಗ, ಸೂರ್ಯಕಾಂತಿ, ಕಡಲೆ, ಜೋಳ ಮುಂತಾದುವನ್ನು ಬಿತ್ತುವ ತಯಾರಿಯಲ್ಲಿರುವಾಗ ಆ ಮುಂಗಾರಿಯ ಸಮೃದ್ಧಿಗೆ ಕಾರಣವಾದ ಮತ್ತು ಹಿಂಗಾರಿನ ಕೆಲಸ ಕಾರ್ಯಗಳಿಗೆ ಹೆಗಲು ನೀಡಬೇಕಾದ ಜಾನುವಾರುಗಳಿಗೆ ಧನ್ಯವಾದ ಹೇಳುವ ರೀತಿಯಲ್ಲಿ ನಡೆಯುವ ಈ ಆಚರಣೆ ಅರ್ಥಪೂರ್ಣವಾದುದು.

### ಸೋಣೆಹಬ್ಬ

ದನಕಾಯುವ ಹುಡುಗರ ಕೋಲ ಈ ಸೋಣೆ ಹಬ್ಬ. ಆಟಿ ಮಾಸದಲ್ಲಿ (ಜುಲೈ–ಆಗಸ್ಟ್) ಈ ಆಚರಣೆ ನಡೆಯುತ್ತದೆ. ಒಂದು ನಿರ್ದಿಷ್ಟ ದಿನ ಸಂಜೆ ದನಗಾಹಿ ಹುಡುಗರು ಕೈಯಲ್ಲಿ ಚೆಂಡು ಹೂವಿನ ಗಿಡ, ಕೆಸುವಿನ ಗೆಡ್ಡೆ, ರುಬ್ಬುವ ಗುಂಡು, ಬೊಮ್ಮಕ್ಕನ ಗಿಡ, ಮುಸುರೆ ಬಟ್ಟೆ, ಹಲಸಿನ ಬೀಜ, ಎಳ್ಳುಂಡೆ, ಅಕ್ಕಿ ಉಂಡೆ ಮುಂತಾದುವನ್ನು ತೆಗೆದುಕೊಂಡು ಅಜ್ಜಿಯಂತೆ ಕೋಲು ಹಿಡಿದು ಮನೆ–ಮನೆ ಸುತ್ತುತ್ತಾರೆ.

## ೪. ಕಾರಹುಣ್ಣಿಮೆ ಮತ್ತು ಮಣ್ಣೆತ್ತಿನ ಅಮಾವಾಸ್ಯೆ

ಕಾರ ಹುಣ್ಣಿಮೆ ಉತ್ತರ ಕರ್ನಾಟಕದ ಮಂದಿಗೆ ವಿಶೇಷ ಹಬ್ಬ. ಜಾನುವಾರುಗಳೇ ಈ ಹಬ್ಬದ ಕೇಂದ್ರ ಬಿಂದು. ಬಯಲು ಸೀಮೆಯಲ್ಲಿ ಸಂಕ್ರಾಂತಿ ಇರುವಂತೆ ಬಿಸಿಲು ನಾಡಿನವರಿಗೆ ಕಾರ ಹುಣ್ಣಿಮೆ. ಜೂನ್ ತಿಂಗಳ ಮಳೆಗಾಲ ಕಾಲಿಡುವ ಸಮಯದಲ್ಲಿ ಈ ಹಬ್ಬ ನಡೆಯುವುದು ವಿಶೇಷ. ಅಂದು ಎತ್ತುಗಳಿಗೆ ಯಾವುದೇ ಕೆಲಸವಿಲ್ಲ. ಬೆಳಗ್ಗೆಯೇ ಮೈತೊಳೆದು ವಿವಿಧ ರೀತಿಯಲ್ಲಿ ಶೃಂಗರಿಸುತ್ತಾರೆ. ಹೀಗೆ ಶೃಂಗರಿಸಿದ ಎತ್ತುಗಳನ್ನು ಕರಿ ಹರಿಯುವ ಸಂಪ್ರದಾಯವಿದೆ. ಈ ರೀತಿ ಮಾಡುವುದರ ಹಿಂದೆ ನಿರ್ದಿಷ್ಟವಾದ ಉದ್ದೇಶವೊಂದಿದೆ, ಅದೇನೆಂದರೆ ಯಾವ ಫಸಲು ಈ ವರ್ಷ ಉತ್ತಮವಾಗಿ ಆಗುತ್ತದೆ ಎಂಬುದನ್ನು ಇದರಿಂದ ರೈತರು ತಿಳಿಯುತ್ತಾರೆ. ಹೇಗೆಂದರೆ; ಎತ್ತುಗಳ ಕರಿ ಹರಿದಾಗ ಕೆಂಪು ಬಣ್ಣದ ಎತ್ತು ಮುಂದೆ ಬಂದರೆ ಕೆಂಪು ಧಾನ್ಯಗಳು ಆ ವರ್ಷ ಉತ್ತಮವಾಗಿ ಆಗುತ್ತವೆ, ಆ ಬೆಳೆಗಳಿಗೆ ಯಾವುದೇ ಕೀಟ–ರೋಗಾದಿಗಳು ಬರುವುದಿಲ್ಲ ಎಂದರ್ಥ. ಒಂದು ವೇಳೆ ಬಿಳಿ ಎತ್ತು ಮುಂದೆ ಬಂದರೆ ಬಿಳಿ ಫಸಲು ಅಂದರೆ ಬಿಳಿ ಜೋಳ, ಕುಸುಬೆ ಮುಂತಾದವು ಉತ್ತಮ ಫಸಲು ನೀಡುತ್ತವೆ ಎಂದು ತೀರ್ಮಾನಿಸುತ್ತಾರೆ.

ಅದೇ ದಿನ ಸಂಜೆ ಬಸವನ ಪೂಜೆ ಅರ್ಥಾತ್ ಜಾನುವಾರುಗಳಿಗೆ ಪೂಜೆ ನೆರವೇರಿಸಲಾಗುತ್ತದೆ. ಅಂದು ಬೆಳಿಗ್ಗೆ ಚೆನ್ನಾಗಿ ಮೈತಿಕ್ಕಿಸಿಕೊಂಡು ಜಳಕ ಮಾಡಿದ ಜಾನುವಾರುಗಳಿಗೆ ಗೊಟ್ಟ ಹಾಕುತ್ತಾರೆ. ಗೊಟ್ಟ ಹಾಕುವುದು ಅತ್ಯಂತ ವಿಶೇಷವಾದ ಕ್ರಿಯೆ. ಎಳ್ಳೆಣ್ಣೆ ಮತ್ತು ಕೋಳಿ ಮೊಟ್ಟೆಯನ್ನು ಹದವಾಗಿ ಮಿಶ್ರಣ ಮಾಡಿ ಬಿದಿರಿನ ಕೊಳವೆಯಿಂದ ಕುಡಿಸುತ್ತಾರೆ. (ಗೊಟ್ಟ: ಬಿದಿರಿನಲ್ಲಿ ಮಾಡಿದ ಕೊಳವೆ, ದನಗಳಿಗೆ ಯಾವುದೇ ದ್ರವ ರೂಪದ ಪದಾರ್ಥ ಕುಡಿಸಲು ಗೊಟ್ಟ ಬೇಕೇ ಬೇಕು. ದನಗಳ ಗಂಟಲಿಗೆ ಗೊಟ್ಟದ ತುದಿಯನ್ನು ಇಟ್ಟು ಕುಡಿಸಲು ಅನುಕೂಲವಾಗುವಂತೆ ಚೂಪಗೆ ಮಾಡಿರುತ್ತಾರೆ.) ದನಗಳಿಗೆ ಇದನ್ನು ಕುಡಿಸುವುದರಿಂದ ಕಫ, ಪಿತ್ತದೋಷ ಮುಂತಾದ ಖಾಯಿಲೆಗಳು ನಿವಾರಣೆಯಾಗುತ್ತವೆಂದು ರೈತರ ನಂಬಿಕೆ. ಮಳೆಗಾಲದ ಆರಂಭದ ಕಾಲವಾದ್ದರಿಂದ ಈ ರೀತಿ ಮಾಡುವ ಮೂಲಕ ಜಾನುವಾರುಗಳಿಗೆ ಪುಷ್ಟಿ ನೀಡುತ್ತಾರೆ. ಹೀಗೆ ಒಂದೇ ಆಚರಣೆಯ ಮೂಲಕ ಹಲವಾರು ಉದ್ದೇಶಗಳನ್ನು ಈಡೆರಿಸಿಕೊಳ್ಳುವ ಜನಪದರ ಜ್ಞಾನ ಹಾಗೂ ಚಾತುರ್ಯ ಮೆಚ್ಚುವಂಥದ್ದು.

ಕಾರಹುಣ್ಣಿಮೆಯಾದ ನಂತರ ಬರುವ ಅಮಾವಾಸ್ಯೆಯನ್ನು ಉತ್ತರ ಕರ್ನಾಟಕದಲ್ಲಿ ಮಣ್ಣೆತ್ತಿನ ಅಮಾವಾಸ್ಯೆ ಎಂದು ಕರೆಯುತ್ತಾರೆ. ಕಾರ ಹುಣ್ಣಿಮೆಯಂದು ಜೀವಂತ ಜಾನುವಾರುಗಳಿಗೆ ಪೂಜೆ-ಪುನಸ್ಕಾರಗಳು ನಡೆದರೆ ಮಣ್ಣೆತ್ತಿನ ಅಮಾವಾಸ್ಯೆಯಂದು ಮಣ್ಣಿನಲ್ಲಿ ಎತ್ತುಗಳನ್ನು ಮಾಡುತ್ತಾರೆ. ಈ ಮಣ್ಣಿನ ಎತ್ತುಗಳನ್ನು ಪೂಜಿಸಿ, ಊರೆಲ್ಲಾ ಮೆರವಣಿಗೆ ಮಾಡಿ ನಂತರ ನೀರಿನಲ್ಲಿ ವಿಸರ್ಜನೆ ಮಾಡಲಾಗುತ್ತದೆ.

ಬಾಗಲಕೋಟೆ ಭಾಗದಲ್ಲಿ ಕಾರ ಹುಣ್ಣಿಮೆಗೆ ಹೊನ್ನುಗ್ಗಿ ದಿವಸ ಎಂತಲೂ ಕರೆಯುತ್ತಾರೆ. ಇಲ್ಲಿ ಹಬ್ಬದ ದಿವಸ ಪುಂಡಿ ನಾರಿನಲ್ಲಿ ಹಗ್ಗಗಳನ್ನು ತಯಾರಿಸಿ ಅವುಗಳನ್ನು ವಿವಿಧ ಬಣ್ಣಗಳಲ್ಲಿ ಅದ್ದಿ ಎತ್ತುಗಳಿಗೆ ಕಟ್ಟುತ್ತಾರೆ. ಅಂದು ಸಂಜೆ ಕರಿಹರಿಯುವ ಕಾರ್ಯಕ್ರಮ, ಈ ಭಾಗದಲ್ಲಿ ಕರಿಹರಿಯುವುದು ಸ್ವಲ್ಪ ಭಿನ್ನ. ಗ್ರಾಮದಲ್ಲಿರುವ ಕೆಂಪು ಮತ್ತು ಬಿಳಿ ಬಣ್ಣದ ಎರಡು ಎತ್ತುಗಳನ್ನು ಕರೆತಂದು ಅವುಗಳಿಗೆ ಗೌಡ ಮತ್ತು ಕುಲಕರ್ಣಿಯವರ ಎತ್ತುಗಳೆಂದು ಹೆಸರಿಡುತ್ತಾರೆ. ಕೆಂಪು ಬಣ್ಣದ ಎತ್ತು ಮುಂಗಾರಿ ಮತ್ತು ಬಿಳಿ ಬಣ್ಣದ ಎತ್ತು ಹಿಂಗಾರಿಯ ಸಂಕೇತ. ಕರಿ ಹರಿಯುವಾಗ ಕೆಂಪು ಎತ್ತು ಮುಂದೆ ಬಂದರೆ ಮುಂಗಾರಿ ಹೆಚ್ಚು ಮತ್ತು ಬಿಳಿ ಎತ್ತು ಮುಂದೆ ಬಂದರೆ ಹಿಂಗಾರು ಉತ್ತಮ ಅನ್ನುವುದು ರೈತರ ಅನುಭವದ ಮಾತು.

ಕಾರ ಹುಣ್ಣಿಮೆಯ ಮರುದಿವಸವನ್ನು ಕರಿದಿನ ಎನ್ನುತ್ತಾರೆ. ಅಂದು ಕೋಡಬಳಗಿ ಇಲ್ಲವೇ ತಾಲಿಮ ಪಟ್ಟಿ ಎಂಬ ತಿನಿಸುಗಳನ್ನು ತಯಾರಿಸಿ ಎಲ್ಲರೂ ಹಂಚಿ ತಿನ್ನುವುದು ಸಂಪ್ರದಾಯ. ಈ ದಿನ ಎತ್ತುಗಳ ಕೊಂಬುಗಳಿಗೆ ಕೆಂಪು ಬಣ್ಣ ಬಳಿದು ಮೆರವಣಿಗೆ ಮಾಡುವ ಕ್ರಿಯೆಗೆ ಒಂದು ಕತೆಯನ್ನು ಹೇಳಲಾಗುತ್ತದೆ.

ಏನೆಂದರೆ; ಪರಮೇಶ್ವರ ಅರ್ಥಾತ್ ಶಿವನು ಕಾರಹುಣ್ಣಿಮೆ ದಿವಸ ನಂದಿ ಅವತಾರವನ್ನು ತಾಳಿ ರಾಕ್ಷಸರನ್ನು ಕೋಡುಗಳಿಂದ ಸಂಹಾರ ನಡೆಸಿ ರಕ್ತ ಸಿಕ್ತ ಕೋಡುಗಳ ಸಮೇತ ಬರುತ್ತಾನೆ. ಕೋಡುಗಳಿಗೆ ರಾಕ್ಷಸರ ಕರುಳುಗಳು ಸುತ್ತಿಕೊಂದಿರುತ್ತವೆ. ಆ ನೆನಪಿಗಾಗಿ ಕಾರ ಹುಣ್ಣಿಮೆಯಂದು ಎತ್ತುಗಳ ಕೋಡಿಗೆ ಕೆಂಪು ಬಣ್ಣ ಹಚ್ಚುತ್ತಾರೆ ಮತ್ತು ಕೋಡು ಬಳೆಗಳನ್ನು ಹಾಕುತ್ತಾರೆ. ಕೆಲವರು ಬಲಿ ಚಕ್ರವರ್ತಿಯನ್ನು ಸಂಹಾರ ಮಾಡಿದ ಎಂತಲೂ ಹೇಳುವುದನ್ನು ಕಾಣಬಹುದು.

ಪಾಡ್ಯದ ದಿವಸ ಮಾಡುವ ಜಾನುವಾರುಗಳ ಪೂಜೆ ಮತ್ತೂ ವಿಶೇಷವಾದುದು. ಅಂದು ಎತ್ತುಗಳ ಮೈತೊಳೆದು ಮನೆಯನ್ನೆಲ್ಲಾ ಸಾರಿಸಿ, ಸಗಣಿಯಲ್ಲಿ ಹಟ್ಟೆವ್ವನನ್ನು ಮಾಡಿ ಕೂರಿಸಿ ಕಸಬರಿಗೆಯನ್ನು ಪೂಜಿಸುತ್ತಾರೆ.

ಈ ಆಚರಣೆಗಳಿಗೆಲ್ಲ ನಿರ್ದಿಷ್ಟ ಕಾರಣಗಳಿದ್ದೇ ಇರುತ್ತದೆ. ಅದರೆ ಅದನ್ನು ಸ್ಪಷ್ಟವಾಗಿ ತಿಳಿಸುವ ತಲೆಗಳು ಇಲ್ಲವಾಗಿವೆ. ಅದೊಂದು ಬಹುದೊಡ್ಡ ಕೊರತೆ.

ಧಾರವಾಡದ ಕಲಘಟಗಿ ಭಾಗದಲ್ಲಿ ದೀಪಾವಳಿ ಅಮಾವಾಸ್ಯೆಯ ಮೂರನೇ ದಿವಸ ಬಲೀಂದ್ರನನ್ನು ಪೂಜೆ ಮಾಡಿ ಮನೆಯಲ್ಲಿರುವ ಕುಡುಗೋಲು, ಹಗ್ಗ, ಕಣ್ಣಿ, ಕಸಬರಿಗೆ, ಕುಂಬಳಕಾಯಿ, ಮೋಟಿ, ವನಕೆ ಮುಂತಾದ ಸಲಕರಣೆಗಳನ್ನು ಇಟ್ಟು ಪೂಜಿಸುತ್ತಾರೆ.

## ೫. ಹಾಲೋಕುಳಿ

ತಮ್ಮ ಕುರಿ–ಮೇಕೆಗಳಿಗೆ ನೀಲಿ ನಾಲಿಗೆ ರೋಗ ಬಾರದಿರಲಿ ಎಂಬ ಉದ್ದೇಶದಿಂದ ಗ್ರಾಮದ ವೆಂಕಲ ಕುಂಟಪ್ಪ ದೇವರಿಗೆ ಮಾಡುವ ಹಾಲೋಕುಳಿ ಹಬ್ಬ ಕುತೂಹಲಕಾರಿಯಾದುದು. ಕುರಿಗಾರರಾದ ಗೊಲ್ಲ ಸಮುದಾಯದವರು ಇದನ್ನು ಆಚರಿಸುತ್ತಾರೆ.

ಉತ್ತರ ಕರ್ನಾಟಕದ ಕೊಪ್ಪಳ ಜಿಲ್ಲೆ ಯಲಬುರ್ಗ ತಾಲ್ಲೂಕಿನ ಚಿಕ್ಕ ವೆಂಕಲ ಕುಂಟೆ ಗ್ರಾಮದಲ್ಲಿ ಪ್ರತಿ ವರ್ಷ ಫೆಬ್ರವರಿ ಮಾಸದಲ್ಲಿ ನಡೆಯುವ ಜಾತ್ರೆಯ ಸಂದರ್ಭದಲ್ಲಿ ಈ ಅಚರಣೆ ನಡೆಯುತ್ತದೆ. ಈ ಆಚರಣೆಯ ವಿಶೇಷವೆಂದರೆ ಒಂದು ವಾರದಷ್ಟು ಹಳೆಯ ಮತ್ತು ವಾಸನೆ ಹೊಡೆಯುವ ಹಾಲನ್ನು ಹರಕೆ ರೂಪದಲ್ಲಿ ದೇವರಿಗೆ ಅರ್ಪಿಸುವುದು. ಸುತ್ತ–ಮುತ್ತಲ ಗ್ರಾಮದವರೆಲ್ಲರೂ ಇದರಲ್ಲಿ ಭಾಗವಹಿಸುತ್ತಾರೆ.

ಜಾತ್ರೆ ಒಂದು ವಾರ ಇದೆ ಎನ್ನುವಾಗಲೇ ಊರಿನ ಗೊಲ್ಲರು ತಮ್ಮ–ತಮ್ಮ ಮನೆಗಳಲ್ಲಿ ಕುರಿ,ಮೇಕೆ ಹಾಗೂ ಹಸುಗಳ ಹಾಲನ್ನು ಕಲೆ ಹಾಕಲು ಪ್ರಾರಂಭಿಸುತ್ತಾರೆ. ಜಾತ್ರೆಯ ಹಿಂದಿನ ದಿವಸವೇ ಎಲ್ಲ ಕುಟುಂಬದವರೂ ನೂರಾರು ಚಕ್ಕಡಿಗಳಲ್ಲಿ

ಆಗಮಿಸಿ ದೇವಾಲಯದ ಅಕ್ಕ–ಪಕ್ಕ ಬಿಡಾರ ಹೂಡುತ್ತಾರೆ. ಜಾತ್ರೆಯ ದಿವಸ ಮದ್ಯಾಹ್ನದ ಹೊತ್ತಿಗೆ ಹರಕೆ ತೀರಿಸುವ ಕ್ರಿಯೆ ಆರಂಭ. ಗೊಲ್ಲ ಸಮುದಾಯದ ಯುವಕರ ಹಿಂಡು ಕೇವಲ ಕಚ್ಚೆ ಪಂಚೆಯೊಂದನ್ನು ಮಾತ್ರ ಉಟ್ಟು, ಹೆಗಲಲ್ಲಿ, ಕೈಯಲ್ಲಿ ಹುಳಿ ಹಾಲಿನ ಕಾವಡಿ ಹೊತ್ತು ದೇವಾಲಯದ ಸುತ್ತಲೂ ಹಾಲು ಚೆಲ್ಲುತ್ತಾ ಬರುತ್ತಾರೆ. ಆ ಹಾಲಿನ ದುರ್ನಾತ ಮತ್ತು ಅದು ಮೈಮೇಲೆ ಬೀಳುವುದನ್ನು ತಪ್ಪಿಸಿಕೊಳ್ಳಲು ಜಾತ್ರೆಗೆ ಬಂದಿರುವ ಇತರರು ಈ ಗೊಲ್ಲರ ಹಿಂದಿನ ಹೊಯ್ ಹೊಯ್ ಸದ್ದು ಕೇಳಿದ ತಕ್ಷಣ ದೂರ ಸರಿಯುತ್ತಾರೆ. ಸಾವಿರಾರು ಲೀಟರ್ ಹಾಲು ಹೀಗೆ ಹರಕೆ ತೀರಿಸಲು ಖರ್ಚಾಗುತ್ತದೆ.

ಈ ಹಾಲೋಕುಳಿ ಹರಕೆ ನೂರಾರು ವರ್ಷದಿಂದ ಬಳಕೆಯಲ್ಲಿದೆ. ಹಿಂದೆ ಗೊಲ್ಲರ ಹಟ್ಟಿಗಳ ದನ–ಕರುಗಳಿಗೆ ರೋಗ ತಗುಲಿ ಹಾಲುವ ಕರೆಯುವ ಬದಲಿಗೆ ರಕ್ತ ಕರೆಯುತ್ತಿದ್ದವಂತೆ ಆಗ ಗೊಲ್ಲರ ದೊಡ್ಡಿಯ ಹಿರಿಯರೊಬ್ಬರ ಮೈಮೇಲೆ ಚಿಕ್ಕ ವೆಂಕಲಕುಂಟಪ್ಪ ಬಂದು ಹಾಲೋಕುಳಿ ಮಾಡಿದರೆ ಈ ಪೀಡೆಯಿಂದ ಮುಕ್ತಿ ಎಂದು ಹೇಳಿದರಂತೆ ಅಂದಿನಿಂದ ಈ ಆಚರಣೆ ನಡೆಯುತ್ತಿದೆ. ಯಾವಾಗಲೂ ಗೊಲ್ಲರ ಹಾಲೋಕುಳಿ ಮುಗಿದ ನಂತರವೇ ತೇರು ಎಳೆಯಲಾಗುತ್ತದೆ.

### ಕೊಕ್ಕಡ ಕೋರಿ

ದಕ್ಷಿಣ ಕನ್ನಡ ಜಿಲ್ಲೆ ಬೆಳ್ತಂಗಡಿ ತಾಲ್ಲೂಕಿನ ಕೊಕ್ಕಡ ಗ್ರಾಮದಲ್ಲಿ ಒಂದು ದಿನಕಾಲ ಬೃಹತ್ ದನಗಳ ಜಾತ್ರೆ ನಡೆಯುತ್ತದೆ. ಕೊಕ್ಕಡ ಎಂಬುದು ಊರಿನ ಹೆಸರಾದರೆ, ಕೋರಿ ತುಳು ಪದ, ಹಾಗೆಂದರೆ ಹೂಟೆ ಮಾಡಿದ ಗದ್ದೆ ಎಂದರ್ಥ.

ಈ ಜಾತ್ರೆಯಲ್ಲಿ ಜಾನುವಾರುಗಳ ಕೊಡು–ಕೊಳ್ಳುವಿಕೆಯ ವಹಿವಾಟೇನೂ ನಡೆಯುವುದಿಲ್ಲ. ಜಾನುವಾರುಗಳ ಮಾಲೀಕರು ತಮ್ಮ ಜಾನುವಾರುಗಳಿಗೆ ಕಾಯಿಲೆ ಆದರೆ ಈ ಜಾತ್ರೆಗೆ ಹೊಡೆದುಕೊಂಡು ಬಂದು ಕೋರಿ ಗದ್ದೆಗೆ ಇಳಿಸುತ್ತೇನೆ ಅಥವಾ ಒಂದು ಹಿಡಿ ಹಸಿರು ಸೊಪ್ಪನ್ನು ಕೋರಿ ಗದ್ದೆಗೆ ಹಾಕುತ್ತೇನೆ ಎಂದು ಹರಕೆ ಹೊತ್ತಿರುತ್ತಾರೆ. ಹೀಗೆ ಹರಕೆ ಹೊತ್ತರೆ ಅವುಗಳಿಗೆ ಬಂದ ಕಾಯಿಲೆ ವಾಸಿಯಾಗುತ್ತದೆ ಎಂಬ ಬಲವಾದ ನಂಬಿಕೆ ಇದೆ. ಈ ಹರಕೆಯನ್ನು ನೆರವೇರಿಸುವ ಸಲುವಾಗಿ ಒಂದು ನಿರ್ದಿಷ್ಟ ದಿನದಂದು ಎಲ್ಲರೂ ಇಲ್ಲಿ ಸೇರುತ್ತಾರೆ.

❑

ಅಧ್ಯಾಯ ಆರು

# ತಿಪ್ಪಮ್ಮ ದೇವರು

## ತಿಪ್ಪೆಗಳ ಕುರಿತಾದ ಆಚರಣೆಗಳು

*ಬೇಸಾಯಕ್ಕೆ ಅತಿ ಮುಖ್ಯವಾಗಿ ಬೇಕಾದ ಅಂಶಗಳಲ್ಲಿ ಗೊಬ್ಬರಕ್ಕೆ ಹೆಚ್ಚಿನ ಪ್ರಾಶಸ್ತ್ಯವಿದೆ. ನಮ್ಮ ಹಿರಿಯರು ಬೇಸಾಯಕ್ಕೆ ಮಣ್ಣು, ನೀರು, ಬೀಜಗಳಿಗೆ ಎಷ್ಟು ಮಹತ್ವ ನೀಡಿದ್ದರೋ ಗೊಬ್ಬರಕ್ಕೂ ಅಷ್ಟೇ ಪ್ರಾಮುಖ್ಯ ನೀಡಿದ್ದರು. ಗೊಬ್ಬರ ಎಂದರೆ ಈಗ ಸಾವಯವ ಗೊಬ್ಬರ ಮತ್ತು ರಾಸಾಯನಿಕ ಗೊಬ್ಬರ ಎಂದು ಎರಡು ವಿಧಗಳಿವೆ, ಆದರೆ ನಮ್ಮ ಹಿರಿಯರಿಗೆ ಗೊಬ್ಬರ ಎಂದರೆ ಅದು ತಿಪ್ಪೆ ಗೊಬ್ಬರ ಅರ್ಥಾತ್ ಸಗಣಿ ಗೊಬ್ಬರ. ಮಲೆನಾಡಿನಲ್ಲಿ ಇದನ್ನೇ ಹಟ್ಟಿ ಗೊಬ್ಬರ ಎನ್ನುವರು.*

*ಬೇಸಾಯದ ಅಂಗಗಳಾದ ಮಣ್ಣು, ನೀರು, ಬೀಜ ಮುಂತಾದವುಗಳಿಗೆ ಯಾವ ರೀತಿ ವಿವಿಧ ಆಚರಣೆಗಳ ಮೂಲಕ ಧನ್ಯವಾದ ಅರ್ಪಿಸಲಾಗುತ್ತದೆಯೋ ಅದೇರೀತಿ ತಿಪ್ಪೆಗೂ ಸಹ ಹಲವಾರು ವಿಧಾನಗಳ ಮೂಲಕ ಗೌರವ ಸಲ್ಲಿಸಲಾಗುತ್ತದೆ. ಗಮನಿಸಬೇಕಾದ ವಿಷಯವೆಂದರೆ ಪ್ರತಿಯೊಂದು ಕೆಲಸದ ಆರಂಭಕ್ಕೆ ಬೆನಕನನ್ನು ಪೂಜಿಸುವುದು ರೈತರ ಸಂಪ್ರದಾಯ. ಆ ಬೆನಕನನ್ನು ತಯಾರಿಸುವುದು ಸಗಣಿಯಲ್ಲಿ, ಸಗಣಿ ಫಲವತ್ತತೆಯ ಸಂಕೇತ. ಅಂದರೆ ಈ ರೀತಿ ಸಗಣಿಯಲ್ಲಿ ಬೆನಕನನ್ನು ಮಾಡಿ ಪೂಜಿಸುವ ಮೂಲಕ ತಮ್ಮ ಗೌರವವನ್ನು ಸೂಚಿಸುತ್ತಾರೆ.*

*ಇನ್ನು ತಿಪ್ಪೆಯನ್ನೇ ಪೂಜಿಸುವ ವಿಶಿಷ್ಟ ಆಚರಣೆಗಳು ನಮ್ಮ ನಾಡಿನಲ್ಲಿವೆ. ಕೆಲವುಗಳ ವಿವರ ಇಲ್ಲಿದೆ.*

### ೧. ದೀಪಾವಳಿಯಂದು ತಿಪ್ಪೆ ಪೂಜೆ

ಮಲೆನಾಡಲ್ಲಿ ದೀಪಾವಳಿ ತಿಂಗಳು ಬಂತೆಂದರೆ ಎಲ್ಲೆಲ್ಲೂ ಹಸಿರೇ ಹಸಿರು. ಅದರ ಜೊತೆಗೆ, ಬಿರುಸಾಗಿ ಅಲ್ಲದಿದ್ದರೂ ಸಹ ಬಿಟ್ಟೂ ಬಿಡದಂತೆ ಸುರಿಯುವ ಮಳೆ, ಸಾವಧಾನವಾಗಿ ಹರಿಯುವ, ಎಳೆನೀರಿನಂತಹ ನೀರು. ಇಂತಹ ಶುಭ್ರ ವಾತಾವರಣದಲ್ಲಿ ನಡೆಯುವ ಸಂಭ್ರಮ, ಸಡಗರದದ ಭೂಮಿ ಹುಣ್ಣಿಮೆಯ ಬಗ್ಗೆ

ಈಗಾಗಲೇ ಪ್ರಸ್ತಾಪಿಸಲಾಗಿದೆ. ಅದರ ಜೊತೆಗೆ ಮಲೆನಾಡಿಗರು ಆಚರಿಸುವ ಮತ್ತೊಂದು ವಿಶೇಷ ಆಚರಣೆ ತಿಪ್ಪೆಪೂಜೆ. ದೀಪಾವಳಿಯಂದು ಇಲ್ಲಿ ತಿಪ್ಪೆಗಳಿಗೂ ಸಂಭ್ರಮ

ತಿಪ್ಪೆಗುಂಡಿ ಎಂದರೆ ನಗರವಾಸಿಗಳು ಮೂಗು ಮುಚ್ಚಿಕೊಳ್ಳುತ್ತಾರೆ. ಆದರೆ ಕೃಷಿಕರು ಕೈಮುಗಿಯುತ್ತಾರೆ. ಏಕೆಂದರೆ ಬೆಳೆಗೆ ಜೀವಾಳವಾದ ತಿಪ್ಪೆಗಳನ್ನು ಗೌರವದಿಂದ ಕಾಣುವ ಮತ್ತು ಪೂಜಿಸುವ ಸಂಪ್ರದಾಯ ಅವರದು.

ದೀಪಾವಳಿಯಂದು ಸಾಮಾನ್ಯವಾಗಿ ಹಳ್ಳಿ ಪಟ್ಟಣವೆನ್ನದೆ ಎಲ್ಲೆಲ್ಲೂ ಪಟಾಕಿಗಳ ಸದ್ದು, ಕಮಟು ಹೊಗೆ ಮತ್ತು ಕಾಗದದ ಚೂರುಗಳದೇ ಕಾರುಬಾರು. ಆದರೆ ರಾಜ್ಯದ ಹಾಸನ, ಮಲ್ಲಿಪಟ್ಟಣ, ಸೋಮವಾರ ಪೇಟೆ ಭಾಗಗಳ ಕಡೆ ಹೋದರೆ ಇದಕ್ಕಿಂತ ತುಸು ಭಿನ್ನ ದೃಶ್ಯ ನೋಡಬಹುದು. ಅಲ್ಲಿಯೂ ಸಹ ಪಟಾಕಿ ಸದ್ದಿರುತ್ತದೆ. ಅದರ ಜೊತೆಗೆ ಸಾಮೂಹಿಕ ತಿಪ್ಪೆ ಪೂಜೆಯಂತಹ ವಿಶಿಷ್ಟ ಆಚರಣೆಯೂ ಇರುತ್ತದೆ.


ನಮ್ಮ ಹಿರಿಯರಿಗೆ ಸಗಣಿ, ಗೊಬ್ಬರ ಎಂದರೆ ಮಹಾ ಗೌರವ. ಎಲ್ಲಿಯಾದರೂ ಒಂದು ಗುಡ್ಡೆ ಸಗಣಿ ಕಂಡರೂ ತಂದು ಹೊಲಕ್ಕೆ ಹಾಕುತ್ತಾರೆ. ಮನೆಗೆ ಹತ್ತಿರದಲ್ಲಿ ಇಲ್ಲವೇ ಊರಿಗೆ ಸಮೀಪದಲ್ಲಿಯೇ ತಿಪ್ಪೆ ಇರುತ್ತವೆ. ತಿಪ್ಪೆಗೆ ಯಾವುದೇ ಕಾರಣಕ್ಕೂ ಗಾಜು, ಕಬ್ಬಿಣಗಳು ಸೇರದಂತೆ ಎಚ್ಚರಿಕೆ ವಹಿಸುತ್ತಾರೆ. ವರ್ಷಕ್ಕೆರಡು ಬಾರಿಯಾದರೂ ತಿಪ್ಪೆಗೆ ಕಾಡು ಸೊಪ್ಪು ಹಾಕುವುದು, ತಿಪ್ಪೆಯನ್ನು ಮಗುಚಿ ಹಾಕುವುದು ಮಾಡುತ್ತಾರೆ. ತಿಪ್ಪೆ ಚೆನ್ನಾಗಿ ಕಳಿಯಲಿ, ಮಾಗಲಿ, ಫಲವತ್ತಾಗಲಿ ಎಂಬುದು ಇದರ ಹಿಂದಿನ ಉದ್ದೇಶ.



ಹೆಣ್ಣುಮಕ್ಕಳಿಂದ ತಿಪ್ಪೆಗೆ ಪೂಜೆ

ನಮ್ಮ ನಾಡಿನ ಎಲ್ಲಾ ಭಾಗದ ರೈತರೂ ಸಹ ಒಂದಲ್ಲಾ ಒಂದು ಸಲ ತಿಪ್ಪೆಯನ್ನು ಪೂಜಿಸುತ್ತಾರೆ. ಕೆಲವರು ತಿಪ್ಪೆಯಿಂದ ಮೊದಲ ಬಾರಿ ಗೊಬ್ಬರ ತುಂಬುವಾಗ ಪೂಜಿಸಿದರೆ ಮತ್ತೆ ಕೆಲವರು ಗೊಬ್ಬರವೆಲ್ಲಾ ಖಾಲಿಯಾದ ತಿಪ್ಪೆಗೆ ಪೂಜಿಸುವುದನ್ನು ಕಾಣುತ್ತೇವೆ. ಆದರೆ ಇವೆಲ್ಲವುಗಳಿಗಿಂತ ಹಾಸನ ಪ್ರದೇಶದ ಜನರು ದೀಪಾವಳಿಯಂದು ಮಾಡುವ ಸಾಮೂಹಿಕ ತಿಪ್ಪೆ ಪೂಜೆ ಅತ್ಯಂತ ವಿಶಿಷ್ಟವಾದುದು. ಅದರ ವಿವರವನ್ನು ಇಲ್ಲಿ ನೀಡಲಾಗಿದೆ.

ಹಬ್ಬದ ಹಿಂದಿನ ದಿನವೇ ಗಂಡಸರು ತಮ್ಮ-ತಮ್ಮ ತಿಪ್ಪೆಗಳನ್ನು ಅಚ್ಚುಕಟ್ಟಾಗಿ ಕೆತ್ತಿ, ಏರು ಹಾಕಿ, ಮೇಲೆ ಒಂದು ಪದರ ಮಣ್ಣು ಹಾಕಿ ಒಪ್ಪ ಮಾಡುತ್ತಾರೆ. ಕೆಲವರು ಇಡೀ ತಿಪ್ಪೆಯನ್ನು ಬೆಲ್ಲದ ಅಚ್ಚಿನಂತೆ ಆಕಾರ ನೀಡುತ್ತಾರೆ. ಹಬ್ಬದ ದಿನ ಹೆಂಗಸರು ತಿಪ್ಪೆಯ ಮೇಲೆ ಹಸಿ ಸಗಣಿಯಲ್ಲಿ ಗದ್ದಿಗೆ (ಚೌಕಾಕಾರದ ದಿಂಡು) ಮಾಡಿ ಚೆಂಡು



ಎಲ್ಲ ತಿಪ್ಪೆಗಳಿಗೂ ಏಕಕಾಲಕ್ಕೆ ಪೂಜೆ

ಹೂ, ಸೇವಂತಿಗೆ ಮುಂತಾದವುಗಳಿಂದ ಸಿಂಗರಿಸುತ್ತಾರೆ. ನಡೂ ಮಧ್ಯಕ್ಕೆ ಸರಿಯಾಗಿ ಕೇದಿಗೆ, ಮುತ್ತುಗ, ತುಳಸಿ ಮುಂತಾದ ಹೂವು, ಗರಿ ಹಾಗೂ ಸೊಪ್ಪುಗಳನ್ನು ನಿಲ್ಲಿಸುತ್ತಾರೆ. ಇದಿಷ್ಟು ಬೆಳಗಿನ ಕಾರ್ಯಕ್ರಮ. ಅದೇ ದಿನ ಸಂಜೆ ಎಲ್ಲಾ ಮನೆಯವರೂ ತಿಪ್ಪೆ ಹಾಳಕ್ಕೆ (ಸಾಮೂಹಿಕ ತಿಪ್ಪೆಗಳಿರುವ ಜಾಗ) ತಲುಪಿ ತಮ್ಮ-ತಮ್ಮ ತಿಪ್ಪೆಗಳಿಗೆ ಎಡೆ ಹಾಕಿ ಹಾಲು ತುಪ್ಪ ಬಿಟ್ಟು ತಿಪ್ಪೆ ಸಮೃದ್ಧವಾಗಿ ಬೆಳೆಯಲು ಬೇಡಿಕೊಳ್ಳುತ್ತಾರೆ. ಹಿಂದೆ ಈ ಆಚರಣೆ ಹೀಗಿರಲಿಲ್ಲವಂತೆ. ಇಡೀ ಗ್ರಾಮದವರು ತಿಪ್ಪೆಯನ್ನು ಬೆಲ್ಲದ ಅಚ್ಚಿನಂತೆ ಮಾಡಿ, ಚಪ್ಪರ ಹಾಕಿ ಆಚರಿಸುತ್ತಿದ್ದರೆಂದು ಮಲ್ಲಿಪಟ್ಟಣದ ಹಿರಿಯರು ನೆನಪಿಸಿಕೊಳ್ಳುತ್ತಾರೆ.

ತಿಪ್ಪೆಯೂ ನಮ್ಮಂತೆ ಹೆಣ್ಣು, ವರ್ಷಕ್ಕೊಮ್ಮೆ ಅವಳ ಉಡಿ ತುಂಬಿ ಪೂಜಿಸಿದರೆ ನಮಗೆಲ್ಲಾ ಒಳ್ಳೆಯದು ಎಂಬುದು ಹೆಂಗಸರ ಅಭಿಪ್ರಾಯವಾದರೆ, ಗಂಡಸರು 'ಸುಮ್ಮನೆ ತಿಪ್ಪೆಗೆ ಮಣ್ಣು, ಸೊಪ್ಪು ಹಾಕಿ ತಿರುವಿ ಹಾಕಿ ಎಂದರೆ ಯಾರೂ ಗಂಭೀರವಾಗಿ ಪರಿಗಣಿಸುವುದಿಲ್ಲ. ಅದನ್ನೇ ಒಂದು ಹಬ್ಬದ ರೀತಿ ಆಚರಿಸಿದರೆ ಅದಕ್ಕೊಂದು ಮೌಲ್ಯ ಇರುತ್ತದೆ ಎಂಬ ನಂಬಿಕೆಯಿಂದ ಹಿರಿಯರು ಈ ರೀತಿ ತಂತ್ರ ಹೂಡಿರಬಹುದು' ಎನ್ನುತ್ತಾರೆ.

ತಿಪ್ಪೆ ಪೂಜೆಯಿಂದ ಹಲವಾರು ಅನುಕೂಲಗಳಿವೆ. ಇಡೀ ತಿಪ್ಪೆಯನ್ನು ಮಗುಚಿ ಹಾಕುವುದರಿಂದ ಮೇಲಿನ ಭಾಗ ಕೆಳಗೆ ಹೋಗಿ ಪರಿಪೂರ್ಣವಾಗಿ ಮಾಗಲು ಅನುಕೂಲವಾಗುತ್ತದೆ. ಪೂಜೆಯ ನೆಪದಲ್ಲಿ ತಿಪ್ಪೆಯ ಮೇಲೆ ಸೊಪ್ಪಿನ ಚಪ್ಪರ ಹಾಕುವುದರಿಂದ ಗೊಬ್ಬರವನ್ನು ಬಿಸಿಲಿನಿಂದ ರಕ್ಷಿಸಿದಂತಾಗುತ್ತದೆ. ನೈವೇದ್ಯ ಮಾಡುವಾಗ ಬಿಡುವ ಹಾಲು, ತುಪ್ಪ, ಎಳನೀರು ಮುಂತಾದುವು ಅಪಾರ ಸೂಕ್ಷ್ಮಾಣು ಜೀವಿಗಳನ್ನು ಆಕರ್ಷಿಸಿ, ದ್ವಿಗುಣಗೊಳಿಸಿ ಅವುಗಳ ಕಾರ್ಯ ಚಟುವಟಿಕೆಯನ್ನು ಹೆಚ್ಚಿಸುತ್ತವೆ.

ಭೂಮಿ, ನೀರು, ಗಾಳಿಯನ್ನು ದೈವವೆಂದು ಪೂಜಿಸುವ ನಮ್ಮ ರೈತರು ತಿಪ್ಪೆಗೂ ಅಷ್ಟೇ ಗೌರವ ನೀಡಿರುವುದು ಅವರ ಶ್ರೀಮಂತ ಸಂಸ್ಕೃತಿಗೆ ಸಾಕ್ಷಿ.

**ಖಾಲಿಯಾದ ತಿಪ್ಪೆಗೆ ಪೂಜೆ:** ತುಂಬಿದ ತಿಪ್ಪೆಗೆ ಮಲೆನಾಡಿನಲ್ಲಿ ಈ ರೀತಿ ಪೂಜಿಸಿದರೆ ಬಯಲು ಸೀಮೆಯಲ್ಲಿ ನಡೆಯುವ ಪೂಜೆ ವಿಭಿನ್ನವಾಗಿರುತ್ತದೆ. ಆದರೆ ನಿರ್ದಿಷ್ಟ ದಿನವೇ ಪೂಜೆ ಮಾಡಬೇಕೆಂಬ ನಿಯಮ ಇಲ್ಲಿಲ್ಲ. ಇಲ್ಲಿ ಹೊಲಕ್ಕೆ ತಿಪ್ಪೆಯಿಂದ ಗೊಬ್ಬರ ಸಾಗಿಸಿದ ನಂತರ-ಅಂದರೆ ಮಾರ್ಚ್-ಏಪ್ರಿಲ್ ತಿಂಗಳಿನಲ್ಲಿ- ತಿಪ್ಪೆಯಲ್ಲಿ ಇನ್ನು ಸ್ವಲ್ಪ ಗೊಬ್ಬರ ಇರುವಾಗ ತಿಪ್ಪೆಯ ತಳಕ್ಕೆ ಒಂದು ಕಳ್ಳಿ ಗಿಡದ ಕೊಂಬೆಯನ್ನು ನೆಟ್ಟು ಗೌರವಪೂರ್ವಕವಾಗಿ ಪೂಜೆ ಸಲ್ಲಿಸುತ್ತಾರೆ. ಕಳ್ಳಿ ಕೊಂಬೆಯು ಚಿಗುರುವ ಗುಣ

ಹೊಂದಿದ್ದು ಅದು ತಿಪ್ಪೆಯ ತಳದಲ್ಲಿ ಬೇರು ಬಿಟ್ಟು ಬೆಳೆದಂತೆಯೇ ತಿಪ್ಪೆಯೂ ಸಹ ಸಮೃದ್ಧವಾಗಿ ಬೆಳೆಯಲಿ ಎಂಬ ಉದ್ದೇಶ ಈ ಪೂಜೆಯ ಹಿಂದಿದೆ.

## ೨. ಗೊರೆ ಹಬ್ಬ; ಸಗಣಿಯೊಂದಿಗೆ ಗುದ್ದಾಟ !

ದೀಪಾವಳಿಯ ಸಂದರ್ಭದಲ್ಲಿಯೇ ನಡೆಯುವ ಮತ್ತೊಂದು ಕುತೂಹಲಕರ ಆಚರಣೆ ಈ ಗೊರೆ ಹಬ್ಬ. ಇದು ಎಲ್ಲ ಕಡೆ ಸಾರ್ವಜನಿಕವಾಗಿ ನಡೆಯುವುದಲ್ಲ. ಕೇವಲ ಒಂದು ಗ್ರಾಮದಲ್ಲಿ ನಡೆಯುವಂತಹುದು. ಗ್ರಾಮದ ಹಿರಿ-ಕಿರಿಯರಾದಿಯಾಗಿ ಪ್ರತಿಯೊಬ್ಬರೂ ಸಗಣಿ ರಾಶಿಯೊಂದಿಗೆ ಬಿದ್ದು ಗುದ್ದಾಡುವುದೇ ಇಲ್ಲಿನ ವಿಶೇಷ.

ದೀಪಾವಳಿ ಎಂದರೆ ನಾಡಿನೆಲ್ಲೆಡೆ ಕಣ್ಣು ಕೋರೈಸುವ ಮಿಂಚು, ಬೆಳಕಿನ ಚಿತ್ತಾರ, ಎದೆ ನಡುಗಿಸುವ ಶಬ್ದದ ಭರಾಟೆ. ಆದರೆ ಈ ಒಂದು ಗ್ರಾಮದಲ್ಲಿ ಮಾತ್ರ ವಿಭಿನ್ನ ಚಿತ್ರ. ಚಾಮರಾಜನಗರದ ಸಮೀಪ ತಮಿಳುನಾಡಿನ ಗಡಿ ಭಾಗದಲ್ಲಿರುವ ಕನ್ನಡದ ಹಳ್ಳಿಯೊಂದರಲ್ಲಿ ತುಂಬು ಸಡಗರದಿಂದ ಈ ಸಗಣಿಯೊಂದಿಗೆ ಗುದ್ದಾಡುವ ಆಚರಣೆ ಪ್ರತಿ ವರ್ಷ ನಡೆಯುತ್ತದೆ. ತಮಿಳು ನಾಡಿನ ಹಳ್ಳಿಯಾದರೂ ಸಹ ಕನ್ನಡಿಗರು ಹೆಚ್ಚಾಗಿರುವ ತಾಳವಾಡಿ ಸಮೀಪದ ಗುಮಟಾಪುರ ಎಂಬ ಹಳ್ಳಿಯಲ್ಲಿ ಸಕಲರೂ ಸಗಣಿಯ ಗುದ್ದಾಟದಲ್ಲಿ ಭಾಗಿಯಾಗುತ್ತಾರೆ.

ಸಗಣಿಯನ್ನು ಮುಟ್ಟುವುದಿರಲಿ ಅದರ ವಾಸನೆಯನ್ನು ಸಹಿಸಿಕೊಳ್ಳದವರೇ ಹೆಚ್ಚಾಗಿರುವ ಈ ದಿನಗಳಲ್ಲಿ ಸಗಣಿಯ ರಾಶಿಯಲ್ಲಿ ಬಿದ್ದು ಹೊರಳಾಡಿ ಸಗಣಿಯ ಉಂಡೆಗಳನ್ನು ಒಬ್ಬರ ಮೇಲೊಬ್ಬರು ಎಸೆಯುವ ಈ ಆಚರಣೆಯನ್ನು 'ಗೊರೆಹಬ್ಬ' ಎಂದು ಕರೆಯಲಾಗುತ್ತದೆ.

ದೀಪಾವಳಿ ಹಬ್ಬದ ಮರುದಿನ ಪ್ರತಿ ವರ್ಷ ಇಲ್ಲಿ ಗ್ರಾಮದ ದೇವರ ಆಸೆಯಂತೆ ಗೊರೆಹಬ್ಬವನ್ನು ಆಚರಿಸಲಾಗುತ್ತದೆ. ಸಗಣಿ ಗುದ್ದಾಟಕ್ಕೆ ಮೊದಲು ಮತ್ತು ನಂತರದಲ್ಲಿ ಮಾಡುವ ವಿಧಿ ವಿಧಾನಗಳು ಸ್ವಾರಸ್ಯಕರ.

ಬೆಳಿಗ್ಗೆಯಿಂದಲೇ ಮಕ್ಕಳಾದಿಯಾಗಿ ಗ್ರಾಮದ ಪುರುಷರು ಹಸುಗಳು, ಎಮ್ಮೆಗಳು ಹಾಕಿದ ಸಗಣಿಯನ್ನು ಸಂಗ್ರಹಿಸಿ ಊರಿನ ಬೀರಪ್ಪ ದೇವಸ್ಥಾನದ ಹಿಂಭಾಗ ತಂದು ಸುರಿಯುತ್ತಾರೆ. ನಂತರ ಮಕ್ಕಳು ಅರೆ ಬೆತ್ತಲಾಗಿ ಮನೆ-ಮನೆಗೂ ಹೋಗಿ ದೇವಸ್ಥಾನಕ್ಕಾಗಿ 'ಎಣ್ಣೆ – ಬೆಣ್ಣೆ' ಸಂಗ್ರಹಿಸಿ ತರುತ್ತಾರೆ.

ಇದಾದ ಮೇಲೆ ಗ್ರಾಮದಿಂದ ಒಂದು ಕಿ.ಮೀ. ದೂರದಲ್ಲಿರುವ ಕಾರಪ್ಪನ ದೇವಸ್ಥಾನಕ್ಕೆ ಹೋಗಿ ಅಲ್ಲಿ ಪೂಜೆ ಸಲ್ಲಿಸಿ ಮೆರವಣಿಗೆಯಲ್ಲಿ ವಾಪಸ್ ಬರುತ್ತಾರೆ.

ಹಾಗೆ ಬರುವಾಗ ದಾರಿ ಮಧ್ಯೆ ಸಿಗುವ ಕೆರೆಯಲ್ಲಿ ಒಬ್ಬ ವ್ಯಕ್ತಿಗೆ ಕೊಂಡಿಗೆಕಾರನೆಂದು (ಚಾಡಿಕೋರ) ಕರೆದು ಅವನಿಗೆ ನಾಮ ಬಳಿದು ಒಂದು ಬಗೆಯ ಹುಲ್ಲಿನಿಂದ ಮೀಸೆ, ಗಡ್ಡ ಮಾಡಿ ಧರಿಸುತ್ತಾರೆ. ನಂತರ ಅವನನ್ನು ಕತ್ತೆಯ ಮೇಲೆ ಕೂರಿಸಿ ಗ್ರಾಮದ ಬೀರಪ್ಪನ ದೇವಸ್ಥಾನದ ಬಳಿ ಸಗಣಿ ರಾಶಿಯ ಬಳಿಗೆ ಕರೆತರುತ್ತಾರೆ.

ಅಲ್ಲಿ ಅವನ ಮೀಸೆಯನ್ನು ಕಿತ್ತು ಅದನ್ನು ಸಗಣಿ ರಾಶಿಯಲ್ಲಿ ಹೂಳಲಾಗುತ್ತದೆ. ನಂತರ ಸಗಣಿ ರಾಶಿ ನಡುವೆ ನಿಂತು ಪೂಜಾರಪ್ಪನು ಪೂಜೆ ಸಲ್ಲಿಸುತ್ತಾನೆ, ಹೀಗೆ ಪೂಜೆ ಮಾಡುವಾಗಲೇ ಪೂಜಾರಿಯ ಮೈಮೇಲೆ ದೇವರು ಬಂದು ಸಗಣಿ ಎರಚಾಟಕ್ಕೆ ಚಾಲನೆ ದೊರೆಯುತ್ತದೆ. ಗ್ರಾಮದ ಎಲ್ಲ ಮಕ್ಕಳು, ಯುವಕರು ಸಗಣಿ ರಾಶಿಯನ್ನು ದೊಡ್ಡ-ದೊಡ್ಡ ಉಂಡೆಗಳನ್ನಾಗಿ ಮಾಡಿ ಅದನ್ನು ಉರುಳಾಡಿಸುತ್ತಾರೆ. ಹೀಗೆ ಸ್ವಲ್ಪ ಹೊತ್ತು ನಡೆದ ಮೇಲೆ ಭಾರಿ ಗಾತ್ರದ ಸಗಣಿ ಉಂಡೆಗಳನ್ನು ಮಾಡಿಕೊಂಡು ಒಬ್ಬರ ಮೇಲೊಬ್ಬರು ಎಸೆಯುವ ಕ್ರಿಯೆ ಆರಂಭ. ನಗು-ಕೇಕೆಗಳೊಂದಿಗೆ ಸಗಣಿ ಎಸೆದಾಟ ನಡೆಯುತ್ತದೆ.

ಉಳಿಕೆ ದಿನಗಳಲ್ಲಿ ಯಾರಾದರೂ ಹೀಗೆ ಸಗಣಿಯನ್ನು ಮೈಮೇಲೆ ಎಸೆದರೆ ಭಾರೀ ರಗಳೆಯಾಗುವುದಾದರೂ ಸಹ ಗೊರೆ ಹಬ್ಬದಂದು ಸಗಣಿಯಲಿ ಹೊಡೆಯುವುದು ಮತ್ತು ಹೊಡೆಸಿಕೊಳ್ಳುವುದೇ ಸಡಗರ. ಈ ಸಗಣಿಯೊಂದಿಗಿನ ಸರಸವನ್ನು ಮಹಿಳೆಯರಾದಿಯಾಗಿ ಹಳ್ಳಿಯ ಎಲ್ಲರೂ ಸುತ್ತಲೂ ನಿಂತು ನೋಡಿ ನಗುತ್ತಾ, ಹುರಿದುಂಬಿಸುತ್ತಾ ಆನಂದಿಸುತ್ತಾರೆ. ಈ ಸಗಣಿ ಎರಚಾಟದ ಸಂಭ್ರಮದ ಆಚರಣೆಯನ್ನು ವೀಕ್ಷಿಸಲು ಸುತ್ತಮುತ್ತಲ ಗ್ರಾಮಗಳ ಜನರೂ ಸಹ ಆಗಮಿಸುತ್ತಾರೆ. ಇತರೆ ಗ್ರಾಮದವರು ಸಗಣಿ ಎರಚಾಟದಲ್ಲಿ ಪಾಲ್ಗೊಳ್ಳುವಂತಿಲ್ಲ, ಕೇವಲ ನೋಡಬಹುದಷ್ಟೇ.

ಗೊರೆ ಹಬ್ಬ ಎಂದು ಕರೆಯಲ್ಪಡುವ ಈ ಸಗಣಿ ಎರಚುವ ಆಚರಣೆಯ ಹಿಂದೆ ಒಂದು ಕುತೂಹಲಕರ ಕತೆಯಿದೆ.


ಗ್ರಾಮದ ಹಿರಿಯರ ಹೇಳಿಕೆ ಪ್ರಕಾರ; ನೂರು ವರ್ಷಗಳಿಗೂ ಹಿಂದೆ ಇದೇ ಗುಮಟಾಪುರ ಗ್ರಾಮದ ಕಾಳೇಗೌಡ ಎಂಬುವವರ ಮನೆಯಲ್ಲಿ ಉತ್ತರ ದೇಶದಿಂದ ಬಂದ ದೇವರಗುಡ್ಡನೊಬ್ಬ ಆಳು ಮಗನಾಗಿ ಇದ್ದನಂತೆ. ಕಾಲಾನಂತರ ಅವನು ಸತ್ತ ಮೇಲೆ ಅವನ ಜೋಳಿಗೆ, ಬೆತ್ತ ಮುಂತದುವೆಲ್ಲವನ್ನೂ ತಿಪ್ಪೆಗುಂಡಿಗೆ ಬಿಸಾಕಿದರಂತೆ. ಕೆಲವು ದಿನಗಳ ನಂತರ ಆ ತಿಪ್ಪೆಗುಂಡಿಯ ಬಳಿಗೆ ಒಬ್ಬರು ಎತ್ತಿನ ಗಾಡಿಯನ್ನು ಹೊಡೆದುಕೊಂಡು ಹೋದಾಗ ಅಲ್ಲಿ ಲಿಂಗವೊಂದು ಕಾಣಿಸಿಕೊಂಡಿತಂತೆ. ಗಾಡಿ ಹೊಡೆಯುವಾತ ಅದನ್ನು ಹೆಚ್ಚು ಗಮನಿಸದೆ ಅದರ ಮೇಲೆಯೇ ಗಾಡಿ ಹೊಡೆದುಕೊಂಡು

ಹೋಗುತ್ತಾನೆ. ಗಾಡಿಯ ಚಕ್ರವೊಂದು ಲಿಂಗದ ಮೇಲೆ ಹರಿದಾಗ ಆ ಲಿಂಗದಿಂದ ರಕ್ತ ಬಂದಿತಂತೆ. ಆಗ ಆತ ಹೆದರಿ ಗ್ರಾಮದ ಮುಖಂಡರಿಗೆ ಈ ವಿಷಯ ತಿಳಿಸಿದನಂತೆ.

ವಿಷಯ ತಿಳಿದು ಆತಂಕಗೊಂಡ ಗ್ರಾಮದ ಮುಖಂಡರ ಕನಸಿನಲ್ಲಿ ಕಾಣಿಸಿಕೊಂಡ ಕಾಳೇಗೌಡರ ಮನೆಯಲ್ಲಿ ಜೀತಕ್ಕಿದ್ದ ದೇವರಗುಡ್ಡನು, ದೀಪಾವಳಿ ಹಬ್ಬದ ಮರುದಿನ ಗೊರೆ ಹಬ್ಬ ಮಾಡಿದರೆ ಈ ಅಪಚಾರಕ್ಕೆ ಪರಿಹಾರ ಲಭ್ಯವಾಗುವುದು ಎಂದು ಹೇಳಿದನಂತೆ. ಅದರಂತೆ ನಡೆಯಲು ಒಪ್ಪಿಕೊಂಡ ಗ್ರಾಮಸ್ಥರು ಆ ಲಿಂಗ ಕಾಣಿಸಿಕೊಂಡ ತಿಪ್ಪೇಗುಂಡಿಯ ಜಾಗದಲ್ಲಿ ಬೀರಪ್ಪ ದೇವರ ಗುಡಿಯನ್ನು ಕಟ್ಟುತ್ತಾರೆ. ಹಾಗೆಯೇ ಗ್ರಾಮಸ್ಥರು ಪ್ರತಿ ವರ್ಷ ಶ್ರದ್ಧೆಯಿಂದ ಗೊರೆ ಹಬ್ಬ ಆಚರಿಸಿಕೊಂಡು ಬರುತ್ತಿದ್ದಾರೆ.

ಇದು ಈ ಆಚರಣೆಯ ಹಿಂದಿರುವ ಕತೆ. ಇಲ್ಲಿ ಜೀತಗಾರನೊಬ್ಬನ ಪ್ರತಿಭಟನೆಯ ಸ್ವರೂಪವನ್ನು ಕಾಣಬಹುದು. ಅಲ್ಲದೆ ಸಗಣಿ ಗುದ್ದಾಟದಲ್ಲಿ ಪಾಲ್ಗೊಂಡರೆ ಗಾಯ, ನೋವು ಎಲ್ಲ ವಾಸಿಯಾಗುತ್ತದೆ ಎಂಬ ನಂಬಿಕೆಯನ್ನೂ ಕಾಣಬಹುದು. ಹಾಗೂ ಪೂರ್ವಿಕರು ಮಾಡಿಕೊಂಡು ಬಂದ ಹಬ್ಬವನ್ನು ಬಿಡಬಾರದೆಂಬ ಭಾವನೆಗಳು ಈ ವಿಶಿಷ್ಟ ಆಚರಣೆಯನ್ನು ಜೀವಂತವಾಗಿರಿಸಿವೆ.

❑



ಅಧ್ಯಾಯ ಏಳು

# ಕೃಷಿಕರ ಕೆಲವು ವಿಶೇಷ ಹಬ್ಬಗಳು

## ೧. ಅಷ್ಟಮಿ ಎಂಬ ಕಾಡು ಮಕ್ಕಳ ವಿಶಿಷ್ಟ ಹಬ್ಬ

ತಮಿಳುನಾಡಿನ ಡೆಂಕಣಿಕೋಟೆ ತಾಲ್ಲೂಕು ಮಂಚಿಬೆಟ್ಟದಲ್ಲಿ ಒಂದು ಜನಾಂಗದವರು ಆಚರಿಸುವ ಈ ಹಬ್ಬ ರಂಜನೀಯವಾಗಿದೆ. ಅದಕ್ಕೆ ಹಿನ್ನೆಲೆಯಾಗಿ ರಂಜನೀಯ ಕಥೆಯೂ ಇದೆ.

'ಅಷ್ಟಮಿ ಹಬ್ಬ ಐತೆ ಸಾ ಬರ್ರಿ' ಎಂದು ಬೆಳ್ಳಪ್ಪ ಕರೆದಾಗ ನಮಗೆ ಕಾಲುದಾರಿಯೂ ಸರಿಯಾಗಿಲ್ಲದ ಆ ಕಾಡು ಹಳ್ಳಿಗಳ ಅಂದಾಜಿತ್ತೇ ಹೊರತು ಹಬ್ಬದ ಅಂದಾಜಿರಲಿಲ್ಲ. ಅವರಿವರನ್ನು ಕೇಳುತ್ತಾ ತಪ್ಪಿದ ದಾರಿಯನ್ನು ಸರಿಪಡಿಸಿಕೊಳ್ಳುತ್ತಾ ಅಕ್ಷರಶಃ ದೇವರ ಮೇಲೆ ಭಾರ ಹಾಕಿ ಅಲ್ಲಿಗೆ ತಲುಪಿದಾಗ ಮೊಟ್ಟ ಮೊದಲಿಗೇ ಎದುರಾದ ಬಿದಿರಿನ ಕಮಾನು ನೋಡಿ ಅಚ್ಚರಿಯಾಯಿತು. ಮಾವಿನ ಸೊಪ್ಪು, ಹೂವಿನಿಂದ ಅಲಂಕೃತಗೊಂಡ ಸುಮಾರು ೩೦ ಅಡಿ ಎತ್ತರದ ಆ ಕಮಾನು ಅಷ್ಟಮಿ ಹಬ್ಬದ ವಿಶಿಷ್ಟತೆಗೆ ಮುನ್ಸೂಚನೆಯಾಗಿತ್ತು. ಅಂತಹವೇ ಮತ್ತೆರಡು ಸುಂದರವಾದ ಬಿದಿರಿನ ಹೆಣಿಗೆಯೊಂದಿಗೆ ನಿಂತ ಕಮಾನುಗಳನ್ನು ನೋಡಿಕೊಂಡು ಹಬ್ಬ ನಡೆಯುವ ಮುಖ್ಯ ಸ್ಥಳಕ್ಕೆ ಕಾಲಿಡುತ್ತಿದ್ದಂತೆ ನಮಗರಿವಿಲ್ಲದೆಯೇ ನಮ್ಮ ಕಣ್ಣು, ಬಾಯಿ, 'ಆ' ಎಂಬ ಸದ್ದಿನೊಂದಿಗೆ ತೆರೆದುಕೊಂಡವು.

ಐದೂವರೆ ಅಡಿ ಉದ್ದದ ನನ್ನಂತಹ ಹದಿನೈದು ಜನರನ್ನು ಒಬ್ಬರ ಮೇಲೊಬ್ಬರಂತೆ ನಿಲ್ಲಿಸಿದರೆ ಎಷ್ಟೆತ್ತರ ಆಗುತ್ತದೋ ಅಷ್ಟೆತ್ತರದ ಬಿದಿರಿನ ಕಂಬವೊಂದು ಸಿಂಗಾರಗೊಂಡು ನಮ್ಮೆದುರಿಗೆ ನಿಂತಿತ್ತು. ಆ ಉರಿಬಿಸಿಲಿನಲ್ಲಿ ಹುಬ್ಬಿನ ಮೇಲೆ ಕೈಯಿಟ್ಟುಕೊಂಡು ನೋಡಬೇಕಿತ್ತು ಅದರ ತುದಿಯನ್ನು, ಸುಮಾರು ಮುಕ್ಕಾಲು ಅಡಿ ದಪ್ಪದ ಅದನ್ನು ಬೇರುಸಮೇತ ಕಿತ್ತು ತಂದು ಐದು ಅಡಿ ಆಳಕ್ಕೆ ಹೂತಿದ್ದರಿಂದ ಒಂಚೂರೂ ಕಮಕ್-ಕಿಮಕ್ ಎನ್ನದೆ ನಿಂತಿತ್ತು. ಕಿರುಬೆರಳು ಗಾತ್ರದ ಐದಾರು ಉಗುನಿ ಹಂಬುಗಳಿಂದಲೇ ಹೊಸೆದ ಹಗ್ಗವೊಂದನ್ನು ಕಂಬದ ಅರ್ಧದವರೆಗೂ ಸುತ್ತಿ ನಂತರ ಇಳಿಬಿಟ್ಟಿದ್ದರು. ಅದಂತೂ ಎಪ್ಪತ್ತೈದು ಅಡಿಗಿಂತ ಉದ್ದವಿತ್ತು. ಪಕ್ಕದಲ್ಲಿಯೇ ಇನ್ನೊಂದು ಬಿದಿರು ಗಳದ ಮೇಲೆ ನಿಂತಿದ್ದ ಪೂರ್ತಿ ಬಿದಿರಿನಲ್ಲೇ ಮಾಡಲ್ಪಟ್ಟ ಹೆಲಿಕ್ಯಾಪ್ಟರ್ ಮತ್ತಷ್ಟು ಆಕರ್ಷಕವಾಗಿತ್ತು.

'ಮಂಚಿಬೆಟ್ಟ' ಎಂಬ ನೂರಾರು ಅಡಿ ಎತ್ತರದ ಬೆಟ್ಟದ ಸಾಲಿನಲ್ಲಿರುವ ಈ ಹಳ್ಳಿಗಳ ಮತ್ತು ಹಳ್ಳಿಗರ ಬದುಕೇ ವಿಶಿಷ್ಟ ಎನಿಸಿದರೆ, ಇಲ್ಲಿನ ಇಪ್ಪತ್ತೆಂಟು ಪುಟ್ಟ-ಪುಟ್ಟ ಹಳ್ಳಿಗಳೆಲ್ಲಾ ಒಟ್ಟಾಗಿ ಸೇರಿ ಆಚರಿಸುವ ಈ ಅಷ್ಟಮಿ ಹಬ್ಬ ಮತ್ತಷ್ಟು ವಿಶಿಷ್ಟ. ಸ್ವಾಗತ ಕೋರುವ ಕಮಾನುಗಳು, ಇಡೀ ಬೆಟ್ಟಕ್ಕೆ ಚಾಮರ ಹಿಡಿದಂತೆ ಕಾಣುವ ಬಿದಿರಿನ ಕಂಬ, ಅದಕ್ಕೆ ಬಿಗಿದ ಉಗುನಿ ಹಂಬು-ಇವೆಲ್ಲಾ ಹಬ್ಬದ ಬಗ್ಗೆ ಅಂದಾಜು ನೀಡತೊಡಗಿದವು. ಕರ್ನಾಟಕ-ತಮಿಳುನಾಡು ಗಡಿಗೆ ಹೊಂದಿಕೊಂಡಂತಿರುವ ಈ ಪ್ರದೇಶಕ್ಕೆ ಸೀಮಿತವಾದುದು ಈ ಅಷ್ಟಮಿ ಹಬ್ಬ. ಇಲ್ಲಿನ ಹಾಲುಮತಸ್ಥ ಕುರುಬರು ಆಚರಿಸುವ ಈ ಹಬ್ಬಕ್ಕೊಂದು ಜಾನಪದ ಹಿನ್ನೆಲೆಯೂ ಇದೆ.

*ಒಂದಾನೊಂದು ಕಾಲದಲ್ಲಿ ದುರ್ಗದ ಮಂಡೆ ಎಂಬ ಎಣ್ಣೆ ಪರ್ವತದ ಮೇಲೆ ಇಬ್ಬರು ಸುಂದರವಾದ ಕನ್ನೆಯರಿದ್ದರಂತೆ. ಅವರನ್ನು ವರಿಸಲು ಇಚ್ಛೆಯುಳ್ಳವರು ಆ ದುರ್ಗವನ್ನು ಹತ್ತಿಯೇ ಹೋಗಬೇಕಿತ್ತು. ಆ ಪರ್ವತವಾದರೋ ಬರೀ ಎಣ್ಣೆ-ತುಪ್ಪಗಳಿಂದ ಕೂಡಿದ ಜಾರುವ ಬಂಡೆಗಳಿಂದಾವೃತವಾಗಿತ್ತು. ಅಲ್ಲದೆ ಆ ಕನ್ನೆಯರಿಗೆ ಭಯಂಕರ ರಾಕ್ಷಸರ ಕಾವಲಿತ್ತು. ಅವರನ್ನು ಪಡೆಯಲು ಪ್ರಯತ್ನಿಸಿದವರೆಲ್ಲಾ ವಿಫಲರಾದರು. ಕೊನೆಗೆ ಒಬ್ಬ ಕುರುಬರ ಹುಡುಗ ಒಂದು ಉಡಕ್ಕೆ ಸರಪಳಿ ಕಟ್ಟಿ ಆ ದುರ್ಗಕ್ಕೆ ಹತ್ತಿಸಿ ಅದರ ಮೂಲಕ ಅಲ್ಲಿಗೆ ಹೋಗಿ ರಾಕ್ಷಸರನ್ನೆಲ್ಲಾ ಕೊಂದು ಆ ಇಬ್ಬರು ಕನ್ನೆಯರನ್ನು ವಿವಾಹವಾದನಂತೆ. ಆ ವಿಜಯದ ಸಂಕೇತವಾಗಿ ಪ್ರತಿ ಮೂರು ವರ್ಷಕ್ಕೊಮ್ಮೆ ಈ ಹಬ್ಬವನ್ನು ಆಚರಿಸುತ್ತಾರೆ.*

ಇಲ್ಲಿ ನಿಲ್ಲಿಸುವ ಬಿದಿರಿನ ಕಂಬವೇ ಎಣ್ಣೆ ಪರ್ವತ. ಅದನ್ನು ಕಿತ್ತು ತಂದು ನಿಲ್ಲಿಸುವುದು ಹೆಣ್ಣಿನ ಕಡೆಯವರು (ಭಾವಂದಿರು) 'ತಂತು ತಟ್ಟೆ' ಎಂದು ಕರೆಯಲಾಗುವ ಈ ಕಂಬಕ್ಕೆ ಚೆನ್ನಾಗಿ ಎಣ್ಣೆ-ತುಪ್ಪಗಳನ್ನು ಬಳಿದಿರುತ್ತಾರೆ. ಅಲ್ಲದೆ ಕಂಬದ ತುದಿಯ ಮೂರು ಗೆಣ್ಣುಗಳಲ್ಲಿ ರಂಧ್ರಮಾಡಿ ಅದರ ತುಂಬಾ ಎಣ್ಣೆ-ತುಪ್ಪಗಳನ್ನು ತುಂಬಿ ಬಿರಡೆ ಹಾಕಿ ಆ ಬಿರಡೆಯನ್ನು ಹಗ್ಗಕ್ಕೆ ಸಿಕ್ಕಿಸುತ್ತಾರೆ. ತುತ್ತ ತುದಿಯಲ್ಲಿ ಅಗಸ ಕೊಡುವ ಬಿಳಿ ಬಟ್ಟೆಯನ್ನು ಚಾಮರದಂತೆ ಸುತ್ತಿ ಮಾವಿನ ಎಲೆ, ಹೂವು, ಗಾಳಿಪಟಗಳಿಂದ ಸಿಂಗರಿಸುತ್ತಾರೆ. ಜೊತೆಗೆ ತಟ್ಟೆಯೊಂದರಲ್ಲಿ ಒಂದೂಕಾಲು ರೂಪಾಯಿ ಮತ್ತು ಆಚಾರಿ ಕೊಡುವ ತೆಂಗಿನ ಕಾಯೊಂದನ್ನು ಕಟ್ಟುತ್ತಾರೆ. ಕಾಸು ಕನ್ನೆಯರ ಸಂಕೇತ. ತೆಂಗಿನಕಾಯಿ ತಾಳಿಯ ಸಂಕೇತ. ಆ ಕಂಬವನ್ನು ಹತ್ತಿ ಕಾಸು ಮತ್ತು ಕಾಯಿಯನ್ನು ನೆಲಕ್ಕೆ ಬೀಳಿಸದೆ ಕಿತ್ತು ತರುವುದು ಗಂಡಿನ ಕಡೆಯವರ ಕೆಲಸ (ಭಾಮೈದರು).

ಶುದ್ಧ ಕಾಡುಹಳ್ಳಿಯ ಇಲ್ಲಿನವರಿಗೆ ಇದೇ ದೊಡ್ಡ ಹಬ್ಬ. ಎರಡು ದಿನ ನಡೆಯುವ ಈ ಹಬ್ಬದ ಸಂಭ್ರಮ ಏಳೂರಿಗಾಗಿ ಮಿಗುವಷ್ಟಿರುತ್ತದೆ. ಗೌರಿ ತಿಂಗಳಾದ್ದರಿಂದ (ಸೆಪ್ಟೆಂಬರ್) ಕೃಷಿ ಕಾರ್ಯಗಳಿಗೆ ಬಿಡುವಿದ್ದು, ಬೆಟ್ಟದ ಸಾಲಿನ ಹಳ್ಳಿಯವರೆಲ್ಲಾ ಸೇರಿರುತ್ತಾರೆ. ಮೂರು ವರ್ಷಕ್ಕೊಂದು ಹಬ್ಬವಾದ್ದರಿಂದ ಊರು ಬಿಟ್ಟವರೆಲ್ಲಾ ಊರು ಹುಡುಕಿ ಬರುತ್ತಾರೆ. 'ತಂತು ತಟ್ಟೆ' ಹತ್ತುವ- ಅಂದರೆ ಕಂಬ ಹತ್ತುವ ದಿನ ಕೆಲವು ಗಂಡಸರು, ಹೆಂಗಸರ ವೇಷ ಕೊಟ್ಟು ಕೈಯಲ್ಲೊಂದು ಮರದ ಗೊಂಬೆ ಹಿಡಿದು ನಗಸಾರ ಮಾಡುತ್ತಾ, ಗುಜು, ಗುಜು ಮಾತಾಡುತ್ತಾ ಗುಂಪುಗೂಡುವ ಹೊತ್ತಿಗೆ ತಂತು ತಟ್ಟೆ ಹತ್ತುವ ಕ್ರಿಯೆ ಶುರುವಾಗುತ್ತದೆ. ಆಗ ಪೈಪೋಟಿ!

ಗಂಡಿನ ಕಡೆಯ ಹುಡುಗರು ಗೋಣಿತಾಟು, ಬಟ್ಟೆಗಳನ್ನು ಸಿಕ್ಕಿಸಿಕೊಂಡು ಕಂಬ ಹತ್ತುತ್ತಾ, ಬಿದಿರಿನ ಕಂಬದ ಮೇಲಿರುವ ಎಣ್ಣೆ-ತುಪ್ಪವನ್ನು ಒರೆಸುತ್ತಾ, ಜಾರುತ್ತಾ ಒಬ್ಬ ಸ್ವಲ್ಪದೂರ ಇನ್ನೊಬ್ಬ ಸ್ವಲ್ಪದೂರ ಸಾಗುತ್ತಾರೆ. ಹೆಣ್ಣಿನ ಕಡೆಯವರು ಅವರನ್ನು ಸೋಲಿಸುವ ಹುನ್ನಾರ ಹಾಕುತ್ತಾ, ಹಗ್ಗವನ್ನು ಸಡಿಲಿಸುತ್ತಾ ಹತ್ತುವವರಿಗೆ ಕಾಟ ಕೊಡುತ್ತಾರೆ. ಹಾಗೂ-ಹೀಗೂ ಮಾಡಿ ಇನ್ನೇನು ಒಬ್ಬ ತುದಿ ಮುಟ್ಟಿದ ಎನ್ನುವಾಗ ಹಗ್ಗ ಎಳೆದು ಬಿರಡೆ ಕಳಚಿ ಬಿಡುತ್ತಾರೆ. ಅಲ್ಲಿ ಒಂದಡಿ ಉದ್ದದ ಕೊಳವೆಯಲ್ಲಿದ್ದ ಎಣ್ಣೆ-ತುಪ್ಪವೆಲ್ಲಾ ಅವನ ಮೇಲೆ ಸುರಿದು ಸೊಯ್ಯನೆ ಕೆಳಕ್ಕೆ ಜಾರುತ್ತಾನೆ. ಮತ್ತೆ ಹತ್ತುವಾಟ ಮೊದಲಿನಿಂದ ಶುರು.

ಭಾಮೈದಂದಿರಿಗೆ ಹತ್ತುವ ಸಂಭ್ರಮ. ಭಾವಂದಿರಿಗೆ ಬೀಳಿಸುವ ಸಂಭ್ರಮ ನೆರೆದ ಜನರಿಗೆ ನೋಡುವ ಸಂಭ್ರಮ...

ಹೀಗೆ ಮುಗಿಲು ಮುಟ್ಟುವ ಸಂಭ್ರಮಗಳೊಂದಿಗೆ ಯಾರಾದರೊಬ್ಬ ಗುರಿ ಮುಟ್ಟಿ ಅಂತರಾಟದಲ್ಲಿ ಕಟ್ಟಿದ ಕಾಸು ಕಾಯಿಗಳನ್ನು ಕಿತ್ತು ತರುವುದರೊಂದಿಗೆ ಈ ಕ್ರೀಡಾಹಬ್ಬ ಕೊನೆಗಾಣುತ್ತದೆ. ಮುಂದಿನ ಮೂರು ವರ್ಷಗಳವರೆಗೆ ಎಲ್ಲರ ಮೆಲುಕಿಗೆ ಆಹಾರವಾಗುತ್ತದೆ. ಹತ್ತಿಪ್ಪತ್ತು ಅಡಿ ಬಿದಿರು ಸಿಗುವುದೇ ಅಪರೂಪವಾಗಿರುವ ಈ ಕಾಲದಲ್ಲಿಯೂ ಹತ್ತಾರು ಮೈಲಿ ಹುಡುಕಿ ಎಪ್ಪತ್ತು ಅಡಿಗಳ ಬಿದಿರು ತಂದಿದ್ದಾರೆಂದರೆ ಆ ಕಾಲದಲ್ಲಿ ಇನ್ನೆಷ್ಟು ಅಡಿಯದನ್ನು ತರುತ್ತಿದ್ದರು! ಊಹಿಸಿಕೊಂಡರೇ ಮೈ ಜುಂ ಎನ್ನುತ್ತದೆ.

ಎರಡು ದಿನಗಳ ಈ ಹಬ್ಬದಲ್ಲಿ ಎರಡನೇ ದಿನ ತಂತುತಟ್ಟೆ ಹತ್ತುವ ಕ್ರಿಯೆಯಾದರೆ ಮೊದಲ ದಿನ ಸಂಜೆ ಹಾಲಂಡೆ ಮತ್ತು ತೆಂಗಿನಕಾಯಿ ಹೊಡೆಯುವ ಆಚರಣೆಯಿರುತ್ತದೆ. ಇದು ಕಥೆಯಲ್ಲಿ ಬರುವ ರಾಕ್ಷಸರ ಕಲೆ ಒಡೆಯುವ ಸಂಕೇತ. ಒಂದು ಬಿದಿರು

ಕೊಳವೆಗೆ ಹಾಲು ತುಂಬಿ ಅದನ್ನು ಬಿದಿರು ಕಮಾನಿಗೆ ಇಳಿಬಿಟ್ಟ ಹಗ್ಗಕ್ಕೆ ಕಟ್ಟಿ ಪೂಜಾರಪ್ಪನು ಕೋಲಿನಿಂದ ಒಡೆಯುತ್ತಾನೆ. ನಂತರ ಪೂಜೆ ಮಾಡಿಸಿಕೊಳ್ಳುವವರು ತೆಂಗಿನ ಕಾಯನ್ನು ಹಗ್ಗದಲ್ಲಿ ಹೆಣೆದ ಚೀಲಕ್ಕಿಟ್ಟರೆ ಪೂಜಾರಿ ಒಡೆದುಕೊಡುತ್ತಾನೆ. ಸಂಜೆ ಸೂರ್ಯನ ಹೊಂಬೆಳಕಲ್ಲಿ ನಡೆಯುವ ಈ ಕಾರ್ಯಕ್ಕೆ ಸುಶ್ರಾವ್ಯ ಚರ್ಮವಾದ್ಯಗಳ ಹಿಮ್ಮೇಳ ಮತ್ತು ನುರಿತ ಯುವಕರ ನೃತ್ಯ ವಿಶೇಷ ಕಳೆ ನೀಡುತ್ತವೆ.

೨೧ನೇ ಶತಮಾನದ ಹೊಸ್ತಿಲಿಗೆ ಕಾಲಿಕ್ಕುವ ಹೊತ್ತಿನಲ್ಲೂ ಸರಿಯಾದ ದಾರಿಯಿಲ್ಲದ, ಶಾಲೆ ಇಲ್ಲದ, ವರ್ಷವಿಡೀ ಕಾಡಿನ ಸೆರಗಲ್ಲಿ ಬದುಕು ತಳ್ಳಬೇಕಾದ ಕಾಡು ಹಳ್ಳಿಗರ ಪಾಲಿಗೆ ಈ ಅಷ್ಟಮಿ ಹಬ್ಬ ಮನರಂಜನೆ ನೀಡುತ್ತದೆ. ಈ ಬಾರಿ (೨೦೦೦ ನೇ ಇಸವಿ) ಮಳೆ ಇಲ್ಲದೆ ಬೆಳೆಗಳೆಲ್ಲಾ ಒಣಗಿದ್ದರಿಂದ ಒಲ್ಲದ ಮನಸ್ಸಿನಿಂದ ಜನ ಹಬ್ಬಕ್ಕೆ ಸಿದ್ಧರಾದಂತಿತ್ತು. ಮುಂದಿನ ಬಾರಿಯ ಹಬ್ಬ ಹೇಗಿರುತ್ತದೋ? ಎಪ್ಪತ್ತು ಅಡಿಗಳ ಬಿದಿರುಗಳ, ಅಷ್ಟೇ ಉದ್ದದ ಉಗುನಿ ಅಂಬು ಸಿಕ್ಕರೆ, ಮಳೆ–ಬೆಳೆ ಸರಿಯಾಗಿದ್ದರೆ, ಆಧುನಿಕತೆ ಎಂಬುದು ಈ ಬೆಟ್ಟ ಸಾಲಿಗೆ ಸೋಕದಿದ್ದರೆ.... ನೋಡಬೇಕು!

## ೨. ಆಟಿಕಳಂಜ–ತುಳುನಾಡಿನ ವಿಶಿಷ್ಟ ಆಚರಣೆ

ಆಷಾಢ ಬಂತೆಂದರೆ (ಆಟಿ ಮಾಸ) ಬಂತೆಂದರೆ ತುಳುನಾಡಿನ ಹಳ್ಳಿ ಪಟ್ಟಣಗಳಲ್ಲಿ ವಿಚಿತ್ರ ವೇಷಧಾರಿಗಳ ಜೋಡಿ ಅಥವಾ ಗುಂಪೊಂದು ಸಂಚರಿಸಲು ಆರಂಭಿಸುತ್ತದೆ. ಪಟ್ಟನೆ ನೋಡಿದರೆ ಹೆದರಿಕೆಯೇ ಉಂಟಾಗುತ್ತದೆ. ಈ ಜನಪದ ವೇಷವೇ ಆಟಿಕಳಂಜ.

ಸೊಂಟಕ್ಕೆ ಕೆಂಪು ಚಲ್ಲಣ ಇಲ್ಲವೇ ಒಂದು ತುಂಡು ಬಟ್ಟೆ ಮೈಗೊಂದು ಕೆಂಪು ದೊಗಲೆ ಅಂಗಿ. ಅದರ ಮೇಲೆ ತೆಂಗಿನ ಎಳೆಯ ಗರಿಯಿಂದ ಮಾಡಿದ ಅಲಂಕಾರ ಸಾಧನಗಳು. ಕತ್ತಿಗೆ ತಿಗಲೆ ಚವರಿ, ಇದು ಎದೆಯ ಮೇಲೆ ಹರಡಿಕೊಂಡಿರುತ್ತದೆ. ತಲೆಯ ಹಿಂಭಾಗಕ್ಕೆ ಜೋತಾಡಿಸಿ ಬಿಟ್ಟ ಬೆರಿ ಚವರಿ, ಹಣೆಯ ಮೇಲ್ಭಾಗಕ್ಕೆ ತಿರಿಯಿಂದಲೇ ಮಾಡಿದ ಸಣ್ಣ ಕಿರೀಟ, ಇಲ್ಲವೇ ನಾಗನ ಹೆಡೆಯಾಕಾರದ ಲೋಹದ ತಗಡಿನ ರಚನೆ, ತಲೆ ಮಣಿ. ಕಿವಿಗೆ ಕೆಬಿಯಣಿ, ತೋಳಿಗೆ ಕೈದಂಡೆ, ಮಣಗಂಟಿಗೆ ಕೈನಾಗ, ಕುತ್ತಿಗೆಗೆ ದಪ್ಪವಾಗಿ ನೇಯ್ದ ಕೇಪುಳ ಹೂವಿನ ದಂಡೆ, ಸೊಂಟಕ್ಕೆ ಸುತ್ತಿದ ಸಿರಿಲಂಗ, ಮುಖಕ್ಕೆ ಪೂರ್ತಿ ಅರದಾಳದ ಲೇಪನ, ಅದರ ಮೇಲೆ ಕೆಂಪು–ಬಿಳಿ ಚುಕ್ಕೆ ಮತ್ತು ಗೆರೆಗಳ ಚಿತ್ತಾರ, ಮೂಗಿನ ಕೆಳಗೆ ಕಟ್ಟಿಕೊಂಡ ದಪ್ಪ ಮೀಸೆ, ಕಾಲಿಗೆ ಕಿರುಗೆಜ್ಜೆ, ಕೈಯಲ್ಲಿ ಪನೆಯೋಲೆಯಿಂದ ಮಾಡಿದ ಪನೆಭತ್ತ.

ಈ ರೀತಿ ಅಲಂಕಾರ ಮಾಡಿಕೊಂಡು

ಕಳೆಂಜೆ ಕಳೆಂಜನೋ ಕಳೆಂಜೆ ಎರೆನ ಮಗನೊ
ಮಾಯಂತರಸು ಮಗೆ ಕಳೆಂಜೆ ಸುಖೊಂತ ಮಾನ್ಯಾಯೆ
ಅಮ್ಮೆ ಬಿರ್ಮೆಣ ಕಳೆಂಜ ಅಪ್ಪೆ ಮಾಂಕಾಳಿ
ಅಟಿಡ್ ಬತ್ತೆನೊ ಕಳೆಂಜೆ ಮಾರಿ ಕಳೆಪೆನೋ

ಎಂದು ತುಳು ಭಾಷೆಯಲ್ಲಿ ಹಾಡುತ್ತಾ ಬರುತ್ತಾರೆ. ಈ ಪದದ ಅರ್ಥ ಹೀಗಿದೆ.

ಕಳೆಂಜ ಯಾರ ಮಗನೋ, ಮಾಯದರಸು ಕಳೆಂಜ ಸುಖಪುರುಷ, ತಂದೆ ಬಿರ್ಮನೋ, ತಾಯಿ ಮಾಂಕಾಳಿ, ಆಟಿಯಲ್ಲಿ ಬಂದನೋ, ಮಾರಿ ಕಳೆವನೋ.

ಹೀಗೆ ಹಾಡುತ್ತಾ ಕುಣಿಯುತ್ತಾ ಜೊತೆಗಾರ ಬಡಿಯುವ ತಂಬರೆ ವಾದ್ಯದ ತಾಳಕ್ಕನುಗುಣವಾಗಿ ಕಳೆಂಜ ವೇಷಧಾರಿ ಪ್ರತಿ ಮನೆ-ಮನೆಯ ಅಂಗಳದಲ್ಲಿ ಕುಣಿತ ನಡೆಸುತ್ತಾನೆ. ಕೈಯಲ್ಲಿರುವ ಛತ್ರವನ್ನು ಗಿರಗಿರನೆ ತಿರುಗಿಸುತ್ತಾ ಸಣ್ಣ-ಸಣ್ಣ ಹೆಜ್ಜೆಗಳನ್ನಿಡುತ್ತಾ ವರ್ತುಲಾಕರದಲ್ಲಿ ಸುತ್ತು ಹಾಕುತ್ತಾರೆ. ಈ ರೀತಿಯಲ್ಲಿ ಕುಣಿಯುವ ಕ್ರಿಯೆ ಮುಗಿದ ನಂತರ ಆ ಮನೆಯೊಡತಿ ಗೆರಸೆ ಅಥವಾ ಮೊರವೊಂದರಲ್ಲಿ ಭತ್ತ, ಹುಳಿ, ಮೆಣಸು, ಅರಿಶಿನ, ಮಸಿ ಹಾಗೂ ಸಂತನಿ ಎಂದು ಕರೆಯಲ್ಪಡುವ ಬೇಯಿಸಿ ಒಣಗಿಸಿದ ಹಲಸಿನ ಬೀಜ, ಹಾಗೂ ಸ್ವಲ್ಪ ಹಣವನ್ನು ಕಳಂಜ ವೇಷಧಾರಿಗೆ ಕೊಡುತ್ತಾರೆ. ಈ ವಸ್ತುಗಳನ್ನು ಪಡೆದು ಜೊತೆಗಾರನ ಜೋಳಿಗೆಗೆ ತುಂಬಿ ಮುಂದಿನ ಮನೆಯತ್ತ ಸಾಗುತ್ತಾರೆ. ಕಳೆಂಜ ಒಬ್ಬ ಮಾಂತ್ರಿಕನೆಂದು ತುಳುನಾಡಿನವರ ನಂಬಿಕೆ.

ಆಟಿ ಅಥವಾ ಕರ್ಕಾಟಕ ಮಾಸದಲ್ಲಿ ನಡೆಯುವ ಈ ಕಳೆಂಜ ಆಚರಣೆಗೆ ಒಂದು ನಿರ್ದಿಷ್ಟ ಅರ್ಥವಿದೆ ಹಾಗೂ ಉದ್ದೇಶವಿದೆ. ಈ ತಿಂಗಳಿನಲ್ಲಿ ತುಳುನಾಡಿಗೆ ಹವಾಮಾನದ ವೈಪರೀತ್ಯದ ಸಂಧಿಗ್ಧ ಕಾಲ. ಒಂದೆಡೆ ಬಿರು ಬಿಸಿಲು, ಮತ್ತೊಂದೆಡೆ ಬಿರು ಮಳೆ. ಮಳೆ ವಿಪರೀತವಾಗಿ ಪ್ರವಾಹ ಬಂದು ನದಿ ಉಕ್ಕಿ ಮನೆ ಮಾರುಗಳು ಮುಳುಗಡೆಯಾದರೆ, ಸ್ವಲ್ಪ ಕಾಲದಲ್ಲೇ ತಾಳಲಾರದಂತಹ ಬಿಸಿಲು, ಮೈ ಬೆವರಿಳಿಯು ವಂತಹುದು. ಆಟಿಯ ಬಿಸಿಲಿಗೆ ಆನೆಯ ಬೆನ್ನೂ ಸಹ ಒಡೆಯುತ್ತದೆನ್ನುವ ವಾಡಿಕೆ ಮಾತಿದೆ. ಈ ರೀತಿಯ ವೈರುಧ್ಯ ವಾತಾವರಣದ ದೆಸೆಯಿಂದ ಜನಪದರಿಗೆ ಬರಬಹುದಾದ ರೋಗ-ರುಜಿನಗಳು, ಆಹಾರ ಧಾನ್ಯಗಳ ಕೊರತೆಯಿಂದಾಗಿ ಉಂಟಾಗುವ ಬಡತನದ ಪರಿಸ್ಥಿತಿ, ಗಾಳಿ, ಗುಡುಗು-ಸಿಡಿಲುಗಳಿಂದ ಉಂಟಾಗುವ ಭಯದ ಮನಸ್ಥಿತಿಯನ್ನು ತೊಡೆದುಹಕುವ ಮಾಂತ್ರಿಕನಾಗಿ ಕಳೆಂಜ ಬರುತ್ತಾನೆಂಬ ನಂಬಿಕೆ ಇದೆ. ಈ ಮಾಂತ್ರಿಕನನ್ನು ಶಮಾನ್ ಎಂಬ ಹೆಸರಿನಿಂದ ಕರೆಯಲಾಗುತ್ತದೆ. ಈತ ತನ್ನ ಭೀಕರ ವೇಷಭೂಷಣ, ವಾದ್ಯಗಳ ಸದ್ದಿನೊಂದಿಗೆ ಕುಣಿಯುವ ಪರಿಗಳಿಂದ

ಜನರಲ್ಲಿ ಭಯ-ಭಕ್ತಿಯನ್ನು ಮತ್ತು ಒಂದು ರೀತಿಯ ಆಶ್ವಾಸನೆಯನ್ನು ತುಂಬುತ್ತದೆ. ಅವರಲ್ಲಿ ಉಂಟಾಗಿದ್ದ ಮಾನಸಿಕ ಕ್ಲೇಷವನ್ನು ಹೋಗಲಾಡಿಸುವಲ್ಲಿ ಈ ಆಚರಣೆಯ ಪಾತ್ರ ಬಹುಮುಖ್ಯವಾದುದಾಗಿದೆ.

ತುಳು ನಾಡಿನ ಜನಪದ ಕುಣಿತಗಳಲ್ಲಿ ಆಟಿ ಕಳೆಂಜ ಅತ್ಯಂತ ಪ್ರಾಚೀನವಾದುದು. ಇದು ಮುಖ್ಯವಾಗಿ ದಕ್ಷಿಣ ಕನ್ನಡ ಮತ್ತು ಕಾಸರಗೋಡುಗಳಲ್ಲಿ ನಡೆಯುತ್ತದೆ. ಹಿಂದೆ ತುಳುನಾಡಿನಲ್ಲಿ ಯಕ್ಷಾರಾಧನೆ ಬಹುಜನಪ್ರಿಯವಾಗಿತ್ತು. ಅದನ್ನು ಯಕ್ಷಕೋಲ ಎಂದೂ ಕರೆಯುತಿದ್ದರು. ಆಟಿ ಕಳೆಂಜ ಆಚರಣೆಯು ಅದರ ಒಂದು ರೂಪವೇ ಆಗಿದೆ.

ಪ್ರಸ್ತುತ ಕೆಲವು ವರ್ಷಗಳಿಂದ ಆಟಿ ಕಳೆಂಜದ ಆಚರಣೆ ತನ್ನ ಸ್ವರೂಪವನ್ನು ಬದಲಿಸಿಕೊಳ್ಳುತ್ತಿದೆ. ಅಲ್ಲೊಂದು ಕಡೆ-ಇಲ್ಲೊಂದು ಕಡೆ ಮಾತ್ರ, ಅದೂ ಸಹ ಮಕ್ಕಳಿಗೆ ಈ ವೇಷ ಹಾಕಿ ಶಾಸ್ತ್ರ ತೀರಿಸುವುದನ್ನು ಕಾಣಬಹುದಾಗಿದೆ.

ಆಟಿ ಮಾಸದಲ್ಲಿ ತುಳು ನಾಡಿನ ಪರಿಶಿಷ್ಟ ಜಾತಿಗೆ ಸೇರಿದ ಪರವರು ಆಟಿಕಳೆಂಜ ನನ್ನು ಹೊರಡಿಸಿಕೊಂಡು ಹೋಗುವುದಲ್ಲದೆ ಇತರರೂ ಸಹ ಸಂಭಾವನೆಗೆಂದು ಹೋಗುವುದು ಹಿಂದೊಮ್ಮೆ ರೂಢಿಯಲ್ಲಿತ್ತು. ಇವರೆಲ್ಲಾ ತಮ್ಮ ಅಜಲಿಗೆ ಅನುಸಾರವಾಗಿ ಹೋಗುತ್ತಾರೆ. ಅಜಲು ಎಂದರೆ ಒಂದು ನಿರ್ದಿಷ್ಟವಾದ ಭೌಗೋಳಿಕ ಪ್ರದೇಶ. ಈ ಪ್ರದೇಶಕ್ಕೆ ಮತ್ತೊಬ್ಬರು ಪ್ರವೇಶಿಸುವಂತಿಲ್ಲ. ಈ ಸಂದರ್ಭದಲ್ಲಿ ದಲಿತರು ತಮ್ಮ ಅಜಲಿಗನುಸಾರವಾಗಿ ಮನೆ-ಮನೆಗೆ ತೆರಳಿ ಡೋಲು ಬಾರಿಸುತ್ತಾರೆ, ಇದರಂತೆ ವಾಲಗದವರು ಚೌತಿಯ ವಾದ್ಯವೆಂದು ಹೇಳುತ್ತಾ ಪ್ರತಿ ಮನೆಗೆ ತೆರಳಿದರೆ ಚೌಡಿಕೆಯವರು ಹಾಗೂ ಜೋಗಿಗಳು ತಂಬೂರವನ್ನು ಹಿಡಿದು ಮನೆ-ಮನೆಗೆ ಹೋಗುತ್ತಾರೆ. ಹೀಗೆ ಬಂದ ಆಟಿಕಳೆಂಜಮಿಗೆ, ಮಾದರವನಿಗೆ, ಡೋಲಿನವರಿಗೆ, ವಾಲಗದವರಿಗೆಲ್ಲ ನಿಶ್ಚಿತವಾದ ಸಂಭಾವನೆ ರೂಪದಲ್ಲಿ ಅಕ್ಕಿ, ತೆಂಗಿನಕಾಯಿ, ದವಸ ಧಾನ್ಯ, ಹಣ ವಸ್ತ್ರ ಇತ್ಯಾದಿಗಳನ್ನು ಕೊಡುತ್ತಾರೆ.

ಈ ಕ್ರಿಯೆಗಳಿಂದಾಗಿ ಊರಿನ ಪ್ರತಿಯೊಬ್ಬರೂ ಪರಸ್ಪರ ಸಂಬಂಧ-ಸಂಪರ್ಕ ಹೊಮ್ಮಿರುತ್ತಿದ್ದರು. ಯಾರು ಯಾವ ಕಸುಬಿನವರೆಂದು ಎಲ್ಲರಿಗೂ ತಿಳಿದಿರುತ್ತಿತ್ತು. ಪರಸ್ಪರರ ಕಷ್ಟ ಸುಖಗಳಲ್ಲಿ ಎಲ್ಲರೂ ಭಾಗಿಗಳಾಗುತ್ತಿದ್ದರು. ಈಗ ಈ ಪದ್ಧತಿ ಅಳಿದಿದೆ.

## ೩. ನವಣೆ ಬೆಳೆ ಉಳಿಸುವ ಕೆರಳಮ್ಮ

ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲೂಕಿನ ದೇವಪುರದ ಗ್ರಾಮ ದೇವತೆ ಕೆರಳಮ್ಮ. ದಂತ ಕತೆಗಳ ಪ್ರಕಾರ ಈಕೆ ಗ್ರಾಮದ ಕೆರೆಯಂಗಳದಲ್ಲಿ ನೆಲೆಯಾದುದರಿಂದ

ಆಕೆಗೆ ಕೆರೆಯಾಗಳಮ್ಮ ಎಂಬ ಹೆಸರು ಬಂದು ಕ್ರಮೇಣ ಜನರ ಬಾಯಲ್ಲಿ ಕೆರಳಮ್ಮ ಆಗಿದ್ದಾಳೆ. ಈಕೆಯ ತವರೂರು ಪಕ್ಕದ ಹೊನ್ನೇನಹಳ್ಳಿ. ಈ ಗ್ರಾಮದಲ್ಲಿ ಪ್ರತಿವರ್ಷ ಡಿಸೆಂಬರ್ ಆಜುಬಾಜಿನಲ್ಲಿ ವಿಶಿಷ್ಟ ರೀತಿಯಲ್ಲಿ ಜಾತ್ರೆ ನಡೆಯುತ್ತದೆ. ಅದೇ ಕೆರಳಮ್ಮನ ಆರತಿ ಬಾನ. ಇಡೀ ಜಿಲ್ಲೆಯಲ್ಲಿ ಈ ಜಾತ್ರೆ ಜನಜನಿತವಾಗಿದ್ದು ಸಾವಿರಾರು ಜನ ವೀಕ್ಷಿಸುತ್ತಾರೆ.

ಇದು ಕೇವಲ ಒಂದೆರಡು ದಿನದ ಜಾತ್ರೆಯಲ್ಲ. ಸುತ್ತಲ ಮುವತ್ತೆಂಟು ಹಳ್ಳಿಗೆ ದೇವರಾದ ಕೆರಳಮ್ಮನಿಗೆ ತಿಂಗಳಿಡೀ ಉತ್ಸವದ ಮೆರುಗು. ಆರತಿ ಬಾನಕ್ಕಾಗಿ ದೇವಪುರದಿಂದ ಹೊನ್ನೇನಹಳ್ಳಿಗೆ ಬರುವುದರಿಂದ ಆರಂಭಗೊಂಡು ನಂತರ ಒಂದೊಂದು ಹಳ್ಳಿಗೂ ಸೆಳೆ ಹೋಗುವ ಮೂಲಕ ಸಂಚಾರವಾಗುತ್ತದೆ. ತನ್ಮೂಲಕ ಹತ್ತು ಹಲವು ಜಾನಪದ ಆಚರಣೆಗಳು, ವಿಧಿವಿಧಾನಗಳು, ಹಾಡು-ಹಸೆ, ಸೋಮನ ಕುಣಿತ, ಕೋಲಾಟ ಮುಂತಾದ ಕಲೆಗಳು ಜೀವಂತವಾಗಿರಲು ಈ ದೇವತೆ ಕಾರಣೀಭೂತಳಾಗಿದ್ದಾಳೆ. ರೈತರ ಮೌಖಿಕ ಜಾನಪದ ಪರಂಪರೆ ತಲೆಮಾರುಗಳಿಗೆ ವರ್ಗಾವಣೆಗೊಳ್ಳಲು ಈ ಜಾತ್ರೆ ಒಂದು ಅದ್ಭುತ ವೇದಿಕೆ.

ಕೆರಳಮ್ಮನ ಜಾತ್ರೆಯ ಮತ್ತೊಂದು ವಿಶೇಷವೆಂದರೆ ಈಕೆಯ ಆರತಿಗೆ ನವಣೆ ಅಕ್ಕಿಯೇ ಅಗಬೆಕು. ರೈತಾಪಿಗಳು ತಮ್ಮ ಕಷ್ಟ ಕಾರ್ಪಣ್ಯಗಳು ನಿವಾರಣೆಯಾದರೆ ನವಣೆ ಅಕ್ಕಿ ಆರತಿ ಹೊರುತ್ತೇವೆ ಎಂದು ಹರಕೆ ಮಾಡಿಕೊಂಡಿರುತ್ತಾರೆ. ಅದೇ ಪ್ರಕಾರ ಜಾತ್ರೆಯ ಸಂದರ್ಭದಲ್ಲಿ ನವಣೆ ಅಕ್ಕಿಯನ್ನು ಮನೆಯಲ್ಲೇ ಕುಟ್ಟಿ ಬೆಲ್ಲದ ಪುಡಿಯನ್ನು ಬೆರೆಸಿ ಆರತಿ ಕಟ್ಟುತ್ತಾರೆ. ಅದಕ್ಕೆ ಹೂವಿನಿಂದ ಅಲಂಕರಿಸಿ ತುದಿಯಲ್ಲಿ ದೀಪವನ್ನಿರಿಸಿ ಆರತಿ ಬೆಳಗುತ್ತಾರೆ. ಅರತಿ ಬೆಳಗುವುದು ಊರಿನ ಹೆಣ್ಣು ಮಕ್ಕಳ ಸಾಮೂಹಿಕ ಕ್ರಿಯೆಯಾಗಿದ್ದು ನೋಡಲು ಅತ್ಯಂತ ಮನೋಹರ.

ಕೆರಳಮ್ಮನಿಗೆ ಆರತಿ ಮಾಡಲೋಸುಗವೇ ನವಣೆ ಬೆಳೆಯನ್ನು ರೈತರು ಉಳಿಸಿಕೊಂಡಿದ್ದಾರೆ. ಇತರೆ ಭಾಗಗಳಲ್ಲಿ ನವಣೆ ಬೆಳೆ ಹೆಚ್ಚು -ಕಡಿಮೆ ನಾಶವಾಗಿದೆ. ಅಂದರೆ ಒಂದು ಸಾಂಪ್ರದಾಯಿಕ ಬೆಳೆಯನ್ನು ನಿರಂತರವಾಗಿ ಉಳಿಸುವ ಕೀರ್ತಿ ಕೆರಳಮ್ಮನದು.


ಆರತಿ ಉತ್ಸವ ಮುಗಿದ ಎರಡು ವಾರಕ್ಕೆ ದೇವರನ್ನು ಮತ್ತೆ ದೇವಪುರಕ್ಕೆ ಕರೆತಂದು ರಥೋತ್ಸವ ನಡೆಸಲಾಗುತ್ತದೆ. ಈ ಸಂದರ್ಭದಲ್ಲಿ ಪ್ರದರ್ಶಿತವಾಗುವ ಹತ್ತು -ಹಲವು ಜಾನಪದ ಕಲೆಗಳನ್ನು ನೋಡುವುದೇ ಸೊಗಸು. ಹೂವಿನ ಪಲ್ಲಕ್ಕಿ,

ಹಗಲು ಪಲ್ಲಕ್ಕಿ, ಬೆಲ್ಲದ ರಾಶಿ ಉತ್ಸವ, ಮದುವಣಿಗ ಶಾಸ್ತ್ರ ಮುಂತಾದುವು ಹತ್ತು ದಿನಗಳ ಕಾಲ ಪ್ರತಿದಿನ ನಡೆದು ಕೊನೆಯ ದಿನ ಗುಡಿ ತುಂಬಿಸಲಾಗುತ್ತದೆ.

ಈ ಜಾತ್ರೆ ಸಂದರ್ಭದಲ್ಲಿ ಗ್ರಾಮದ ಕುಲಕಸುಬಿನವರೆಲ್ಲಾ ಅತ್ಯಂತ ಶ್ರದ್ಧಾ ಭಕ್ತಿಯಿಂದ ಭಾಗವಹಿಸುತ್ತಾರೆ. ಹಳ್ಳಿಯ ಸಾಂಪ್ರದಾಯಿಕ ಕುಲಕಸುಬುಗಳ ರೀತಿ-ರಿವಾಜು, ಕೆಲಸ-ಕಾರ್ಯಗಳು, ಜವಾಬ್ದಾರಿ-ಗೌರವಗಳನ್ನು ಅಭ್ಯಾಸ ಮಾಡಲು ಅತ್ಯುತ್ತಮ ಸಂದರ್ಭ ಇದೆಂದರೆ ತಪ್ಪಾಗಲಾರದು. ಸೋಮನ ಕುಣಿತದವರು, ವಾಲಗದವರು, ಛಲವಾದಿಗಳು, ಕೈಪಂಜಿನವರು, ಪೂಜಾರರು, ಜೋಗಪ್ಪಗಳು, ದಾಸಯ್ಯಗಳು ಮುಂತಾದ ಹಲವಾರು ಕುಲಕಸುಬುದಾರರಿಗೆ ಜಾತ್ರೆಯಲ್ಲಿ ನಿಗದಿತ ವಾದ ಜವಾಬ್ದಾರಿಗಳಿದ್ದು ಜಾತ್ರೆ ಮುಗಿಯುವವರೆಗೆ ಅವರ ಉಪಸ್ಥಿತಿ ಇದ್ದೇ ಇರುತ್ತದೆ.

ದೇವಪುರದ ಕೆರಳಮ್ಮನ ಜಾತ್ರೆ ರೈತ ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ನೆಲೆಗಟ್ಟು.

❑



# ಬದಲಾದ ಬದುಕು; ಮರೆಯಾದ ಸಂಭ್ರಮ!

ಕರ್ನಾಟಕದ ಸಂಸ್ಕೃತಿ, ಜನಜೀವನ ಹಾಗೂ ಸಂಪ್ರದಾಯಗಳನ್ನು ಗಮನಿಸಿದರೆ ಸಾವಿರಾರು ವರ್ಷಗಳಿಂದ ಅವರ ದಿನ ನಿತ್ಯದ ಬದುಕಿನಲ್ಲಿ ಕೃಷಿ ಆಚರಣೆಗಳು ಹಾಸುಹೊಕ್ಕಾಗಿರುವುದು ಅರಿವಾಗುತ್ತದೆ. ಇವು ನಮ್ಮ ಒಕ್ಕಲುಮಕ್ಕಳ ವೈವಿಧ್ಯಪೂರ್ಣ ಬದುಕಿನ ದರ್ಶನ ಮಾಡಿಸುತ್ತವೆ. ಪ್ರದೇಶದಿಂದ ಪ್ರದೇಶಕ್ಕೆ ಆಚರಣೆಯ ವಿಧಾನಗಳಲ್ಲಿ ಬದಲಾವಣೆಯಿರಬಹುದು, ಆದರೆ ಉದ್ದೇಶ ಮಾತ್ರ ಒಂದೇ. ನಮ್ಮ ರಾಜ್ಯ ವೈವಿಧ್ಯಮಯ ಭೂಪ್ರದೇಶವನ್ನು ಹೊಂದಿದೆ. ಅದಕ್ಕನುಗುಣವಾಗಿಯೇ ಕೃಷಿ ಪದ್ಧತಿಗಳೂ ಸಹ ರೂಪುಗೊಂಡಿವೆ. ಒಂದೊಂದು ಪ್ರದೇಶಕ್ಕೂ ವಿಭಿನ್ನ ಹವಾಮಾನ, ಮಳೆಗಾಲ, ವಿಭಿನ್ನ ಬೆಳೆಗಳು ಮತ್ತು ಬೆಳೆ ಪದ್ಧತಿಗಳಿದ್ದು ಬೆಳೆ ಇಡುವ ಕಾಲಮಾನದಲ್ಲೂ ಸಹ ಭಿನ್ನತೆ ಇರುವುದನ್ನು ಕಾಣಬಹುದು. ಮಣ್ಣಿನ ಗುಣ ಸ್ವಭಾವದಲ್ಲೂ ಸಹ ಇದೇ ಪರಿಸ್ಥಿತಿಯಿದೆ.

ಕೃಷಿ ಆಚರಣೆಗಳು ಕೃಷಿಕರ ನಿಸರ್ಗಾರಾಧನೆ ಎಂಬ ಮಾತು ನೂರಕ್ಕೆ ನೂರರಷ್ಟು ಸತ್ಯ. ಏಕೆಂದರೆ ಬೀಜ ಬಿತ್ತನೆಯಿಂದ ಮೊದಲುಗೊಂಡು ಬೆಳೆ ಕಟಾವಾಗಿ, ಒಕ್ಕಣೆಯಾಗಿ ಕಾಳು ಮನೆಗೆ ಬರುವ ಪ್ರತಿಯೊಂದು ಹಂತದಲ್ಲೂ ಆಚರಣೆಗಳಿವೆ. ಈ ಆಚರಣೆಗಳ ಚಕ್ರದ ಮೇಲೆಯೇ ಕೃಷಿಕರ ಬದುಕು ಸಾಗುತ್ತಾ ಬರುತ್ತದೆ. ಜನಪದ ಬದುಕಿನ ಬಹುಭಾಗವನ್ನು ಆವರಿಸಿರುವ ಈ ಆಚರಣೆಗಳು ಋತುಮಾನಕ್ಕನುಗುಣವಾಗಿ ಬಳಕೆಯಲ್ಲಿವೆ. ಕೃಷಿ ಸಂಸ್ಕೃತಿಯ ಮುಖ್ಯ ಅಂಗವಾಗಿ ಸಾಗಿ ಬಂದಿರುವ ಈ ಆಚರಣೆಗಳು ಕೃಷಿಕರ ಬದುಕಿನ ರಕ್ಷಣೆಯ ಹೊಣೆ ಹೊತ್ತು ನಿಂತಿವೆ. ಇವಕ್ಕೆ ಕೊನೆ ಮೊದಲೆಂಬುದಿಲ್ಲ.

ಕೃಷಿ ಆಚರಣೆಗಳೆಂದರೆ ಊರೊಗ್ಗಟ್ಟಿನ ಸಂಕೇತ. ಅದಕ್ಕಿಂತಲೂ ಮಿಗಿಲಾಗಿ ಇವು ಕೃಷಿಕರನ್ನು ಭೂಮಿ, ಮಳೆ, ಬೀಜ ಮತ್ತು ಪ್ರಕೃತಿಯ ಇತರೆಲ್ಲಾ ಅಂಗಗಳೊಂದಿಗೆ ಗಾಢ ಸಂಬಂಧವನ್ನು ಬೆಸೆಯುವ ಕೊಂಡಿಗಳು. ಒಂದು ಗ್ರಾಮ, ಸುತ್ತಲ ಹತ್ತೆಂಟು ಹಳ್ಳಿಗಳು, ಆ ಮೂಲಕ ಒಟ್ಟು ಸಮಾಜದ ಸಮಗ್ರತೆಯನ್ನು ಕಾಯ್ದುಕೊಳ್ಳುವಲ್ಲಿ ಆಚರಣೆಗಳ ಪರಿಕಲ್ಪನೆ ಪೂರಕವಾಗಿರುವುದು ಗಮನಿಸಬೇಕಾದ ಅಂಶ. ಅಷ್ಟೇ ಅಲ್ಲದೆ

ಇವು ಹಿರಿಯರ ಬೇಸಾಯ ಜ್ಞಾನ, ಶ್ರದ್ಧೆ-ನಂಬಿಕೆಗಳು, ಸಮಷ್ಟಿ ಪ್ರಜ್ಞೆಗಳು ಕಿರಿಯ ತಲೆಮಾರುಗಳಿಗೆ ಕೈಬದಲಾಗುವ ಮಾರ್ಗಗಳೂ ಹೌದು.

ಬೇಸಾಯದಲ್ಲಿ ಅನಿರೀಕ್ಷಿತವಾಗಿ ಬರುವ ನೈಸರ್ಗಿಕ ವಿಕೋಪಗಳನ್ನು ಪರಿಹರಿಸಲು ನಮ್ಮ ಪೂರ್ವಿಕರು ವಿವಿಧ ಆಚರಣೆಗಳನ್ನು ಪ್ರಾರಂಭಿಸಿದರು. ಕಣಜ ತುಂಬುವಷ್ಟು ಕಾಳು ನೀಡಿದ ಪ್ರಕೃತಿಗೆ ಧನ್ಯವಾದ ಸಲ್ಲಿಸುವ ವಿಧಾನವಾಗಿಯೂ ಸಹ ಆಚರಣೆಗಳು ಬೆಳೆದು ಬಂದವು. ಬೆಳೆ ನಷ್ಟವಾದಂತಹ ಮತ್ತು ಉತ್ತಮ ಫಸಲು ಬಂದ ಎರಡೂ ಸಂದರ್ಭಗಳಲ್ಲಿ ಕೃಷಿ ಆಚರಣೆಗಳಿರುವುದನ್ನು ಕಾಣಬಹುದು.

ಆದರೆ...

ಬದಲಾದ ಕಾಲಘಟ್ಟದಲ್ಲಿ ನಮ್ಮ ಬದುಕಿನ ರೀತಿ-ನೀತಿಗಳು ವ್ಯತ್ಯಾಸವಾಗಿವೆ. ಕೃಷಿ ಮತ್ತು ಕೃಷಿಕನ ವ್ಯಾಖ್ಯಾನವೇ ಮಾರ್ಪಾಟಾಗಿದೆ. ಪರಸ್ಪರ ಸಂಬಂಧಗಳೇ ಬದಲಾಗಿ ಹೋಗಿವೆ. ಇವೆಲ್ಲದರ ಪರಿಣಾಮವಾಗಿ ಕೃಷಿ ಆಚರಣೆಗಳೂ ಸಹ ತನ್ನ ಮೂಲ ಸ್ವರೂಪವನ್ನು ಕಳೆದುಕೊಂಡಿವೆ ಹಾಗೂ ಎಷ್ಟೋ ಕಣ್ಮರೆಯಾಗಿ ಹೋಗಿವೆ.

ಕಾರಣಗಳು ಹಲವಾರು; ೬೦ರ ದಶಕದಲ್ಲಿ ಬಂದ ಹಸಿರು ಕ್ರಾಂತಿಯ ಪರಿಣಾಮ ನಮ್ಮ ವೈವಿಧ್ಯಮಯ ಬೆಳೆ ಪದ್ಧತಿ ನಾಶವಾಗಿ ಏಕ ಬೆಳೆ ಪದ್ಧತಿಯ ಆಗಮನವಾಯಿತು. ಸಾಂಪ್ರದಾಯಿಕ ತಳಿಗಳ ಜಾಗವನ್ನು ಹೈಬ್ರಿಡ್‌ಗಳು ಆಕ್ರಮಿಸಿದವು. ವಾಣಿಜ್ಯ ಬೆಳೆಗಳ ದಾಂಗುಡಿಯಾಯಿತು. ದಿಢೀರ್ ಹಸಿರುಕ್ಕಿಸುವ ರಾಸಾಯನಿಕ ಗೊಬ್ಬರಗಳಿಂದಾಗಿ ಸಗಣಿ ಗೊಬ್ಬರಕ್ಕೆ ಎಳ್ಳುನೀರು, ದನ-ಕರುಗಳ ಸಾಕಾಣಿಕೆ ಕುಂಠಿತ.

ಹೀಗೆ ಆಧುನಿಕ ಸ್ಪರ್ಶ ಪಡೆದ ಕೃಷಿ ರಂಗದಿಂದ ಸಹಜವಾಗಿಯೇ ಆಚರಣೆಗಳು ನಿರ್ಗಮಿಸತೊಡಗಿದವು. ಬಿತ್ತನೆಗೆ ಟ್ರಾಕ್ಟರ್ ಬಂದಾಗ ನೇಗಿಲು ಪೂಜೆಗೆ ಜಾಗವೆಲ್ಲಿ? ರಾಗಿ ಬೆಳೆಯೇ ಇಲ್ಲದಿರುವಾಗ ಕರಿಬಂಟನ ಅಗತ್ಯವೇನು? ಒಕ್ಕಣೆ ಟಾರು ರಸ್ತೆಗೆ ಬಂದಾಗ ಕಣದ ಪೂಜೆ, ರಾಶಿ ಪೂಜೆಗಳನ್ನು ಮಾಡುವುದು ಹೇಗೆ?

ಮಳೆಯ ಏರು-ಪೇರು ಮತ್ತು ಬೆಳೆ ಇಡುವ ಕಾಲ ಬದಲಾಗಿದ್ದೂ ಸಹ ಆಚರಣೆಗಳು ಮಸುಕಾಗಲು ಕಾರಣವಾಯಿತು. ಮಗೆ ಮುಂಡುಗನನ್ನು ಹಾಕಬೇಕಾದರೆ ಆ ಹೊತ್ತಿಗೆ ಗದ್ದೆ ಬೆಳವಣಿಗೆ ಹಂತದಲ್ಲಿರಬೇಕು, ಆದರೆ ಮಳೆ ಸರಿಯಾಗಿ ಆಗದೆ ಬಿತ್ತನೆ ತಡವಾದರೆ ಮಗೆ ಮುಂಡುಗನ ಪೂಜೆ ಸಾಧ್ಯವೇ ಇಲ್ಲ.

ದೇಸೀ ದನ-ಕರುಗಳೇ ಇಲ್ಲದಿರುವಾಗ ಸಂಕ್ರಾಂತಿ ಸಡಗರ ಎಲ್ಲಿಯದು? ಈಗ ಹಳ್ಳಿಗಳಲ್ಲಿರುವುದು ಕೇವಲ ಹಾಲು ಹಿಂಡುವ ಸೀಮೆ ಹಸುಗಳು, ಅವುಗಳನ್ನು ಕಿಚ್ಚು ಹಾಯಿಸುವಂತಿಲ್ಲ, ಬೆದರಿಸುವಂತಿಲ್ಲ.

ಇನ್ನು ಕಂಬಳ, ಹುತ್ತರಿ, ದೀಪಾವಳಿ ಮುಂತಾದ ಆಚರಣೆಗಳು ತನ್ನ ಮೂಲ ಅರ್ಥ, ಸ್ವರೂಪವನ್ನು ಕಳಚಿಕೊಂಡಿವೆ. ತಿರುಳು ಹೋಗಿ ಬರೀ ಸಿಪ್ಪೆ ಉಳಿಯಿತು ಎಂಬಂತಾಗಿದೆ. ಅವುಗಳಿಗೂ ರಾಜಕೀಯ ಲೇಪಗೊಂಡು ಬಿಟ್ಟಿದೆ. ಆಚರಣೆಗಳಿಗೂ ಗ್ರಾಮೀಣ ಕಸುಬುಗಳಿಗೂ ಅಂತರ್ ಸಂಬಂಧವಿದೆ. ಉದಾಹರಣೆಗೆ ಕರಿಭಂಟನ ಆಚರಣೆಗೆ ಉಬ್ಬೆ, ಕಮ್ಮಾರ ಮತ್ತು ಕುಂಬಾರನ ಮನೆ ಬೂದಿಗಳು ಅಗತ್ಯ ಬೇಕು, ಆ ಕಸುಬುಗಳೇ ಇಂದು ನಶಿಸಿವೆ, ಇದರ ಪರಿಣಾಮ ಕರಿಬಂಟನ ಆಚರಣೆಯ ಮೇಲೆ ಖಂಡಿತ ಉಂಟಾಗಿದೆ. ಆಟಿಕಳೆಂಜ ವೇಷ ಹಾಕುವವರು ಕೆಳ ವರ್ಗದ ಜನ, ಆದರೆ ಅವರ ಸಾಮಾಜಿಕ ಜೀವನದಲ್ಲುಂಟಾದ  ಪಲ್ಲಟದಿಂದಾಗಿ ಅವರು ಆ ವೇಷ ಹಾಕಲು ಹಿಂಜರಿಯುತ್ತಿದ್ದಾರೆ.

ಕಾಲ ಬದಲಾದಂತೆ ಕೃಷಿ ಆಚರಣೆಗಳು ಬದಲಾದರೂ ಪರೋಕ್ಷವಾಗಿ ಕಂಡು ಬರುವ ಅವುಗಳ ಎಳೆಗಳನ್ನು ಆಧಾರವಾಗಿಟ್ಟುಕೊಂಡು ವಿವೇಚಿಸಬಹುದು. ಆದರೆ ಇದು ಸಾಧ್ಯವಾಗುವುದು ಅವುಗಳ ದಾಖಲಾತಿ ರೂಪದಲ್ಲಿ ಲಭ್ಯವಿದ್ದಾಗ ಮಾತ್ರ, ದುರಂತವೆಂದರೆ ಈ ಆಚರಣೆಗಳು ಇಂದಿಗೂ ಮೌಖಿಕವೇ ಹೊರತು ಅಕ್ಷರ ರೂಪಕ್ಕಿಳಿದಿಲ್ಲ, ಅವುಗಳ ಒಳ–ಹೊರಗನ್ನು ಬಲ್ಲಂತಹ ತಲೆಮಾರೂ ಸಹ ಅಳಿಯುತ್ತಿದೆ.

ಇಂದು ಕೃಷಿಕ ತಲುಪಿರುವ ದೈನ್ಯ, ಅಭದ್ರ, ಅತಂತ್ರ ಸ್ಥಿತಿಗೆ ಹಳ್ಳಿಗಳಿಂದ ಕಣ್ಮರೆಯಾದ ಸಾಂಪ್ರದಾಯಿಕ ವಾತಾವರಣ ಸಹ ಕಾರಣ, ಕೃಷಿ ಆಚರಣೆಗಳು ಚಿಕ್ಕ–ಚಿಕ್ಕ ಕ್ರಿಯೆಗಳಾದರೂ ಮನಸ್ಸಿಗೆ ಮುದ, ಧೈರ್ಯ, ಆತ್ಮವಿಶ್ವಾಸ ನೀಡುತ್ತಿದ್ದವು, ಪರಸ್ಪರ ಸಂಬಂಧ ಬೆಸೆಯುತ್ತಿದ್ದವು. ಅಂತಹ ಆಪ್ತ ವಾತಾವರಣದಿಂದ ಇಂದಿನ ಕೃಷಿಕ ವಂಚಿತನಾಗಿರುವುದೇ ದುರಂತ.

ಉಳಿದಿರುವ ಹಿರಿ ತಲೆಗಳನ್ನು ಮಾತಾಡಿಸಿ, ಈಗಲೂ ಆಧುನಿಕತೆ ಅಷ್ಟಾಗಿ ಸೋಕದ ಕಾಡುಹಳ್ಳಿಗಳಲ್ಲಿ ಅಡ್ಡಾಡಿ ಅಳಿದುಳಿದ ಆಚರಣೆಗಳನ್ನು ಸಮಗ್ರವಾಗಿ ದಾಖಲಿಸುವುದೇ ನಮಗಿರುವ ಮಾರ್ಗ.

❑



# ಆಕರ ಮತ್ತು ಕೃತಜ್ಞತೆಗಳು

೧. ಕಂಬಳ–ಕೋಳಿ ಅಂಕ
ರಸಿಕ ಪುತ್ತಿಗೆ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಪ್ರಕಟಣೆ

೨. ಹಬ್ಬಗಳು, ಕತೆಗಳು ಮತ್ತು ಬೆಳೆ ಆಚರಣೆಗಳು
ಡಾ. ಕೃಷ್ಣಮೂರ್ತಿ ಹನೂರು ಮತ್ತು ಎಂ.ಜಿ. ಈಶ್ವರಪ್ಪ

೩. ಸಸ್ಯ ಜಾನಪದ
ಡಾ. ಬಿ. ಶಿವರಾಮ ಶೆಟ್ಟಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೪. ಎನ್.ಎ. ರಮೇಶ್ –ಹವ್ಯಾಸಿ ಬರಹಗಾರರು

೫. ಲಕ್ಷ್ಮಣ ಟಿ. ನಾಯ್ಕ –ಹವ್ಯಾಸಿ ಬರಹಗಾರರು

೬ ಎಚ್.ಬಿ. ತೀರ್ಥೆ –ಹವ್ಯಾಸಿ ಬರಹಗಾರರು

೭ ಪೂರ್ಣಪ್ರಜ್ಞ ಬೇಳೂರು – ಹವ್ಯಾಸಿ ಬರಹಗಾರರು

೮. ಕಿಶನ್ ರಾವ್ ಕುಲಕರ್ಣಿ –ಹವ್ಯಾಸಿ ಬರಹಗಾರರು

೯. ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್ –ಹವ್ಯಾಸಿ ಬರಹಗಾರರು

೧೦. ಮುದ್ರಾಡಿ ವಾಸುದೇವ ಭಟ್ಟ –ಹವ್ಯಾಸಿ ಬರಹಗಾರರು

೧೧. ವಿವೇಕಾನಂದ –ಗುಲ್ಬರ್ಗ

೧೨. ಡಾ. ರಾಮು ಮೂಲಂಗಿ –ಹವ್ಯಾಸಿ ಬರಹಗಾರರು

೧೩. ಎನ್. ಸಿದ್ದೇಗೌಡ –ಪ್ರಜಾವಾಣಿ

೧೪. ಹುಣಸನಹಳ್ಳಿ ನಾಗೇಶ್ –ಹವ್ಯಾಸಿ ಬರಹಗಾರರು

೧೫. ನಿಂಗಪ್ಪ ನಂದೆಪ್ಪ ಕಡೆಪಟ್ಟಿ, ಅಲಬಾಳ –ರೈತರು

೧೬. ಸಂಗಪ್ಪ ದುಂ ಉಪ್ಪಲದಿನ್ನಿ, ಕಲ್ಲಹಳ್ಳಿ –ರೈತರು

೧೭. ಶ್ರೀಶೈಲ ಬುನಂದಗಾಂವ್, ಶಿರೋಳ –ರೈತರು

೧೮. ಲಕ್ಷ್ಮಣ ಶಿ. ಬಳೂರ, ನಾಗರಾಳ –ರೈತರು

೧೯. ಬಸವಣ್ಣೆಪ್ಪ ಶಿ. ಅಂಗಡಿ, ಸೂರಶೆಟ್ಟಿಕೊಪ್ಪ –ರೈತರು

೨೦. ರೇಣುಕಾ ಕೆ. ಶೆಟ್ಟಣ್ಣವರ್ –ರೈತರು

೨೧. ರೇಖಾ ಕೆ. ಸಂಪತ್ –ಹವ್ಯಾಸಿ ಬರಹಗಾರರು

೨೨. ಬಸವರಾಜ ವಿ ಮೂಲಿಮನಿ –ಹವ್ಯಾಸಿ ಬರಹಗಾರರು

